ಸಂವಾದ

ರಿ ೨೦೧೧ ರೂ. ೨೦



ಮ:
ವಾನ್‌ದಾಸ್

ದ್ಯೋಗ
ತರಿ
ಟಕ

ದಲಿತರು ಎಡ ಪಕ್ಷಗಳನ್ನು ಯಾಕೆ ನಂಬುವುದಿಲ್ಲ?

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೩
ಸೆಪ್ಟೆಂಬರ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ **Editorial: 9448048306**
✆ **Circulation: 9945264687**
080-23480278,
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೪೧
❑ ಸಂಪಾದಕರೊಂದಿಗೆ ಸಂವಾದ:
○ ಶಿಲ್ಪ ಕೆ. ಹೆಚ್ ೦೪
○ ಸುರೇಶ್ ಭಟ್ ೦೬
○ ಶಾರದಾ ಗೋಪಾಲ ೦೭
❑ ಶಿವಮೊಗ್ಗದಲ್ಲಿ ದಲೇಕ ಸಮ್ಮೇಳನ:
ಮಾತಿನ ಆಟಕ್ಕೊಂದು ಬದಲಿ ಕಾರ್ಯಕ್ರಮ
○ ಡಿ. ಎಸ್ ನಾಗಭೂಷಣ ೦೮
❑ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ
ಮಠಗಳು ಒಡ್ಡುತ್ತಿರುವ ಅಪಾಯ
○ ಜೆ.ಪಿ. ಬಸವರಾಜು ೧೦
❑ ಉದ್ಯೋಗ ಖಾತರಿ ಕಾಯ್ದೆ:
ಬೇಲಿಯೇ ಹೊಲವನ್ನು ಮೇಯುತ್ತದೆ
○ ಅರುಣಾ ರಾಯ್ ಮತ್ತು ನಿಖಿಲ್ ಡೇ
(ಅನು: ಸುರೇಶ್ ಭಟ್) ೧೨
❑ ಒಂದು ಕೊಳ್ಳದ ಮೋಡ –
ಮಿಂಚುಗಳ ಸುತ್ತಮುತ್ತ
○ ಮ. ಶ್ರೀ ಮುರಳಿ ಕೃಷ್ಣ ೧೪



❑ ಕರ್ನಾಟಕದಲ್ಲಿ ಕೋಮುವಾದಿ ರಾಜಕಾರಣ?
○ ಮಲ್ಲಿಕಾರ್ಜುನ ಗುಮ್ಮಗೋಳ ೧೬
❑ ಭಗವಾನ್ ದಾಸ್:
ಇನ್ನಿಲ್ಲವಾದ ಅಂಬೇಡ್ಕರ್‌ವಾದಿ
○ ರಘೋತ್ತಮ ಹೊ. ಬ ೨[illegible]
❑ ಅರುಣಾಚಲದಲ್ಲಿ ಬುದ್ಧ
○ ಎಸ್. ಮರಿಸ್ವಾಮಿ ೨೨
❑ ಜನಸತ್ತೆಯ ಕರಾಳ ಮುಖಗಳು
(ಮುಂದುವರೆದ ಭಾಗ)
○ ನಾ ದಿವಾಕರ ೨೪
❑ ಜಾತಿ ವಿನಾಶಕ್ಕಾಗಿ ಜಾತಿ ಜನಗಣತಿ!?
(ಮುಂದುವರೆದ ಭಾಗ)
○ ಶಿವಸುಂದರ್ ೩೦
❑ ಹೊಸ ಪಕ್ಷಿ ರಾಗ... ೬
○ ಜ್ಯೋತಿ ಗುರುಪ್ರಸಾದ್ ೩೬
❑ ಕಾಲಮಾನ-೧೨
○ ಡಾ. ಮುಜಾಫ್ಫರ್ ಅಸ್ಸಾದಿ ೩೮
❑ ಹಾಗೆ ನೋಡಿದರೆ -೨
○ ಡಾ. ಬಂಜಗೆರೆ ಜಯಪ್ರಕಾಶ ೪೨
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ
○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ನಮ್ಮವರು ೧೯ ❑ ಧನ್ಯ ನೆಲವೂ...ಧರ್ಮೇತಿಹಾಸವೂ ೪೯

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಸಂಸ್ಕೃತಿ ಚಿಂತಕ ರಹಮತ್‌ಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಗರಿ

ಕನ್ನಡ ಸಾಹಿತ್ಯದ ಪ್ರಖರ ಚಿಂತಕ ಡಾ. ರಹಮತ್ ತರೀಕೆರೆ ಅವರು ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಪಾತ್ರರಾಗಿರುವುದು ನಮಗೆಲ್ಲಾ ಹರುಷ ತಂದಿದೆ. ತರೀಕೆರೆ 'ಸಂವಾದ' ಸಂಪಾದಕೀಯ ಬಳಗದ ಸದಸ್ಯರಲ್ಲೊಬ್ಬರೆನ್ನುವುದು ನಮಗೆ ಮತ್ತಷ್ಟು ಹೆಮ್ಮೆಯ ಸಂಗತಿ..

2006ರಲ್ಲಿ ಹೊರಬಂದ ಅವರ ವಿಮರ್ಶಾ ಲೇಖನಗಳ ಸಂಕಲನ 'ಕತ್ತಿಯಂಚಿನ ದಾರಿ'ಗೆ 50ಸಾವಿರ ರೂ. ನಗದನ್ನು ಒಳಗೊಂಡ ಈ ಪ್ರತಿಷ್ಠಿತ ಪ್ರಶಸ್ತಿ ಸಂದಿದೆ. ಮೊದಲು ಜಾನಪದ ನಂತರ ವಿಮರ್ಶಕರಾಗಿ ಗುರುತಿಸಿಕೊಂಡಿದ್ದ ರಹಮತ್ ಅನಂತರ ಸಾಹಿತ್ಯದ ಇತರ ನೆಲೆಗಳತ್ತ ಹೊರಳಿದರು. ಕನ್ನಡದ ಪರಂಪರೆಯ ನೆಲೆಯಿಂದಲೇ ಕನ್ನಡ ಸಾಹಿತ್ಯ ಮಿಮಾಂಸೆಯನ್ನು ಕಟ್ಟುವ ಮೂಲಕ ಕನ್ನಡವು ಸಂಸ್ಕೃತ ಕಾವ್ಯ ಮಿಮಾಂಸೆಯನ್ನು ಅನುಕರಿಸುವುದರ ವಿರುದ್ಧ ಪ್ರತಿಕ್ರಿಯಿಸಿದರು. ವಿಮರ್ಶಕನಾದವನಿಗೆ ಬರೀ ಟೀಕಿಸುವುದಷ್ಟೇ ಅವನ ಕೆಲಸ ಅಲ್ಲ. ಪರ್ಯಾಯವನ್ನು ಕಟ್ಟಿಕೊಡುವುದು ಅಷ್ಟೇ ಮುಖ್ಯ ಎಂಬುದು ಇವರ ಬರಹಗಳ ಬಹುಮುಖ್ಯ ಗುಣ.

ಕಂಗ್ರಾಟ್ಸ್ ರಹಮತ್

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಸಮತಳ ಎನ್ನುವ ಪುಟ್ಟಗ್ರಾಮ ರಹಮತರ ಹುಟ್ಟೂರು. ಜನನ 1959ರಲ್ಲಿ. ತಂದೆ ಮಹಮ್ಮದ್ ದಸ್ತ್‌ಗೀರ್ ಸಾಬ್, ತಾಯಿ ಜುಲೇಖಾಬಿ, ಕಮ್ಮಾರ ವೃತ್ತಿ. ಬೆನ್ನಿಗಂಟಿಕೊಂಡೇ ಬಂದ ಬಡತನದಲ್ಲಿ ಓದಿನ ಖಯಾಲಿ ಹಚ್ಚಿಕೊಂಡ ಮಗನನ್ನು ಕಂಡರೆ ಅನಕ್ಷರಸ್ತ ತಂದೆ-ತಾಯಿಗೆ ವಿಶೇಷ ಮಮತೆ. ವಿದ್ಯಾಭ್ಯಾಸದ ದಿನಗಳಲ್ಲಿ ದುಡಿಮೆಯನ್ನು ಮಾಡುತ್ತಿದ್ದ ರಹಮತ್ ಬುದ್ಧಿ ಬೆಳಕಿನಲ್ಲಿ ಓದಿ ಎದುರಾಗ ಎಲ್ಲ ತಲ್ಲಣ, ತಳಮಳಗಳನ್ನು ದಾಟಿ ಇಂದು ಈ ಹಂತಕ್ಕೆ ಬಂದಿದ್ದಾರೆ.

ಹರಿತ ಚಿಂತನೆ, ಪ್ರಖರ ಬರಹ, ಸಮನ್ವಯ ನೋಟ ಹಾಗೂ ವಿಷಯ ವೈವಿಧ್ಯತೆ ಅವರ ಕೃತಿಗಳಲ್ಲಿ ಎದ್ದು ಕಾಣುವ ಅಂಶಗಳು. ಅಕಾಡೆಮಿಕ್ ಭಾಷೆಯನ್ನು ಜನಸಾಮಾನ್ಯರ ಭಾಷೆಯಾಗಿ ಬಳಸುವ ಕಲೆಯನ್ನು ಕರಗತ ಮಾಡಿಕೊಂಡಿರುವ ರಹಮತ್, 'ಮರದೊಳಗಿನ ಕಿಚ್ಚು', 'ಪ್ರತಿ ಸಂಸ್ಕೃತಿ,' 'ಚಿಂತನೆಯ ಪಾಡು' ಕೃತಿಗಳ ಮೂಲಕ ಸಾಹಿತ್ಯ-ಸಂಸ್ಕೃತಿಗೆ ಸಂಬಂಧಿಸಿದ ಪರಿಕಲ್ಪನೆಗಳಿಗೆ ಹೊಸ ಹೊಳಹುಗಳನ್ನು ನೀಡಿದ್ದಾರೆ.

'ಮಾತು ತಲೆಯೆತ್ತುವ ಬಗೆ', 'ಇಲ್ಲಿ ಯಾರೂ ಮುಖ್ಯರಲ್ಲ' ಕೃತಿಗಳಲ್ಲಿ ಕನ್ನಡ ಸಾಹಿತ್ಯ ಮಿಮಾಂಸೆಗೆ ಕನ್ನಡದ್ದೇ ಚಿಂತನಾ ಕ್ರಮವನ್ನು ಅನುಸರಿಸುವ ಮೂಲಕ ರೂಢೀಗತ ಎರವಲು ಸಂಸ್ಕೃತಿಗೆ ವಿದಾಯ ಹೇಳಿದ್ದಾರೆ. 'ಲೋಕ ವಿರೋಧಿಗಳ ಜೊತೆಯಲ್ಲಿ' 'ಕರ್ನಾಟಕದ ಸೂಫಿಗಳು,' 'ಕರ್ನಾಟಕದ ನಾಥಪಂಥ,' 'ವಸಾಹತು ಮತ್ತು ವಿಮೋಚನೆ,' 'ಅಂಡಮಾನ್ ಕನಸು' ಮತ್ತು 'ಹೊಸ ತಲೆಮಾರಿನ ತಲ್ಲಣ' ಮುಂತಾದ ಮಹತ್ವದ ಕೃತಿಗಳು ಇವರಿಂದ ಮೂಡಿ ಬಂದಿವೆ.

ಪ್ರಶಸ್ತಿ ತಂದಿತ್ತ 'ಕತ್ತಿಯಂಚಿನ ದಾರಿ' ಕೃತಿಯಲ್ಲಿ ಕುವೆಂಪು, ರಾಮಚಂದ್ರ ಶರ್ಮ, ನಿಸಾರ್ ಅಹಮದ್, ತೇಜಸ್ವಿ, ಡಿ.ಆರ್. ನಾಗರಾಜ, ಶಾಂತಿನಾಥ ದೇಸಾಯಿ, ಕಾರಂತ ಮುಂತಾದ ಆಧುನಿಕ ಲೇಖಕರ ಮೇಲೆ, ಬಸವಣ್ಣ, ರಾಘವಾಂಕ, ವಡ್ಡಾರಾಧನೆ, ಶೂನ್ಯ ಸಂಪಾದನೆ ಮುಂತಾದ ಆಧುನಿಕಪೂರ್ವ ಲೇಖಕರು ಮತ್ತು ಕೃತಿಗಳ ಮೇಲೆ ವಿಶ್ಲೇಷಣೆಯ ಲೇಖನಗಳಿವೆ. ಕನ್ನಡ ಸಂಸ್ಕೃತಿಯನ್ನು ಕಟ್ಟಿದ ಹಲವರ ವ್ಯಕ್ತಿ ಚಿತ್ರಗಳು ಹಾಗೂ ಕನ್ನಡ ಮುಸ್ಲಿಂ ಜಾನಪದ ಮತ್ತು ಮುಸ್ಲಿಂ ತತ್ವಪದಕಾರರ ಮೇಲೆ ಲೇಖನಗಳಿದ್ದು, ಹೊಸ ವಿಮರ್ಶಾ ನೋಟವಿರುವ ಮಹತ್ವದ ಕೃತಿಯಾಗಿ ಪರಿಗಣಿತವಾಗಿದೆ.

ಪ್ರಚಲಿತ ವಿದ್ಯಮಾನಗಳಿಗೆ ತಕ್ಷಣ ಪ್ರತಿಕ್ರಿಯಿಸುವ ರಹಮತ್ ಪ್ರಸ್ತುತ ಹಂಪಿ ಕನ್ನಡ ವಿ.ವಿಯಲ್ಲಿ ಪ್ರೊಫೆಸರ್. ಹೊಸ ತಲೆಮಾರಿನ ಬರಹಗಾರರಿಗೆ ಹುರಿದುಂಬಿಸುವ ಸಹೃದಯಿ. ಮತ್ತಷ್ಟು ಸಾಹಿತ್ಯ-ಸಂಸ್ಕೃತಿಯನ್ನು ಕಟ್ಟುವ ಕೆಲಸ ಇವರಿಂದಾಗಲಿ ಎಂಬ ಸದಾಶಯ 'ಸಂವಾದ' ಬಳಗದ್ದು. □

ಕಾಡುತ್ತಿರುವ ಕೆಲವು ಪ್ರಶ್ನೆಗಳು

ಪತ್ರಗಳು

ಪ್ರಿಯ ಸಂಪಾದಕರೇ,

ದೇಶಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಅಣಬೆಯ ಮಾದರಿಯಲ್ಲಿ ಹುಟ್ಟಿಕೊಂಡಿರುವ ಅನಧಿಕೃತ ಮಂದಿರ, ಮಸೀದಿ, ಚರ್ಚು, ಗುರುದ್ವಾರ ಇತ್ಯಾದಿಗಳನ್ನೂ ರಸ್ತೆ, ಕಾಲ್ದಾರಿಗಳೆನ್ನದ ಎಲ್ಲೆಂದರಲ್ಲಿ ತಲೆ ಎತ್ತಿರುವ ಕಾಣಿಕೆ ಹುಂಡಿ, ಡಬ್ಬಿ ಇತ್ಯಾದಿಗಳನ್ನೂ ನಿಗದಿತ ಕಾಲಾವಧಿಯೊಳಗಾಗಿ ತೆರವುಗೊಳಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಆದೇಶಿಸಿದೆ.

ಈ ಆದೇಶ ಬಹಳ ತಡವಾಗಿ ಬಂದಿದೆಯಾದರೂ ಅದೊಂದು ಅತ್ಯಂತ ಸ್ವಾಗತಾರ್ಹ ಮತ್ತು ಸ್ತುತ್ಯಾರ್ಹ ಕ್ರಮ ಎನ್ನುವುದರಲ್ಲಿ ಎರಡು ಮಾತಿಲ್ಲ. ಆಯಾ ಜಿಲ್ಲಾಡಳಿತಗಳಿಗ ನ್ಯಾಯಾಲಯದ ಅಪ್ಪಣೆಯನ್ನು ಪರಿಪಾಲಿಸುವ ಕಾರ್ಯದಲ್ಲಿ ನಿರತವಾಗಿವೆ. ಈ ಸಂದರ್ಭದಲ್ಲಿ ಮನವನ್ನು ಕಾಡುತ್ತಿರುವ ಕೆಲವು ಪ್ರಶ್ನೆಗಳಿಗೆ ಉತ್ತರ ಬೇಕಾಗಿದೆ.

ಮೊದಲನೆಯದಾಗಿ, ಅನಧಿಕೃತ ಪ್ರಾರ್ಥನಾಲಯಗಳ ನಿರ್ಮಾಣ ಕಾರ್ಯ ಅನೇಕ ವರ್ಷಗಳಿಂದ ಹಾಡುಹಗಲೆ ರಾಜಾರೋಷವಾಗಿ ನಡೆಯುತ್ತಿದ್ದರೂ ಸಂಬಂಧಪಟ್ಟ ಸ್ಥಳೀಯ ಆಡಳಿತಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳು ಇದು ವರೆಗೆ ಜಾಣ ಕುರುಡನ್ನು ತೋರಿಸಿದ್ದೇಕೆ? ತಮ್ಮಲ್ಲಿದ್ದ ಅಧಿಕಾರವನ್ನು ಬಳಸಿಕೊಂಡು ಅಥವಾ ಈಗಿನಂತೆ ಸಂಬಂಧಪಟ್ಟ ಧರ್ಮಗಳ ಮುಖ್ಯಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಂತಹ ಚಟುವಟಿಕೆಗಳನ್ನೆಲ್ಲ ತಕ್ಷಣ ನಿಲ್ಲಿಸಲು ಸಾಧ್ಯವಿರಲಿಲ್ಲವೇ? ಐಎಎಸ್, ಕೆಎಎಸ್, ಐಪಿಎಸ್ ಪದವೀಧರರಾಗಿ ಸಂವಿಧಾನ ಮತ್ತು ಕಾನೂನುಗಳನ್ನು ಅರಿತಿರುವ ಇವರೆಲ್ಲರೂ ನ್ಯಾಯಾಲಯದ ಚಾಟಿಯೇಟಿಗಾಗಿ ಕಾಯಬೇಕಿತ್ತೇ?

ಇನ್ನೊಂದು ಮುಖ್ಯ ವಿಷಯ. ಇತರರ ಎಲೆಯಲ್ಲಿರುವ ನೊಣವನ್ನು ಓಡಿಸುವಾಗ ತಮ್ಮ ಎಲೆಯಲ್ಲಿ ಸತ್ತು ಬಿದ್ದಿರುವ ಕತ್ತೆಯನ್ನೂ ನೋಡಬೇಡವೇ? ಜಿಲ್ಲಾಡಳಿತಗಳು (ಸ್ವಂತ ಕಚೇರಿಗಳನ್ನೂ ಒಳಗೊಂಡಂತೆ) ಅನೇಕ ಸರಕಾರಿ ಕಚೇರಿಗಳಲ್ಲಿ, ಪೊಲೀಸ್ ಠಾಣೆಗಳಲ್ಲಿ, ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಲ್ಲಿ ಅನಧಿಕೃತವಾಗಿ ಸ್ಥಾಪಿಸಲಾಗಿರುವ ಒಂದು ನಿರ್ದಿಷ್ಟ ಧರ್ಮದ ದೇವತೆಗಳ ಫೋಟೊ ಮತ್ತು ವಿಗ್ರಹಗಳತ್ತ ಕೂಡಾ ಸ್ವಲ್ಪ ಕಣ್ಣಾಡಿಸಬೇಕು.

ಜಾತ್ಯತೀತವೆಂದು ಹೇಳಿಕೊಳ್ಳುವ ಸರಕಾರ ತಾನೇ ಖುದ್ದು ಒಂದು ನಿರ್ದಿಷ್ಟ ಧರ್ಮಕ್ಕೆ ಮಾತ್ರ ಪ್ರೋತ್ಸಾಹ ನೀಡುತ್ತಿರುವಂತೆ, ಸಂವಿಧಾನಕ್ಕೆ ಅಪಚಾರ ಬಗೆಯುವಂತೆ ಕಾಣಿಸಿಕೊಳ್ಳಬಹುದೇ? ಅಂತಹ ಅನಧಿಕೃತ ಪ್ರಾರ್ಥನಾ ಸ್ಥಳಗಳನ್ನು ಕೂಡಾ ತೆರವುಗೊಳಿಸಬೇಕಾಗಿದೆ. ನಶಿಸುತ್ತಿರುವ ಸಾಂವಿಧಾನಿಕ ಮೌಲ್ಯಗಳನ್ನು ಪುನರ್ ಸ್ಥಾಪಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಬಲ್ಲುದು ಎನ್ನುವುದರಲ್ಲಿ ಅನುಮಾನವಿಲ್ಲ.

ಸುರೇಶ್ ಭಟ್
ಬಾಕ್ರಬೈಲು

ಸಂಪಾದಕರೊಡನೆ ಸಂವಾದ

‘ಹಿಂದ್ ಸ್ವರಾಜ್’ ನೊಂದಿಗೆ ಒಂದು ಕ್ಷಣ

ಶಿಲ್ಪ ಕೆ. ಹೆಚ್.

> **ಬ್ರಿಟೀಷರು ದೈಹಿಕವಾಗಿ ಭಾರತವನ್ನು ಬಿಟ್ಟು ಹೋಗಿರಬಹುದು. ಆದರೆ ಅವರು ನಡೆದು ಬಂದ ದಾರಿಯಲ್ಲೇ, ಅವರ ವಿಚಾರಧಾರೆಯಲ್ಲೇ ಹಾಗೂ ಅವರ ನಾಗರೀಕತೆಯ ಮಾದರಿಯಲ್ಲೇ ಇಂದೂ ಸಹ ಭಾರತದ ಸಮಾಜ ನಡೆಯುತ್ತಿರುವುದು ನಿಜಕ್ಕೂ ವಿಪರ್ಯಾಸ. ಬ್ರಿಟೀಷರು ಮೊದಲು ವ್ಯಾಪಾರಕ್ಕೆಂದು ಭಾರತಕ್ಕೆ ಬಂದರು. ಆದರೆ ಭಾರತದಲ್ಲಿದ್ದಂತಹ ಚಿಕ್ಕ ಚಿಕ್ಕ ರಾಜ ಸಂಸ್ಥಾನಗಳು ಒಳಜಗಳವನ್ನು ಮಾಡಿಕೊಂಡು ಬ್ರಿಟೀಷರ ನೆರವನ್ನು ಕೇಳಿದರು. ಅವರು ನೆರವನ್ನು ನೀಡಿ ಕ್ರಮೇಣ ಇಡೀ ಹಿಂದೂಸ್ಥಾನವನ್ನೇ ಆಕ್ರಮಿಸಿಕೊಂಡರು.**

ಮಾನ್ಯ ಸಂಪಾದಕರೇ,

ನಾನು ಪ್ರಥಮ ವರ್ಷದ ಎಂ.ಎ. ಗೆ ಬಂದಾಗ ದ್ವಿತೀಯ ವರ್ಷದ ಸ್ನೇಹಿತರು ನಮಗೆ ಸ್ವಾಗತ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಆ ಸಮಾರಂಭದಲ್ಲಿ ನಮಗೆ ‘ಹಿಂದ್ ಸ್ವರಾಜ್’ ಪುಸ್ತಕವನ್ನು ಕೊಡುಗೆಯಾಗಿ ನೀಡಿದರು. ಆ ಸಂದರ್ಭದಲ್ಲಿ ನನಗೆ ಸ್ವಲ್ಪ ಬೇಸರವಾಯಿತು, ಏಕೆಂದರೆ ಇಂತಹ ಪುಸ್ತಕದ ಬದಲು ಬೇರೆ ಯಾವುದಾದರೂ ವಸ್ತುಗಳನ್ನು ನೀಡಬಹುದಿತ್ತು ಎಂಬ ನಿರೀಕ್ಷೆ ನನ್ನಲ್ಲಿತ್ತು. ತದನಂತರ ದ್ವಿತೀಯ ವರ್ಷದ ಮಿತ್ರರಿಗೆ ಮನಸ್ಸಿನಲ್ಲೇ ಶಪಿಸುತ್ತಾ, ಅವರು ನೀಡಿದ ನೆನಪಿನ ಕಾಣಿಕೆಯನ್ನು ಓದುವ ಗೋಜಿಗೆ ಹೋಗದೆ ಹಾಸ್ಟೆಲ್‌ನ ಮೂಲೆಯೊಂದರಲ್ಲಿ ತೆಗೆದಿರಿಸಿದೆ.

ನಂತರ ದ್ವಿತೀಯ ಸೆಮಿಸ್ಟರ್‌ಗೆ ನಾವು ಬಂದಾಗ ‘ಹಿಂದ್ ಸ್ವರಾಜ್’ನ್ನು ನಮಗೆ ಅಧ್ಯಯನದ ವಿಷಯವಾಗಿ ನಮ್ಮ ವಿಭಾಗದಲ್ಲಿ ಇಟ್ಟಿದ್ದರು. ಮೂಲೆಯಿಂದ ಆ ಪುಸ್ತಕವನ್ನು ಹೆಕ್ಕಿಕೊಂಡು ಅದರ ಮೇಲಿದ್ದ ಧೂಳನ್ನು ಕೊಡವಿ, ಅನಿವಾರ್ಯದಿಂದ ನಾನು ಓದಲು ಪ್ರಾರಂಭಿಸಿದೆ. ನನ್ನ ಅನಿಸಿಕೆಯನ್ನು ಬರವಣಿಗೆಯ ರೂಪಕ್ಕೆ ತರಿಸುವಷ್ಟರ ಮಟ್ಟಿಗೆ ಆ ಪುಸ್ತಕ ನನ್ನ ಮೇಲೆ ಪ್ರಭಾವ ಬೀರಿತು. ನಿಜವಾಗಿಯೂ ಬೆಲೆ ಕಟ್ಟಲಾಗದಂತಹ ಅಂತಹ ಪುಸ್ತಕವನ್ನು ಮೂಲೆಗೆ ಎಸೆದಿದ್ದರಿಂದ ನನ್ನ ಮೇಲೆಯೇ ನನಗೆ ಬೇಸರ ಮೂಡಲು ಪ್ರಾರಂಭವಾಯಿತು. ಇಂತಹ ಒಂದು ಪುಸ್ತಕವನ್ನು ಕಾಣಿಕೆಯಾಗಿ ನೀಡಿದ ನಮ್ಮ ಹಿರಿಯ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ.

‘ಹಿಂದ್ ಸ್ವರಾಜ್’ಪುಸ್ತಕ ನಿಜಕ್ಕೂ ಒಂದು ಅದ್ಭುತವಾದ ಕೃತಿಯಾಗಿದೆ. ಇದನ್ನು ಪ್ರತಿಯೊಬ್ಬ ಪ್ರಜೆಯು ಒದಲೇಬೇಕು. ಈ ಕೃತಿಯನ್ನು ಪುನರಾವಲೋಕಿಸುವ ಅಗತ್ಯತೆ ಇಂದು ನಮಗಿದೆ. ಅದರ ವಿಚಾರಗಳನ್ನು ಮೊದಲು ಸ್ಥೂಲವಾಗಿ ಅವಲೋಕಿಸಲು ಪ್ರಯತ್ನಿಸುತ್ತೇನೆ.

‘ಹಿಂದ್ ಸ್ವರಾಜ್’ ಪುಸ್ತಕವನ್ನು ನಾನು ಓದುವವರೆಗೂ ಕೂಡ ಬ್ರಿಟೀಷರನ್ನು ಭಾರತದಿಂದ ಹೊರಹಾಕುವ ಪ್ರಯತ್ನವನ್ನಷ್ಟೆ ಗಾಂಧೀಜಿಯವರು ಮಾಡಿದ್ದರು ಎಂದು ಬಲವಾಗಿ ನಂಬಿದ್ದೆ. ಆದರೆ ಈ ಪುಸ್ತಕ ಓದಿದಾಗ ಗಾಂಧಿಯ ಚಿಂತನಾಕ್ರಮವೇ ವಿಭಿನ್ನವಾಗಿತ್ತು ಎಂದು ತಿಳಿಯಿತು. ಅದೇನೆಂದರೆ ಬ್ರಿಟೀಷರು ತಮ್ಮ ಮೇಲೆ ನಿರ್ಬಂಧ ಹಾಕೊಂಡರೆ ಅವರು ಭಾರತದಲ್ಲಿ ಇರಲು ಯಾವುದೇ ಅಡ್ಡಿ ಇಲ್ಲ ಎಂದಿದ್ದರು. ಅಂತಹ ನಿಂಬಂಧನೆಗಳೆಂದರೆ

* ಬ್ರಿಟೀಷರು ಆಡಳಿತಗಾರರಾದರೂ ಪ್ರಜಾಸೇವಕರಂತೆ ಇರಬೇಕು.

* ಇದುವರೆಗೂ ಅವರು ತೆಗೆದುಕೊಂಡು ಹೋದ ಐಶ್ವರ್ಯ ಅವರಲ್ಲೇ ಇರಲಿ, ಆದರೆ ಇನ್ನು ಮುಂದೆ ಮಾತ್ರ ಹಾಗೆ ಮಾಡುವಂತಿಲ್ಲ.

* ಅವರ ನಿಜವಾದ ಕೆಲಸ ಹಿಂದೂಸ್ಥಾನದ ಕಾವಲು.

* ಭಾರತೀಯರಿಂದ ಲಾಭ ಪಡೆಯುವ ಆಸೆಯನ್ನು ಬಿಡಬೇಕು.

* ನಮ್ಮ ಹಳೆಯ ಪಾಠಶಾಲೆಗಳನ್ನು ಹಾಗೂ ನ್ಯಾಯಲಯಗಳನ್ನು ಮತ್ತೆ ಸ್ಥಾಪಿಸುವಲ್ಲಿ ಯಾವುದೆ ಅಡೆತಡೆ ಮಾಡಬಾರದು.

* ಹಿಂದೂಸ್ಥಾನದ ಸಾಮಾನ್ಯ ಭಾಷೆ ಇಂಗ್ಲೀಷ್ ಅಲ್ಲ, ಇಲ್ಲಿ ಹಿಂದಿ ಹೆಚ್ಚಿನ ಬಳಕೆಯಲ್ಲಿರುವುದರಿಂದ ಬ್ರಿಟೀಷರೂ ಸಹ ಅದೇ ಭಾಷೆಯನ್ನು ವ್ಯಾವಹಾರಿಕ ಭಾಷೆಯಾಗಿ ಬಳಸಬೇಕು.

* ಹಿಂದೂಗಳಿಗಾಗಿ ಗೋಮಾಂಸವನ್ನು ಹಾಗೂ ಮುಸ್ಲಿಂರಿಗಾಗಿ ಹಂದಿ ಮಾಂಸವನ್ನು ಬ್ರಿಟೀಷರು ತ್ಯಜಿಸಬೇಕು.

* ರೈಲು, ಸೇನೆಗಳಿಗೆ ಮನಬಂದಂತೆ ಖರ್ಚು ಮಾಡುವಂತಿಲ್ಲ.

ಈ ರೀತಿ ನಡೆದುಕೊಂಡು ಹಿಂದೂಸ್ಥಾನದಲ್ಲಿ ಇರುವುದಾದರೆ ಅದರಿಂದ ನಮಗೇನೂ ತೊಂದರೆಯಿಲ್ಲ ಎಂಬುದಾಗಿ ಹೇಳಿದ್ದರು. ಅದು ಹೇಗೆ ಸಾಧ್ಯ?

ಹುಲಿ ತನ್ನ ದುಷ್ಟ ಬುದ್ದಿಯನ್ನು ಬಿಟ್ಟರೆ ಸಾಕಬಹುದು ಎಂದಾಗುತ್ತದೆ. ಹುಲಿ ತನ್ನ ಗುಣವನ್ನು ಬಿಡುವುದೂ ಒಂದೇ, ಬ್ರಿಟೀಷರು ತಮ್ಮ ಸ್ವಭಾವವನ್ನು ಬದಲಿಸುವುದು ಎರಡೂ ಒಂದೇ ಎಂಬುದು ನನ್ನ ಅಭಿಪ್ರಾಯವಾಗಿದೆ. ಅವರು ತಮ್ಮಲ್ಲಿಯೇ ಏನೇ ಸುಧಾರಣೆ ಮಾಡಿಕೊಂಡರೂ ಅವರು ಭಾರತೀಯರಾಗಲು ಸಾಧ್ಯವೇ?

ಬ್ರಿಟೀಷರು ದೈಹಿಕವಾಗಿ ಭಾರತವನ್ನು ಬಿಟ್ಟು ಹೋಗಿರಬಹುದು. ಆದರೆ ಅವರು ನಡೆದು ಬಂದ ದಾರಿಯಲ್ಲೇ, ಅವರ ವಿಚಾರಧಾರೆಯಲ್ಲೇ ಹಾಗೂ ಅವರ ನಾಗರೀಕತೆಯ ಮಾದರಿಯಲ್ಲೇ ಇಂದೂ ಸಹ ಭಾರತದ ಸಮಾಜ ನಡೆಯುತ್ತಿರುವುದು ನಿಜಕ್ಕೂ ವಿಪರ್ಯಾಸ. ಬ್ರಿಟೀಷರು ಮೊದಲು ವ್ಯಾಪಾರಕ್ಕೆಂದು ಭಾರತಕ್ಕೆ ಬಂದರು..ಆದರೆ ಭಾರತದಲ್ಲಿದ್ದಂತಹ ಚಿಕ್ಕ ಚಿಕ್ಕ ರಾಜ ಸಂಸ್ಥಾನಗಳು ಒಳಜಗಳವನ್ನು ಮಾಡಿಕೊಂಡು ಬ್ರಿಟೀಷರ ನೆರವನ್ನು ಕೇಳಿದರು. ಅವರು ನೆರವನ್ನು ನೀಡಿ ಕ್ರಮೇಣ ಇಡೀ ಹಿಂದೂಸ್ಥಾನವನ್ನೇ ಆಕ್ರಮಿಸಿಕೊಂಡರು. ಹಿಂದೂಸ್ಥಾನ ಬ್ರಿಟೀಷರ ವಶವಾಗಲು ಅವರನ್ನು ಇಲ್ಲಿ ಇರಿಸಿಕೊಂಡು ಅವರ ನಾಗರೀಕತೆಯನ್ನು ಅಳವಡಿಸಿಕೊಂಡಿದ್ದೇ ಆಗಿದೆ. ಇಂದಿನ ರಾಜಕೀಯವು ವಸಾಹತುಶಾಹಿಯಿಂದ ಬಂದದ್ದಾಗಿದೆ. ಗಾಂಧೀಜಿಯವರ ರಾಜಕೀಯ ವಿಚಾರಗಳಿಗೂ ಇಂದಿನ ರಾಜಕೀಯ ವಿಚಾರಗಳಿಗೂ ಅಗಾಧವಾದ ವ್ಯತ್ಯಾಸವಿದೆ. ಅದನ್ನು ತದ್ವಿರುದ್ಧವಾದವು ಎಂದು ಹೇಳಿದರೂ ತಪ್ಪಾಗಲಾರದು.

ಗಾಂಧೀಜಿಯು ರಾಜ್ಯವನ್ನು ಆತ್ಮರಹಿತ ಯಂತ್ರ ಎಂದು ಪರಿಗಣಿಸಿದ್ದಾರೆ. ಇಂತಹ ಯಂತ್ರದಲ್ಲಿ ಯಾರು ಸಿಕ್ಕಿಕೊಳ್ಳುತ್ತಾರೆಯೋ ಅವರು ತಮ್ಮ ಆತ್ಮವನ್ನೇ ಕಳೆದುಕೊಳ್ಳುತ್ತಾರೆ. ನಿಜವಾದ ರಾಜಕೀಯ ಎಂದರೆ ಅಂತಹ ಆತ್ಮರಹಿತ ಯಂತ್ರದಿಂದ ಕಳಚಿಕೊಳ್ಳುವುದು ಅಥವಾ ಅದರಿಂದ ಹೊರಗೆ ಉಳಿಯುವುದೇ ಆಗಿದೆ. ನಾವು ಯಾವುದನ್ನು ರಾಜಕೀಯ ಎಂದು ಪರಿಗಣಿಸಿದ್ದೇವೆಯೋ, ಅದರ ಕುರಿತು ನಮಗೆ ಒಳ್ಳೆಯ ಅಭಿಪ್ರಾಯವಿರಲಿ ಅಥವಾ ಕೆಟ್ಟ ಅಭಿಪ್ರಾಯವಿರಲಿ ಅದು ಇಲ್ಲಿ ಮುಖ್ಯವಲ್ಲ. ಗಾಂಧಿಯ ವಿಚಾರವು ಅದಕ್ಕೆ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ.

ಬ್ರಿಟೀಷರು ನಮ್ಮನ್ನು ಏಕೆ ಆಳಿದರು ಎಂಬುದಕ್ಕಿಂತ, ನಾವು ಏಕೆ ಆಳಿಸಿಕೊಂಡೆವು ಎಂಬುದು ಮುಖ್ಯ ಎಂಬುದಾಗಿ ಗಾಂಧಿ ಅಭಿಪ್ರಾಯ ಪಟ್ಟಿದ್ದರು. ಪ್ರಶ್ನೆಯನ್ನು ಈ ರೀತಿ ಇಡುವುದರ ಮೂಲಕವೇ ನಮ್ಮ ಸಂಸ್ಕೃತಿಯನ್ನು ಹಾಗೂ ಪಾಶ್ಚಾತ್ಯರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಗಾಂಧೀಜಿಯ ಪ್ರಕಾರ, ಬ್ರಿಟೀಷರಿಂದ ನಾವು ಆಂಗ್ಲ ಭಾಷೆಯನ್ನು, ಆಧುನಿಕತೆಯನ್ನು ಮಾತ್ರ ಕಲಿಯಲಿಲ್ಲ, ಬದಲಿಗೆ ಅವರ ಸಂಸ್ಕೃತಿಯನ್ನೂ ಅಳವಡಿಸಿಕೊಂಡಿದ್ದೇವೆ.

ಗಾಂಧೀಜಿ ಭಾರತದ ರಾಷ್ಟ್ರೀಯ ಚಳವಳಿಗೆ ದುಮುಕುವ ಮುನ್ನ, ಭಾರತದಲ್ಲಿದ್ದ ವಸಾಹತುಶಾಹಿಗಳು

ಭಾರತೀಯರ ಕುರಿತು ಕೆಲವಾರು ಚಿತ್ರಣಗಳನ್ನು ಕಟ್ಟಿಕೊಟ್ಟಿದ್ದರು. ಅಂದರೆ, ಭಾರತೀಯರು ಅನಾಗರೀಕರು, ಅನಕ್ಷರಸ್ಥರು, ದಡ್ಡರು, ಮೂರ್ತಿ ಪೂಜಕರು ಇತ್ಯಾದಿ, ಇತ್ಯಾದಿ ಎಂದು ವಿವರಿಸಿದ್ದರು. ಅವರ ವಿವರಣೆಗೆ ಯಾವುದೇ ಚಕಾರವನ್ನೂ ಎತ್ತದೆ ಶಾಂತಚಿತ್ತರಾಗಿ ನಾವೂ ಸಹ ಒಪ್ಪಿಕೊಂಡೆವು. ಅಂತೆಯೇ ರಾಜಾರಾಮ್ ಮೋಹನ್ ರಾಯ್ ರಂತಹ ಸಮಾಜ ಸುಧಾರಕರೂ ನಮ್ಮ ಸಮಾಜ ಅಜ್ಞಾನದಲ್ಲಿರುವುದರಿಂದ ಅದನ್ನು ಸರಿಪಡಿಸಿ, ಸುಧಾರಿಸುವ ಏರ್ಪಾಟುಗಳನ್ನು ಮಾಡಿಕೊಂಡರು. ಅದರಂತೆಯೇ ಅನೇಕ ಸುಧಾರಣಾ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ವಸಾಹತುಶಾಹಿತ್ವ ಎಷ್ಟರ ಮಟ್ಟಿಗೆ ನಮ್ಮ ಮೇಲೆ ಪ್ರಭಾವ ಬೀರಿತೆಂದರೆ, ಭಾರತೀಯರು ತಮ್ಮ ಅನುಭವದಿಂದ ಮಾತನಾಡುವುದನ್ನು, ಆಲೋಚಿಸುವುದನ್ನು ಮೂಲೆಗೊತ್ತಿ, ಬ್ರಿಟೀಷರು ಹೇಳಿದ್ದನ್ನೇ ನಿಜವೆಂದು ನಂಬತೊಡಗಿದರು.

ಜೊತೆಗೆ, ಇಲ್ಲಿನ ವಾಸ್ತವವನ್ನು ವಸಾಹತುಶಾಹಿಗಳ ಅನುಭವದಿಂದ ನೋಡುವ ವಿಧಾನವೇ ಎಲ್ಲೆಡೆಯೂ ಪಸರಿಸಿತು. ಗಾಂಧೀಜಿ, ಇಂತಹ ಅಂಶವನ್ನು ಗುರುತಿಸಿ, ಅದರಿಂದ ಹೊರಬರುವ ಮಾರ್ಗಗಳತ್ತ ಸೂಕ್ಷ್ಮವಾದ ಅವಲೋಕನ ಮಾಡಲು ಪ್ರಾರಂಭಿಸಿದ್ದರು. ನಮ್ಮ ಅನುಭವದ ಮೂಲಕ ನಮ್ಮ ಜಗತ್ತನ್ನು ಹೇಗೆ ವಿವರಿಸಬೇಕೆಂಬುದು ಗಾಂಧಿಯ ವಿಚಾರಗಳು ಸ್ಪಷ್ಟವಾಗಿ ತಿಳಿಸದಿದ್ದರೂ ನಮ್ಮ ಅನುಭವವನ್ನು ಗ್ರಹಿಸುವಲ್ಲಿ ಇರುವ ಸಮಸ್ಯೆಯನ್ನು ಗುರುತಿಸವಲ್ಲಿ ಅವರು ಮಾಡಿರುವ ಪ್ರಯತ್ನ ಶ್ಲಾಘನೀಯವೇ ಆಗಿದೆ.

ಸಾಮಾನ್ಯವಾಗಿ ಗಾಂಧಿಯನ್ನು ಆಧುನಿಕ ವಿರೋಧಿ ಎಂದು ಕೆಲವರು ಕರೆಯುತ್ತಾರೆ. ಏಕೆಂದರೆ ಮೇಲ್ನೋಟಕ್ಕೆ ಕಾಣುವಂತೆ ವೈದ್ಯರನ್ನು, ವಕೀಲರನ್ನು ಹಾಗೂ ಯಂತ್ರಗಳನ್ನು, ರೈಲನ್ನು ವಿರೋಧಿಸಿದರು ಎಂಬುದು ತಿಳಿಯುತ್ತದೆ. ಹಾಗಾದರೆ ಯಾವ ಅರ್ಥದಲ್ಲಿ ಗಾಂಧಿ ಇವೆಲ್ಲವನ್ನು ವಿರೋಧಿಸಿದರು ಎಂಬುದನ್ನು ಮನಗಾಣಬೇಕು. ವೈದ್ಯರಿರುವುದರಿಂದಲೇ ರೋಗರುಜಿನ ಅಧಿಕವಾಗುತ್ತಿದೆ. ಕಾರಣ, ವೈದ್ಯರು ಚಿಕಿತ್ಸೆ ನೀಡಲು ಇದ್ದಾರೆ ಎಂದು ನಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡುವುದಿಲ್ಲ. ಆದರೆ ವೈದ್ಯರೇ ಇಲ್ಲದೆ ಹೋಗಿದ್ದರೆ, ರೋಗ ಬರುವ ಮುನ್ನವೇ ಮುಂಜಾಗ್ರತೆ ವಹಿಸಿ ರೋಗ ಬರದ ಹಾಗೆ ನೋಡಿಕೊಳ್ಳುತ್ತೇವೆ. ಆದ್ದರಿಂದ ವೈದ್ಯರು ಜನರನ್ನು ಹೀನ ವ್ಯಕ್ತಿಯನ್ನಾಗಿ ಮಾಡುವ ಮೂಲಕ ಸೋಮಾರಿತನಕ್ಕೆ ತಳ್ಳುತ್ತಾರೆ ಎಂಬುದಾಗಿ ಗಾಂಧೀಜಿ ಅಭಿಪ್ರಾಯ ಪಟ್ಟಿದ್ದರು. ವಕೀಲರಾಗಲಿ, ರೈಲುಗಳಾಗಲಿ, ಅವುಗಳಿಂದ ದೊರಕುವ ಪ್ರಯೋಜನಕ್ಕಿಂತ ಅವು ಸೃಷ್ಟಿಸುವ ಸಮಸ್ಯೆಗಳೇ ಹೇರಳವಾದವು. ಈ ಅರ್ಥದಲ್ಲಿ ಗಾಂಧೀ ಅವನ್ನು ವಿರೋಧಿಸಿದ್ದರು.

ಆದ್ದರಿಂದ, ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳುವುದನ್ನು ಕಲಿತರೆ, ನಮ್ಮನ್ನು ನಾವು ಆಳಿಕೊಳ್ಳುವುದನ್ನು ಕಲಿಯಬಹುದು. ಆಗ ಮಾತ್ರ ಸ್ವರಾಜ್ಯ ಸಾಧ್ಯ. ಹಾಗಾಗಿ ಸ್ವರಾಜ್ಯ ಎಂಬುದು ನಮ್ಮ ಕೈಯ್ಯಲ್ಲಿದೆಯೇ ಹೊರತು ಯಾರೋ ನೀಡುವದ್ದರಲ್ಲಿಲ್ಲ..

ಇಷ್ಟೆಲ್ಲಾ ಹೇಳಿದ ಮೇಲೆ ಗಾಂಧೀಜಿಯ ಸತ್ಯಾಗ್ರಹದ ಕುರಿತು ಹೇಳಲೇಬೇಕು. ಅಂದು ತೀವ್ರಗಾಮಿಗಳಿಗೆ, ಬಹುತೇಕ ಯುವಕರಿಗೆ ಗಾಂಧಿಯ ಅಹಿಂಸಾ ತತ್ವದ ಬಗ್ಗೆ ಅಸಮಾಧಾನ ಇತ್ತು. ಸತ್ಯಾಗ್ರಹವನ್ನು ಬಲಹೀನರ ಆಯುಧ, ಇದೊಂದು ನಿಷ್ಕ್ರಿಯ ಪ್ರತಿಭಟನೆ ಎಂದು ಟೀಕೆ ಮಾಡಿದ್ದರು. ಸತ್ಯಾಗ್ರಹದ ಹಿಂದೆ ಗಾಂಧಿಯ ಉದ್ದೇಶವೇನಿತ್ತು ಎಂಬುದನ್ನು ಒಮ್ಮೆ ಪರಿಶೀಲಿಸೋಣ. "ಕತ್ತಿ ಹಿಡಿದವರು ಕತ್ತಿಯಿಂದಲೇ ಸಾಯುತ್ತಾರೆ" ಎಂಬ ನಾಣ್ಣುಡಿಯನ್ನು ನಾವೆಲ್ಲಾ ಕೇಳಿದ್ದೇವೆ. ಇದನ್ನು ನೆನಪಿನಲ್ಲಿರಿಸಿಕೊಂಡರೆ, ಅವರ ಸತ್ಯಾಗ್ರಹ ಕಲ್ಪನೆಯ ಒಂದು ಆಯಾಮವಾದರೂ ತಿಳಿಯಬಹುದು. ಇಂದಿನ ರಾಜಕೀಯದ ಸಂದರ್ಭದಲ್ಲಿ ನಡೆಯುತ್ತಿರುವ ವಿಧ್ವಂಸಕ, ಹಾಗೂ ಹಿಂಸಾತ್ಮಕ ವಿದ್ಯಮಾನಗಳಿಂದ ಹೊರಬರಬೇಕಾದರೆ, ಗಾಂಧಿಯ ವಿಚಾರಗಳ ಒಳಗೆ ಹೋಗಿ ಅದರ ಪ್ರಸ್ತುತತೆಯನ್ನು ಅರಿಯುವುದು ಸೂಕ್ತ.

ಸತ್ಯಾಗ್ರಹವನ್ನು ಅಥವಾ ಈ ತಂತ್ರವನ್ನು ಉಪಯೋಗಿಸಿದರೆ ಸತ್ಯಾಗ್ರಹ ಮಾಡಿದವರಿಗೂ ಹಾಗೂ ಯಾರ ವಿರುದ್ಧ ಮಾಡುತ್ತಾರೆಯೋ ಅವರಿಗೂ ಶುಭವಾಗುತ್ತದೆ. ಒಂದು ತೊಟ್ಟು ರಕ್ತವನ್ನು ಸುರಿಸದೆ ಗಂಭೀರ ಪರಿಣಾಮವನ್ನು ಬೀರುವ ಶಕ್ತಿ ಈ ಸತ್ಯಾಗ್ರಹಕ್ಕಿದೆ. ಸತ್ಯಾಗ್ರಹವನ್ನು ಒಬ್ಬನೇ ಮಾಡಬಲ್ಲ, ಇಲ್ಲವೇ ಲಕ್ಷಾಂತರ ಜನರೂ ಮಾಡಬಲ್ಲರು. ದುರ್ಬಲ ಶರೀರದವರು, ಸ್ತ್ರೀಯರು, ಪುರುಷರು ಎಲ್ಲರೂ ಮಾಡಬಹುದು. ಇದಕ್ಕೆ ಯಾವುದೇ ರೀತಿಯ ಕವಾಯತು ಕಲಿಯಬೇಕಿಲ್ಲ. ಒಂದೊಮ್ಮೆ ಪ್ರಪಂಚದ ಎಲ್ಲಾ ಹೋರಾಟಗಳೂ ಹಿಂಸೆಯ ಮೂಲಕವೇ ನಡೆದಿದ್ದರೆ ಇಂದಿನ ಜಗತ್ತಿನಲ್ಲಿ ಯಾರೂ ಸಹ ಬದುಕಿರುತ್ತಿರಲಿಲ್ಲ. ಇತಿಹಾಸದಲ್ಲಿ ಎಷ್ಟೋ ಯುದ್ಧಗಳು ನಡೆದಿವೆ. ಆದರೂ ಕೋಟ್ಯಾಂತರ ಜನರು ಬದುಕಿದ್ದಾರೆಂದರೆ, ಹಿಂಸೆಗಿಂತ ಅಹಿಂಸೆಯೇ ಮುಖ್ಯವಾಗಿ ಇರುವುದಕ್ಕೆ ಸಾಕ್ಷ್ಯವಾಗಿದೆ. ಆದ್ದರಿಂದ, ಇದು ಅಹಿಂಸಾತ್ಮಕ ಮಾರ್ಗದ ಮೂಲಕ ಜಯವನ್ನು ಸಾಧಿಸುವ ಸಾಮರ್ಥ್ಯವನ್ನು ತೋರ್ಪಡಿಸುವ ಸಾಧನವೇ ಹೊರತು, ಹೇಡಿಗಳ ಆಯುಧವಲ್ಲ.

ನಾವು ಪ್ರತಿವರ್ಷ ಗಾಂಧಿ ಜಯಂತಿಯನ್ನು, ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವ ಸಂದರ್ಭದಲ್ಲಿ, ಯಾರೋ ಪ್ರಸಿದ್ಧ ನಾಯಕರನ್ನು ಕರೆಸಿ ಭಾಷಣ ಮಾಡಿಸುತ್ತೇವೆ. ಇಲ್ಲವೇ ಗಾಂಧೀಜಿಯಂತಹ ಮಹಾನ್ ನಾಯಕರ ಪುತ್ಥಳಿಯನ್ನು ಸ್ಥಾಪಿಸುವ ಮೂಲಕ, ಅಥವಾ ಯಾವುದೋ ಬಡಾವಣೆಗೆ ಅವರ ಹೆಸರನ್ನು ಇಡುವ ಮೂಲಕ ಗೌರವನ್ನು ಸೂಚಿಸುತ್ತೇವೆ. ಆ ರೀತಿ ಗೌರವ ಸಲ್ಲಿಸುವುದು ಒಂದು ರೀತಿಯಲ್ಲಿ ಒಳ್ಳೆಯದೇ, ಆದರೆ ಇದರಿಂದ ಏನು ಪ್ರಯೋಜನ. ಏಕೆಂದರೆ ವ್ಯಕ್ತಿಗಳಿಗೆ ಅಭಿನಂದನೆ ಸಲ್ಲಿಸುವುದಕ್ಕೂ ಅವರ ಚಿಂತನೆಯನ್ನು ಮನರಾವಲೋಕಿಸುವುದಕ್ಕೂ ಗಂಭೀರವಾದ ವ್ಯತ್ಯಾಸವಿದೆ.

ಗಾಂಧೀಜಿಯವರಿಗೆ ಆಂಗ್ಲರನ್ನು ಕುರಿತು ಯಾವುದೇ ರೀತಿಯ ಹಗೆಯಿರಲಿಲ್ಲ, ಬದಲಿಗೆ ಅವರ ನಾಗರೀಕತೆಯನ್ನು ಮಾತ್ರ ಅವರು ವಿರೋಧಿಸುತ್ತಿದ್ದರು. ನಿಜವಾದ ಸ್ವಾತಂತ್ರವೆಂದರೆ, ಕೇವಲ ಬ್ರಿಟೀಷರನ್ನು ಹೊರಗೆ ಹಾಕುವುದಷ್ಟೆ ಅಲ್ಲ, ಬದಲಿಗೆ ಅವರ ನಾಗರೀಕತೆಯ ಹಿಡಿತದಿಂದ ಹೊರಗೆ ಬರುವುದೇ ಆಗಿದೆ. ಬ್ರಿಟೀಷರೇನೋ ಭಾರತ ಬಿಟ್ಟು ಹೋಗಿರಬಹುದು, ಆದರೆ ಅವರ ನಾಗರೀಕತೆಯಿಂದ ಭಾರತೀಯರು ಹೊರಬರಲು ಇಂದಿಗೂ ಸಾಧ್ಯವಾಗಿಲ್ಲ. ಅವರದ್ದೇ ಆದ ರಾಜಕೀಯ ಪರಿಕಲ್ಪನೆಗಳನ್ನು, ಸಂಸ್ಕೃತಿಯನ್ನು ವಿವರಿಸಲು ಬೇಕಾದ ಪರಿಕಲ್ಪನೆಗಳನ್ನು ಬಳಸಿಕೊಳ್ಳುತ್ತಿದ್ದೇವೆ. ಹಾಗಾಗಿ ನಮಗೆ ನಿಜವಾಗಿಯೂ ಸ್ವಾತಂತ್ರ ಬಂದಿದೆಯೇ ಇಲ್ಲವೇ ಎಂಬುದು ಯಕ್ಷಪ್ರಶ್ನೆಯೇ ಆಗಿ ಉಳಿಯುತ್ತದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಸಂಪಾದಕರೊಡನೆ ಸಂವಾದ

ಅಸಲಿ ದೇಶದ್ರೋಹಿಗಳು ಮತ್ತು ನಕಲಿ ದೇಶಭಕ್ತರು ಯಾರು?

ಸುರೇಶ್ ಭಟ್

> **ಮಾವೊವಾದಿಗಳನ್ನು, ಅರುಂಧತಿ ರಾಯ್‌ರಂತಹ ಪ್ರಗತಿಪರ ಚಿಂತಕರನ್ನು ದೇಶದ್ರೋಹಿಗಳೆಂದು ಕರೆಯುವ ಸಂಘ ಪರಿವಾರ ಅಸಲಿಗೆ ತಾನೆಷ್ಟು ಸಾಚಾ? "ಪುಂಡರು ಕೊನೆಯದಾಗಿ ದೇಶಭಕ್ತಿಯ ಆಸರೆ ಪಡೆದುಕೊಳ್ಳುತ್ತಾರೆ"ಎಂದು ಸುಮಾರು 250 ವರ್ಷಗಳ ಹಿಂದೆ ಹೇಳಿದ್ದ ಸ್ಯಾಮುವೆಲ್ ಜಾನ್ಸನ್ ಮಾತುಗಳು ಭಾರತದ ರಾಷ್ಟ್ರೀಯವಾದದ ಮಟ್ಟಿಗೆ ಅದೆಷ್ಟು ನಿಜವೆಂದು ಸಾಬೀತಾಗುತ್ತಿದೆ. ಸಂಘ ಪರಿವಾರ ವಾಸ್ತವದಲ್ಲಿ ಒಂದು ಪ್ರತ್ಯೇಕ ರಾಷ್ಟ್ರಧ್ವಜ ಮತ್ತು ಸಂವಿಧಾನ ಹೊಂದಿರುವ "ಹಿಂದೂ ರಾಷ್ಟ್ರ"ವನ್ನು ಸ್ಥಾಪಿಸುವ ಕಾಯಕದಲ್ಲಿ ತೊಡಗಿದೆಯೆಂಬ ಸತ್ಯಾಂಶ ಮಾಲೆಗಾಂವ್ ಸ್ಫೋಟದ ಬಳಿಕ ಬೆಳಕಿಗೆ ಬಂದಿದೆ. ಈ ರಾಷ್ಟ್ರದ್ರೋಹಿ ಕೃತ್ಯವನ್ನು ಬಹಳ ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಆರಂಭದಲ್ಲಿ ಕೋಮುಗಲಭೆಗಳಿಗಷ್ಟೆ ಸೀಮಿತವಾಗಿದ್ದ ಸಂಘ ಪರಿವಾರ ಇತ್ತೀಚಿನ ದಿನಗಳಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸುವ ಸ್ತರಕ್ಕೆ ತಲುಪಿದೆ.**

ಮಾನ್ಯ ಸಂಪಾದಕರೇ,

ಖ್ಯಾತ ಲೇಖಕಿಯೂ ಬೂಕರ್ ಪ್ರಶಸ್ತಿ ವಿಜೇತೆಯೂ ಆಗಿರುವ ಅರುಂಧತಿ ರಾಯ್ ಇತ್ತೀಚೆಗೆ ಕಾಶ್ಮೀರದ ಕುರಿತಂತೆ ದೆಹಲಿಯಲ್ಲಿ ಆಡಿರುವ ಮಾತುಗಳಿಂದ ಸಂಘ ಪರಿವಾರ ರೊಚ್ಚಿಗೆದ್ದಿದೆ. ಅರುಂಧತಿ ವಿರುದ್ಧ ರಾಷ್ಟ್ರದ್ರೋಹದ ಪ್ರಕರಣ ದಾಖಲಿಸಬೇಕೆಂದು ಅದು ಒತ್ತಾಯಿಸಿದಾಗ ಸಚಿವ ವೀರಪ್ಪ ಮೊಯಿಲಿಯಂಥವರು ಮೊದಮೊದಲು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡಿದರು. ತದನಂತರ ವಿಷಯದ ಗಂಭೀರತೆಯನ್ನು, ಅದರ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಆಯಾಮಗಳನ್ನು ಅರ್ಥಮಾಡಿಕೊಂಡ ಕೇಂದ್ರ ಸರಕಾರ, ಅರುಂಧತಿ ವಿರುದ್ಧ ರಾಷ್ಟ್ರದ್ರೋಹದ ಪ್ರಕರಣ ದಾಖಲಿಸದಿರಲು ನಿರ್ಧರಿಸಿದೆ.

ಇದು ನಿಜಕ್ಕೂ ಪ್ರೌಢತೆಯ ಲಕ್ಷಣವಷ್ಟೆ ಅಲ್ಲ, ಒಂದು ಅತ್ಯಂತ ವಿವೇಕಯುತ ಕ್ರಮವೂ ಆಗಿದೆ. ಇದರ ಜೊತೆಗೆ, ಹಿಂದೆ ಎಂ. ಎಫ್. ಹುಸೇನ್‌ಗೆ ಮಾಡಿದಂತೆ ನೂರಾರು ಪ್ರಕರಣ ದಾಖಲಿಸುವ ಮೂಲಕ ಆಕೆಗೆ ತಕ್ಕ ಶಾಸ್ತಿ ಮಾಡುವುದಾಗಿ ಬಹಿರಂಗವಾಗಿ ಘೋಷಿಸಿದ ಸಂಘ ಪರಿವಾರದ ಕೂಗುಮಾರಿಗಳನ್ನು ಕೇಂದ್ರ ಗೃಹ ಸಚಿವರು ಸ್ಪಷ್ಟ ಶಬ್ದಗಳಲ್ಲಿ ಖಂಡಿಸಿದ್ದಿದ್ದರೆ ಅದು ನಿಜಕ್ಕೂ ರಾಜಕೀಯ ಮುತ್ಸದ್ದಿತನದ ಪ್ರದರ್ಶನವಾಗುತ್ತಿತ್ತು. ದುರದೃಷ್ಟವಶಾತ್ ಹಾಗಾಗಿಲ್ಲ. ಅಕ್ಟೋಬರ್ 31, 2010ರಂದು ಅರುಂಧತಿ ರಾಯ್ ಮನೆ ಮುಂದೆ ನಡೆದ ಗೂಂಡಾಗಿರಿಯ ಕೃತ್ಯ ಸಂಘ ಪರಿವಾರಕ್ಕೆ ಇನ್ನಷ್ಟು ಭಂಡ ಧೈರ್ಯ ಬಂದಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅಕ್ಟೋಬರ್ 31ರ ಭಾನುವಾರವನ್ನು ಸ್ವತಂತ್ರ ಭಾರತದ ಇತಿಹಾಸದಲ್ಲಿ ಮತ್ತೊಂದು ಕಪ್ಪು ಚುಕ್ಕೆಯ ದಿನವೆಂದು ಕರೆಯಬಹುದು. ಸುಮಾರು 100ರಷ್ಟಿದ್ದ ಬಿಜೆಪಿ ಮಹಿಳಾ ಮೋರ್ಚಾದ ತಂಡವೊಂದು ಹಾಡುಹಗಲೆ ಅರುಂಧತಿ ಮನೆಯ ಗೇಟನ್ನು ಮುರಿದು, ಒಳನುಗ್ಗಿ, ಹೂವಿನ ಕುಂಡ ಇತ್ಯಾದಿಗಳನ್ನು ಒಡೆದು, ದಾಂಧಲೆ ನಡೆಸಿ, ಪೊಲೀಸರು ಆಗಮಿಸುವುದಕ್ಕೂ ಮೊದಲೆ ಅಲ್ಲಿಂದ ಪರಾರಿಯಾಗಿದೆ.

ಸಂಘ ಪರಿವಾರದ ಇತಿಹಾಸವನ್ನು, ಅದರ ಜಾಯಮಾನವನ್ನು ಬಲ್ಲವರಿಗೆ ಇದರಿಂದ ಏನೇನೂ ಆಶ್ಚರ್ಯವಾಗಿಲ್ಲ. ಹಿಂದೆ ಇಟಲಿ ಮತ್ತು ಜರ್ಮನಿಯ ಸರ್ವಾಧಿಕಾರಿಗಳು ಕೂಡ ತಮ್ಮನ್ನು ಟೀಕಿಸುವವರನ್ನು ಮಟ್ಟ ಹಾಕುವುದಕ್ಕಾಗಿ ವಿಧವಿಧದ ಯುವಜನ ಪಡೆಗಳನ್ನು ಕಟ್ಟಿಕೊಂಡಿದ್ದರು. ಇದನ್ನೆಲ್ಲ ಕೂಲಂಕಷವಾಗಿ ಅಭ್ಯಸಿಸಿದ್ದ ಆರೆಸ್ಸೆಸ್ ಸಂಸ್ಥಾಪಕರಲ್ಲೊಬ್ಬನಾದ ಡಾ। ಮೂಂಜೆ ಭಾರತದಲ್ಲೂ ಅದೇ ತೆರನಾದ ವಿಧಾನಗಳನ್ನು ಬಳಸುವ ಕಾರ್ಯತಂತ್ರ ರೂಪಿಸಿದರು. ಹೀಗೆ ವಿದೇಶಗಳ ಕರಿ, ಕಂದು ಷರಟುಗಳು ಸ್ವದೇಶದ ಚಡ್ಡಿ, ಲಾಠಿಯಾಗಿ ಪರಿವರ್ತಿತವಾದವು.

ತನ್ನ ಉದ್ದೇಶ ಸಾಧನೆಗಾಗಿ ಹತ್ತುಹಲವು ಬಗೆಯ ಸಂಸ್ಥೆಗಳನ್ನು ಹುಟ್ಟುಹಾಕಿರುವ ಸಂಘ ಪರಿವಾರ ಅಂದಿನಿಂದ ಇಂದಿನ ತನಕವೂ ಹಿಂಸೆಯನ್ನೇ ಮುಖ್ಯ ಅಸ್ತ್ರವನ್ನಾಗಿಸಿ ಕೊಂಡಿದೆ. ಗಾಂಧಿ ಹತ್ಯೆ, ಅದಕ್ಕೆ ಮೊದಲು ಮತ್ತು ಅದರ ನಂತರ ನಡೆದಿರುವ ಸಾವಿರಾರು ಕೋಮುಗಲಭೆಗಳಲ್ಲಿ ಸಂಘ ಪರಿವಾರ ಪ್ರಧಾನ ಪಾತ್ರ ವಹಿಸಿರುವ ಸತ್ಯಾಂಶವನ್ನು ಹಲವಾರು ತನಿಖಾ ಆಯೋಗಗಳು ಬಹಿರಂಗಪಡಿಸಿವೆ. ಬಾಬರಿ ಮಸೀದಿ ಧ್ವಂಸ, ಗುಜರಾತ್ ನರಮೇಧ, ಜಮ್ಮುವಿನ ಹಿಂಸಾತ್ಮಕ ಅಮರ ನಾಥ ಚಳವಳಿ, ಒರಿಸ್ಸಾ, ಗುಜರಾತ್, ಕರ್ನಾಟಕಗಳಲ್ಲಿ ಕ್ರೈಸ್ತರ ಮೇಲಿನ ದೌರ್ಜನ್ಯಗಳು ಇವೆಲ್ಲವೂ ಸಂಘ ಪರಿವಾರದ "ಶ್ರೇಷ್ಠ ಕೊಡುಗೆ"ಗಳೆ ಆಗಿವೆ.

ತನಗೆ ಅಪಥ್ಯವೆನಿಸುವ ವರದಿಗಳನ್ನು ಪ್ರಕಟಿಸುವ ಮಾಧ್ಯಮಗಳನ್ನೂ ಅದು ಬಾಕಿ ಬಿಟ್ಟಿಲ್ಲ. ಸಿಎನ್ ಎನ್-ಐಬಿಎನ್, ಟಿವಿ ಟುಡೇ, ಹೆಡ್‌ಲೈನ್ಸ್ ಟುಡೇ ಮುಂತಾದ ಟಿವಿ ವಾಹಿನಿಗಳು ಸಂಘ ಪರಿವಾರದ ಕೆಲವು ದುಷ್ಕೃತ್ಯಗಳನ್ನು ಪ್ರಸಾರ ಮಾಡಿದಾಗ ಅವುಗಳ ಕಚೇರಿಗಳ ಮೇಲೆ ದಾಳಿ ನಡೆಸಲಾಯಿತು. ಆಷಾಢಭೂತಿತನ ಮತ್ತು ಹಸಿ ಹಸಿ ಸುಳ್ಳು ಹೇಳುವ ಕಲೆಯಲ್ಲಿ ಸಂಘ ಪರಿವಾರ ಎಷ್ಟು ನಿಷ್ಣಾತವಿದೆ ಎನ್ನುವುದಕ್ಕೆ ಹೆಡ್‌ಲೈನ್ಸ್ ಟುಡೇ ದಾಳಿ ಒಂದು ನಿದರ್ಶನ. ಒಂದೆಡೆ ಸಂಘ ಪರಿವಾರಿಗಳು ಪುಂಡಾಟಿಕೆಯಲ್ಲಿ ತೊಡಗಿದ್ದಾಗ ಇನ್ನೊಂದೆಡೆ ವಕ್ತಾರ ರಾಮ ಮಾಧವ್, ತಾವೆಂದೂ ಹಿಂಸೆಗಿಳಿಯುವವರಲ್ಲವೆಂದು ಮಾಧ್ಯಮಗಳಿಗೆ ಹೇಳಿಕೆ ನೀಡುತ್ತಿದ್ದ ದೃಶ್ಯವನ್ನು ಟಿವಿ ಪರದೆಮೇಲೆ ನೋಡಿದವರು ಛೀ, ಥೂ ಎಂದು ಉಗಿಯುತ್ತಿದ್ದರು.

ಅರುಂಧತಿ ಮನೆ ಮುಂದಿನ ಈ ಅಹಿತಕಾರಿ ಘಟನೆಗಳು ಸಂಭವಿಸುವುದಕ್ಕೆ ಕೆಲಸಮಯ ಮುಂಚೆಯೆ ಎನ್‌ಡಿ ಟಿವಿ, ಟೈಮ್ಸ್ ನೌ ಮತ್ತು ನ್ಯೂಸ್ 24 ಟಿವಿ ವಾಹಿನಿಗಳ ವ್ಯಾನ್‌ಗಳು ಅಲ್ಲಿ ತಯಾರಾಗಿ ನಿಂತಿದ್ದವಂತೆ! ಇದನ್ನೋದಿದಾಗ ಮಂಗಳೂರಿನ ಪಬ್ ದಾಳಿಗಳ ನೆನಪಾಯಿತು. ಟೈಮ್ಸ್ ನೌ ವಾಹಿನಿಯಂತೂ ಹಿಂದೊಮ್ಮೆ ತನ್ನದೇ ಕಚೇರಿ ಮೇಲೆ ನಡೆದ ದಾಳಿಯ ವಿಷಯವನ್ನು ಸಂಪೂರ್ಣ ಮರೆತಿರುವಂತಿದೆ.

ಅರುಂಧತಿ ರಾಯ್ ಹೇಳುವಂತೆ "ಉದ್ರೇಕಕಾರಿ ಸುದ್ದಿಗಳಿಗಾಗಿ ಪರಸ್ಪರ ಪೈಪೋಟಿಯಲ್ಲಿ ತೊಡಗಿರುವ ಮಾಧ್ಯಮಗಳಲ್ಲಿಂದು ಸುದ್ದಿಗಳನ್ನು ವರದಿ ಮಾಡುವುದರ ಮತ್ತು ಸುದ್ದಿಗಳನ್ನು ಉತ್ಪಾದಿಸುವುದರ ನಡುವಿನ ಗಡಿರೇಖೆ ಅಸ್ಪಷ್ಟವಾಗುತ್ತಿದೆ. ಟಿಆರ್‌ಪಿ ರೇಟಿಂಗ್ ಹೆಚ್ಚಿಸಿಕೊಳ್ಳುವ ಸಲುವಾಗಿ ಕೆಲ ವೊಂದು ವ್ಯಕ್ತಿಗಳನ್ನು ಬಲಿಗೊಟ್ಟರೆ ಏನಾಗುತ್ತದೆಂಬ ಭಾವನೆ ಮಾಧ್ಯಮಗಳಲ್ಲಿ ಇರುವಂತಿದೆ." "ದೊಂಬಿ ನ್ಯಾಯದಲ್ಲಿ ನಂಬಿಕೆಯುಳ್ಳವರ ಕೈಗೆ ಮಾಧ್ಯಮದ ಕೆಲ ವರ್ಗಗಳನ್ನು ಮತ್ತು ಪ್ರಜಾತಂತ್ರದ ಮೂಲಭೂತ ವ್ಯವಸ್ಥೆಗಳನ್ನು ಗೇಣಿಗೆ ಕೊಡಲಾಗುತ್ತಿದೆಯೇ? ಜನಪ್ರಿಯ ವಲ್ಲದ ನಿಲುವುಗಳನ್ನು ಹೊಂದಿರುವ ಓರ್ವ ಲೇಖಕಿ, ಬಾಂಬು ಸ್ಫೋಟ ಪ್ರಕರಣದ ಆರೋಪಿಗಿಂತಲೂ ಹೆಚ್ಚು ಅಪಾಯಕಾರಿಯೇ?" ಎಂದಾಕೆ ಪ್ರಶ್ನಿಸಿದ್ದಾರೆ.

ಮಾವೊವಾದಿಗಳನ್ನು, ಅರುಂಧತಿ ರಾಯ್‌ರಂತಹ ಪ್ರಗತಿಪರ ಚಿಂತಕರನ್ನು ದೇಶದ್ರೋಹಿಗಳೆಂದು ಕರೆಯುವ ಸಂಘ ಪರಿವಾರ ಅಸಲಿಗೆ ತಾನೆಷ್ಟು ಸಾಚಾ?

(29ನೇ ಪುಟಕ್ಕೆ)

ನೋಡಿ ನಲಿಯಿರಿ-ಉದ್ಯೋಗ ಖಾತರಿಯ ನಾಟಕ

ಸಂಪಾದಕರೊಡನೆ ಸಂವಾದ

ಶಾರದಾ ಗೋಪಾಲ

ಮಾನ್ಯ ಸಂಪಾದಕರೇ,

ಬಡಜನರ ಉದ್ಯೋಗಕ್ಕಾಗಿ ಇಟ್ಟಿರುವ ಹಣವನ್ನು ಉಚ್ಛ ವರ್ಗವನ್ನು ಪ್ರತಿನಿಧಿಸುವ ನಾಟಕ ತಂಡಕ್ಕೆ ಕೊಡಮಾಡಲಾಗಿದೆ. ಆ ತಂಡವು ನಿಜವಾಗಿ ಯಾರಿಗೆ ತರಬೇತಿಯ ಅವಶ್ಯಕತೆ ಇದೆಯೋ ಅವರಿಗೇ, ತರಬೇತಿಗಳನ್ನು ನೀಡುವಲ್ಲಿ ಈ ಹಣವನ್ನು ಬಳಕೆ ಮಾಡಿ ಹಣದ ನಿಜವಾದ ಪ್ರಯೋಜನ ಆಗುವಂತೆ ಮಾಡಲಿ. ಇಲ್ಲವೆಂದರೆ ಈ ರೀತಿಯಾಗಿ ಹಣವನ್ನು ಬಳಸುವುದು ಉದ್ಯೋಗ ಖಾತರಿಯಲ್ಲಿ ಜೆಸಿಬಿ ಬಳಸಿದಂತೆಯೇ ಸರಿ.

ಉದ್ಯೋಗ ಖಾತರಿಯ ಭಗ್ಗೆ ಬೀದಿನಾಟಕಗಳ ಮೂಲಕ ಮಾಹಿತಿ ನೀಡುವುದಕ್ಕಾಗಿ ಸರಕಾರವು ರಂಗಾಯಣಕ್ಕೆ 2 ಕೋಟಿ ರೂಪಾಯಿಗಳ ಗುತ್ತಿಗೆ ನೀಡಿದೆ ಎಂದು ತಿಳಿದು ಆಶ್ಚರ್ಯಾಘಾತವಾಗಿದೆ.

ರಾಷ್ಟ್ರೀಯ ಉದ್ಯೋಗ ಖಾತರಿ ಕಾಯಿದೆಯು ಜಾರಿಯಲ್ಲಿ ಬಂದು ಆಗಲೇ 5 ವರ್ಷಗಳಾದವು. ಆರಂಭದಿಂದಲೂ ಕರ್ನಾಟಕದಲ್ಲಿ ಜಾರಿಯಾಗಿರುವ ಕಾಯಿದೆ ಇದು. ಐದು ವರ್ಷಗಳಾದ ಮೇಲೂ ಈ ಕಾಯಿದೆಯ ಕುರಿತು ಜನಕ್ಕೆ ಜಾಗೃತಿ ಮೂಡಿಸುವುದು ಅಗತ್ಯವಿದೆ ಎಂದು ಸರಕಾರಕ್ಕೆ ಅನ್ನಿಸುತ್ತಿದೆಯೇ? ಅಂದರೆ ಅರಿವು ನೀಡುವಲ್ಲಿ ತಾನು ವಿಫಲನಾಗಿದ್ದೇನೆಂದು ಸರಕಾರವು ಒಪ್ಪಿಕೊಂಡಂತಾಯಿತಲ್ಲ?

2006, 2007ರಲ್ಲಿ ಹೊಸ ಕಾನೂನಿನ ಬಗ್ಗೆ ಯಾರಿಗೂ ತಿಳಿದಿಲ್ಲ ಅರಿವು ಮೂಡಿಸಲು ಬೀದಿ ನಾಟಕ ಜಾಥಾಗಳ ಅಗತ್ಯವಿದೆ ಎಂದು ಯಾರಾದರೂ ಅಂದಿದ್ದರೆ ನಾವು ಒಪ್ಪೋಣ. ಯುಪಿಎ ಸರಕಾರ ತಂದಿರುವ ಈ ಕಾಯಿದೆಯ ಬಗ್ಗೆ ಆಗಿನ್ನೂ ನಮ್ಮ ಸರಕಾರಕ್ಕೂ ಕೂಡ ಆಸಕ್ತಿ ಇಲ್ಲದ್ದರಿಂದಲೋ ಏನೋ ಮೊದಲ ವರ್ಷ ಕರ್ನಾಟಕದಲ್ಲಿ ಕೇವಲ 300 ಕೋಟಿ ರೂ.ಗಳು ಖರ್ಚಾದವು. ಆದರೆ ಮರುವರ್ಷ ಇದರಲ್ಲೇನಿದೆ ಎಂದು 'ನಮ್ಮ ಜನಕ್ಕೆ' ಅರಿವಾಗಿದ್ದರಿಂದ ಹಣ ಖರ್ಚಾಗಲು ತಡವಾಗಲಿಲ್ಲ. 2009ರಲ್ಲಿ 2000 ಕೋಟಿಗಿಂತ ಜಾಸ್ತಿ ಖರ್ಚಾಯಿತು. ಈ ವರ್ಷ ತಾನು 4500 ಕೋಟಿ ಖರ್ಚು ಮಾಡುತ್ತೇನೆಂದು ಸರಕಾರವು ಗುರಿ ಇಟ್ಟುಕೊಂಡಿದೆ. ಎರಡು ಪಟ್ಟಿಗಿಂತ ಜಾಸ್ತಿ ಹಣವನ್ನು ಖರ್ಚು ಮಾಡಲು ಸರಕಾರ ತಯಾರಾಗಿದೆ ಎಂದರೆ ಜನರು ಅದರ ಬಗ್ಗೆ ತಿಳಿದುಕೊಂಡು ಉದ್ಯೋಗ ಮತ್ತು ಕೂಲಿಯನ್ನು ಪಡೆಯುತ್ತಿದ್ದಾರೆಂದೇ ಅರ್ಥವಲ್ಲವೇ?

ಅಥವಾ ಹೇಗೆ ಖರ್ಚು ಮಾಡಬೇಕೆಂದು ಸರಕಾರಕ್ಕೆ ಗೊತಾಗಿದೆ ಎಂದೂ ಅರ್ಥ ಮಾಡಬಹುದು.

ಗ್ರಾಮ ಮಟ್ಟದಲ್ಲಿ ಜನರ ಸಂಘಟನೆಯಲ್ಲಿ ತೊಡಗಿರುವ ನಮ್ಮಂಥವರ ಅನುಭವ ಬೇರೆಯೇ ಇದೆ. ಈಗ ಜನಕ್ಕೆ ಬೇಕಾಗಿರುವುದು ಉದ್ಯೋಗ ಖಾತರಿಯ ಬಗ್ಗೆ ಅರಿವು ಅಲ್ಲ, ಬದಲಿಗೆ ಉದ್ಯೋಗ ಖಾತರಿಯ ಬಗ್ಗೆ, ಅದರ ಅವಶ್ಯಕತೆಯ ಬಗ್ಗೆ. ನಮ್ಮ ಅಧಿಕಾರಶಾಹಿಗೆ ಮತ್ತು ಅವರು ತಯಾರು ಮಾಡುತ್ತಿರುವ ಪಂಚಾಯತಿ ಪುಢಾರಿಗಳಿಗೆ ಅರಿವು ಬೇಕು. ಅದಕ್ಕಿಂತ ಹೆಚ್ಚು ಇದು ನಮ್ಮ ಬಡ ಕೂಲಿಕಾರರಿಗೆ ಸೇರಬೇಕೆಂಬ ಕಳಕಳಿ ಬೇಕು. ಇದು ಗುತ್ತಿಗೆದಾರರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಹಣ ಮಾಡಿಕೊಳ್ಳಲಿಕ್ಕಾಗಿ ಇಟ್ಟಿರುವ ಗಂಟು ಅಲ್ಲ, ಬದಲಿಗೆ ಉದ್ಯೋಗ ಹುಡುಕಿಕೊಂಡು ವಲಸೆ ಹೋಗುತ್ತ ಆ ಕಾರಣಕ್ಕಾಗಿ ತಮ್ಮ ಬದುಕನ್ನೇ ಚಿಂದಿ ಮಾಡಿಕೊಳ್ಳುತ್ತಿರುವ ಕೂಲಿ ಕಾರ್ಮಿಕರ ವಲಸೆ ತಡೆಯಲಿಕ್ಕಾಗಿ ಇಟ್ಟಿರುವ ಇಡುಗಂಟು. ಕಾನೂನಿನ ಹಿಂದಿರುವ ಆಶಯವನ್ನು ಇವರಿಗೆ ಅರ್ಥಮಾಡಿಸಲಿಕ್ಕಾಗಿ ಇತ್ತೀಚಿನ ಚುನಾವಣೆಯಲ್ಲಿ ಆಯ್ಕೆಯಾದ ಪ್ರತಿನಿಧಿಗಳಿಗೆ ತರಬೇತಿಗಳು ಬೇಕು.

ಉದ್ಯೋಗ ಖಾತ್ರಿಯಲ್ಲಿ ಒಬ್ಬೊಬ್ಬರೇ ಕೆಲಸ ಕೇಳಲು ಬರುವುದಿಲ್ಲ. ಹತ್ತಾರು ಜನರು ಒಟ್ಟಾಗಿ ಅರ್ಜಿ ಹಾಕಿ ಕೇಳಬೇಕು. ಇದು ಅತಿ ಕಷ್ಟಕರ ಅಂಶ. ಅಕಸ್ಮಾತ್ ಹತ್ತಾರು ಜನರ ಗುಂಪು ಒಟ್ಟಾಗಿ ಕೆಲಸ ಕೇಳಿದರೂ ಪಂಚಾಯತಿಗಳು ಶತಾಯ ಗತಾಯ ಅವರಿಗೆ ಉದ್ಯೋಗ ನೀಡುವುದಿಲ್ಲ. ಜನರ ಅರ್ಜಿಗಳು ಕಸದ ಬುಟ್ಟಿ ಸೇರುತ್ತವೆ. ಬದಲಿಗೆ 'ನಾವು ಕರೆದಾಗ ಯಾರೂ ಕೆಲಸಕ್ಕೆ ಬರುವುದಿಲ್ರೀ' ಎಂದು ಹೇಳಿಕೊಳ್ಳುತ್ತ ಅಡ್ಡಾಡುತ್ತಾರೆ. ಇದು 'ನೀವು ಕರೆದಾಗ' ಜನ ಬರ ಬೇಕಾದ ಕಾಯಿದೆಯಲ್ಲ, ಬದಲಿಗೆ 'ಅವರಿಗೆ ಉದ್ಯೋಗ ಬೇಕಾದಾಗ, 'ಅವರು ಕೇಳಿದಾಗ ನೀವು ಕೆಲಸ ಕೊಡ ಬೇಕಾದ' ಕಾಯಿದೆ ಎನ್ನುವುದನ್ನು ಈ ಅಧಿಕಾರಿ ಶಾಹಿಗೆ ತಿಳಿಸಿ ಹೇಳುವ ತರಬೇತಿಗಳು ಬೇಕು.

ಕೆಲಸ ಕೊಡದಿದ್ದರೆ ನಿರುದ್ಯೋಗ ಭತ್ತ್ಯೆ ಕೇಳಲು ಈ ಕಾನೂನಿನಲ್ಲಿ ಅವಕಾಶವಿದೆ. ಆದರೆ ಬಹುಶಃ ರಾಜ್ಯದಲ್ಲಿ ಎಲ್ಲೆಲ್ಲೂ ಒಂದೂ ಕಡೆ ಇನ್ನೂವರೆಗೆ ನಿರುದ್ಯೋಗ ಭತ್ತ್ಯೆ ಕೊಟ್ಟ ಉದಾಹರಣೆಯೇ ಇಲ್ಲವೇನೋ. ಅಕಸ್ಮಾತ್ ಯಾವುದೇ ಕೂಲಿಕಾರ/ಳು ನಿರುದ್ಯೋಗ ಭತ್ತ್ಯೆಗಾಗಿ ಅರ್ಜಿ ಕೊಟ್ಟರೆ/ಳೆಂದುಕೊಳ್ಳಿ. ಕೆಲಸ ಕೊಡ್ತೀವಿ. ಎಂದು ಹೇಳಿ ಖಾಲಿ ಹಾಳೆಯಲ್ಲಿ ಸಹಿ ಮಾಡಿಸುವ ವೀರರು ಈ ಕಾರ್ಯದರ್ಶಿಗಳು, ಮತ್ತು ಪಿಡಿಓಗಳು. ತಿಂಗಳು ತಿಂಗಳು ಸಂಬಳ, ಗಿಂಬಳಗಳಿಂದ ಭರ್ತಿಯಾಗಿರುವ ಈ ಅಧಿಕಾರಿ ವರ್ಗಕ್ಕೆ ಕೂಲಿ ಇಲ್ಲದಿದ್ದರೆ ಮನೆಯಲ್ಲಿ ಅಡಿಗೆಗೆ ಗತಿ ಇಲ್ಲದವರು ತಮ್ಮ ಸುತ್ತ ಮುತ್ತ ಇದ್ದಾರೆ ಎನ್ನುವ ವಿಷಯವನ್ನು ತಲೆಯಲ್ಲಿ ತುಂಬುವಂಥ ತರಬೇತಿಗಳಾಗಬೇಕು.

ಇವನ್ನೆಲ್ಲ ಯಾಕೆ ಹೇಳಬೇಕಾಗಿದೆಯೆಂದರೆ,

ಇತ್ತೀಚೆಗೆ ಬೆಳಗಾಂ ಜಿಲ್ಲೆಯ ಖಾನಾಪುರ ತಾಲೂಕಿನ 'ಗ್ರಾಮೀಣ ಕೂಲಿಕಾರ್ಮಿಕರ ಸಂಘಟನೆಯು' ಕೂಲಿ ಕೆಲಸ ಕೇಳಿ ಕೇಳಿ ಸಾಕಾಗಿ ಕಡೆಗೆ ನವೆಂಬರ್ 11 ರಿಂದ

(35ನೇ ಪುಟಕ್ಕೆ)

ಉದ್ಯೋಗ ಖಾತ್ರಿಯಲ್ಲಿ ಒಬ್ಬೊಬ್ಬರೇ ಕೆಲಸ ಕೇಳಲು ಬರುವುದಿಲ್ಲ. ಹತ್ತಾರು ಜನರು ಒಟ್ಟಾಗಿ ಅರ್ಜಿ ಹಾಕಿ ಕೇಳಬೇಕು. ಇದು ಅತಿ ಕಷ್ಟಕರ ಅಂಶ. ಅಕಸ್ಮಾತ್ ಹತ್ತಾರು ಜನರ ಗುಂಪು ಒಟ್ಟಾಗಿ ಕೆಲಸ ಕೇಳಿದರೂ ಪಂಚಾಯತಿಗಳು ಶತಾಯ ಗತಾಯ ಅವರಿಗೆ ಉದ್ಯೋಗ ನೀಡುವುದಿಲ್ಲ. ಜನರ ಅರ್ಜಿಗಳು ಕಸದ ಬುಟ್ಟಿ ಸೇರುತ್ತವೆ. ಬದಲಿಗೆ 'ನಾವು ಕರೆದಾಗ ಯಾರೂ ಕೆಲಸಕ್ಕೆ ಬರುವುದಿಲ್ರೀ' ಎಂದು ಹೇಳಿಕೊಳ್ಳುತ್ತ ಅಡ್ಡಾಡುತ್ತಾರೆ. ಇದು 'ನೀವು ಕರೆದಾಗ' ಜನ ಬರ ಬೇಕಾದ ಕಾಯಿದೆಯಲ್ಲ, ಬದಲಿಗೆ 'ಅವರಿಗೆ ಉದ್ಯೋಗ ಬೇಕಾದಾಗ, 'ಅವರು ಕೇಳಿದಾಗ ನೀವು ಕೆಲಸ ಕೊಡಬೇಕಾದ' ಕಾಯಿದೆ ಎನ್ನುವುದನ್ನು ಈ ಅಧಿಕಾರಿ ಶಾಹಿಗೆ ತಿಳಿಸಿ ಹೇಳುವ ತರಬೇತಿಗಳು ಬೇಕು. ಕೆಲಸ ಕೊಡದಿದ್ದರೆ ನಿರುದ್ಯೋಗ ಭತ್ತ್ಯೆ ಕೇಳಲು ಈ ಕಾನೂನಿನಲ್ಲಿ ಅವಕಾಶವಿದೆ. ಆದರೆ ಬಹುಶಃ ರಾಜ್ಯ ದಲ್ಲಿ ಎಲ್ಲೆಲ್ಲೂ ಒಂದೂ ಕಡೆ ಇನ್ನೂವರೆಗೆ ನಿರುದ್ಯೋಗ ಭತ್ತ್ಯೆ ಕೊಟ್ಟ ಉದಾಹರಣೆಯೇ ಇಲ್ಲವೇನೋ. ಅಕಸ್ಮಾತ್ ಯಾವುದೇ ಕೂಲಿಕಾರ/ಳು ನಿರುದ್ಯೋಗ ಭತ್ತ್ಯೆಗಾಗಿ ಅರ್ಜಿ ಕೊಟ್ಟರೆ/ಳೆಂದುಕೊಳ್ಳಿ. ಕೆಲಸ ಕೊಡ್ತೀವಿ. ಎಂದು ಹೇಳಿ ಖಾಲಿ ಹಾಳೆಯಲ್ಲಿ ಸಹಿ ಮಾಡಿಸುವ ವೀರರು ಈ ಕಾರ್ಯದರ್ಶಿಗಳು, ಮತ್ತು ಪಿಡಿಓಗಳು. ತಿಂಗಳು ತಿಂಗಳು ಸಂಬಳ, ಗಿಂಬಳಗಳಿಂದ ಭರ್ತಿಯಾಗಿರುವ ಈ ಅಧಿಕಾರಿ ವರ್ಗಕ್ಕೆ ಕೂಲಿ ಇಲ್ಲದಿದ್ದರೆ ಮನೆಯಲ್ಲಿ ಅಡಿಗೆಗೆ ಗತಿ ಇಲ್ಲದವರು ತಮ್ಮ ಸುತ್ತ ಮುತ್ತ ಇದ್ದಾರೆ.

ಶಿವಮೊಗ್ಗದಲ್ಲಿ ದಲೇಕ ಸಮ್ಮೇಳನ: ಮಾತಿನ ಆಟಕ್ಕೊಂದು ಬದಲಿ ಕಾರ್ಯಕ್ರಮ

ಡಿ.ಎಸ್. ನಾಗಭೂಷಣ

ಇದೇ ಅಕ್ಟೋಬರ್ 29 ಹಾಗೂ 30ರಂದು ಶಿವಮೊಗ್ಗದಲ್ಲಿ ಎರಡನೇ ದಲಿತ ಲೇಖಕರ ಹಾಗೂ ಕಲಾವಿದರ ರಾಜ್ಯ ಸಮ್ಮೇಳನ(ದಲೇಕ) ನಡೆಯಿತು. 1976ರಲ್ಲಿ ದಿ॥ ಬಿ. ಕೃಷ್ಣಪ್ಪನವರ ಸಾರಥ್ಯದಲ್ಲಿ ಭದ್ರಾವತಿಯಲ್ಲಿ ನಡೆದ ಸ್ಥಾಪನಾ ಸಮ್ಮೇಳನದ 36 ವರ್ಷಗಳ ನಂತರ ನಡೆದ ಮೊದಲ ಸಮ್ಮೇಳನ ಇದಾದರೂ ಮತ್ತು ಬಹುಶಃ ಆ ಸಮ್ಮೇಳನಕ್ಕಿಂತ ಹೆಚ್ಚು ಜನಜಂಗುಳಿ ಇಲ್ಲಿ ಸೇರಿ, ಹೆಚ್ಚು ವೈಭವೋಪೇತವಾಗಿ ನಡೆಯಿತಾದರೂ, ದಲಿತ ಚಳುವಳಿಯಲ್ಲಿನ ಮಹಾ ಒಡಕು ಇಲ್ಲಿ ಎದ್ದು ಕಾಣುವಂತಿತ್ತು. ಹಾಗೆ ನೋಡಿದರೆ, ಈ ಸಮ್ಮೇಳನವನ್ನು ಆಯೋಜಿಸಿದ್ದುದೇ ದಲಿತ ಸಂಘರ್ಷ ಸಮಿತಿಯ ಅಂಬೇಡ್ಕರ್‌ವಾದಿ ಎಂದು ಕರೆದುಕೊಳ್ಳುವ ಒಂದು ಬಣ.

ಇನ್ನೊಂದು ಬಣಹ ನಾಯಕರಾದ ಲಕ್ಷ್ಮೀನಾರಾಯಣ ನಾಗವಾರರು ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಾದರೂ, ಅವರ ಬಣದ ಇತರ ನಾಯಕರು ಮತ್ತು ಕಾರ್ಯಕರ್ತರ ಉಪಸ್ಥಿತಿ ಅಷ್ಟೇನೂ ಎದ್ದು ಕಾಣುವಂತಿರಲಿಲ್ಲ. ಎದ್ದು ಕಾಣುವಂತಿದ್ದದು, ಅಂಬೇಡ್ಕರ್‌ವಾದಿ ಎಂದು ಕರೆದುಕೊಳ್ಳುವ ಬಣದ ನಾಯಕರಾದ ಮಾವಳ್ಳಿ ಶಂಕರ್ ಮತ್ತು ಅವರ ಹಿಂದಿನ ಸ್ಫೂರ್ತಿ ಕೇಂದ್ರಗಳಂತಿದ್ದ ಇಂದಿರಾ ಕೃಷ್ಣಪ್ಪ ಹಾಗೂ ಹನಗವಾಡಿ ರುದ್ರಪ್ಪ ಅವರುಗಳ ಸಂಘಟನಾ ಸಾಮರ್ಥ್ಯ ಹಾಗೂ ಪರಿಶ್ರಮಗಳು.

ಅದೇನೇ ಇರಲಿ, ದಕ್ಷಿಣ ಕರ್ನಾಟಕದ ಕಾರ್ಯಕರ್ತರು ಮತ್ತು ಕಲಾವಿದರಿಗಿಂತ ಬಹು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದ ಉತ್ತರ ಕರ್ನಾಟಕ ಜಿಲ್ಲೆಗಳ ಕಾರ್ಯಕರ್ತರು ಮತ್ತು ಕಲಾವಿದರು ತಮ್ಮ ವೈವಿಧ್ಯಮಯ ಹಾಡು, ತಮ್ಮಟೆ ಮತ್ತು ಕುಣಿತಗಳಿಂದ ಸಮ್ಮೇಳನಕ್ಕೆ ಒಂದು ವಿಶಿಷ್ಟ ಸಂಭ್ರಮ ತಂದಿತ್ತರು. ಹಾಗೇ ಈ ಸಮ್ಮೇಳನದ ಇನ್ನೊಂದು ವಿಶೇಷವೆಂದರೆ, ಸ್ಥಳೀಯ ಸಂಘಟಕರಲ್ಲಿ ಹೆಚ್ಚಿನವರು ದಲಿತೇತರರೇ ಆಗಿದ್ದು, ಅವರೊಂದಿಗೆ ಇತರ ದಲಿತೇತರರು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿ, ದಲಿತ ಚಳುವಳಿಯ ಹಳೆಯ ದಿನಗಳನ್ನು ನೆನಪಿಗೆ ತಂದದ್ದು.

ಆದರೆ ಬಹುತೇಕ ಮತ್ತು ಪ್ರಮುಖ ದಲಿತ ಲೇಖಕರ ಗೈರು ಹಾಜರಿ ಎದ್ದು ಕಂಡು, ಸಮ್ಮೇಳನದ ನಿಜವಾದ ಯಶಸ್ಸಿಗೆ ಭಂಗ ಉಂಟಾದದ್ದೂ ನಿಜ. ಇದಕ್ಕೆ ಕಾರಣ, ದಲಿತ ಚಳುವಳಿಯ ಭೌತಿಕ ಒಡಕಿನಷ್ಟೇ ದಲಿತ ಲೇಖಕರ ಮಾನಸಿಕ ಒಡಕೂ ಕಾರಣವಿದ್ದೀತು. ಏಕೆಂದರೆ, ದಲಿತ ಬರವಣಿಗೆ ಎಂಬುದೇ ಇಂದು ತನ್ನ ವಿಶಿಷ್ಟ 'ಶೀಲ'ವನ್ನು ಕಳೆದುಕೊಂಡು, ಕನ್ನಡ ಸಾಹಿತ್ಯದ ಸಾರ್ವತ್ರಿಕ ರಾಜಕಾರಣದ ಮಧ್ಯೆ ಕಾಣೆಯಾಗಿದೆಯಲ್ಲ? ಹಾಗಾಗಿ ಇವರ ಗೈರು ಹಾಜರಿ ಈ ಸಮ್ಮೇಳನದ ಸಂಭ್ರಮವನ್ನೇನೂ ಕಡಿಮೆ ಮಾಡಲಿಲ್ಲವಾದರೂ, ಸಮ್ಮೇಳನದ ಉದ್ದೇಶ-ಗುರಿಗಳನ್ನು ವಿಚಲಿತಗೊಳಿಸಿ ಅನುಮಾನಾಸ್ಪದವನ್ನಾಗಿ ಮಾಡಿದ್ದಂತೂ ಸತ್ಯ. ಏಕೆಂದರೆ, ದಲಿತ ಏಕತೆ ಸಾಧಿತವಾಗುವ ಮುನ್ನವೇ ಇದ್ದಕ್ಕಿದ್ದಂತೆ ಈ ಸಮ್ಮೇಳನವನ್ನು ಸಂಘಟಿಸಲು ಕಾರಣ ಅಥವಾ ಸ್ಫೂರ್ತಿಯೇನು ಎಂಬುದು ಮಾತ್ರ ಸಮ್ಮೇಳನದುದ್ದಕ್ಕೂ ಕೂತ ನನಗೆ ಗೊತ್ತಾಗಲಿಲ್ಲ. ಇತ್ತೀಚೆಗೆ ಆರಂಭವಾಗಿದೆಯೆಂದು ಹೇಳಲಾಗುವ ದಲಿತ ಚಳುವಳಿಯ ಏಕತೆಯ ಪ್ರಯತ್ನ ಈ ದಲೇಕದ ನೆಲೆಯಲ್ಲಾದರೂ ಫಲ ನೀಡಿದ್ದಲ್ಲಿ, ಅದು ಒಳ್ಳೆಯ ಆರಂಭವಾದರೂ ಆಗಿರುತ್ತಿತ್ತು ಎಂದು ಯಾರಿಗಾದರೂ ಅನ್ನಿಸಿದ್ದಲ್ಲಿ ಆಶ್ಚರ್ಯವೇನಿಲ್ಲ.

ಈ ವಿಷಾದದೊಂದಿಗೇ ನಾನು ಈ ಸಮ್ಮೇಳನದ ವಿಚಾರ ಗೋಷ್ಠಿಯೊಂದರ ಅಧ್ಯಕ್ಷತೆ ವಹಿಸಿ ಮಾತನಾಡಬೇಕಾಯಿತು. ಗೋಷ್ಠಿಯಲ್ಲಿ ಮಾತನಾಡಬೇಕಿದ್ದ ಇಬ್ಬರು ಪ್ರಮುಖರು ಗೈರು ಹಾಜರಾಗಿದ್ದುದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತೆಂದು ಹೇಳಬೇಕು! ಏಕೆಂದರೆ, ನಮ್ಮ ಎಲ್ಲ ಸಮ್ಮೇಳನಗಳಲ್ಲಿ ಆಗುವಂತೆ, ಇದರಲ್ಲೂ ಉದ್ಘಾಟನ ಸಮಾರಂಭವಾಗಲೀ, ನಂತರ ನಡೆದ ಮೊದಲ ವಿಚಾರ ಗೋಷ್ಠಿಯಾಗಲೀ ಸಮಯಕ್ಕೆ ಸರಿಯಾಗಿ ಆರಂಭವಾಗದೆ, ಯದ್ವಾ ತದ್ವಾ ಎಳೆದುಕೊಂಡು ಹೋಗಿ ನಮ್ಮ ಗೋಷ್ಠಿ ಆರಂಭವಾಗುವ ಹೊತ್ತಿಗೆ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ವೇಳೆಯ ಒತ್ತಡ ನಮ್ಮ ಮೇಲೆ ಬೀಳತೊಡಗಿತ್ತು.

ಹಾಗಾಗಿ ನಾನು ಟಿಪ್ಪಣಿ ಮಾಡಿಕೊಂಡಿದ್ದ ಎಲ್ಲ ಅಂಶಗಳನ್ನೂ ಮಾತನಾಡಲಾಗಲಿಲ್ಲ. ಹಾಗೇ ಈ ಗೋಷ್ಠಿಯಲ್ಲಿ ವಿಚಾರ ಮಂಡಿಸಿದ ಡಾ. ಉಮೇಶಚಂದ್ರ, ಲಕ್ಷ್ಮೀನಾರಾಯಣ ನಾಗವಾರ, ಶಿವಾನಂದ ಕುಗ್ವೆ, ಎಂ. ಚಂದ್ರಶೇಖರಯ್ಯ, ಬಸವರಾಜ ಸೂಳಿಭಾವಿ ಮತ್ತಿತರ ಗೆಳೆಯರ ಮಾತುಗಳಿಗೆ ಪ್ರತಿಕ್ರಿಯಿಸಲಾಗಲಿಲ್ಲ. ಬದಲಿಗೆ, ಇತ್ತೀಚೆಗೆ ನಾನು ಎಲ್ಲಿ ಮಾತನಾಡಲು ಹೋದರೂ ಸಭೆಯ ಮುಂದಿಡುವ ಐದು ಅಂಶಗಳ ಕಾರ್ಯಕ್ರಮವನ್ನು ಈ ಸಭೆಯ ಮುಂದೆಯೂ ಮಂಡಿಸಿದೆ. ಅದನ್ನೀಗ ನನ್ನ ಅಂದಿನ ಟಿಪ್ಪಣಿಗಳನ್ನು ಆಧರಿಸಿ ಇಲ್ಲಿ ದಾಖಲಿಸುತ್ತಿರುವೆ:

ಸ್ನೇಹಿತರೇ,

ಜಗತ್ತನ್ನು ನೋಡುವ, ಗ್ರಹಿಸುವ ವಿಶಿಷ್ಟ ಕ್ರಮವನ್ನು ನನಗೆ ನೀಡಿದರೆಂದು ನಾನು ನಂಬಿರುವ ಸಮಾಜವಾದಿ ಚಿಂತಕ ಡಾ॥ ರಾಮಮನೋಹರ ಲೋಹಿಯಾ ಅವರು ಜಗತ್ತಿನ ಅಗ್ರಗಣ್ಯ ವಿಜ್ಞಾನಿಯೆನಿಸಿದ ಆಲ್ಬರ್ಟ್ ಐನ್‌ಸ್ಟೀನ್‌ರನ್ನು ತಮ್ಮ ಅಮೆರಿಕಾ ಪ್ರವಾಸ ಸಂದರ್ಭವೊಂದರಲ್ಲಿ ಭೇಟಿ ಮಾಡಿದಾಗ, 20 ನಿಮಿಷಗಳಿಗೆ ನಿಗದಿಯಾಗಿದ್ದ ಆ ಭೇಟಿ ಒಂದು ತಾಸನ್ನೂ ಮೀರಿ ಮೂದುವರೆಯಿತು. ಮಾತುಕತೆ ನಂತರ ಲೋಹಿಯಾರನ್ನು ಬೀಳ್ಕೊಡಲು ಐನ್‌ಸ್ಟೀನರು ತಮ್ಮ ಕುಟೀರದ ಬಾಗಿಲವರೆಗೂ ಬಂದು ಹಾರ್ದಿಕವಾಗಿ ಕೈಕುಲುಕುತ್ತಾ, 'ಇನ್ನೊಮ್ಮೆ ನೀವು ಬರಬೇಕು. ಏಕೆಂದರೆ ಇತ್ತೀಚೆಗೆ ನನ್ನನ್ನು ಭೇಟಿ ಮಾಡಲು ಬರುವವರಲ್ಲಿ ಮನುಷ್ಯರೇ ಅಪರೂಪವಾಗಿದ್ದಾರೆ...' ಎಂದರಂತೆ! ಇತ್ತೀಚೆಗೆ ನಮ್ಮಲ್ಲಿ ಬಹಳ ಜನಕ್ಕೂ ಹೀಗೇ ಅನ್ನಿಸುತ್ತಿದ್ದಲ್ಲಿ ಆಶ್ಚರ್ಯವಿಲ್ಲ.

ಇದಕ್ಕೆ ಅಪವಾದವೆಂಬಂತೆ, ನಮ್ಮ ಭಾವನಾತ್ಮಕ ಒಂಟಿತನದಿಂದ ಬಿಡುಗಡೆ ಎನಿಸುವಂತೆ ಆರಂಭವಾಗಿದೆ ಈ ಸಮ್ಮೇಳನ. ದಲಿತರ ಸಹವಾಸವೇ-ಅವರೆಲ್ಲ ವಿಚಿತ್ರ ಕಿರಿಕಿರಿಗಳ ನಡುವೆಯೂ-ನಿಜವಾದ ಮನುಷ್ಯರ ಸಹವಾಸ ಎಂದೆನ್ನಿಸುತ್ತದೆ ನನಗೆ! ಇಂದೂ ಸಹ... ಇಂದು ಇಲ್ಲಿ ನನ್ನ ಬಾಲ್ಯ ನೆನಪಿಗೆ ಬರುತ್ತಿದೆ. ಈ ಮಾತನ್ನು ನಾನು ಯಾರನ್ನೂ ಓಲೈಸಲು ಹೇಳುತ್ತಿಲ್ಲ, ಓಲೈಸಿ ನನಗೇನೂ ಆಗಬೇಕಿಲ್ಲ. ಹಾಗೆ ನೋಡಿದರೆ, ದಲಿತರು ಮತ್ತು ಇತರ ದಮನಿತರ ಬಗ್ಗೆ ನನ್ನದು ಕಠಿಣ ನಿಲುವು ಎಂಬುದು ನನ್ನ ಮೇಲಿರುವ ಜನಪ್ರಿಯ ಆರೋಪ!

ಅದಿರಲಿ, ನಾವು ಮೂಲತಃ ಸಮಾಜವಾದಿಗಳೆನಿಸಿಕೊಂಡವರು-ದಲಿತ, ರೈತ, ವಿಚಾರವಾದ, ಕನ್ನಡ ಚಳುವಳಿ, ಪರ್ಯಾಯ ರಾಜಕಾರಣ ಇತ್ಯಾದಿ ರೂಪಗಳಲ್ಲಿ-ವೇದಿಕೆಗಳ ಮೇಲೆ ಹೀಗೆ ಪದೇ ಪದೇ ಸೇರುವುದೇ ನಾವು ಕಿಂಚಿತ್ತೂ

ದಕ್ಷಿಣ ಕರ್ನಾಟಕದ ಕಾರ್ಯಕರ್ತರು ಮತ್ತು ಕಲಾವಿದರಿಗಿಂತ ಬಹು ಹೆಚ್ಚು ಸಂಖ್ಯೆಯಲ್ಲಿ ಭಾಗ ವಹಿಸಿದ್ದ ಉತ್ತರ ಕರ್ನಾಟಕದ ಕಾರ್ಯಕರ್ತರು ಮತ್ತು ಕಲಾವಿದರು ತಮ್ಮ ವೈವಿಧ್ಯಮಯ ಹಾಡು, ತಮ್ಮಟೆ ಮತ್ತು ಕುಣಿತಗಳಿಂದ ದಲೇಕ ಸಮ್ಮೇಳನಕ್ಕೆ ಒಂದು ವಿಶಿಷ್ಟ ಸಂಭ್ರಮ ತಂದಿತ್ತರು. ಹಾಗೇ ಈ ಸಮ್ಮೇಳನದ ಇನ್ನೊಂದು ವಿಶೇಷವೆಂದರೆ, ಸ್ಥಳೀಯ ಸಂಘಟಕರಲ್ಲಿ ಹೆಚ್ಚಿನವರು ದಲಿತೇತರರೇ ಆಗಿದ್ದು, ಅವರೊಂದಿಗೆ ಇತರ ದಲಿತೇತರರು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿ, ದಲಿತ ಚಳುವಳಿಯ ಹಳೆಯ ದಿನಗಳನ್ನು ನೆನಪಿಗೆ ತಂದದ್ದು. ಆದರೆ ಬಹುತೇಕ ಮತ್ತು ಪ್ರಮುಖ ದಲಿತ ಲೇಖಕರ ಗೈರು ಹಾಜರಿ ಎದ್ದುಕಂಡು, ಸಮ್ಮೇಳನದ ನಿಜವಾದ ಯಶಸ್ಸಿಗೆ ಭಂಗ ಉಂಟಾದದ್ದೂ ನಿಜ. ಇದಕ್ಕೆ ಕಾರಣ, ದಲಿತ ಚಳುವಳಿಯ ಭೌತಿಕ ಒಡಕಿನಷ್ಟೇ ದಲಿತ ಲೇಖಕರ ಮಾನಸಿಕ ಒಡಕೂ ಕಾರಣವಿದ್ದೀತು.

ಬದಲಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲೆಂದು ಕಾಣುತ್ತದೆ! ಬೆಳಿಗ್ಗೆ ಉದ್ಘಾಟನಾ ಸಮಾರಂಭದಲ್ಲಿ ಬೌದ್ಧ ದೀಕ್ಷೆಯ ಬಗ್ಗೆ ಚಂಪಾ ಮತ್ತು ಕೆ.ಟಿ. ಶಿವಪ್ರಸಾದರ ನಡುವೆ ಕಂಡ ಸದ್ಯಕ್ಕೆ ಮುಗಿಯದಂತೆ ತೋರದ ವಾಗ್ವಾದದ ಕಹಿ ಮತ್ತು ನಂತರದ ಗೋಷ್ಠಿಯಲ್ಲಿ ಸ್ವಲ್ಪ ಅಸಭ್ಯವಾಗಿಯೇ ಮಾತನಾಡಿದ ರಾಜಶೇಖರ ನಾಯ್ಡು ಎಂಬುವವರ ಮೇಲೆ ಸರಿಯಾದ ಕಾರಣದಿಂದಲೇ ಹರಿಹಾಯ್ದ ಲಕ್ಷ್ಮೀನಾರಾಯಣ ನಾಗವಾರರ ಮಾತುಗಳಲ್ಲಿದ್ದ ಕ್ರೋಧ ಇದಕ್ಕೆ ಸಾಕ್ಷಿ.

ಇತ್ತೀಚಿನ ವರ್ಷಗಳಲ್ಲಿ ನಮ್ಮ ಎಲ್ಲ ಚಟುವಟಿಕೆಗಳೂ ಮಾತು ಮಾತು ಮಾತು ಮಾತ್ರವಾಗಿ, ಮಾತಿನ ಆಟವಾಗಿಯೇ ಮುಗಿಯುತ್ತಿರುವುದರಿಂದ ಹೀಗೆ ಆಗುತ್ತಿರಬೇಕು, ತಿಳಿಯದು! ಹಾಗಾಗಿ ನಾನು ಹೆಚ್ಚು ಮಾತನಾಡುವುದಿಲ್ಲ. ಮಾತು ನಿಲ್ಲಿಸಿ ನಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಒಂದು ಕಾರ್ಯಕ್ರಮವನ್ನಷ್ಟೇ ನಿಮ್ಮ ಅವಗಾಹನೆಗಾಗಿ ಮುಂದಿಡುವೆ. ಇದರ ವಿವರಗಳ ಬಗ್ಗೆ ನಾನು ನಿರ್ದಿಷ್ಟವಾಗಿಲ್ಲ. ನಮ್ಮ ನಮ್ಮಲ್ಲೇ ಚರ್ಚಿಸಿ ಅವನ್ನು ನಿರ್ಧರಿಸಿಕೊಳ್ಳಬಹುದು. ಇದಕ್ಕೆ ಹಿನ್ನೆಲೆಯಾಗಿ ಒಂದೆರಡು ಮಾತುಗಳು:

ಈ ಗೋಷ್ಠಿ ಸಮೂಹ ಮಾಧ್ಯಮ, ಸಂಸ್ಕೃತಿ ಮತ್ತು ಜಾಗತೀಕರಣವನ್ನು ಕುರಿತಾಗಿದ್ದರೂ, ಈ ಮೂರರ ಬಗ್ಗೆ ಯಾವುದೇ ಆಳವಾದ ಮಾತು ಇಲ್ಲಿ ಕೇಳಿಬಂದಂತಿಲ್ಲ. ಸಮೂಹ ಮಾಧ್ಯಮ ಇಲ್ಲಿ ಪ್ರಸ್ತಾಪಕ್ಕೇ ಬರಲಿಲ್ಲ! ಅದು ಸಹಜ ಕೂಡಾ. ಇಂದು ಸಮೂಹ ಮಾಧ್ಯಮಗಳಾದರೂ ಎಲ್ಲಿವೆ? ಮೊದಲು 'ಸಮೂಹ'ವೆಂಬುದಿದ್ದರೆ ತಾನೇ ಸಮೂಹ ಮಾಧ್ಯಮ? ಜಾಗತೀಕರಣ ಸಮೂಹ ಅಥವಾ ಸಮುದಾಯ ಎಂಬ ಕಲ್ಪನೆಯನ್ನೇ ಕೊಂದಿದೆ. ಈ ಕೊಲೆಯ ಫಲಾನುಭವಿಗಳು ನಾವೆಲ್ಲ. ಗೆಳೆಯ ಉಮೇಶಚಂದ್ರ ಪ್ರತಿಪಾದಿಸಿದ 'ಉತ್ತರ ಪ್ರದೇಶ ಮಾದರಿ' ಅಥವಾ 'ಮಾಯಾವತಿ ಮಾದರಿ'ಯ ರಾಜಕಾರಣ ಈ ಫಲಾನುಭವದ ಹಿನ್ನೆಲೆಯಲ್ಲೇ ಹುಟ್ಟಿದ್ದಾಗಿದ್ದು ಎಂದಷ್ಟೇ ಹೇಳಿ, ಅದನ್ನು ಒಪ್ಪುವುದು ಅಥವಾ ಬಿಡುವುದನ್ನು ನಿಮ್ಮ ತೀರ್ಮಾನಕ್ಕೇ ಬಿಡಬಯಸುತ್ತೇನೆ.

ಇಂದು ಟಿವಿ ವಾಹಿನಿಗಳ ಬಗ್ಗೆ ಮಾತಾಡುವಂತಿಲ್ಲ. ಅವು ಟಿಆರ್‌ಪಿ ಗುಲಾಮಗಿರಿಗೆ ಬಿದ್ದು ಧರ್ಮ, ಸಂಸ್ಕೃತಿ, ರಾಜಕಾರಣ ಹೀಗೆ ಎಲ್ಲವನ್ನೂ ಮನರಂಜನೆಯ ಸರಕನ್ನಾಗಿ ಮಾಡಿ ಕೂರಿಸಿವೆ. ಇನ್ನು ಬಹುಶಃ ಇವುಗಳು ಸೃಷ್ಟಿಸಿರುವ ಒತ್ತಡಕ್ಕೆ ಸಿಕ್ಕಿಯೇ ಏನೋ ನಮ್ಮ ಘನತೆವೆತ್ತ ಪತ್ರಿಕೆಗಳು ಮುಖರಹಿತವಾಗತೊಡಗಿವೆ. ವಾರಕ್ಕೊಮ್ಮೆಯೋ ಎರಡು ಬಾರಿಯೋ ಅಷ್ಟೇ ನಮ್ಮ ಪ್ರಮುಖ ಪತ್ರಿಕೆಗಳ ಮೂರ್ಣ ಮುಖ(ಪುಟ) ಕಾಣಸಿಗುವುದು! ತಮ್ಮ ಮುಖ ಚಹರೆಯನ್ನು ಕಾಯ್ದುಕೊಳ್ಳಲಾಗದ, ತನ್ನ ಮಾಧ್ಯಮ ಅಸ್ಮಿತೆಯ ಬಗ್ಗೆಯೇ ಗೌರವ ಉಳಿಸಿಕೊಳ್ಳಲಾಗದ ಯಾವ ಪತ್ರಿಕೆ ಏನು ಹೇಳಿದರೂ ನಾವು ಅನುಮಾನದಿಂದಲೇ ನೋಡಬೇಕಾಗಿದೆ. ಯಾವ ಹುತ್ತದಲ್ಲಿ ಯಾವ ಹಾವಿದೆಯೋ ಯಾರಿಗೆ ಗೊತ್ತು?

ಹಾಗಾಗಿ ನಮಗೆ ಉಳಿದಿರುವುದು ಒಂದೇ ದಾರಿ. ನಮ್ಮ ಒಳಗಿನ ದನಿಯನ್ನು ಕಾಪಿಟ್ಟುಕೊಂಡು, ಅದರ ಮಾತು ಕೇಳುವಷ್ಟು ಗರಿಷ್ಠ ಎಚ್ಚರ ಮತ್ತು ಕನಿಷ್ಠ ಸಂಯಮಗಳನ್ನು ನಾವು ರೂಢಿಸಿಕೊಳ್ಳುವುದು. ಇಂದಿನ ಹೊರಗಣ ಆಕರ್ಷಣೆಗಳ ನಡುವೆ ಇದು ಕಷ್ಟ. ಆದರೆ ನಾವು ಹೊರಗೆ ಹೇಳುವ ನಮ್ಮ ಗುರಿ ಮತ್ತು ಉದ್ದೇಶಗಳ ಬಗ್ಗೆ

ಇಂದು ಟಿವಿ ವಾಹಿನಿಗಳ ಬಗ್ಗೆ ಮಾತಾಡುವಂತಿಲ್ಲ. ಅವು ಟಿಆರ್‌ಪಿ ಗುಲಾಮಗಿರಿಗೆ ಬಿದ್ದು ಧರ್ಮ, ಸಂಸ್ಕೃತಿ, ರಾಜಕಾರಣ ಹೀಗೆ ಎಲ್ಲವನ್ನೂ ಮನರಂಜನೆಯ ಸರಕನ್ನಾಗಿ ಮಾಡಿ ಕೂರಿಸಿವೆ. ಇನ್ನು ಬಹುಶಃ ಇವುಗಳು ಸೃಷ್ಟಿಸಿರುವ ಒತ್ತಡಕ್ಕೆ ಸಿಕ್ಕಿಯೇ ಏನೋ ನಮ್ಮ ಘನತೆವೆತ್ತ ಪತ್ರಿಕೆಗಳು ಮುಖರಹಿತವಾಗತೊಡಗಿವೆ. ವಾರಕ್ಕೊಮ್ಮೆಯೋ ಎರಡು ಬಾರಿಯೋ ಅಷ್ಟೇ ನಮ್ಮ ಪ್ರಮುಖ ಪತ್ರಿಕೆಗಳ ಮೂರ್ಣ ಮುಖ (ಪುಟ) ಕಾಣಸಿಗುವುದು! ತಮ್ಮ ಮುಖ ಚಹರೆಯನ್ನು ಕಾಯ್ದುಕೊಳ್ಳಲಾಗದ, ತನ್ನ ಮಾಧ್ಯಮ ಅಸ್ಮಿತೆಯ ಬಗ್ಗೆಯೇ ಗೌರವ ಉಳಿಸಿಕೊಳ್ಳಲಾಗದ ಯಾವ ಪತ್ರಿಕೆ ಏನು ಹೇಳಿದರೂ ನಾವು ಅನುಮಾನದಿಂದಲೇ ನೋಡಬೇಕಾಗಿದೆ. ಯಾವ ಹುತ್ತದಲ್ಲಿ ಯಾವ ಹಾವಿದೆಯೋ ಯಾರಿಗೆ ಗೊತ್ತು?

ನಾವು ಪ್ರಮಾಣಿಕವಾಗಿದ್ದರೆ, ಇದನ್ನು ಬಿಟ್ಟು ಬೇರೆ ದಾರಿಯಿಲ್ಲ. ಹಾಗಾಗಿ ನನ್ನ ಈ ಐದು ಅಂಶಗಳ ಕಾರ್ಯಕ್ರಮ. ಈ ಕಾರ್ಯಕ್ರಮದ ಅನಿವಾರ್ಯತೆ ಮತ್ತು ಪ್ರಸ್ತುತತೆಗಳನ್ನು ಅರಿತುಕೊಳ್ಳಲು ಮೊದಲಾಗಿ ಇತ್ತೀಚೆಗೆ ಸಾರ್ವಜನಿಕ ಚರ್ಚೆಗಳಲ್ಲಿ ಬಹುವಾಗಿ ಪ್ರಸ್ತಾಪಿತವಾಗುವ ಎರಡು ಅಂಶಗಳ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕು.

ಒಂದು: ಸಾಮಾಜಿಕ ನ್ಯಾಯವೆಂದರೆ ಜಾತಿ ನ್ಯಾಯವಲ್ಲ. ಏಕೆಂದರೆ, ಜಾತಿ ಅನ್ನುವುದು ಕೆಟ್ಟದ್ದು, ಬಿಡಬೇಕಾದದ್ದು. ಹೆಣ ಸುಡಲು ಬಳಸುವ ಕೋಲನ್ನು ಕೊನೆಗೆ ಹೆಣದೊಡನೆಯೇ ಸುಡಬೇಕಾದಂತೆ ಜಾತಿಯನ್ನೂ ಅಂತಿಮವಾಗಿ ಸುಡಬೇಕಾಗಿದೆ. ಈ ಅರಿವಿನೊಂದಿಗೇ ಸಾಮಾಜಿಕ ನ್ಯಾಯದ ಮಾತಾಡಬೇಕು.

ಎರಡು: ಅಭಿವೃದ್ಧಿ ಎಂದರೆ ಹೊರಗಿನ ಅಭಿವೃದ್ಧಿ ಅಲ್ಲ. ಒಳಗಿನ ಅಭಿವೃದ್ಧಿ. ಹೊರಗಿನ ರಸ್ತೆ, ಸೇತುವೆ, ದೂರಸಂಪರ್ಕ, ಉನ್ನತ ಶಿಕ್ಷಣ, ಸಂಶೋಧನೆ, ಕಾರ್ಖಾನೆ, ಕಟ್ಟಡ ಇತ್ಯಾದಿಗಳೆಲ್ಲ ನಮ್ಮ ಒಳಗಿನ ಅಭಿವೃದ್ಧಿ ಅಂದರೆ ಸಾರ್ವತ್ರಿಕ ಮತ್ತು ವೈಯುಕ್ತಿಕ ಶಾಂತಿ, ನೆಮ್ಮದಿ, ಸಮತೋಲನಗಳನ್ನು ಸಾಧಿಸುವಂತಿರಬೇಕು. ಇಲ್ಲದಿದ್ದರೆ ಅದು ಅಭಿವೃದ್ಧಿ ಅಲ್ಲ. ಬರೀ ಅಹಂಕಾರ, ಡೌಲು, ಅಶಾಂತಿ.

ಇದನ್ನು ಅರಿತುಕೊಂಡವರಿಗೆ, ಇದೀಗ ಐದು ಅಂಶಗಳ ಈ ಕಾರ್ಯಕ್ರಮ:

1. ಸರಾಸರಿ ಐದಾರು ಜನರ ಒಂದು ಸಾಮಾನ್ಯ ಕುಟುಂಬ ತಿಂಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರಿ ಜೀವನ ನಿರ್ವಹಣೆಗೆ ಖರ್ಚು ಮಾಡುವುದನ್ನು ಸಾಮಾಜಿಕ ಪಾಪವೆಂದು ಪರಿಗಣಿಸುವುದು.(ದೊಡ್ಡ ನಗರಗಳಲ್ಲಿ ಇದರ ಮಿತಿಯನ್ನು ಸೂಕ್ತವಾಗಿ ನಿರ್ಧರಿಸಬಹುದು.) ಇದನ್ನು ಮೀರಿದ ಆದಾಯವನ್ನು ಸಮಾನ ಮನಸ್ಕರು ಒಟ್ಟಿಗೆ ಸೇರಿ ಒಂದು ಸಾಮಾನ್ಯ ನಿಧಿ ಅಥವಾ ಟ್ರಸ್ಟ್ ಮಾಡಿಕೊಂಡು ಸಾರ್ವಜನಿಕ ಹಿತಕ್ಕೆ ಬಳಸುವ ವ್ಯವಸ್ಥೆ ಮಾಡಿಕೊಳ್ಳಬಹುದು.

2. ನಮ್ಮ ಕುಟುಂಬಗಳಲ್ಲಿ ಒಂದಾದರೂ ಅಂತರ್ಜಾತೀಯ ವಿವಾಹ ನಡೆಯುವಂತಹ ವಾತಾವರಣ ನಿರ್ಮಾಣ ಮಾಡುವುದು. ಇದು ಯಾವುದೇ ಕಾರಣದಿಂದ ಸಾಧ್ಯವೇ ಆಗದಿದ್ದಲ್ಲಿ ಪರಿಶಿಷ್ಟ ಜಾತಿ/ವರ್ಗದ ಮಕ್ಕಳನ್ನು(ಪರಿಶಿಷ್ಟ ಜಾತಿ/ವರ್ಗಗಳ ಅನುಕೂಲಸ್ಥರು ಬಡ ಕುಟುಂಬಗಳ ಮಕ್ಕಳನ್ನು) ಮನೆಯಲ್ಲಿಟ್ಟುಕೊಂಡು ಓದಿಸುವುದು ಅಥವಾ ಅವರ ಓದಿಗೆ ಹಣಕಾಸಿನ ಸಹಾಯ ಒದಗಿಸುವುದು.

3. ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕನಿಷ್ಠ 7ನೇ ತರಗತಿಯವರೆಗಾದರೂ ಕನ್ನಡ ಶಾಲೆಯಲ್ಲಿ ಓದಿಸುವುದು.

4. ಯಾವುದೇ ಚುನಾವಣೆಯಲ್ಲಿ, ಬೇರೆ ಯಾವುದೇ ಸಾರ್ವಜನಿಕ ಮಹತ್ವದ ಕಾರಣವಿಲ್ಲದಿದ್ದಲ್ಲಿ ಪಕ್ಷಬೇಧವಿಲ್ಲದೆ ಅತಿ ಕಡಿಮೆ ಆಸ್ತಿ ಹೊಂದಿರುವ ಅಭ್ಯರ್ಥಿಗೆ ಮತ ಹಾಕುವುದು.(ಏಕೆಂದರೆ ಇವೊತ್ತಿನ ರಾಜಕಾರಣ ನೋಡಿದರೆ, ಸದ್ಯಕ್ಕಾದರೂ ಬಡ ಜನ ಪ್ರತಿನಿಧಿ ಎಂಬುದೇ ದೊಡ್ಡ ಅರ್ಹತೆಯಾಗಿ ಮತ್ತು ಕಡಿಮೆ ಅಪಾಯಕಾರಿಯಾಗಿ ಕಾಣುತ್ತದೆ.)

5. ಈ ನಾಲ್ಕು ಅಂಶಗಳ ಬಗ್ಗೆ ನಂಬಿಕೆ ಮತ್ತು ಸಹಾನುಭೂತಿ ಹೊಂದಿದವರನ್ನು ನಮ್ಮ ನಿಜವಾದ ಗೆಳೆಯರೆಂದು ಗುರುತಿಸಿ ಈ ಕಾರ್ಯಕ್ರಮದ ಯಶಸ್ಸಿಗಾಗಿ ದುಡಿಯುವುದು.

ಬರೀ ಮಾತುಗಳನ್ನು, ಜಾಣ ಮಾತುಗಳನ್ನು ಆಡುತ್ತಾ ಹತಾಶರಂತೆ, ದುಃಖಿತರಂತೆ, ಹೋರಾಟಗಾರರಂತೆ ನಟಿಸುತ್ತಾ ಓಡಾಡುವುದನ್ನು ಮತ್ತು ಹಾರಾಡುವುದನ್ನು ನಿಲ್ಲಿಸಿ ಮೌನವಾಗಿ ಇದನ್ನು ಮಾಡಲು ಸಾಧ್ಯವೇ ನೋಡೋಣ. ನಮಸ್ಕಾರ.

(ಇದೇ ಸಂದರ್ಭದಲ್ಲಿ ಈ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಇನ್ನೊಂದು ಮಾತು ಹೇಳಲೇ ಬೇಕು. ಸಮ್ಮೇಳನದ ಕೊನೆಯಲ್ಲಿ ಕೊಟ್ರಪ್ಪ ಹಿರೇಮಾಗಡಿ ಅವರ ಸಮರ್ಥ ನಿರ್ದೇಶನದಲ್ಲಿ ಪ್ರದರ್ಶಿತವಾದ ಮುಕುಂದ ಜೋಷಿಯವರ 'ಬಾಬಾ ಸಾಹೇಬ್ ಅಂಬೇಡ್ಕರ್' ಎಂಬ ಮರಾಠಿ ನಾಟಕದ ಕನ್ನಡ ಅವತರಣಿಕೆ(ಅನುವಾದ: ಬಿ.ಆರ್. ವೆಂಕಟರಮಣ ಐತಾಳ) ಸಮ್ಮೇಳನಕ್ಕೆ ಹೊಸ ಸಂದೇಶ ನೀಡಿತೆಂದೇ ಹೇಳಬೇಕು. ಗಾಂಧಿ–ಅಂಬೇಡ್ಕರ್ ನಡುವಣ ಸಂಬಂಧಗಳನ್ನು ವಿನಾಕಾರಣ ಜಟಿಲಗೊಳಿಸಿ ವಾತಾವರಣವನ್ನು ಕಲುಷಿತಗೊಳಿಸದೆ, ಅದನ್ನು ಇಂದಿನ ಸಂದರ್ಭಕ್ಕೆ ಹೇಗೆ ವಿಸ್ತರಿಸಿ, ಸಾಮಾಜಿಕ ನ್ಯಾಯದ ಕಲ್ಪನೆಯನ್ನು ಮನರೂಪಿಸಬಹುದಾದ ಎಂತಹ ಸಾಧ್ಯತೆಗಳಿವೆ ಎಂಬುದರ ಕಡೆಗೆ ಈ ನಾಟಕ ಹೊಸ ಬೆಳಕು ಚೆಲ್ಲುವಂತಿತ್ತು. ಆದರೆ ಬೆಳಗಾವಿ ಕಡೆಯ ಕೆಲವು ದಲಿತ ಕಾರ್ಯಕರ್ತರು ನಾಟಕದ ನಂತರ ನಿರ್ದೇಶಕರ ಬಳಿ ಈ ವಿಸ್ತರಣೆಯ ಸಾಧ್ಯತೆಗಳನ್ನು ಸೂಚಿಸುವುದೇ ಅಪರಾಧವೆಂಬಂತೆ ಬಿಸಿ ಬಿಸಿ ವಾಗ್ವಾದಕ್ಕೆ ತೊಡಗಿದ್ದುದನ್ನೂ ಕಂಡು, ಸಾಗಬೇಕಾದ ದಾರಿ ಸಾಕಷ್ಟು ದೂರವಿದೆ ಎನ್ನಿಸಿದ್ದೂ ನಿಜ.) □

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಠಗಳು ಒಡ್ಡುತ್ತಿರುವ ಅಪಾಯ

ಜಿ. ಪಿ. ಬಸವರಾಜು

ಇಡೀ ಭಾರತದಲ್ಲಿಯೇ ಇತ್ತೀಚಿನ ವರ್ಷಗಳಲ್ಲಿ ನಡೆದ ಅತ್ಯಂತ ಲಜ್ಜೆಗೆಟ್ಟ ಪ್ರಕರಣ ಎಂದರೆ ಯಡಿಯೂರಪ್ಪನವರ ಕುರ್ಚಿ ಪ್ರಸಂಗ. ಇದನ್ನೊಂದು ಪ್ರಹಸನವೆಂದು ಜನ ನೋಡಿ ನಲಿಯಬಹುದಿತ್ತು. ಆದರೆ ಇದು ಲಜ್ಜೆಗೇಡಿತನ, ಭ್ರಷ್ಟಾಚಾರ, ನೈತಿಕ ಅಧಃಪತನ, ಜಾತಿರಾಜಕಾರಣ ಇತ್ಯಾದಿ ಅನೇಕ ಅಂಶಗಳನ್ನು ಒಳಗೊಂಡಿರುವುದರಿಂದ ಇಡೀ ಕರ್ನಾಟಕವೇ ಮುಖ ತಗ್ಗಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಇನ್ನೇನಲ್ಲದಿದ್ದರೂ ಈ ಪ್ರಕರಣ ಬಿಜೆಪಿ, ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದ ಪೊಳ್ಳುಗಳನ್ನು ಮತ್ತೊಮ್ಮೆ ಬಯಲು ಮಾಡಿದೆ. ಹಾಗೆಯೇ ಕರ್ನಾಟಕದ ಮಠಾಧೀಶರ ಮುಖವಾಡಗಳನ್ನೂ ಕಿತ್ತೆಸೆದಿರುವುದು ಈ ಪ್ರಕರಣದ ಇನ್ನೊಂದು ವಿಶೇಷ.

ಕೆಲವು ಮಠಗಳು ಬಹಿರಂಗವಾಗಿ ಯಡಿಯೂರಪ್ಪನವರ ಬೆಂಬಲಕ್ಕೆ ನಿಂತಿದ್ದರೆ ಮತ್ತೆ ಕೆಲವು ಮೌನವಾಗಿಯೇ ತಮ್ಮ ಬೆಂಬಲವನ್ನು ಸೂಚಿಸಿವೆ. ಯಾವ ಮಠವೂ ಯಡಿಯೂರಪ್ಪನವರು ಕುರ್ಚಿಯಿಂದ ಕೆಳಗಿಳಿಯಬೇಕು, ಅವರು ಮುಖ್ಯಮಂತ್ರಿಯಾಗಿ ಮುಂದುವರಿಯುವುದು ನ್ಯಾಯಯುತವಾದುದಲ್ಲ, ಸಮಾಜದ ಮೌಲ್ಯಗಳಿಗೆ ಪೆಟ್ಟುಕೊಡುತ್ತದೆ, ಸಮಾಜದ ಒಟ್ಟೂ ಹಿತದೃಷ್ಟಿಯಿಂದ ಅವರು ರಾಜೀನಾಮೆ ಕೊಡುವುದು ಒಳ್ಳೆಯದು ಎಂದು ಹೇಳುವ ನೈತಿಕ ಧೈರ್ಯವನ್ನು ಯಾವ ಮಠಾಧೀಶನೂ ತೋರಿಸಲಿಲ್ಲ.

ಯಡಿಯೂರಪ್ಪನವರು ಸಾರ್ವಜನಿಕರ ಹಣವನ್ನು ಕಿಂಚಿತ್ತೂ ಕಾಳಜಿಯಿಲ್ಲದೆ ಮಠಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಬೇಕಾಬಿಟ್ಟಿಯಾಗಿ ಕೊಟ್ಟಿರುವುದೂ ಈ ಬೆಂಬಲದ ಹಿಂದೆ ಕೆಲಸ ಮಾಡಿದೆ, ಹೀಗಾಗಿಯೇ ಜಾತಿಯನ್ನು ಮೀರಿ ಕೆಲವು ಮಠಗಳು ಯಡಿಯೂರಪ್ಪನವರನ್ನು ಬೆಂಬಲಿಸಿವೆ ಎಂಬುದು ನಿಜ. ಜೊತೆಗೆ ಮಠಗಳು ರಾಜಕಾರಣದ ಜೊತೆಗೆ ಅನೇಕ ವರ್ಷಗಳಿಂದ ಒಳಗೊಳಗೇ ಕೈ ಮಿಲಾಯಿಸಿ, ಮಠರಾಜಕೀಯವನ್ನು ನಡೆಸುತ್ತ ಬಂದಿರುವುದನ್ನೂ ಈ ಪ್ರಕರಣದ ಹಿನ್ನೆಲೆಯಲ್ಲಿ ಗಮನಿಸಬಹುದು.

ಜಾತಿ, ಹಣ, ಅಧಿಕಾರ ಇವುಗಳ ಸುತ್ತ ಭಾರತದ ರಾಜಕಾರಣ ಸುತ್ತುತ್ತಿರುವಂತೆಯೇ ಈ ರಾಷ್ಟ್ರದ ಮಠಗಳು, ಮಠಾಧೀಶರು, ಗುರೂಜಿಗಳು, ದೇವಮಾನವರು, ಆಶ್ರಮಗಳು, ಧಾರ್ಮಿಕ ಸಂಸ್ಥೆಗಳು ಸುತ್ತುತ್ತಿರುವುದೂ ಈ ಮೂರು ಪ್ರಧಾನ ಅಂಶಗಳ ಸುತ್ತಲೇ. ಧರ್ಮ, ನೀತಿ, ಸಮಾಜಹಿತ ಇತ್ಯಾದಿ ಎಲ್ಲ ಮಾತುಗಳೇ ಹೊರತು ಇಲ್ಲಿ ಯಾವ 'ಧಾರ್ಮಿಕ' ಪುರುಷನಿಗೂ ಮೌಲ್ಯಗಳಾಗಿ ಉಳಿದಿಲ್ಲ. ಹಲವು ಹಗಲು ವೇಷಗಳಂತೆ ಧರ್ಮವೂ ಒಂದು ವೇಷವೇ ಹೊರತು ಅದು ಯಾರಿಗೂ 'ಮುಕ್ತಿ' ಮಾರ್ಗವೂ ಅಲ್ಲ; ಪರಮಾರ್ಥವಲ್ಲ.

ಮಠಗಳು ಮತ್ತು ಧರ್ಮ ಸಂಸ್ಥಾನಗಳು ಎಂದು ಕರೆದುಕೊಳ್ಳುವ ಸ್ಥಾವರಗಳ ಬಗ್ಗೆ ನಮ್ಮ ಜನರಲ್ಲಿ ಭ್ರಮೆಗಳು ಇನ್ನೂ ಉಳಿದುಕೊಂಡಿವೆ. ಇದಕ್ಕೆ ಕಾರಣವೂ ಇಲ್ಲವೆಂದಲ್ಲ. ಅನೇಕ ಮಠಗಳು ವಿದ್ಯಾದಾನ, ಅನ್ನದಾನ, ಧರ್ಮ ಸಂಸ್ಥಾಪನಾ ಇತ್ಯಾದಿ ಮುಸುಕುಗಳನ್ನು ಹೊದ್ದಿವೆ. ವಿದ್ಯೆಯೆಂಬುದನ್ನು ಒಂದು ವ್ಯಾಪಾರೋದ್ಯಮವಾಗಿ ಮಾಡಿದವರು ಈ ಮಠಗಳ ಜನರೇ ಎಂಬುದನ್ನು ನಮ್ಮ ಜನತೆ ಅಷ್ಟಾಗಿ ಗಮನಕ್ಕೆ ತೆಗೆದುಕೊಂಡಿರುವಂತೆ ಕಾಣುವುದಿಲ್ಲ.

ಅನ್ನದಾನ ಎಂಬ ಸೋಗಲಾಡಿತನದ ಹಿಂದೆ ಜಾತಿ ವ್ಯವಸ್ಥೆಯೂ, ಸರ್ಕಾರದ ಹಲವು ಯೋಜನೆಗಳನ್ನು ಪಡೆದುಕೊಳ್ಳುವ ಹುನ್ನಾರವೂ ಅಡಗಿದೆ ಎಂಬುದೂ ಹಲವರಿಗೆ ತಿಳಿದಿಲ್ಲ. ಮಾಧ್ಯಮಗಳು ಕೂಡಾ ಇಂಥ ಮುಸುಕನ್ನು ಸರಿಸಲು ಹೆಚ್ಚಿನ ಉತ್ಸಾಹವನ್ನು ತೋರಿಸುವುದಿಲ್ಲ. ರಾಜಕಾರಣಿಗಳ ವಿರುದ್ಧ ಹರಿದಾಡುವ ಮಾಧ್ಯಮಗಳು ಮಠಗಳ ವಿಚಾರದಲ್ಲಿ ಯಾಕೆ ಅಷ್ಟೊಂದು ಕ್ರಿಯಾಶೀಲವಾಗಿಲ್ಲ ಎಂಬುದು ಕೂಡಾ ಅಧ್ಯಯನಯೋಗ್ಯವೇ. ಕೆಲವು ಮಠಗಳು ತಾವು ಪ್ರಗತಿಪರ ಸಂಸ್ಥೆಗಳೆಂದು ತೋರಿಸಿಕೊಳ್ಳುವುದಕ್ಕಾಗಿ ಅನೇಕ ಸಣ್ಣಪುಟ್ಟ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿವೆ. ಕೆಲವು ಮಠಗಳು 'ರಾಷ್ಟ್ರಮಟ್ಟದ' ಪ್ರಶಸ್ತಿಗಳನ್ನು ಸಮಾಜದ ಗಣ್ಯರಿಗೆ ಕೊಡುತ್ತಿವೆ. ಕೆಲವು 'ಸರ್ವಧರ್ಮ' ಸಮ್ಮೇಳನಗಳನ್ನು ನಡೆಸುತ್ತಿವೆ.

ಜಾತಿ, ಹಣ, ಅಧಿಕಾರ ಇವುಗಳ ಸುತ್ತ ಭಾರತದ ರಾಜಕಾರಣ ಸುತ್ತುತ್ತಿರುವಂತೆಯೇ ಈ ರಾಷ್ಟ್ರದ ಮಠಗಳು, ಮಠಾಧೀಶರು, ಗುರೂಜಿಗಳು, ದೇವಮಾನವರು, ಆಶ್ರಮಗಳು, ಧಾರ್ಮಿಕ ಸಂಸ್ಥೆಗಳು ಸುತ್ತುತ್ತಿರುವುದೂ ಈ ಮೂರು ಪ್ರಧಾನ ಅಂಶಗಳ ಸುತ್ತಲೇ. ಧರ್ಮ, ನೀತಿ, ಸಮಾಜಹಿತ ಇತ್ಯಾದಿ ಎಲ್ಲ ಮಾತುಗಳೇ ಹೊರತು ಇಲ್ಲಿ ಯಾವ 'ಧಾರ್ಮಿಕ' ಪುರುಷನಿಗೂ ಮೌಲ್ಯಗಳಾಗಿ ಉಳಿದಿಲ್ಲ. ಹಲವು ಹಗಲು ವೇಷಗಳಂತೆ ಧರ್ಮವೂ ಒಂದು ವೇಷವೇ ಹೊರತು ಅದು ಯಾರಿಗೂ 'ಮುಕ್ತಿ' ಮಾರ್ಗವೂ ಅಲ್ಲ; ಪರಮಾರ್ಥವಲ್ಲ. ಮಠಗಳು ಮತ್ತು ಧರ್ಮ ಸಂಸ್ಥಾನಗಳು ಎಂದು ಕರೆದುಕೊಳ್ಳುವ ಸ್ಥಾವರಗಳ ಬಗ್ಗೆ ನಮ್ಮ ಜನರಲ್ಲಿ ಭ್ರಮೆಗಳು ಇನ್ನೂ ಉಳಿದು ಕೊಂಡಿವೆ.

ಕೆಲವು ಮಠಗಳು ಕ್ರಾಂತಿಕಾರಕ ನಾಟಕಗಳನ್ನು ಆಡಿಸುತ್ತ ರೆಪರ್ಟರಿಗಳನ್ನು ನಡೆಸುತ್ತಿವೆ. ಸಂಗೀತ, ಸಾಹಿತ್ಯ, ಕಲೆ, ಧರ್ಮಗಳ ಪೋಷಕರು, ಸಂರಕ್ಷಕರು ತಾವೇ ಎಂಬ ಪೋಸನ್ನು ಕೊಡುತ್ತಿವೆ. ಮನುಷ್ಯರೆಲ್ಲ ರನ್ನೂ ಸಮಾನವಾಗಿ ಕಾಣುವ, ಜಾತಿಯನ್ನು ಮೀರಿ ಮಾನವತೆಯನ್ನು ತೋರುವ ಕನಿಷ್ಠ ಕರ್ತವ್ಯವನ್ನೂ ಈ ಮಠಗಳು ತೋರಿಸುತ್ತಿಲ್ಲ. ಇದರ ಹಿಂದಿನ ಸತ್ಯ ಯಾವುದು ನಿಜಕ್ಕೂ ಧರ್ಮದಲ್ಲಿ ನಂಬಿಕೆ ಇಟ್ಟ ಒಬ್ಬ ಮಠಾಧೀಶನಿಗೆ ಸಮಾಜದ ಜೊತೆ ನಿಕಟ ಸಂಪರ್ಕವಿರುತ್ತದೆಯೇ ಹೊರತು ರಾಜಕಾರಣಿಗಳ ಜೊತೆಯಲ್ಲಿ ಅಲ್ಲ. ಸಮಾಜದ ಹಿತಕ್ಕೆ ಧಕ್ಕೆ ತರುವ ರಾಜಕಾರಣಿಗಳ ವಿರುದ್ಧ ಇಂಥ ಮಠಾಧೀಶರು ಜನರ ಪ್ರತಿನಿಧಿಗಳಂತೆ ವರ್ತಿಸುತ್ತ ಬಂಡೇಳಬೇಕು.

ಆದರೆ ನಮ್ಮ ಮಠಗಳು ಹೀಗೆ ಬಂಡೆದ್ದ ಉದಾಹರಣೆಗಳೇ ಇಲ್ಲ. ಜಾತಿಯನ್ನೇ ಪ್ರಧಾನ ಅಸ್ತ್ರವಾಗಿ ಬಳಸುತ್ತ ರಾಜಕಾರಣಿಗಳ ಮೇಲೆ ಹಿಡಿತ ಸಾಧಿಸಲು ಆ ಮೂಲಕ ತಮಗೆ ಮತ್ತು ತಮ್ಮ ಮಠಗಳಿಗೆ ಬೇಕಾದ ಹಣಕಾಸು, ಭೂಮಿ, ಡೊನೇಷನ್ ತರುವ ಕಾಲೇಜುಗಳು, ಜಾತಿಯನ್ನು ಬಲಪಡಿಸುವ ಸವಲತ್ತುಗಳು ಇತ್ಯಾದಿ ಪಡೆಯುವುದಕ್ಕಾಗಿಯೇ ಸದಾ ಶ್ರಮಿಸುತ್ತ ಬಂದಿವೆ. ಇದು ಒಂದು ದುರಂತವಾದರೆ, ಮಠಗಳ ಬಗ್ಗೆ ಅಪಾರ ಗೌರವವನ್ನು ಮತ್ತು 'ಭಕ್ತಿ'ಯನ್ನು ಇಟ್ಟುಕೊಂಡು, ಜಾತಿ ವ್ಯವಸ್ಥೆಯನ್ನು ಜನ ಗಟ್ಟಿಗೊಳಿಸುತ್ತಿರುವುದು ಇನ್ನೊಂದು ದುರಂತ.

ಜಾತಿಯನ್ನು ಮೀರಿದ ಮಾನವ ಧರ್ಮ ತಮ್ಮದು ಎಂದು ವೇದಿಕೆಗಳಲ್ಲಿ ಘೋಷಿಸಿಕೊಂಡರೂ ಮಠಗಳು ಎಂದೂ ಜಾತಿಯನ್ನು ಬಿಟ್ಟಿಲ್ಲ. ಚುನಾವಣೆಯ ಸಂದರ್ಭದಲ್ಲಂತೂ ಮಠಗಳು ಜಾತಿಯ ಓಟ್ ಬ್ಯಾಂಕ್‌ಗಳಾಗಿ ವರ್ತಿಸಿವೆ. ತಮ್ಮ ಜಾತಿಯ ಹುರಿಯಾಳುಗಳಿಗೆ ಚುನಾವಣೆಯ ನಿಧಿಯನ್ನೂ ಕೊಡಿಸಿ ಅವರ ಗೆಲುವಿಗೆ ಶ್ರಮಿಸಿವೆ. ಕೆಲವು ಧರ್ಮಕೇಂದ್ರಗಳು ಯಾರೇ ಅಧಿಕಾರಕ್ಕೆ ಬಂದರೂ ತಮ್ಮ ಸಾರ್ವಭೌಮತೆಗೆ ಧಕ್ಕೆಯಾಗಬಾರದೆಂಬ ಉದ್ದೇಶದಿಂದ ಎಲ್ಲ ಪಕ್ಷಗಳ ಅಭ್ಯರ್ಥಿಗಳಿಗೂ ತಮ್ಮ ಕೈಲಾದಷ್ಟು ಹಣಕೊಟ್ಟು ಎಲ್ಲರನ್ನೂ ಚೆನ್ನಾಗಿಟ್ಟುಕೊಳ್ಳಲು ನೋಡುತ್ತವೆ.

ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅಲ್ಲಿ ತಮ್ಮ ಜಾತಿಯವನನ್ನು ಹುಡುಕಿ ಅವನನ್ನ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಸಂಗತಿ ಹೊಸದೇನೂ ಅಲ್ಲ. ವಿದ್ಯೆಯನ್ನು ತಳವರ್ಗಗಳ ಜನರಿಗೆ ತಲುಪುವಂತೆ ಮಾಡಿದ ಕೀರ್ತಿ ಕೆಲವು ಮಠಗಳಿಗೆ ಅನೇಕ ದಶಕಗಳ ಹಿಂದೆ ಸಂದಿರುವುದು ನಿಜವಾದರೂ, ಇವತ್ತು ವಿದ್ಯೆಯನ್ನು ಬಹುದೊಡ್ಡ ವ್ಯಾಪಾರವಾಗಿ ಮಾಡಿದ, ಅದನ್ನೊಂದು ಹೀನ ದಂಧೆಯಾಗಿ ಪರಿವರ್ತಿಸಿದ ಕೀರ್ತಿಯೂ ನಮ್ಮಲ್ಲಿ ಮಠಗಳಿಗೇ ಸಲ್ಲುತ್ತದೆ ಎಂಬುದು ವಾಸ್ತವ.

ಮೊನ್ನೆ ಯಡಿಯೂರಪ್ಪನವರ ಸರ್ಕಾರ ನೀಡಿದ ರಾಜ್ಯೋತ್ಸವ ಪ್ರಶಸ್ತಿಗಳಲ್ಲಿ ಎಷ್ಟು ಜನ ಮಠಾಧೀಶರ ಕೈವಾಡವಿದೆ ಎಂಬುದು ಗುಟ್ಟಿನ ಸಂಗತಿಯೇನಲ್ಲ. ಕೆಲವು ಪ್ರಶಸ್ತಿ 'ವಿಜೇತರು' ತಮಗೆ ಪ್ರಶಸ್ತಿ ದೊರಕಿಸಿಕೊಟ್ಟವರೇ ಸ್ವಾಮೀಜೀ ಎಂದು ಬಹಿರಂಗಪಡಿಸಿದ್ದಾರೆ. ಹೀಗೆ ಸಾರ್ವಜನಿಕವಾಗಿ ಹೇಳದಿದ್ದರೂ ಒಳ ಸಂಗತಿಗಳನ್ನು ಬಲ್ಲವರಿಗೆ ಮತ್ತು ಪ್ರತಿಯೊಂದು ಸರ್ಕಾರದ ಕಾರ್ಯವೈಖರಿಯನ್ನು ಗಮನಿಸಿದವರಿಗೆ ಪ್ರಶಸ್ತಿಗಳು ಮಾತ್ರವಲ್ಲ ಸರ್ಕಾರದ ಅನೇಕ ಕಾರ್ಯಗಳಲ್ಲಿ ಮಠಗಳ ಮತ್ತು 'ಧರ್ಮ ಸಂಸ್ಥೆಗಳ' ಕೈವಾಡವಿರುವುದು ಸ್ಪಷ್ಟವಾಗುತ್ತದೆ.

ಜಾತಿಯನ್ನು ಮೀರಿದ ಮಾನವ ಧರ್ಮ ತಮ್ಮದು ಎಂದು ವೇದಿಕೆಗಳಲ್ಲಿ ಘೋಷಿಸಿಕೊಂಡರೂ ಮಠಗಳು ಎಂದೂ ಜಾತಿಯನ್ನು ಬಿಟ್ಟಿಲ್ಲ. ಚುನಾವಣೆಯ ಸಂದರ್ಭದಲ್ಲಂತೂ ಮಠಗಳು ಜಾತಿಯ ಓಟ್ ಬ್ಯಾಂಕ್‌ಗಳಾಗಿ ವರ್ತಿಸಿವೆ. ತಮ್ಮ ಜಾತಿಯ ಹುರಿಯಾಳುಗಳಿಗೆ ಚುನಾವಣೆಯ ನಿಧಿಯನ್ನೂ ಕೊಡಿಸಿ ಅವರ ಗೆಲುವಿಗೆ ಶ್ರಮಿಸಿವೆ. ಕೆಲವು ಧರ್ಮ ಕೇಂದ್ರಗಳು ಯಾರೇ ಅಧಿಕಾರಕ್ಕೆ ಬಂದರೂ ತಮ್ಮ ಸಾರ್ವಭೌಮತೆಗೆ ಧಕ್ಕೆಯಾಗಬಾರದೆಂಬ ಉದ್ದೇಶದಿಂದ ಎಲ್ಲ ಪಕ್ಷಗಳ ಅಭ್ಯರ್ಥಿಗಳಿಗೂ ತಮ್ಮ ಕೈಲಾದಷ್ಟು ಹಣ ಕೊಟ್ಟು ಎಲ್ಲರನ್ನೂ ಚೆನ್ನಾಗಿಟ್ಟುಕೊಳ್ಳಲು ನೋಡುತ್ತವೆ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅಲ್ಲಿ ತಮ್ಮ ಜಾತಿಯವನನ್ನು ಹುಡುಕಿ ಅವನನ್ನ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಸಂಗತಿ ಹೊಸದೇನೂ ಅಲ್ಲ.

ಹುದ್ದೆಗಳ ನೇಮಕ, ಯೋಜನೆಗಳ ಅನುಷ್ಠಾನ ಇತ್ಯಾದಿ ಅನೇಕ ವಿಚಾರಗಳಲ್ಲೂ ಕೆಲವು ಮಠಾಧೀಶರು ಭಾಗವಹಿಸುತ್ತ, ಸರ್ಕಾರದ ಮೇಲೆ ತಮ್ಮ ನಿಯಂತ್ರಣ ಇರಿಸಿಕೊಂಡಿರುವುದು ಕೂಡಾ ಅನೇಕ ದಶಕಗಳಿಂದ ನಡೆದುಬಂದಿದೆ. ತಮ್ಮ ಜಾತಿಯವನು ಮುಖ್ಯಮಂತ್ರಿಯಾದ ಕೂಡಲೇ ಆ ಜಾತಿಯ ಮಠಾಧೀಶರಿಗೆ ರೆಕ್ಕೆಗಳು ಮೂಡಿಬಿಡುತ್ತವೆ. ಕುಲಪತಿಗಳ ಆಯ್ಕೆಯಲ್ಲಿಯೂ ಹಣ ಮತ್ತು ಜಾತಿ ಪ್ರಭಾವ, ಮಠಗಳ ಕ್ರಿಯಾಶೀಲತೆ ಇರುವುದೂ ಕೂಡಾ ಇವತ್ತು ಬಹಿರಂಗ ಚರ್ಚೆಯ ವಿಷಯವೇ ಆಗಿದೆ.

ಜಾತಿಯ ಕಬಂಧ ಬಾಹುಗಳು ಎಷ್ಟು ವಿಸ್ತಾರಕ್ಕೆ ಚಾಚುತ್ತಿವೆ. ದೊಡ್ಡ ದೊಡ್ಡ ಹುದ್ದೆಯಲ್ಲಿರುವ ಕೆಲವು ಕೆ.ಎ.ಎಸ್ ಮತ್ತು ಐ.ಎ.ಎಸ್ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಮಠಾಧೀಶರು ಗುಟ್ಟಾಗಿ ಸಭೆ ನಡೆಸುವುದು, ಎಳೆಯ ಮನಸ್ಸುಗಳನ್ನು ಜಾತಿಯ ಪಾಶಗಳಲ್ಲಿ ಬಿಗಿಯುವುದು ಇತ್ಯಾದಿ ವಿದ್ಯಮಾನಗಳು ಅತ್ಯಂತ ಅಪಾಯಕಾರೀ ಬೆಳವಣಿಗೆಗಳು. ವಿದ್ಯಾಸಂಸ್ಥೆಗಳಲ್ಲಿ ಜಾತೀಯತೆ, ಕಾಲೇಜುಗಳಲ್ಲಿ ಜಾತಿಗೇ ಮಾನ್ಯತೆ, ವಿಶ್ವವಿದ್ಯಾನಿಲಯದಲ್ಲಿ ಜಾತಿ ಹೆಸರಿನ ಯುವ ಸಂಘಟನೆಗಳು, ನೇಮಕಾತಿಯಲ್ಲಿ ಅರ್ಹತೆಗಿಂತ ಜಾತಿಗೇ ಹೆಚ್ಚಿನ ಮನ್ನಣೆ –ನಮ್ಮ ಪ್ರಜಾಪ್ರಭುತ್ವ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ?

ದಲಿತರಿಗೆ, ಹಿಂದುಳಿದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಸಂವಿಧಾನಾತ್ಮಕ ರಕ್ಷಣೆಯಿದೆ ಎಂಬುದೊಂದೇ ಸಮಾಧಾನ. ಪ್ರಬಲ ಜಾತಿಗಳ ಮೇಲಾಟದ ರಾಜಕೀಯದಲ್ಲಿ ದಲಿತರಾಗಲಿ, ಹಿಂದುಳಿದವರಾಗಲಿ ಅಥವಾ ಅಲ್ಪಸಂಖ್ಯಾತರಾಗಲಿ ಹೆಚ್ಚು ವಿಶ್ವಾಸದಿಂದ ಮತ್ತು ಆತ್ಮಸ್ಥೈರ್ಯದಿಂದ ರಾಜಕೀಯದಲ್ಲಿ ಭಾಗವಹಿಸುವುದು ಸಾಧ್ಯವೇ? ಹೀಗಾಗಿಯೇ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಮೇಲಿನ ಈ ಮೂರೂ ವರ್ಗದ ಜನ ದಾಳಗಳಾಗಿ ಬಳಕೆಯಾಗುತ್ತಿದ್ದಾರೆಯೇ ಹೊರತು ಅವರೇ ಪ್ರಮುಖ ಹುರಿಯಾಳುಗಳಾಗಿ ರಾಜಕೀಯವನ್ನು ಮುನ್ನಡೆಸಲು ಸಾಧ್ಯವಾಗುತ್ತಿಲ್ಲ. ಯಾವ ಮಠಗಳೂ ಇಂಥ ಪ್ರಮುಖ ಪ್ರಶ್ನೆಯನ್ನು ಎತ್ತಿ, ಸಾರ್ವಜನಿಕ ಗಮನವನ್ನು ಸೆಳೆಯುತ್ತಿಲ್ಲ ಎಂಬುದು ಮಠಗಳ ಜಾತೀಯತೆಯ ಚೌಕಟ್ಟನ್ನು ತೋರಿಸುವ ಇನ್ನೊಂದು ಅಂಶವಾಗುತ್ತದೆ.

ನಾವು ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇವೆ ಎನ್ನುವವರು, ಹರಿಜನ ಕಾಲೋನಿಗಳಲ್ಲಿ ಪಾದಯಾತ್ರೆ ಮಾಡುವವರು, ನಮ್ಮಲ್ಲಿ ಸಹಪಂಕ್ತಿ ಭೋಜನವಿದೆ ಎಂಬ ಸುಳ್ಳುಗಳನ್ನು ಬಿತ್ತುವ ಮಠಗಳು ಇಂಥ ಪ್ರಮುಖ ಪ್ರಶ್ನೆಗಳನ್ನು ಎಂದೂ ಎತ್ತಿಲ್ಲ; ಬೇರೆಯವರು ಎತ್ತುವುದೂ ಬೇಕಿಲ್ಲ. ಆಕಸ್ಮಿಕವಾಗಿ ವೇದಿಕೆಗಳಲ್ಲಿ ಹೇಳಿದರೂ ಅವರ ಅಂತರಂಗದ ಮಾತು ಅದಾಗಿರುವುದಿಲ್ಲ. ಆದರೂ ಕೂಡಲ ಸಂಗಮನ ಅಂತರಂಗ ಬಹಿರಂಗ ವಚನಗಳನ್ನು ಹೆಜ್ಜೆ ಹೆಜ್ಜೆಗೂ ಉದ್ಧರಿಸುವ ಮಠಾಧೀಶರಿಗೆ ನಮ್ಮಲ್ಲಿ ಬರವಿಲ್ಲ. ಇಂಥವರಿಗೆ ವಿದ್ವತ್ತು ಬೇರೆ, ಬದುಕು ಬೇರೆ. ವ್ಯವಹಾರ ಬೇರೆ; ಧರ್ಮ ಬೇರೆ. ಬೇರೆ ಇಲ್ಲದವರಿಗೆ ನೆಲವೇನು, ಕಾಂಕ್ರೀಟೇನು, ಆಕಾಶವೇನು, ಭೂಮಿಯೇನು?

ಈ ಕಾರಣಕ್ಕಾಗಿಯೋ ಏನೋ ಪ್ರತಿಯೊಂದು ಜಾತಿಯೂ ತಮಗೊಬ್ಬ ಸ್ವಾಮಿ ಬೇಕು, ಮಠ ಬೇಕು ಎಂದು ಹೇಳುತ್ತಿವೆ. ಪ್ರಬಲ ಜಾತಿಗಳ ಮಠಾಧೀಶರ ಪ್ರಭಾವವನ್ನು ಕಂಡ ಈ ಜಾತಿಗಳಿಗೆ ತಮಗೂ ಒಂದು ಮಠವಿದ್ದರೆ ತಾವು ರಾಜಕಾರಣಿಗಳ ಮೇಲೆ ನಿಯಂತ್ರಣವಿಟ್ಟುಕೊಳ್ಳಬಹುದು ಎಂದು ಆಶಿಸಿರಬಹುದು. ಆದರೆ ಇಂಥ ಆಸರೆ ನಿಜಕ್ಕೂ ಒಂದು ಜನ ಸಮುದಾಯದ ಮುನ್ನಡೆಗೆ ಕಂಟಕವಾಗುತ್ತದೆ ಎಂಬುದನ್ನು ಮನಗಾಣಬೇಕು. ಇಲ್ಲವಾದರೆ ಜಾತ್ಯತೀತವಾದ ನಮ್ಮ ಪ್ರಜಾಪ್ರಭುತ್ವದಲ್ಲಿ ಮತ್ತೆ ನಾವು ಜಾತಿಗಳನ್ನು ಬಲಿಷ್ಠಗೊಳಿಸುತ್ತೇವೆ. ಜಾತಿ ವ್ಯವಸ್ಥೆ ಬಲಿಷ್ಠವಾಗಿದ್ದ ವ್ಯವಸ್ಥೆ ಯಾರನ್ನು ತುಳಿಯಿತು ಮತ್ತು ಎಷ್ಟು ಅಮಾನವೀಯವಾಗಿ ತುಳಿಯಿತು ಎಂಬುದನ್ನು ಭಾರತದ ಐದು ಸಾವಿರ ವರ್ಷಗಳ ಚರಿತ್ರೆಯೇ ತೋರಿಸುತ್ತದೆ.

ಬುದ್ಧನನ್ನು ಭಾರತದಿಂದ ಓಡಿಸಿದ ಮುಖ್ಯ ಕಾರಣಗಳಲ್ಲಿ ಒಂದು ಬುದ್ಧ ವರ್ಣ ವ್ಯವಸ್ಥೆಯನ್ನು ವಿರೋಧಿಸಿದ್ದು ಮತ್ತು ಮನುಷ್ಯರ ಸಮಾನತೆಯನ್ನು ಆಶಿಸಿದ್ದು. ಇದನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಸರಿಯಾಗಿಯೇ ಗುರುತಿಸಿದ್ದರು. ಇದನ್ನು ನಾವೀಗ ಅರ್ಥಮಾಡಿಕೊಂಡು ಮಠ ವ್ಯವಸ್ಥೆಯನ್ನು ವಿರೋಧಿಸಬೇಕು. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಇರುವ ಮುಖ್ಯವಾದ ಮಾರ್ಗ.

ಜಾತಿಗೊಂದು ಮಠವಿರಬೇಕೆಂಬ ಮಾರ್ಗದಲ್ಲಿ ನಡೆದರೆ ಅದು ನಮ್ಮನ್ನು ಪುರಾತನವಾದ, ಶೋಷಿತ ವ್ಯವಸ್ಥೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಅಗೆಲ್ಲದರಿಂದ ಬಿಡಿಸಿಕೊಂಡು ಬಂದಿರುವ ನಾವು ಮತ್ತೆ ಅಲ್ಲಿಗೇ ಹೋಗುವುದು ಎಷ್ಟು ಸರಿ ಎಂಬುದನ್ನು ಚಿಂತಿಸಬೇಕಾಗಿದೆ. ವಿಶೇಷವಾಗಿ ದಲಿತರು ಮತ್ತು ಹಿಂದುಳಿದವರು ಈ ಮಠಗಳ ಅಪಾಯವನ್ನು ಅರಿಯಬೇಕಾಗಿದೆ. ☐

ಉದ್ಯೋಗ ಖಾತರಿ ಕಾಯ್ದೆ: ಬೇಲಿಯೇ ಹೊಲವನ್ನು ಮೇಯುತ್ತಿದೆ

ಅರುಣಾ ರಾಯ್ ಮತ್ತು ನಿಖಿಲ್ ಡೇ

(ಅನು: ಎಸ್. ಭಟ್)

> **ದೇಶದ ಆರ್ಥಿಕತೆ ಕುಸಿದು ಬೀಳಬಹುದು ಎನ್ನುವುದಕ್ಕಿಂತಲೂ ಅಗ್ಗದಲ್ಲಿ ಲಭ್ಯವಾಗುವ ಕಾರ್ಮಿಕರ ಸಂಖ್ಯೆ ಇಳಿಮುಖವಾಗ ಬಹುದು ಎನ್ನುವುದೇ ಸ್ಥಾಪಿತ ಹಿತಾಸಕ್ತಿಗಳ ಆತಂಕಕ್ಕೆ ಕಾರಣ ವೆಂದು ಇದೀಗ ಸ್ಪಷ್ಟ ವಾಗುತ್ತಿದೆ. ಉದ್ಯೋಗ ಖಾತರಿ ಕಾಯ್ದೆ ಗ್ರಾಮೀಣ ಕಾರ್ಮಿಕರ ಸಂಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಿತ್ತು. ಮಾತ್ರವಲ್ಲದೆ, ಬಜೆಟ್ ನಲ್ಲಿ ತುರ್ತು ಪರಿಸ್ಥಿತಿ ತಲೆದೋರಬಹುದು ಅಥವಾ ಆರ್ಥಿಕತೆ ಕುಸಿ ಯಬಹುದೆಂದು ಹುಚ್ಚಾಬಟ್ಟೆಯಾಗಿ ಮಾತನಾಡಿದ್ದ ಅನೇಕ ಆರ್ಥಿಕತಜ್ಞರ ಭವಿಷ್ಯ ವಾಣಿಯನ್ನೂ ಸುಳ್ಳಾಗಿಸಿತ್ತು. ವಾಸ್ತವದಲ್ಲಿ ಈ ಕಾಯ್ದೆ ದೇಶದ ಬಹು ತೇಕ ಗ್ರಾಮೀಣ ಪ್ರದೇಶಗಳನ್ನು ಆರ್ಥಿಕ ಕುಸಿತದ ದುಷ್ಪರಿಣಾಮ ಗಳಿಂದ ರಕ್ಷಿಸಿದೆ.**

ಭಾರತದಲ್ಲಿಂದು ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಬಹುದೊಡ್ಡದಾಗಿದೆ. ಇಂತಹ ಶೋಷಿತ ವರ್ಗಗಳ ಭದ್ರ ತೆಗಾಗಿರುವ ಕೆಲವೇ ಕೆಲವು ವಿಧಾನಗಳಲ್ಲೊಂದೆಂದರೆ "ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ." ಈ ಒಂದು ಪ್ರಗತಿಪರ ಕಾಯ್ದೆಯನ್ನು ಈಗ ನಮ್ಮ ದೇಶದ ರಾಜ್ಯನೀತಿ ಕರ್ತೃಗಳು ಬಹಳ ಸಮರ್ಥವಾಗಿ ಬುಡಮೇಲುಗೊಳಿಸುತ್ತಿದ್ದಾರೆ. ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯನ್ನು ಬಳಸಿಕೊಂಡು "ಕನಿಷ್ಠ ವೇತನ ಕಾಯ್ದೆ, 1948"ನ್ನು ನಿರ್ಲಜ್ಜವಾಗಿ ಉಲ್ಲಂಘಿಸಲಾಗುತ್ತಿದೆ ಮಾತ್ರವಲ್ಲ ಅದನ್ನು ಒಳಗಿಂದೊಳಗೇ ಶಿಥಿಲಗೊಳಿಸಲಾಗುತ್ತಿದೆ.

ಕನಿಷ್ಠ ವೇತನ ಒಂದು ಮೂಲಭೂತ ಹಕ್ಕೆಂದು 1983 ರಷ್ಟು ಹಿಂದೆಯೆ ಸ್ಪಷ್ಟಪಡಿಸಿರುವ ಸರ್ವೋಚ್ಚ ನ್ಯಾಯಾಲಯ, ಅದರ ನಿರಾಕರಣೆ ಸಂವಿಧಾನದ 23ನೆ ವಿಧಿಯ ಉಲ್ಲಂಘನೆಯಾಗಿದ್ದು ಅದು "ಬಲಾತ್ಕಾರದ ದುಡಿಮೆ"ಯಾಗುತ್ತದೆಂದು ಸಾರಿ ಹೇಳಿದೆ. ಸಂತ್ರಸ್ತರು ಕನಿಷ್ಠ ವೇತನಕ್ಕಾಗಿ ನ್ಯಾಯಾಲಯದ ಮೊರೆಹೋಗಬಹುದೆಂದು ಕೂಡಾ ಆದೇಶಿಸಿದೆ.

ಆದರೆ ಮೊನ್ನೆ ಜನವರಿ 2009ರಲ್ಲಿ ಕೇಂದ್ರ ಸರಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಉದ್ಯೋಗ ಖಾತರಿ ಕಾಯ್ದೆಯ ಸೆಕ್ಷನ್ 6(1)ರಡಿ ಒಂದು ಅಧಿಸೂಚನೆ ಹೊರಡಿಸಿತು. ಅದರ ಪ್ರಕಾರ ಇನ್ನು ಮುಂದಕ್ಕೆ ಉದ್ಯೋಗ ಖಾತರಿ ಕಾಯ್ದೆಯಡಿಯ ವೇತನದ ದರಗಳಿಗೆ ಕನಿಷ್ಠ ವೇತನ ಕಾಯ್ದೆ ಅನ್ವಯವಾಗುವುದಿಲ್ಲ! ಈ ಅಧಿ ಸೂಚನೆಯ ಮುಖಾಂತರ "ಕನಿಷ್ಠ ವೇತನ ಕಾಯ್ದೆ, 1948"ರ ಪಾವಿತ್ರ್ಯವನ್ನು ಗುಪ್ತವಾಗಿ ಕೆಡಿಸಲಾಗಿದೆ. ಇಲ್ಲಿ (ಅ)ಸಾಂವಿಧಾನಕತೆಯ ಪ್ರಶ್ನೆಗಳನ್ನು ಪರಿಗಣಿಸಿ ಉಪೇಕ್ಷಿಸಲಾಗಿದೆ; ಹೊಣೆಯನ್ನು ಒಂದು ಸರಕಾರದಿಂದ ಇನ್ನೊಂದರ ತಲೆಮೇಲಕ್ಕೆ ವರ್ಗಾಯಿಸಲಾಗಿದೆ; ದೇಶದ ಆರ್ಥಿಕತೆಯ ಮೇಲೆ ದುಷ್ಪರಿಣಾಮವಾಗಬಹುದು ಎಂಬ ಕಾರಣಗಳನ್ನು ಮುಂದೊಡ್ಡಿ ಮೂಲಭೂತ ಮಾನವಹಕ್ಕಿನ ಉಲ್ಲಂಘನೆ ಮಾಡಲಾಗಿದೆ; ನೈತಿಕತೆ ಮತ್ತು ನೀತಿ, ನಿಯಮಗಳನ್ನು ಗಾಳಿಗೆ ತೂರಲಾಗಿದೆ.

ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಹೆಚ್ಚಿನ ಸಂಪನ್ಮೂಲಗಳ ನ್ನೆಲ್ಲ ಕಬಳಿಸುತ್ತಾ ಬಂದಿರುವ ಕೆಲವೇ ಮಂದಿಗೆ ಪ್ರಾಯಶಃ ಈ ಉದ್ಯೋಗ ಖಾತರಿ ಕಾಯ್ದೆಯ ಸೀಮಿತ ಯಶಸ್ಸನ್ನು ಕೂಡಾ ಸಹಿಸಲಾಗಿಲ್ಲ. ಬಡವರಿಗೆ ಪ್ರಯೋಜನಕಾರಿ ಆಗಬಲ್ಲ ಯಾವುದೇ ಕಾಯ್ದೆ, ಕಾನೂನುಗಳಿರಲಿ, ಅವನ್ನು ಅಧಿಕಾರಶಾ ಹಿಯ ಕುತಂತ್ರದ ಜಾಲದಲ್ಲಿ ಸಿಲುಕಿಸಬಲ್ಲಂತಹ ಶಕ್ತಿ ಹಾಗೂ ಜಾಣ್ಮೆಯನ್ನು ಸ್ಥಾಪಿತ ಹಿತಾಸಕ್ತಿಗಳು ಹೊಂದಿವೆ.

ನಿಜ ಹೇಳಬೇಕೆಂದರೆ, ದೇಶದ ಆರ್ಥಿಕತೆ ಕುಸಿದು ಬೀಳಬಹುದು ಎನ್ನುವುದಕ್ಕಿಂತಲೂ ಅಗ್ಗದಲ್ಲಿ ಲಭ್ಯವಾಗುವ ಕಾರ್ಮಿ ಕರ ಸಂಖ್ಯೆ ಇಳಿಮುಖವಾಗಬಹುದು ಎನ್ನುವುದೇ ಸ್ಥಾಪಿತ ಹಿತಾಸಕ್ತಿಗಳ ಆತಂಕಕ್ಕೆ ಕಾರಣವೆಂದು ಇದೀಗ ಸ್ಪಷ್ಟವಾಗುತ್ತಿದೆ. ಉದ್ಯೋಗ ಖಾತರಿ ಕಾಯ್ದೆ ಗ್ರಾಮೀಣ ಕಾರ್ಮಿಕರ ಸಂಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಿತ್ತು. ಮಾತ್ರವಲ್ಲದೆ, ಬಜೆಟ್‌ನಲ್ಲಿ ತುರ್ತು ಪರಿಸ್ಥಿತಿ ತಲೆದೋರಬಹುದು ಅಥವಾ ಆರ್ಥಿಕತೆ ಕುಸಿಯಬಹುದೆಂದು ಹುಚ್ಚಾಬಟ್ಟೆಯಾಗಿ ಮಾತನಾಡಿದ್ದ ಅನೇಕ ಆರ್ಥಿಕ ತಜ್ಞರ ಭವಿಷ್ಯ ವಾಣಿಯನ್ನೂ ಸುಳ್ಳಾಗಿಸಿತ್ತು. ವಾಸ್ತವದಲ್ಲಿ ಈ ಕಾಯ್ದೆ ದೇಶದ ಬಹುತೇಕ ಗ್ರಾಮೀಣ ಪ್ರದೇಶಗಳನ್ನು ಆರ್ಥಿಕ ಕುಸಿತದ ದುಷ್ಪರಿಣಾಮಗಳಿಂದ ರಕ್ಷಿಸಿದೆ. ಕಾಯ್ದೆ ಚೆನ್ನಾಗಿ ಜಾರಿಗೊಳ್ಳದಿರುವ ಜಾಗಗಳಲ್ಲಿ ಸಹಿತ ಊಳಿಗಮಾನ್ಯ ಭೂಮಾಲಕರಿಂದ ಮತ್ತು ಗುತ್ತಿಗೆ ದಾರರಿಂದ ಕನಿಷ್ಠ ವೇತನಕ್ಕಾಗಿ ಆಗ್ರಹಿಸುವ ಬಲವನ್ನು ಅದು ಕಾರ್ಮಿಕರಿಗೆ ನೀಡಿತ್ತು. ಜನರು ಕಡಿಮೆ ಕೂಲಿಯ ಕೆಲಸಗಳನ್ನು ತಿರಸ್ಕರಿಸಿ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ಮಾಡುವ ಹಕ್ಕನ್ನು ಚಲಾಯಿಸ ತೊಡಗಿದ್ದರು.

ಜನವರಿ 1, 2009ರಂದು ಅಧಿಸೂಚನೆ ಹೊರಡಿಸಿದ ಗ್ರಾಮೀಣಾಭಿವೃದ್ಧಿ ಸಚಿವಾಲಯ, ಉದ್ಯೋಗ ಖಾತರಿ ಕಾಯ್ದೆಯಡಿ ಗರಿಷ್ಠ ವೇತನವನ್ನು 100 ರೂಪಾಯಿಗಳಿಗೆ ಸೀಮಿತಗೊಳಿಸಿತು. ಅಷ್ಟೇ

ಅಲ್ಲದೆ ಕನಿಷ್ಠ ಮಜೂರಿ 100 ರೂಪಾಯಿಗಳಿಗಿಂತ ಜಾಸ್ತಿ ಇದ್ದ ರಾಜ್ಯಗಳಲ್ಲಿ ಅದನ್ನು ಅಲ್ಲಿಗೇ ಸ್ಥಗಿತ ಗೊಳಿಸಿತು. ಕನಿಷ್ಠ ವೇತನ ನೀಡಬೇಕಾದ ಹೊಣೆಗಾರಿಕೆಯ ಬಗ್ಗೆ ಕೇಂದ್ರ ಸರಕಾರದ ತಾತ್ಸಾರ ಧೋರಣೆ ಹೀಗೆ ಸ್ಪಷ್ಟಗೊಂಡಿತು.

ನವ ಉದಾರೀಕರಣ ನೀತಿಗಳ ಪರವಿರುವ ಆರ್ಥಿಕತಜ್ಞರುಗಳೆಲ್ಲ ಕಾಯ್ದೆಯನ್ನು ರೂಪಿಸುವ ಕಾಲದಿಂದಲೂ ಕನಿಷ್ಠ ಮಜೂರಿ ವಿಷಯದಲ್ಲಿ ಕ್ಯಾತೆ ತೆಗೆದಿದ್ದರು. ಹೀಗಾಗಿ ರಾಜ್ಯನೀತಿ ಕರ್ತೃಗಳು ಕಾಯ್ದೆಯಲ್ಲಿ ಕೆಲವು "ರಕ್ಷಣಾ ಕ್ರಮ"ಗಳನ್ನು ಸೇರಿಸಿದ್ದರು. ಇವುಗಳ ಪೈಕಿ ಒಂದು ಕಲಂ ಹೀಗೆ ಹೇಳುತ್ತದೆ: "ಕನಿಷ್ಠ ವೇತನ ಕಾಯ್ದೆ, 1948ರಲ್ಲಿ ಇರುವಂತಹ ಯಾವುದೇ ಅಂಶದ ಹೊರತಾಗಿಯೂ ಕೇಂದ್ರ ಸರಕಾರ, ಸದರಿ ಉದ್ಯೋಗ ಖಾತರಿ ಕಾಯ್ದೆಯ ಉದ್ದೇಶಗಳಿಗಾಗಿ, ಒಂದು ಅಧಿಸೂಚನೆಯ ಮೂಲಕ ಕನಿಷ್ಠ ವೇತನವನ್ನು ನಿಗದಿಪಡಿಸಬಹುದು."

ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಧಿಕಾರಿಗಳು ತೆಗೆದುಕೊಂಡ ನಿಲುವಿನ ಪ್ರಕಾರ ಇದರಂತೆ ಅವರು ಎಷ್ಟೇ ಮಜೂರಿಯನ್ನು ನಿಗದಿಪಡಿಸಬಹುದು ಮತ್ತು ರಾಜ್ಯ ಸರಕಾರಗಳು ತಮ್ಮ "ಶಕ್ತ್ಯಾನುಸಾರ" ಮಜೂರಿ ನೀಡಬಹುದು. ಅದೇ ವೇಳೆ ಈ ಕಲಂ "ಕನಿಷ್ಠ ವೇತನ ಕಾಯ್ದೆ, 1948"ನ್ನು ಸಂರಕ್ಷಿಸುತ್ತದೆಂದೂ ಹೇಳಲಾಗುತ್ತಿದೆ. ಇದೊಂದು ಬಗೆಯ ಇಬ್ಬಂದಿಯ ಹೇಳಿಕೆ. ಉದಾಹರಣೆಗೆ ರಾಜಸ್ಥಾನದ ಟೋಂಕ್ ಜಿಲ್ಲೆಯಲ್ಲಿ 99 ಕಾರ್ಮಿಕರಿಗೆ ತಲಾ 1 ರೂಪಾಯಿ ದಿನಗೂಲಿ ನೀಡಿರುವುದನ್ನು ಸಮರ್ಥಿಸಿಕೊಳ್ಳಲು ಸರಕಾರ ಇದೇ ಕಲಂ ಅನ್ನು ಬಳಸಿಕೊಂಡಿದೆ.

ಜನವರಿ 1ರ ಅಧಿಸೂಚನೆ ಬಗ್ಗೆ ಜುಲೈ 10, 2009ರಂದು ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಕಾರ್ಮಿಕ ಸಚಿವಾಲಯ, ಯಾವುದೇ ಸಂದರ್ಭದಲ್ಲಿಯೂ "ಕನಿಷ್ಠ ವೇತನ ಕಾಯ್ದೆ, 1948"ರಲ್ಲಿ ನಮೂದಿಸಲಾಗಿರುವ ವೇತನಕ್ಕಿಂತ ಕಮ್ಮಿ ವೇತನ ಇರಬಾರದೆಂದು ಅಭಿಪ್ರಾಯಪಟ್ಟಿತ್ತು. ಇದನ್ನು ಸಂಪೂರ್ಣವಾಗಿ ಕಡೆಗಣಿಸಲಾಯಿತು. ಗ್ರಾಮೀಣಾಭಿವೃದ್ಧಿ ಸಚಿವಾಲಯದ ಆರ್ಥಿಕ ಸಲಹೆಗಾರ "ಉದ್ಯೋಗ ಖಾತರಿ ಕಾಯ್ದೆಯಡಿ ಪ್ರಕಟಿಸಲಾಗುವ ವೇತನದ ದರಗಳು ಕನಿಷ್ಠ ವೇತನ ಕಾಯ್ದೆ, 1948ನ್ನು ಅವಲಂಬಿಸಿಲ್ಲ" ಎಂದು ಖಚಿತವಾಗಿ ಹೇಳಿದರು.

ಇದರ ವಿರುದ್ಧ ಆಂಧ್ರ ಪ್ರದೇಶದ ಕಾರ್ಮಿಕರ ಗುಂಪುಗಳು ರಾಜ್ಯದ ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದವು. ಜನವರಿ 1ರ ಅಧಿಸೂಚನೆಗೆ ತಡೆಯಾಜ್ಞೆ ನೀಡಿದ ಉಚ್ಚನ್ಯಾಯಾಲಯ, ರಾಜ್ಯದ ಪ್ರಕಟಿತ ಕನಿಷ್ಠ ವೇತನವನ್ನು ನೀಡುವಂತೆ ರಾಜ್ಯ ಸರಕಾರಕ್ಕೆ ಆದೇಶಿಸಿತು. ಈ ವಿದ್ಯಮಾನದ ಬಳಿಕ ಕೇಂದ್ರ ಸರಕಾರ ತನ್ನ ಹೊಣೆಗಾರಿಕೆಯನ್ನು ರಾಜ್ಯ ಸರಕಾರಗಳಿಗೆ ವರ್ಗಾಯಿಸಲು ನಿರ್ಧರಿಸಿತು. ಆರ್ಥಿಕ ಸಲಹೆಗಾರ ಮತ್ತು ಹೆಚ್ಚುವರಿ ಕಾರ್ಯದರ್ಶಿ, "ಆಂಧ್ರ ಪ್ರದೇಶದ ಸರಕಾರದೊಂದಿಗೆ ನಮ್ಮ ನಿಲುವು ಹೇಗಿರಬೇಕೆಂದರೆ ಅದು ಘೋಷಿಸಿರುವ ಕನಿಷ್ಠ ಮಜೂರಿಯನ್ನು ಅದೇ ನೀಡಬೇಕಾಗುತ್ತದೆ. ಕೇಂದ್ರ ಸರಕಾರ ಉದ್ಯೋಗ ಖಾತರಿ ಕಾಯ್ದೆಯ ಸೆಕ್ಷನ್ 6(1) ಅನುಮತಿಸುವಷ್ಟು ಮೊತ್ತವನ್ನು ಮಾತ್ರ ರಾಜ್ಯ ಸರಕಾರಕ್ಕೆ ತುಂಬಿಕೊಡಬೇಕು" ಎಂಬ ಹೇಳಿಕೆ ಕೊಟ್ಟರು.

> **ದಾರಿದ್ರ್ಯ ಮತ್ತು ಶೋಷಣೆಗಳಿಂದ ಜನರಿಗೆ ಮುಕ್ತಿ ನೀಡುವ ಸಲುವಾಗಿ ರಚಿಸಲ್ಪಟ್ಟಿದೆಯೆಂದು ಹೇಳಲಾಗುತ್ತಿರುವ ಉತ್ಕೃಷ್ಟ ಮಾದರಿ ಕಾಯ್ದೆಯೊಂದು ಕನಿಷ್ಠ ವೇತನ ಕಾಯ್ದೆಯನ್ನು ಹೊಸಕಿಹಾಕುತ್ತಿರುವುದು ಒಂದು ವ್ಯಂಗ್ಯವೇ ಸರಿ. ಸಚಿವಾಲಯದ ವೇತನ ನೀತಿಗಳ ಪರಿಣಾಮವಾಗಿ ವರ್ಷಕ್ಕೆ ಕನಿಷ್ಠ 100 ದಿನಗಳ ಕೆಲಸ ಮತ್ತು ಶೋಷಣೆಯಿಂದ ಮುಕ್ತವಾಗಿರುವ ವೇತನ ದರಗಳೆಂಬ ಉದ್ಯೋಗ ಖಾತರಿ ಕಾಯ್ದೆಯ ಎರಡು ಗುರಿಗಳೂ ದುರ್ಬಲಗೊಳ್ಳುತ್ತಿವೆ. ಸರಕಾರದ ಕಲ್ಪನೆಯಲ್ಲಿ ಮಾನವೀಯತೆಯ ಮುಖವುಳ್ಳ ಆರ್ಥಿಕ ಅಭಿವೃದ್ಧಿ ಅಂದರೆ ಮುಳುಗುತ್ತಿರುವ ಜನತೆಯ ಮೂಗನ್ನು ಮಾತ್ರ ನೀರಿನ ಮಟ್ಟದಿಂದ ಮೇಲಿರಿಸುವುದೆಂದು ಆಗಿರಬಹುದು. ಈ ಬೂಟಾಟಿಕೆಗಳೆಲ್ಲ ಕೊನೆಗೊಳ್ಳಬೇಕಿದೆ. ದೇಶ ವೀಗ ಬಾಹ್ಯದ ಥಳಕು ಪಳಕಿನಡಿಯಲ್ಲಿ ಅನ್ಯಾಯ ಮತ್ತು ಅಸಮಾನತೆಗಳು ಇರಬೇಕೇ ಎಂಬುದನ್ನು ನಿರ್ಧರಿಸ ಬೇಕಾಗಿದೆ.**

ಮಜೂರಿ ನೀಡಲು ತಮ್ಮಲ್ಲಿ ಸಾಕಷ್ಟು ಹಣವಿಲ್ಲವೆಂದ ರಾಜ್ಯ ಸರಕಾರಗಳು ಈಗ ಉದ್ಯೋಗ ಖಾತರಿ ಯೋಜನೆಯ ಸೆಕ್ಷನ್ 22(1)ರಂತೆ ವೇತನದ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರಕಾರವೇ ಭರಿಸಬೇಕಾಗಿದೆಯೆಂದು ಹೇಳುತ್ತಿವೆ. ಅತ್ತ ಕೇಂದ್ರ ಸರಕಾರ ತಾನು ಪ್ರಕಟಿಸಿರುವುದಕ್ಕಿಂತ ಜಾಸ್ತಿ ವೇತನ ಕೊಡಲು ಸಿದ್ಧವಿಲ್ಲ. ಇದರ ಪರಿಣಾಮ ಕಾರ್ಮಿಕರ ಮಜೂರಿಯಲ್ಲಿ ಕಡಿತ. ಆಂಧ್ರ ಪ್ರದೇಶ, ಕೇರಳ, ಬಿಹಾರ, ಹಿಮಾಚಲ ಪ್ರದೇಶ, ಕರ್ನಾಟಕ, ಜಾರ್ಖಂಡ, ಛತ್ತೀಸ್‌ಗಢ ಹಾಗೂ ರಾಜಸ್ಥಾನದಲ್ಲಿ ಉದ್ಯೋಗ ಖಾತರಿ ಯೋಜನೆಯ ಕಾರ್ಮಿಕರಿಗೆ ಕನಿಷ್ಠ ವೇತನಕ್ಕಿಂತಲೂ ಕಮ್ಮಿ ಮಜೂರಿ ನೀಡಲಾಗುತ್ತಿದೆ. ಹೀಗೆ ಮಾಡುವುದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು "ನ್ಯಾಯಾಂಗ ನಿಂದನೆಯ ಆರೋಪದ ಅಪಾಯ ಎದುರಿಸುತ್ತಿವೆ"ಯೆಂದು ಆಂಧ್ರ ಸರಕಾರ ಆಗಸ್ಟ್ 12, 2009ರಂದು ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಪತ್ರ ಮುಖೇನ ತಿಳಿಸಿತು. ಆದರೂ ಸಚಿವಾಲಯ ಕಿವುಡರಂತೆ ವರ್ತಿಸುತ್ತಿದೆ.

"ಕೇಂದ್ರ ಉದ್ಯೋಗ ಖಾತರಿ ಮಂಡಳಿ"ಯು ವೇತನಗಳ ಪರಿಶೀಲನೆಗಾಗಿ ಸಮಿತಿಯೊಂದನ್ನು ನೇಮಿಸಿತ್ತು. ಹೆಚ್ಚುವರಿ ಸಾಲಿಸಿಟರ್ ಜನರಲ್ ಇಂದಿರಾ ಜೈಸಿಂಘ್ ಸದರಿ ಸಮಿತಿಗೆ ಕಾಯ್ದೆಯ ಸೆಕ್ಷನ್ 6(1)ರ ಕುರಿತಂತೆ ನೀಡಿರುವ ಅಭಿಪ್ರಾಯದ ಪ್ರಕಾರ "ಕೇಂದ್ರ ಸರಕಾರ ಇಂತಹದೊಂದು ಕಲಂಅನ್ನು ಬಳಸಿಕೊಂಡು ಕನಿಷ್ಠ ವೇತನ ಕಾಯ್ದೆ 1948ರಲ್ಲಿ ಹೇಳಿರುವುದಕ್ಕಿಂತಲೂ ಕಮ್ಮಿ ವೇತನವನ್ನು ನಿಗದಿ ಪಡಿಸಲು ಸಾಧ್ಯವಿಲ್ಲ. ಅದು ಬಲಾತ್ಕಾರದ ದುಡಿಮೆಯಾಗುತ್ತದೆ." ಸಮಿತಿ ಈ ಸಲಹೆಯನ್ನು ಆಧಾರವಾಗಿಟ್ಟುಕೊಂಡು, 'ಯಾವುದೇ ಸಂದರ್ಭದಲ್ಲೂ ಕನಿಷ್ಠ ವೇತನ ಕಾಯ್ದೆ 1948ರ ಕರಾರುಗಳನ್ನು ಮೀರಬಾರದು ಮತ್ತು ಸೆಕ್ಷನ್ 6(1)ರಡಿ ಹೊರಡಿಸಿದ ಉದ್ಘೋಷಣೆಯನ್ನು ಹಿಂತೆಗೆದುಕೊಳ್ಳಬೇಕೆ'ಂದು ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ತುರ್ತು ಶಿಫಾರಸು ಮಾಡಿತು. ಇದಕ್ಕೆ ಗ್ರಾಮೀಣಾಭಿವೃದ್ಧಿ ಸಚಿವಾಲಯ "ಇದನ್ನು ಕಾರ್ಯಗತಗೊಳಿಸಲು ಅಸಾಧ್ಯ. ಸೆಕ್ಷನ್ 6(1)ರ ಅಡಿ ಯಲ್ಲಿ ನಿಗದಿ ಪಡಿಸಲಾಗುವ ವೇತನದ ದರಗಳು ಕನಿಷ್ಠ ವೇತನ ಕಾಯ್ದೆಯ ದರಗಳಿಗಿಂತ ವಿಭಿನ್ನವಾಗಿವೆ. ಉದ್ಯೋಗ ಖಾತರಿ ಕಾಯ್ದೆಯಲ್ಲಿನ ನಿಬಂಧನೆಗಳನ್ನು ಮನ್ನಿಸಬೇಕಾಗುತ್ತದೆ" ಎಂದು ಉತ್ತರಿಸಿತು. ಇದರರ್ಥ ತಾನು ಇದೇ ಮಟ್ಟದ ಗೌರವವನ್ನು ಕನಿಷ್ಠ ವೇತನ ಕಾಯ್ದೆ, ಸರ್ವೋಚ್ಚ ಹಾಗೂ ಉಚ್ಚನ್ಯಾಯಾಲಯ ಮತ್ತು ಸಂವಿಧಾನಗಳಿಗೆ ಕೂಡಾ ತೋರಿಸುವ ಅಗತ್ಯವಿಲ್ಲವೆಂದು ಸಚಿವಾಲಯ ಭಾವಿಸುತ್ತಿದೆ.

ಇಲ್ಲಿ, ದಾರಿದ್ರ್ಯ ಮತ್ತು ಶೋಷಣೆಗಳಿಂದ ಜನರಿಗೆ ಮುಕ್ತಿ ನೀಡುವ ಸಲುವಾಗಿ ರಚಿಸಲ್ಪಟ್ಟಿದೆಯೆಂದು ಹೇಳಲಾಗುತ್ತಿರುವ ಉತ್ಕೃಷ್ಟ ಮಾದರಿ ಕಾಯ್ದೆಯೊಂದು ಕನಿಷ್ಠ ವೇತನ ಕಾಯ್ದೆಯನ್ನು ಹೊಸಕಿಹಾಕುತ್ತಿರುವುದು ಒಂದು ವ್ಯಂಗ್ಯವೇ ಸರಿ. ಸಚಿವಾಲಯದ ವೇತನ ನೀತಿಗಳ ಪರಿಣಾಮವಾಗಿ ವರ್ಷಕ್ಕೆ ಕನಿಷ್ಠ 100 ದಿನಗಳ ಕೆಲಸ ಮತ್ತು ಶೋಷಣೆಯಿಂದ ಮುಕ್ತವಾಗಿರುವ ವೇತನ ದರಗಳೆಂಬ ಉದ್ಯೋಗ ಖಾತರಿ ಕಾಯ್ದೆಯ ಎರಡು ಗುರಿಗಳೂ ದುರ್ಬಲಗೊಳ್ಳುತ್ತಿವೆ.

ಸರಕಾರದ ಕಲ್ಪನೆಯಲ್ಲಿ ಮಾನವೀಯತೆಯ ಮುಖವುಳ್ಳ ಆರ್ಥಿಕ ಅಭಿವೃದ್ಧಿ ಅಂದರೆ ಮುಳುಗುತ್ತಿರುವ ಜನತೆಯ ಮೂಗನ್ನು ಮಾತ್ರ ನೀರಿನ ಮಟ್ಟದಿಂದ ಮೇಲಿರಿಸುವುದೆಂದು ಆಗಿರಬಹುದು. ಆದರೆ ಅತ್ತ ನೋಡಿದರೆ ಅದಕ್ಕ "ಉಕ್ಕಿನ ಚೌಕಟ್ಟಿ"ಗೆ ಆರು ತಿಂಗಳ ಅವಧಿಗೆ ಶೇಕಡಾ 10ರಷ್ಟು ತುಟ್ಟಿಭತ್ಯೆ ಕ್ಷಣಮಾತ್ರದಲ್ಲಿ ಲಭಿಸುತ್ತದೆ.

ಈ ಬೂಟಾಟಿಕೆಗಳೆಲ್ಲ ಕೊನೆಗೊಳ್ಳಬೇಕಿದೆ. ದೇಶ ವೀಗ ಬಾಹ್ಯದ ಥಳಕು ಪಳಕಿನಡಿಯಲ್ಲಿ ಅನ್ಯಾಯ ಮತ್ತು ಅಸಮಾನತೆಗಳು ಇರಬೇಕೇ ಎಂಬುದನ್ನು ನಿರ್ಧರಿಸಬೇಕಾಗಿದೆ. ಗೋಡೆ ಮೇಲಿನ ಬರಹ ಸ್ಪಷ್ಟವಿದೆ ಮೂಲಭೂತ ಹಕ್ಕುಗಳ ಅವಿರತ ಸವೆತ ಮತ್ತು ಅಸೂಕ್ಷ್ಮತೆಗಳು ಅಂತಿಮವಾಗಿ ಸಂಘರ್ಷ ಮತ್ತು ಹಿಂಸೆಯ ಕಡೆಗೆ ಕೊಂಡೊಯ್ಯುತ್ತವೆ. ಎರಡೂ ಕಾಯ್ದೆಗಳು "ಕನಿಷ್ಠ ಕ್ರಮಗಳಾ"ಗಿದ್ದು ಅವುಗಳನ್ನು ಪರಸ್ಪರ ಪೂರಕವಾಗಿ, ಒಂದು ಇನ್ನೊಂದನ್ನು ಬಲಗೊಳಿಸುವ ರೀತಿಯಲ್ಲಿ ಬಳಸಬೇಕಾಗಿದೆ.

ತನ್ನ ಪ್ರಜೆಗಳ ಪೈಕಿ ಅತ್ಯಂತ ವಂಚಿತ ವರ್ಗಗಳಿಗೆ ಕನಿಷ್ಠ ವೇತನ ನೀಡುವುದು ಸರಕಾರದ ಧರ್ಮವಾಗಿರುತ್ತದೆ. ಭಾರತಕ್ಕೆ ಆರ್ಥಿಕ ಸೂಪರ್‌ಪವರ್‌ನ ಸ್ಥಾನಮಾನ ನೀಡಬೇಕೆಂಬ ಒತ್ತಾಯಗಳು ಕೇಳಿಬರುತ್ತಿರುವ ಇಂದಿನ ಸಂದರ್ಭದಲ್ಲಿ ಕೇಂದ್ರ ಸರಕಾರ ತನ್ನ ಈ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದಕ್ಕೆ ಯಾವುದೇ ನೈತಿಕ ಆಧಾರವಾಗಲಿ, ಯಾವುದೇ ತಾರ್ಕಿಕ ಆಧಾರವಾಗಲಿ ಇಲ್ಲ.

ಕೃಪೆ: ("ದ ಹಿಂದೂ") ☐

ಒಂದು ಕೊಳ್ಳದ ಮೋಡ-ಮಿಂಚುಗಳ ಸುತ್ತಮುತ್ತ

ಮ. ಶ್ರೀ. ಮುರಳಿ ಕೃಷ್ಣ

ಭೂಪಾಲ್ ಅನಿಲ ದುರಂತ ಜರುಗಿದ್ದು 1948ರಲ್ಲಿ. ಈ ಕರಾಳ ಘಟನೆ ಸಂಭವಿಸಿ ಇಪ್ಪತ್ತೈದು ವರ್ಷಗಳಾದರೂ ಅದರ ಸಂತ್ರಸ್ತರಿಗೆ ಇನ್ನೂ ನ್ಯಾಯ ಮರೀಚಿಕೆಯಾಗೇ ಉಳಿದಿದೆ. ಅವರಿಗೆ ನ್ಯಾಯಯುತವಾಗಿ ದೊರಕಬೇಕಿದ್ದ ಪರಿಹಾರಗಳು ಗಗನಕುಸುಮಗಳಾಗಿವೆ. ಆದರೆ ಕಾರ್ಯಕರ್ತರ ಹೋರಾಟಗಳು ಮುಂದುವರೆಯುತ್ತಿವೆ. ಈ ಹೃದಯವಿದ್ರಾವಕ ಘಟನೆ ಜರುಗಿ ಇಪ್ಪತ್ತೈದು ವರ್ಷಗಳಾದುದರ ಹಿನ್ನೆಲೆಯಲ್ಲಿ ಕಳೆದ ವರ್ಷ (೨೦೦೯) ರಾಷ್ಟ್ರಾದ್ಯಂತ ಹಲವು ವೇದಿಕೆಗಳಲ್ಲಿ ಚರ್ಚೆಗಳು ವಿಷಯ-ವಿನಿಮಯಗಳು ನಡೆದವು. ಸಂತ್ರಸ್ತರಿಗೆ ಸೂಕ್ತ ಪರಿಹಾರಗಳು ದೊರಕುವ ದಿಶೆಯಲ್ಲಿ ನಿರತವಾಗಿರುವ ಹೋರಾಟಗಳ ಕುರಿತು ವಿಮರ್ಶೆಗಳು ಜರುಗಿದವು. ಹಾದಿ ದುರ್ಗಮವಾಗಿದ್ದರೂ, ದಿಕ್ಸೂಚಿಯಾಗಿರುವ ಆಂದೋಳನದ ಜ್ಯೋತಿ ನಂದಿಲ್ಲ.

ಪ್ರಸ್ತುತ ನರ್ಮದಾ ಬಚಾವ್ ಆಂದೋಳನ ಪ್ರಾರಂಭವಾಗಿ ಇಪ್ಪತ್ತೈದು ವರ್ಷಗಳಾಗಿವೆ. ಈ ಆಂದೋಳನದಲ್ಲಿ ಜನ ಸವೆಸಿದ ಹಾದಿ, ಎದುರಿಸಿದ ಸವಾಲುಗಳು, ಎತ್ತಿದ ಪ್ರಶ್ನೆಗಳು, ಸಂವೇದನೆಯನ್ನು ಬಡಿದೆಬ್ಬಿಸುವ, ಅರಿವನ್ನು ವಿಸ್ತರಿಸುವ ಮನಕರಗಿಸುವ ಒಂದು ರೋಚಕ ಕಥೆಯೇ ಸರಿ. ಭಾರತದ ಪ್ರಮುಖ ನದಿಗಳಲ್ಲಿ ನರ್ಮದಾ ಸಹ ಒಂದು. ಇದು ಹಿಂದೂಗಳಿಗೆ 'ಪರಮಾನಂದ ನೀಡುವ' ನದಿಯಾಗಿದೆ. ಪರಮೇಶ್ವರನ ಶರೀರದಿಂದ ಉದ್ಭವಿಸಿದೆ ಎಂದು ನಂಬಲಾಗುವ ಈ ನದಿಯ ಕಿನಾರೆಯಲ್ಲಿ ಸಿಗುವ ಕಲ್ಲುಗಳೆಲ್ಲವೂ ಶಿವಲಿಂಗಗಳೆಂದೇ ಅವರು ಪರಿಗಣಿಸುತ್ತಾರೆ. ಈ ನದಿಯ ತೀರದಲ್ಲಿ ವಾಸಿಸುವ ಜನರಿಗೆ ಇದು ಗಂಗೆಗಿಂತಲೂ ಹೆಚ್ಚು ಪವಿತ್ರ ಸ್ಥಳ. ಪುರಾಣದ ಪ್ರಕಾರ ಗಂಗೆ ಪ್ರತಿ ವರ್ಷ ನರ್ಮದಾ ನದಿಯಲ್ಲಿ ಮೀಯುತ್ತಾಳೆ. ಒಂದು ಕಡು ಕಪ್ಪು ವರ್ಣದ ಗೋವಿನ ರೂಪದಲ್ಲಿ ಬರುವ ಗಂಗೆ ಪರಿಶುದ್ಧವಾದ ಶ್ವೇತಧಾರಿಯಾಗಿ ತನ್ನ ಪಾಪಗಳನ್ನು ಕಳೆದುಕೊಂಡು ಹಿಂದಿರುಗುತ್ತಾಳೆ. ಒಂದು ಹಿಂದೂ ಗಾದೆಯ ಪ್ರಕಾರ ಒಂದು ಗರಗಸ ಮರದ ಕೊರಡನ್ನು ಕತ್ತರಿಸುವಂತೆ ಪವಿತ್ರ ನರ್ಮದೆಯ ದರ್ಶನದಿಂದಲೇ ಮಾನವನೊಬ್ಬನ ಪಾಪಗಳು ನಿವಾರಣೆಗೊಳ್ಳುತ್ತವೆ. ನರ್ಮದಾ ಕಣಿವೆಯ ಒಂದು ವಿಶಿಷ್ಟ ಹಿಂದೂ ವಿಧಿಯೆಂದರೆ ಅದು ಪರಿಕ್ರಮ. ಭಕ್ತಾಧಿಗಳು ನದಿಯನ್ನು ಕಾಲ್ನಡಿಗೆಯ ಮೂಲಕ ಒಂದು ಸುತ್ತು ಬಂದಾಗ ಈ ಪರಿಕ್ರಮ ಕೊನೆಗೊಳ್ಳುತ್ತದೆ.

ವಿಶ್ವದ ಇತರ ಪ್ರಮುಖ ನದಿಗಳ ಜೊತೆ ನಾಗರೀಕತೆಗಳು ತಳಕು ಹಾಕಿಕೊಂಡಿರುವಂತೆ ನರ್ಮದಾ ನದಿಯ ತೀರದಲ್ಲೂ ತಲೆ ತಲಾಂತರಗಳಿಂದ ಒಂದು ಸಂಪದ್ಭರಿತವಾದ ನಾಗರೀಕತೆ ನೆಲೆ ನಿಂತಿದೆ. ಅಲ್ಲಿ ವಾಸಿಸುತ್ತ ಬಂದಿರುವ ಜನರು ಈ ನದಿಯ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ನರ್ಮದಾ ನದಿಯನ್ನು ನೀರಾವರಿ ಯೋಜನೆಗಳಿಗಾಗಿ ಬಳಸಬೇಕೆಂಬ ಆಲೋಚನೆ ಹುಟ್ಟಿದ್ದು ೧೯೪೬ರಲ್ಲಿ. ಪ್ರಾರಂಭಿಕ ಅಧ್ಯಯನಗಳ ನಂತರ ಈಗಿನ ಗುಜರಾತ್ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳ ಪ್ರಾಂತ್ಯಗಳು ನೀರಿನ ಹಂಚಿಕೆಯ ವಿಷಯದಲ್ಲಿ ತಕರಾರುಗಳನ್ನು ಎತ್ತಿದವು. ೧೯೬೯ರಲ್ಲಿ ನರ್ಮದಾ ಜಾಲ ವಿವಾದಗಳ ಟ್ರಿಬ್ಯುನಲ್‌ನ್ನು ರಚಿಸಲಾಯಿತು. ಅದು ೧೯೭೮ರಲ್ಲಿ ತನ್ನ ವರದಿಯನ್ನು ನೀಡಿತು. ನಂತರವೇ ಅಂತಿಮ ಯೋಜನೆ ಆರ್ಥಿಕ ಹಂಚಿಕೆ-ಯೋಜನೆಯ ಕೆಲಸ ಶುರುವಾದದ್ದು.

ಈ ನರ್ಮದಾ ಕಣಿವೆ ಪ್ರಯೋಜನೆಯ (ಎನ್‌ವಿಪಿ) ಭಾಗವಾಗಿರುವ ಸರ್ದಾರ್ ಸರೋವರ ಯೋಜನೆಯೇ ಇಂಡಿಯಾದ ನದಿ ಕಣಿವೆ ಪ್ರಯೋಜನೆಗಳಲ್ಲಿ ಅತಿ ದೊಡ್ಡದಾದದ್ದು. ಎನ್‌ವಿಪಿಯಡಿ ೩೦ ದೊಡ್ಡ (೧೦ ನರ್ಮದಾ ನದಿ ಮತ್ತು ಉಳಿದವು ಅದರ ಉಪನದಿಗಳ ಮೇಲೆ) ೧೩೫ ಮಧ್ಯಮ ಮತ್ತು ೩೦೦೦ ಸಣ್ಣ ಅಣೆಕಟ್ಟುಗಳನ್ನು ಕಟ್ಟಲು ಟ್ರಿಬ್ಯುನಲ್ ನಿರ್ದೇಶನ ನೀಡಿತು. ಸರ್ದಾರ್ ಸರೋವರ್ ಯೋಜನೆ. ಪ್ರಧಾನಿ ಜವಹರ್ ಲಾಲ್ ನೆಹರುರವರ ಆಡಳಿತಾವದಿಯಲ್ಲಿ ೧೯೬೧ರಲ್ಲೇ ಪ್ರಾರಂಭವಾಯಿತು.

ಆದರ ಅದಕ್ಕೆ ೧೯೮೫ರಲ್ಲಿ ವಿಶ್ವ ಬ್ಯಾಂಕ್ ಆರ್ಥಿಕ ಸಹಾಯ ಘೋಷಿಸಿದಾಗಲೇ ಸರಿಯಾದ ಚಾಲನೆ ದೊರಕಿದ್ದು. ಈ ಯೋಜನೆಯಿಂದ ಮಹಾರಾಷ್ಟ್ರ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳ ಸುಮಾರು ೫ಕೋಟಿ ಮಂದಿಗೆ ಕುಡಿಯುವ ನೀರು, ೬೦ ಲಕ್ಷ ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಸೌಲಭ್ಯ ಮತ್ತು ೧೯೫೦ ಮೆಗಾ ವ್ಯಾಟ್ಸ್ ವಿದ್ಯುತ್ ಲಭ್ಯವಾಗುವುದೆಂದು ಸರ್ಕಾರದ ಅಂಕಿ-ಅಂಶಗಳು ಸೇರಿದವು.



ವಿಶ್ವದ ಇತರ ಪ್ರಮುಖ ನದಿಗಳ ಜೊತೆ ನಾಗರೀಕತೆಗಳು ತಳಕು ಹಾಕಿಕೊಂಡಿರುವಂತೆ ನರ್ಮದಾ ನದಿಯ ತೀರದಲ್ಲೂ ತಲೆ ತಲಾಂತರಗಳಿಂದ ಒಂದು ಸಂಪದ್ಭರಿತವಾದ ನಾಗರೀಕತೆ ನೆಲೆ ನಿಂತಿದೆ. ಅಲ್ಲಿ ವಾಸಿಸುತ್ತ ಬಂದಿರುವ ಜನರು ಈ ನದಿಯ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ನರ್ಮದಾ ನದಿಯನ್ನು ನೀರಾವರಿ ಯೋಜನೆಗಳಿಗಾಗಿ ಬಳಸಬೇಕೆಂಬ ಆಲೋಚನೆ ಹುಟ್ಟಿದ್ದು ೧೯೪೬ರಲ್ಲಿ. ಪ್ರಾರಂಭಿಕ ಅಧ್ಯಯನಗಳ ನಂತರ ಈಗಿನ ಗುಜರಾತ್ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳ ಪ್ರಾಂತ್ಯಗಳು ನೀರಿನ ಹಂಚಿಕೆಯ ವಿಷಯದಲ್ಲಿ ತಕರಾರುಗಳನ್ನು ಎತ್ತಿದವು. ೧೯೬೯ರಲ್ಲಿ ನರ್ಮದಾ ಜಾಲ ವಿವಾದಗಳ ಟ್ರಿಬ್ಯುನಲ್‌ನ್ನು ರಚಿಸಲಾಯಿತು.

ಅಲ್ಲದೆ ಸುಮಾರು ೨೭.೦೦೦ ಕುಟುಂಬಗಳು ಅಥವಾ ೧,೫೨,೦೦೦ ಜನ ನಿರ್ವಸತಿ ಗೊಳ್ಳುವರೆಂದು ಸರ್ಕಾರ ಬಹಿರಂಗಗೊಳಿಸಿತು ಸರ್ದಾರ್ ಸರೋವರ್ ಯೋಜನೆ (ಎಸ್‌ಎಸ್‌ಪಿ) ಕುರಿತು ೧೯೭೦ರಲ್ಲೇ ಅಪಸ್ವರಗಳು ಎದ್ದವು. ನಂತರ ೧೯೮೦ರ ದಶಕದ ಮಧ್ಯಭಾಗದಲ್ಲಿ ಕೇಂದ್ರ ಸರ್ಕಾರದ ಪರ್ಯಾವರಣ ಮತ್ತು ಅರಣ್ಯ ಇಲಾಖೆ ಎಸ್‌ಎಸ್‌ಪಿ ಮತ್ತು ನರ್ಮದಾ ಸಾಗರ್ ಅಣೆಕಟ್ಟುಗಳ ಬಗೆಗೆ ನಡೆಸಿದ ಅಧ್ಯಯನಗಳು ಸಮರ್ಪಕವಾಗಿಲ್ಲವೆಂದು ಸಾರಿ, ಅವುಗಳಿಗೆ ಪರ್ಯಾವರಣ ತೀರುವಳಿಯನ್ನು ನೀಡಲು ನಿರಾಕರಿಸಿತು.

ಆದರೆ ಅಂದಿನ ಪ್ರಧಾನಿ ರಾಜೀವ ಗಾಂಧಿಯ ಮಧ್ಯಪ್ರವೇಶದಿಂದ ಯೋಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಮುಂದುವರೆದವು. ಆಗ ಗುಜರಾತಿನ ಕೆಲವು ಸರ್ಕಾರೇತರ ಸಂಸ್ಥೆಗಳು ಮತ್ತು ಸಾಮಾಜಿಕ ಕ್ರಿಯಾಶೀಲ ಗುಂಪುಗಳು ತಮ್ಮ ದನಿಯನ್ನು ಎತ್ತಿದವು. ೧೯೮೫ರಲ್ಲಿ ಮುಂಬೈನ ಟಾಟಾ ಇನ್ಸ್ಟಿಟ್ಯೂಟ್ ಫಾರ್ ಸೋಷಿಯಲ್ ಸ್ಟಡೀಸ್‌ನ ಸಮಾಜಶಾಸ್ತ್ರಜ್ಞೆ ಮೇಧಾ ಪಾಟ್ಕರ್ ಅಣೆಕಟ್ಟುಗಳ ವಿರೋಧಿಗಳ ಜೊತೆ ಕೈಜೋಡಿಸಿದರು. ಆಗ 'ನರ್ಮದಾ ಬಚಾವ್ ಆಂದೋಲನ' ಅಸ್ತಿತ್ವಕ್ಕೆ ಬಂದಿತು ಇದು ಮುಳುಗಡೆ ಪ್ರದೇಶಗಳ ಅಧ್ಯಯನ, ಅಲ್ಲಿನ ಜನರಿಗೆ (ಆದಿ ವಾಸಿಗಳನ್ನು ಒಳಗೊಂಡಂತೆ) ಜಾಗೃತಿ, ಅದರ ಹಕ್ಕುಗಳ ರಕ್ಷಣೆಗಾಗಿ ಪ್ರತಿರೋಧ ಮುಂತಾದ ಹತ್ತು ಹಲವು ವಿಷ ಯಗಳ ಬಗೆಗೆ ಶ್ರಮಿಸಲು ಶುರುಮಾಡಿತು. ಎಸ್‌ಎಸ್‌ಪಿ ಯೋಜನೆಯಿಂದ ಸುಮಾರು ೩೭,೦೦೦ ಹೆಕ್ಟರುಗಳಷ್ಟು ಭೂಮಿಯ ಮುಳುಗಡೆಯಾಗಿ ಸುಮಾರು ೩ಲಕ್ಷಕ್ಕೂ ಹೆಚ್ಚಿನ ಜನರು ನಿರಾಶ್ರಿತರಾಗುತ್ತಾರೆಂದು ಆಂದೋಳನ ನೆಡೆಸಿದ ಅಧ್ಯಯನಗಳು ಸಾರಿದವು.

ಹಾನಿಗೊಳಗಾಗುವ ಜನರಲ್ಲಿ ಹೆಚ್ಚಿನವರು ಆದಿವಾಸಿಗಳು ಎಂಬ ಅಂಶದ ಬಗೆಗೆ ಬೆಳಕನ್ನು ಚೆಲ್ಲಿತ್ತು. ಗುಜರಾತಿನ ಕಚ್ ಪ್ರದೇಶ ಬರಡು ಭೂಮಿಯೆಂದೇ ಗುರುತಿಸಲಾಗುತ್ತದೆ. ಎಸ್‌ಎಸ್‌ಪಿಯಿಂದ ಈ ಪ್ರದೇಶದ ನೀರಿನ ಬವಣೆಗಳು ನಿವಾರಣೆಗೋಳ್ಳುವುದೆಂದು ಸರ್ಕಾರ ಟಾಂಟಾಂ ಮಾಡಿತ್ತು. ಆದರೆ ಈ ಪ್ರಾಂತ್ಯದ ಶೇ೧೦ ಪ್ರದೇಶಕ್ಕೂ ಎಸ್‌ಎಸ್‌ಪಿ ನೀರುಣಿಸುವುದಿಲ್ಲ ಎಂಬ ವಿವಾದದ ಬಗೆಗೆ ಆಂದೋಳನ ಒತ್ತು ನೀಡುತು. ಅಲ್ಲದೆ ಈ ಯೋಜನೆಯ ಫಲಗಳು ತಲುಪುವುದು ಶ್ರೀಮಂತ – ಮಧ್ಯಮ ರೈತರಿಗೆ ಮಾತ್ರ ಎಂದೂ ಅದು ಸಾರಿತು.

ನಿಧಾನವಾಗಿ ನರ್ಮದಾ ಬಚಾವ್ ಆಂದೋಲನ ಜನಬೆಂಬಲವನ್ನು ಪಡೆಯುತ್ತ ಮುಂದೆ ಸಾಗಿತು. ಎಸ್ ಎಸ್ ಪಿ ವಿರುದ್ಧದ ಹೋರಾಟದಲ್ಲಿ ಸ್ಥಳಿಯ ಆದಿವಾಸಿಗಳ ಜೊತೆ ಭಾರತದ ಇತರ ಪ್ರಾಂತ್ಯಗಳ ಸಾಮಾಜಿಕ ಕಾರ್ಯಕರ್ತರು, ಜನಪರ ಬುದ್ಧಿಜೀವಿಗಳು ಮತ್ತು ಇತರ ಸಂಘ ಸಂಸ್ಥೆಗಳು ಭಾಗಿಯಾದವು. ಅನೇಕ ಯುವಜನರು ಆಂದೋಳನದ ಪ್ರಮುಖ ಘಟ್ಟಗಳಲ್ಲಿ ನರ್ಮದಾ ಕಣಿವೆಯಲ್ಲಿ ವಾಸ್ತವ್ಯ ಹೂಡಿ ಆದಿವಾಸಿಗಳ ಜೊತೆ ಬೆರೆತರು; ಅವರ ಪ್ರತಿರೋಧದ ದನಿಗಳಿಗೆ ದನಿಗೂಡಿಸಿದರು. ಸಾಂತ್ವನವನ್ನು ನೀಡಿದರು, ಭರವಸೆಯನ್ನೂ ತುಂಬಿದರು.

ನರ್ಮದಾ ಬಚಾವ್ ಆಂದೋಳನದ ಹೋರಾಟಗಳಿಗೆ ಮೂರು ತರಹದ ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ ಗಳು)/ಸಾಮೂಹಿಕ ಸಂಘಟನೆಗಳು ನೆರವನ್ನು ನೀಡಿದವು. ನಗರ ಪ್ರದೇಶದ ಈ ಸಂಸ್ಥೆಗಳು ಆಂದೋಳನದ ಮಾಹಿತಿಗಳನ್ನು ಪತ್ರಿಕಾ ಗೋಷ್ಠಿಗಳು, ಸುದ್ದಿಪತ್ರಗಳು, ಕರಪತ್ರಗಳು, ಸಾಕ್ಷ್ಯ ಚಿತ್ರಗಳು ಮತ್ತು ಹಣ ಸಂಗ್ರಹಣೆಯ ಮೂಲಕ ಐಕಮತ್ಯ ವ್ಯಕ್ತಪಡಿಸಿದವು. ಗ್ರಾಮೀಣ ಮೂಲದ ಸಾಮೂಹಿಕ ಸಂಘಟನೆಗಳು ತಮ್ಮ ಕಾರ್ಯಕರ್ತರನ್ನು ನರ್ಮದಾ ಕೊಳ್ಳದ ಆಂದೋಳನದ ಹೋರಾಟಗಳಿಗೆ ಕಳುಹಿಸಿದವು. ಅಂತರರಾಷ್ಟ್ರೀಯ ಮಟ್ಟದಲ್ಲಿ, ಎನ್‌ಜಿಒ ಗಳು ವಿಶ್ವಮಟ್ಟದ ಆರ್ಥಿಕ ಸಂಸ್ಥೆಗಳು ಎಸ್‌ಎಸ್‌ಪಿಗೆ ನೀಡುತ್ತಿದ್ದ ಧನ ಸಹಾಯದ ವಿರುದ್ಧ ಪ್ರತಿಭಟಿಸಿದವು.

> **ಗ್ರಾಮೀಣ ಮೂಲದ ಸಾಮೂಹಿಕ ಸಂಘಟನೆಗಳು ತಮ್ಮ ಕಾರ್ಯಕರ್ತರನ್ನು ನರ್ಮದಾ ಕೊಳ್ಳದ ಆಂದೋಳನದ ಹೋರಾಟಗಳಿಗೆ ಕಳುಹಿಸಿದವು. ಅಂತರರಾಷ್ಟ್ರೀಯ ಮಟ್ಟದಲ್ಲಿ, ಎನ್ ಜಿ ಒಗಳು ವಿಶ್ವ ಮಟ್ಟದ ಆರ್ಥಿಕ ಸಂಸ್ಥೆಗಳು ಎಸ್‌ಎಸ್‌ಪಿ ನೀಡುತ್ತಿದ್ದ ಧನ ಸಹಾಯದ ವಿರುದ್ಧ ಪ್ರತಿಭಟಿಸಿದವು. ಇವುಗಳ ಒತ್ತಡದಿಂದ ವಿಶ್ವ ಬ್ಯಾಂಕ್ ಜೂನ್ 1992ರಲ್ಲಿ ಒಂದು ಸ್ವತಂತ್ರ ತಂಡವನ್ನು ರಚಿಸಿ, ಎಸ್‌ಎಸ್‌ಪಿಯಿಂದಾಗುವ ಪರ್ಯಾವರಣ ಮತ್ತು ನಿರ್ವಸತಿ ಪರಿಣಾಮಗಳ ಪರಾಮರ್ಶೆ ಮಾಡಬೇಕೆಂದು ತಾಕೀತು ಮಾಡಿತು. ಈ ತಂಡದ ವರದಿ ಎಸ್‌ಎಸ್‌ಪಿಯ ನಕಾರಾತ್ಮಕ ಪರಿಣಾಮಗಳನ್ನು ಎತ್ತಿ ಹಿಡಿಯಿತು. ಕೊನೆಗೆ ಮಾರ್ಚಿ 1993ರಲ್ಲಿ ವಿಶ್ವ ಬ್ಯಾಂಕ್ ಎಸ್‌ಎಸ್‌ಪಿಗೆ ನೀಡುತ್ತಿದ್ದ ಧನ ಸಹಾಯಕ್ಕೆ ಕೆಂಪು ನಿಶಾನೆ ತೋರಿಸಿತು ಇದೊಂದು ಅಭೂತಪೂರ್ವ ಘಟನೆಯಾಗಿತ್ತು.**

ಇವುಗಳ ಒತ್ತಡದಿಂದ ವಿಶ್ವ ಬ್ಯಾಂಕ್ ಜೂನ್ ೧೯೯೨ರಲ್ಲಿ ಒಂದು ಸ್ವತಂತ್ರ ತಂಡವನ್ನು ರಚಿಸಿ, ಎಸ್ ಎಸ್ ಪಿಯಿಂದಾಗುವ ಪರ್ಯಾವರಣ ಮತ್ತು ನಿರ್ವಸತಿ ಪರಿಣಾಮಗಳ ಪರಾಮರ್ಶೆ ಮಾಡಬೇಕೆಂದು ತಾಕೀತು ಮಾಡಿತು. ಈ ತಂಡದ ವರದಿ ಎಸ್‌ಎಸ್‌ಪಿಯ ನಕಾರಾತ್ಮಕ ಪರಿಣಾಮಗಳನ್ನು ಎತ್ತಿ ಹಿಡಿಯಿತು. ಕೊನೆಗೆ ಮಾರ್ಚಿ ೧೯೯೩ರಲ್ಲಿ ವಿಶ್ವ ಬ್ಯಾಂಕ್ ಎಸ್ ಎಸ್ ಪಿಗೆ ನೀಡುತ್ತಿದ್ದ ಧನ ಸಹಾಯಕ್ಕೆ ಕೆಂಪು ನಿಶಾನೆ ತೋರಿಸಿತು. ಇದೊಂದು ಅಭೂತಪೂರ್ವ ಘಟನೆಯಾಗಿತ್ತು. ಇದರಿಂದ ಪ್ರಪಂಚದಾದ್ಯಂತ ಇದ್ದ ಜನಪರ ಸಂಘಟನೆಗಳ ಕಾರ್ಯಕರ್ತರಿಗೆ ನವಚೇತನ, ಹುಮ್ಮಸ್ಸು ದೊರೆಯಿತೆನ್ನಬಹುದು.

ಚಳವಳಿ ಕಾವೇರಿದಂತೆ ಅದರ ಕಾರ್ಯಕರ್ತರ ಮೇಲೆ ಪ್ರಭುತ್ವ ಎರಗಿತು. ಅವರು ಪೊಲೀಸರ ಲಾಠಿ, ಬೂಟಿನೇಟುಗಳಿಗೆ ತುತ್ತಾದರು. ಬಂಧನಕ್ಕೂ ಒಳಗಾದರು. ಆದರೂ ನರ್ಮದಾ ಕೊಳ್ಳದ ಪ್ರದೇಶದಲ್ಲಿ 'ವಿಕಾಸ್ ಚಾಂಲಯೋ ವಿನಾಶ್ ನಹೀಂ' ['ವಿಕಾಸ ಬೇಕು, ವಿನಾಶ ಬೇಡ'] 'ಕೊಯಿ ನಹೀಂ ಹಟೆಗಾ! ಬಾಂಧ್ ನಹೀಂ ಬನೇಗಾ' ['ಯಾರೂ ಕದಲುವುದಿಲ್ಲ. ಅಣೆಕಟ್ಟನ್ನು ಕಟ್ಟಲಾಗುವುದಿಲ್ಲ'] ಎಂಬ ಘೋಷಣೆಗಳು ಮೊಳಗಿದವು. ೧೯೯೧ರಲ್ಲಿ ಮೇಧಾ ಪಾಟ್ಕರ್ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಲು ಮುಂದಾದರು.

ಬಾಬಾ ಅಮ್ಟೆಯಂಥ ಹಿರಿಯ ಜನಾನುರಾಗಿ ಗಾಂಧೀವಾದಿಗಳು ಆಂದೋಳನದ ಇಂಥ ಕಾರ್ಯಕ್ರಮಗಳಿಗೆ ಒತ್ತಾಸೆ ನೀಡಿದರು. ಗುಜರಾತ್ ಸರ್ಕಾರ ಕ್ಯಾರೆ ಎನ್ನಲಿಲ್ಲ, ಬದಲಿಗೆ ಮಾಧ್ಯಮಗಳ ಮೂಲಕ ಆಂದೋಳನದ ಮೇಲೆ ಧಾಳಿ ಮಾಡಿತು. ಸರ್ಕಾರ ಮಾತುಕತೆಗೆ ಮುಂದಾಗದಿದ್ದಾಗ ಗ್ರಾಮೀಣ ಮಟ್ಟದ ಅಸಹಕಾರ ಚಳವಳಿಗೆ ಕರೆ ನೀಡಲಾಯಿತು. 'ಹಮಾರೆ ಗಾಂವ್ ಮೇ ಮಾರ ರಾಜ್' ('ನಮ್ಮ ಹಳ್ಳಿಗಳಲ್ಲಿ ನಮ್ಮದೇ ಆಡಳಿತ') ಎಂಬುದು ಈ ಚಳವಳಿಯ ಘೋಷವಾಕ್ಯವಾಯಿತು.

ಪ್ರಭುತ್ವ ಹೇಗಾದರೂ ಮಾಡಿ ಆಂದೋಳನವನ್ನು ಬಗ್ಗುಬಡಿಯಬೇಕೆಂದು ಅಪಪ್ರಚಾರಗಳನ್ನು ಮಾಡಿತು. ಮೇಧಾ ಪಾಟ್ಕರ್ 'ಅಭಿವೃದ್ಧಿ–ವಿಕಾಸ ವಿರೋಧಿ 'ಹೋರಗಡೆಯವರು' ಮತ್ತು ಆಂದೋಳನಕ್ಕೆ ವಿದೇಶದಿಂದ ಯಥೇಚ್ಛ ಹಣ ಸಂದಾಯವಾಗುತ್ತಿದೆ ಎಂಬ ಆರೋಪಣೆಗಳನ್ನು ಹಬ್ಬಿಸಲಾಯಿತು. ಎಷ್ಟೇ ಪ್ರವರಗಳಾದರೂ ಅಹಿಂಸಾತ್ಮಕ ಹೋರಾಟ ಮುಂದೆವರೆಯಿತು. ಎಸ್‌ಎಸ್ ಪಿಯ ಕಾಮಗಾರಿ ಕಾರ್ಯ ಮುಂದುವರೆಯುತ್ತಿದ್ದಂತೆ ಮುಳುಗಡೆ ಪ್ರದೇಶದಲ್ಲಿದ್ದ ಮಹಾರಾಷ್ಟ್ರದ ಮಣಿಬೇಲಿಯಂಥಾ ಗ್ರಾಮಗಳು ಜಲಾವೃತಗೊಳ್ಳುವ ಸಮಯ ಬಂದಿತು.

೧೯೯೧ರ ಮಳೆಗಾಲದಲ್ಲಿ ಈ ಹಳ್ಳಿ ಈ ಕುತ್ತನ್ನು ಎದುರಿಸುವ ಸಂದರ್ಭ ಬರಬಹುದೆಂದು ಎಣಿಸಲಾಯಿತು. ಆಂದೋಳನ ಈ ಹಳ್ಳಿಯಲ್ಲಿ 'ಜಲ ಸಮಾಧಿ'ಯ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ನೂರಾರು ಜನರು ಪ್ರಾಣಾರ್ಪಣೆ ಮಾಡಲು ಸಿದ್ಧವಾದರು. ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡು ಸರ್ಕಾರ ಹೋರಾಟಗಾರರನ್ನು ಬಂಧಿಸಿತು.

೧೯೯೪ರಲ್ಲಿ ಆಂದೋಳನ ಕೋರ್ಟಿನ ಮೆಟ್ಟಲನ್ನು ಏರಲು ನಿಶ್ಚಯಿಸಿತು. ಎಸ್‌ಎಸ್‌ಪಿ ಯೋಜನೆ ಹೇಗೆ ಸಂವಿಧಾನದ ಮೌಲ್ಯಗಳಿಗೆ ಚ್ಯುತಿ ತಂದಿದೆ ಮತ್ತು ಇದರಿಂದ ಪರಿಣಮಿಸುವ ತೀವ್ರ ಸ್ವರೂಪದ ಪರಿಸರ ನಾಶ, ನಿರ್ವಸತಿ, ಮಾನವ ಹಕ್ಕುಗಳ ಮಾರಣ ಹೋಮದಂಥಾ ನೇತ್ಯಾತ್ಮಕ ಅಂಶಗಳಿಗೆ ಒತ್ತು ನೀಡಿ ಸುಪ್ರೀಂ ಕೋರ್ಟಿನಲ್ಲಿ ಖಟ್ಲೆ ಹೂಡಿತು. ಕೋರ್ಟು ಅಣೆಕಟ್ಟಿನ ನಿರ್ಮಾಣಕ್ಕೆ ತಡೆಯಾಜ್ಞೆ ನೀಡಿತು. ಏಕೆಂದರೆ ೨೦೦೦ದ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟಿನ ತ್ರಿಸದಸ್ಯ ಪೀಠ ನೀಡಿದ ಕೊನೆಯ ನಿರ್ಣಯ ೧೯೭೯ರಲ್ಲಿ ನರ್ಮದಾ ಟ್ರಿಬ್ಯುನಲ್ ಮಂಡಿಸಿದ ತಿರ್ಮಾನವನ್ನು ಪುಷ್ಟೀಕರಿಸಿತು ಜೊತೆಗೆ ಒಂದು ಕರಾರನ್ನು ಹಾಕಿತು.

ಅಣೆಕಟ್ಟಿನ ಎತ್ತರ ೯೦ ಅಡಿ ದಾಟಿದ ತರುವಾಯ ಏರುಹಂತದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸೂಕ್ತ ಪರ್ಯಾವರಣ ಮತ್ತು ಪುನರ್ವಸತಿ ಕ್ರಮವನ್ನು ಜಾರಿಗೊಳಿಸಲಾಗಿದೆ ಎಂಬುದನ್ನು ಖಚಿತಗೊಳಿಸಬೇಕೆಂಬುದು ಈ ಕರಾರಿನ ತಿರುಳಾಗಿತ್ತು. ನರ್ಮದಾ ಬಚಾವ್

(37ನೇ ಪುಟಕ್ಕೆ)

ಕರ್ನಾಟಕದಲ್ಲಿ ಕೋಮುವಾದಿ ರಾಜಕಾರಣ?

ಮಲ್ಲಿಕಾರ್ಜುನ ಗುಮ್ಮಗೋಳ.

ಸಾಂಸ್ಕೃತಿಕ ಭಿನ್ನತೆಯಿರುವ ಭಾರತದಂತಹ ದೇಶದಲ್ಲಿ, ಸಾಂಸ್ಕೃತಿಕ ಸೌಹಾರ್ದತೆಯ ಜೊತೆ ಜೊತೆಗೆ ಸಂಘರ್ಷಗಳು ತಲೆದೋರುತ್ತ ಬಂದಿವೆ. ರಾಜಕೀಯವು ಸಮಾಜದ ಅಂಗವಾಗಿದ್ದರಿಂದ ಸಹಜವಾಗಿ ಆ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳ ಪ್ರಭಾವವು ರಾಜಕೀಯದ ಮೇಲೆ ಆಗುತ್ತದೆ. ರಾಷ್ಟ್ರವು ಧರ್ಮ ನಿರಪೇಕ್ಷವಾಗಿದೆ ನಿಜ, ಆದರೆ ಸಮಾಜವು ಧಾರ್ಮಿಕ ಭಾವನೆಗಳಿಂದ ಕೂಡಿದೆ. (India as a state is secular, as a society is communal). ಹೀಗಾಗಿ, ಇಂತಹ ಧಾರ್ಮಿಕ ಹಾಗೂ ಸಾಂಸ್ಕೃತಿಕ ಭಾವನೆಯ ವ್ಯಕ್ತಿಗಳು ರಾಜಕೀಯ ತತ್ವ ಸಿದ್ಧಾಂತಗಳನ್ನು ಗೌಣಗೊಳಿಸಿ, ತಮ್ಮ ಸಾಂಸ್ಕೃತಿಕ ಸಿದ್ಧಾಂತಗಳನ್ನು ರಾಜಕಾರಣದಲ್ಲಿ ಬೆರೆಸತೊಡಗಿದಾಗ, ಇತರ ಸಂಸ್ಕೃತಿಗೆ ಸೇರಿದ ಜನರಿಗೆ ಅದು ಅಸಮಾದಾನವನ್ನು ಉಂಟುಮಾಡುತ್ತದೆ.

ಒಂದು ಧರ್ಮದ ಅಥವಾ ಸಮುದಾಯದ ಜನರಿಗೆ ಆಮಿಷ ಒಡ್ಡುವದು. ಆ ಮೂಲಕ ಅವರ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ಭಾವನೆಗಳನ್ನು ಉದ್ರೇಕಗೊಳಿಸಿ ರಾಜಕೀಯ ಕಾರಣಗಳಿಗಾಗಿ ಬಳಸಿಕೊಳ್ಳುವದು. ಮತ್ತು ಅನ್ಯ ಕೋಮಿನ ಜನರ ಭಾವನೆಗಳಿಗೆ ಹಾಗೂ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತೆ ರಾಜಕಾರಣಿಗಳು ನಡೆದುಕೊಳ್ಳುವದು, ಕೋಮುವಾದ ಎಂಬ ರಾಜಕೀಯ ಸಂಘರ್ಷಕ್ಕೆ ದಾರಿಮಾಡಿ ಕೊಡುತ್ತದೆ.

1990ರ ದಶಕದ ನಂತರ ಕೋಮುವಾದಿ ಕಾರ್ಯಾಚರಣೆ ಭಾರತದ ರಾಜಕಾರಣದಲ್ಲಿ ಗೋಚರಿಸಲಾರಂಭಿಸಿತು. ಆದರೆ ಅದಕ್ಕಿಂತ ಮುಂಚೆ ಕೋಮುವಾದವೆಂಬುವದು ಇರಲೇ ಇಲ್ಲ ಎಂದು ಹೇಳಲಾಗದು. ಆದರೆ, ಅದು ರಾಜಕೀಯ ವರ್ಣವನ್ನು ಪಡೆದು ಕೊಂಡಿರಲಿಲ್ಲ.

ಭಾರತದ ಮೇಲೆ ಮುಸಲ್ಮಾನರ ದಾಳಿ, ಆಂಗ್ಲರ ಆಕ್ರಮಣಗಳು ಧಾರ್ಮಿಕ ಸಂಘರ್ಷ ಮತ್ತು ಮತಾಂತರದ ರೂಪದಲ್ಲಿ ಸುಪ್ತವಾಗಿದ್ದವು. 'ಧರ್ಮಶಾಸ್ತ್ರ' ಹಾಗೂ 'ಶರಿಯಾ' ಕಾನೂನುಗಳು ಆಯಾ ಧರ್ಮದ ಅರಸರ ಆಳ್ವಿಕೆಯ ಸಂದರ್ಭದಲ್ಲಿ ಜಾರಿಯಲ್ಲಿದ್ದರೂ ಇತರ ಕೋಮಿನ ವ್ಯಕ್ತಿಗಳಿಗೂ ಅಲ್ಲಿ ಸ್ವಾತಂತ್ರ್ಯವಿತ್ತು. ಆದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಘನಿಷ್ಠವಾಗಿದ್ದ ಇಂತಹ ಸೌಹಾರ್ದತೆ, ದೇಶ ವಿಭಜನೆಯ ಸಂದರ್ಭದಲ್ಲಿ ವಿಘಟನಾತ್ಮಕ ರೂಪ ತಳೆಯಿತು.

ಇದಕ್ಕಿಂತ ಹಿಂದೆ ಹೋಗಿ ಭಾರತದ ಇತಿಹಾಸವನ್ನು ಅವಲೋಕಿಸಿದರೆ, ಅಲ್ಲಿ ಹಲವಾರು ತತ್ವ ಸಿದ್ಧಾಂತಗಳ ಹೆಸರಿನಲ್ಲಿ ಜಾತಿ-ಕೋಮು ಸಂಘರ್ಷಗಳು ನಡೆದಿರುವದು ಕಂಡು ಬರುತ್ತದೆ. ಶೈವರು, ವೈಷ್ಣವರು ಹಾಗೂ ಮಾಧ್ವರ ನಡುವೆ ಸಾಂಪ್ರದಾಯಿಕ ಕಲಹಗಳು ನಡೆದದ್ದನ್ನು ಕಾಣುತ್ತೇವೆ. ಬೌದ್ಧರ, ಜೈನರ, ಮರಾಠರ ಹಾಗೂ ಮುಸ್ಲಿಮರ ನಡುವೆ ಧಾರ್ಮಿಕ ಮತ್ತು ರಾಜಕೀಯ ವಿಸ್ತರಣೆಯ ಕಾರಣಗಳಿಗಾಗಿ ಕಾಳಗಗಳು ನಡೆದದ್ದನ್ನು ಕಾಣುತ್ತೇವೆ. ಒಬ್ಬರ ಪೂಜಾಸ್ಥಳಗಳನ್ನು ಮತ್ತೊಬ್ಬರು ಧ್ವಂಸಗೊಳಿಸಿ ಅಲ್ಲಿ ತಮ್ಮ ಸಂಸ್ಕೃತಿಯ ಸ್ಮಾರಕಗಳನ್ನು ಸ್ಥಾಪಿಸಿದ ನಿದರ್ಶನಗಳೂ ನಮಗೆ ಹೇರಳವಾಗಿ ಕಾಣಸಿಗುತ್ತವೆ.

12ನೇ ಶತಮಾನದಲ್ಲಿ 'ಶಕ್ತಿ-ವಿಶಿಷ್ಟಾದ್ವೈತ' ಸಿದ್ಧಾಂತದ ಪ್ರವರ್ತಕನಾದ ಬಸವಣ್ಣ ಕೋಮು ನಿರಪೇಕ್ಷಿತ ಸಮಾಜವನ್ನು ಸ್ಥಾಪಿಸಲು ಹೊರಟ. ಆದರೆ, ರಾಜಾಧಿಕಾರದ ಮೇಲೆ ಪ್ರಬಲವಾದ ಹಿಡಿತವನ್ನು ಹೊಂದಿದ್ದ ಪುರೋಹಿತ ಶಾಹಿಯು ಈ ಸಾಮಾಜಿಕ ಚಳವಳಿಗೆ ಕೋಮುವಾದದ ರೂಪವನ್ನು ಕೊಟ್ಟಿತು. ಇದರಿಂದ ರಕ್ತ ಕ್ರಾಂತಿ ಸಂಭವಿಸಿ ಒಂದು ಅರಸೊತ್ತಿಗೆ ಅಂತ್ಯವಾಗುವದರೊಂದಿಗೆ ಸಮಾಜದಲ್ಲಿ ಧಾರ್ಮಿಕ ಸೌಹಾರ್ದತೆಗೆ ಧಕ್ಕೆಯಾಯಿತು.

ಆದಿಲ್ ಶಾಹಿಗಳ ಆಗಮನದಿಂದ ಉತ್ತರ ಕರ್ನಾಟಕದಲ್ಲಿ ಉರ್ದು ಭಾಷೆಯ ಪ್ರಭಾವ ಮತ್ತು ಮತಾಂತರದ ರಾಜಕಾರಣ ಆರಂಭವಾಯಿತು. ದಕ್ಷಿಣ ಕರ್ನಾಟಕದಲ್ಲಿ ಟಿಪ್ಪು ಸುಲ್ತಾನನ ಆಳ್ವಿಕೆ

೧೯೯೦ರ ದಶಕದ ನಂತರ ಕೋಮುವಾದಿ ಕಾರ್ಯಾಚರಣೆ ಭಾರತದ ರಾಜಕಾರಣದಲ್ಲಿ ಗೋಚರಿಸಲಾರಂಭಿಸಿತು. ಆದರೆ ಅದಕ್ಕಿಂತ ಮುಂಚೆ ಕೋಮುವಾದವೆಂಬುವುದು ಇರಲೇ ಇಲ್ಲ ಎಂದು ಹೇಳಲಾಗದು. ಆದರೆ, ಅದು ರಾಜಕೀಯ ವರ್ಣವನ್ನು ಪಡೆದು ಕೊಂಡಿರಲಿಲ್ಲ. ಭಾರತದ ಮೇಲೆ ಮುಸಲ್ಮಾನರ ದಾಳಿ, ಆಂಗ್ಲರ ಆಕ್ರಮಣಗಳು ಧಾರ್ಮಿಕ ಸಂಘರ್ಷ ಮತ್ತು ಮತಾಂತರದ ರೂಪದಲ್ಲಿ ಸುಪ್ತವಾಗಿದ್ದವು. 'ಧರ್ಮಶಾಸ್ತ್ರ' ಹಾಗೂ 'ಶರಿಯಾ' ಕಾನೂನುಗಳು ಆಯಾ ಧರ್ಮದ ಅರಸರ ಆಳ್ವಿಕೆಯ ಸಂದರ್ಭದಲ್ಲಿ ಜಾರಿಯಲ್ಲಿದ್ದರೂ ಇತರ ಕೋಮಿನ ವ್ಯಕ್ತಿಗಳಿಗೂ ಅಲ್ಲಿ ಸ್ವಾತಂತ್ರ್ಯವಿತ್ತು. ಆದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಘನಿಷ್ಠವಾಗಿದ್ದ ಇಂತಹ ಸೌಹಾರ್ದತೆ, ದೇಶ ವಿಭಜನೆಯ ಸಂದರ್ಭದಲ್ಲಿ ವಿಘಟನಾತ್ಮಕ ರೂಪ ತಳೆಯಿತು.

ಯೊಂದಿಗೆ ಪರ್ಶಿಯನ್ ಭಾಷೆಯ ಅನುಷ್ಠಾನ ಹಾಗೂ ಮುಸ್ಲಿಂ ಧರ್ಮದ ಪ್ರಚಾರಕ್ಕೆ ಅಧಿಕವಾಯಿತು. ಈ ಎಲ್ಲ ಧಾರ್ಮಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳ ನಡುವೆಯು ಕರ್ನಾಟಕ ರಾಜ್ಯ ಕೋಮು ಸೌಹಾರ್ದತೆಯನ್ನು ಕಾಯ್ದು ಕೊಂಡು ಬಂದಿತ್ತು.

ಸ್ವಾತಂತ್ರ್ಯ ಪೂರ್ವದ ಸಂದರ್ಭದಲ್ಲಿ ಬ್ರಿಟಿಷರ 'ಒಡೆದು ಆಳುವ' (Divide and Rule) ನೀತಿಯು ಭಾರತದ ಕೋಮು ಸೌಹಾರ್ಧತೆಯನ್ನು ಛಿದ್ರಗೊಳಿಸಿತು. ಈ ಧಾರ್ಮಿಕ ಪ್ರತ್ಯೇಕತೆಯ ಭಾವನೆಯು ಸ್ವಾತಂತ್ರ್ಯ ನಂತರ ರಾಜಕೀಯ ರಂಗದಲ್ಲಿ ನಿಧಾನವಾಗಿ ನುಸುಳಿ ಕೊಂಡಿತು. ತದನಂತರದ ಕಾಲದಲ್ಲಿ ಸಂಭವಿಸಿದ ಎಲ್ಲ ಜಾತಿ ಮತ್ತು ಕೋಮುಗಲಭೆಗಳ ಹಿಂದೆ ರಾಜಕೀಯ ಉದ್ದೇಶ ಅಡಗಿರುವದು ಕಾಣಲಾರಂಭಿಸಿತು. ಮಹಾತ್ಮಾ ಗಾಂಧೀಜಿ ಹೇಳುವ ಹಾಗೆ "Almost all the riots in this unhappy land take place in the name of religion, though they may have a political motive behind them". ಇಲ್ಲವೆ ಅವುಗಳಿಗೆ ಕೋಮು ಬಣ್ಣವನ್ನು ಪಡೆದುಕೊಳ್ಳುವಂತೆ ಮಾಡಲಾಯಿತು

ಅದೇ ರೀತಿ ಕರ್ನಾಟಕದಲ್ಲಿ ನಡೆದ ಕೋಮು ಗಲಭೆಗಳು ಸಹ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ರಾಜಕೀಯ ಪ್ರಚೋದನೆಗೆ ಒಳಗಾದವು. ಆಯಾ ಕೋಮಿನ ಪ್ರಬಲ ವ್ಯಕ್ತಿಗಳು ಸಹಜವಾಗಿ ರಾಜಕೀಯದಲ್ಲಿ ಸಕ್ರೀಯರಾಗಿ ರುವದರಿಂದ ಆಯಾ ವ್ಯಕ್ತಿಗಳು ತಮ್ಮ ಪಕ್ಷದ ಪ್ರಭಾವವನ್ನು ಈ ಗಲಭೆಗಳಿಗೂ ಬಳಸಿಕೊಂಡರು. ಅಂಥಹ ಕೆಲವು ಸೂಕ್ಷ್ಮ ಘಟನೆಗಳನ್ನು ಇಲ್ಲಿ ಅವಲೋಕಿಸಬಹುದು.

1982ರಲ್ಲಿ ಬೆಂಗಳೂರಿನ ಮುನಿರೆಡ್ಡಿ ಪಾಳ್ಯದಲ್ಲಿ ಮುಸ್ಲಿಂ ಮತ್ತು ಹಿಂದೂ ಕೋಮಿನವರು ಸಮ-ಸಮನಾಗಿ ವಾಸಿಸುತ್ತಿದ್ದರು. ದಸರಾ ಹಬ್ಬದ ಸಂದರ್ಭದಲ್ಲಿ ಹಿಂದೂಗಳು ಮಸೀದಿಯ ಹತ್ತಿರ ವಾದ್ಯಗಳನ್ನು ಭಾರಿಸುತ್ತ ಹೋಗುತ್ತಿರುವದು ಪ್ರಾರ್ಥನೆಗೆ ಭಂಗ ಉಂಟು ಮಾಡಿತು ಎಂದು ಪರಸ್ಪರರು ಬಡಿದಾಟದಲ್ಲಿ ತೊಡಗಿಕೊಂಡರು. ಈ ಘಟನೆಯಲ್ಲಿ ಲೂಟಿ, ಮಾನಭಂಗ ಹಾಗೂ ಬೆಂಕಿ ಹಚ್ಚುವಂತಹ ದುಷ್ಕೃತ್ಯಗಳು ನಡೆದು ಅಪಾರ ಪ್ರಮಾಣದ ಆಸ್ತಿ-ಪಾಸ್ತಿ ನಷ್ಟವಾಯಿತು. ಇದು ಕೋಮು ಸೌಹಾರ್ದತೆಗೆ ಧಕ್ಕೆಯನ್ನು ಉಂಟು ಮಾಡಿತು.

ಡೆಕ್ಕನ್ ಹೆರಾಲ್ಡ್ ಪತ್ರಿಕೆ 'ಮೊಹಮ್ಮದ, ದಿ ಇಡಿಯಟ್' ಎಂಬ ಲೇಖನ ಪ್ರಕಟಿಸಿದ ಕಾರಣಕ್ಕಾಗಿ ಗಲಭೆಯಾಗಿ 17 ಜನ ಯುವಕರು ಪ್ರಾಣ ಕಳೆದುಕೊಂಡರು. ಇದಕ್ಕಿಂತ ಮುಂಚೆ ಕೇರಳದ ಮಲಯಾಳಂ ಪತ್ರಿಕೆ ಈ ಲೇಖನವನ್ನು ಪ್ರಕಟಿಸಿತ್ತು. ಆದರೆ ಅಲ್ಲಿ ಇಂತಹ ದುರ್ಘಟನೆ ಸಂಭವಿಸಲಿಲ್ಲ.

ಕೋಲಾರದ ಚಿಂತಾಮಣಿಯಲ್ಲಿ ಮುಸ್ಲಿಂ ಹುಡುಗ ಹಿಂದೂ ಹುಡುಗಿಯನ್ನು ಪ್ರೇಮವಿವಾಹ ಮಾಡಿಕೊಂಡ. ಇದರಿಂದ ಕುಪಿತಗೊಂಡ ಹುಡುಗಿಯ ಸಂಬಂಧಿಕರು ಪೊಲೀಸರಿಗೆ ಅಪಹರಣದ ದೂರನ್ನು ಸಲ್ಲಿಸಿದರು. ಪೊಲೀಸರ ಮುಂದೆ ಪ್ರತ್ಯಕ್ಷಳಾದ ಹುಡುಗಿ ತಾನು ಸ್ವ-ಇಚ್ಛೆಯಿಂದ ಮದುವೆಯಾಗಿರುವುದಾಗಿ ತಿಳಿಸಿದಳು. ಆದರೆ, ನ್ಯಾಯಾಲಯದ ಮುಂದೆ ನನ್ನ ಇಚ್ಛೆಯ ವಿರುದ್ಧವಾಗಿ ನನ್ನನ್ನು ಅಪಹರಿಸಲಾಯಿತು ಎಂದು ಹೇಳಿಕೆ ನೀಡಿದಳು! ಈ ಘಟನೆಯಲ್ಲಿ ಎರಡು ಕೋಮಿನ ಪ್ರಬಲ ವ್ಯಕ್ತಿಗಳು ಸೌಹಾರ್ದತೆಯನ್ನು ಮೆರೆಯುವದರ ಬದಲು

ಕೋಲಾರದ ಚಿಂತಾಮಣಿಯಲ್ಲಿ ಮುಸ್ಲಿಂ ಹುಡುಗ ಹಿಂದೂ ಹುಡುಗಿಯನ್ನು ಪ್ರೇಮವಿವಾಹ ಮಾಡಿಕೊಂಡ. ಇದರಿಂದ ಕುಪಿತಗೊಂಡ ಹುಡುಗಿಯ ಸಂಬಂಧಿಕರು ಪೊಲೀಸರಿಗೆ ಅಪಹರಣದ ದೂರನ್ನು ಸಲ್ಲಿಸಿದರು. ಪೊಲೀಸರ ಮುಂದೆ ಪ್ರತ್ಯಕ್ಷಳಾದ ಹುಡುಗಿ ತಾನು ಸ್ವ-ಇಚ್ಛೆಯಿಂದ ಮದುವೆಯಾಗಿರುವುದಾಗಿ ತಿಳಿಸಿದಳು. ಆದರೆ, ನ್ಯಾಯಾಲಯದ ಮುಂದೆ ನನ್ನ ಇಚ್ಛೆಯ ವಿರುದ್ಧವಾಗಿ ನನ್ನನ್ನು ಅಪಹರಿಸಲಾಯಿತು ಎಂದು ಹೇಳಿಕೆ ನೀಡಿದಳು! ಈ ಘಟನೆಯಲ್ಲಿ ಎರಡು ಕೋಮಿನ ಪ್ರಬಲ ವ್ಯಕ್ತಿಗಳು ಸೌಹಾರ್ದತೆಯನ್ನು ಮೆರೆಯುವದರ ಬದಲು ಅದನ್ನು ಇನ್ನಷ್ಟು ದ್ವೇಷಮಯಗೋಳಿಸಿದರು.

ಅದನ್ನು ಇನ್ನಷ್ಟು ದ್ವೇಷಮಯಗೋಳಿಸಿದರು. 1990 ಸೆಪ್ಟಂಬರ 2ರಂದು ರಾಮನಗರದ ಚಿಂತಾಮಣಿಯಲ್ಲಿ ಒಂದು ಕೋಮಿಗೆ ಸೇರಿದ ಯುವತಿಯನ್ನು ಚುಡಾಯಿಸಿದ ಕಾರಣಕ್ಕಾಗಿ ಗಲಭೆ ಸಂಭವಿಸಿ 39ಮನೆಗಳು ಬೆಂಕಿಗೆ ಆಹುತಿಯಾದವು ಹಾಗೂ 15 ಜನ ಅಸುನೀಗಿದರು.

ಇಂತಹ ಹತ್ತು ಹಲವಾರು ಘಟನೆಗಳು ಸಂಭವಿಸಿದರೂ ಅವು ಅಷ್ಟಾಗಿ ರಾಜಕೀಯ ಕಾರಣಗಳಿಗಾಗಿ ಬಳಕೆಯಾಗಲಿಲ್ಲ. ಅದರೆ, ಅವು ನಿದಾನವಾಗಿ ಕೋಮುವಾದವನ್ನು ಹುಟ್ಟು ಹಾಕಲು ಸಹಕಾರಿಯಾದವು. ಕೋಮುವಾದದ ಘಟನೆಗಳು ಹೇಗೆ 'ರಾಜಕೀಯ ಅಜೆಂಡಾ'ದಲ್ಲಿ ಸೇರಿಕೊಂಡು ಯಾವ ರೀತಿಯ ಪರಿಣಾಮವನ್ನು ರಾಜ್ಯದಲ್ಲಿ ಬೀರಿದವು ಎಂಬುದನ್ನು ಈ ಕೆಳಗಿನ ಘಟನೆಗಳಿಂದ ತಿಳಿದುಕೊಳ್ಳಬಹುದು.

ರಾಮ ಜನ್ಮ ಭೂಮಿ ಮತ್ತು ಬಾಬ್ರಿ ಮಸೀದಿಯ ಕರಿ ಛಾಯೆ: ಅಯೋಧ್ಯೆಯಲ್ಲಿ ಬಾಬ್ರಿ ಮಸಿದಿ ಕೆಡವಿ ಅಲ್ಲಿ ಶ್ರೀರಾಮ ಮಂದಿರವನ್ನು ನಿರ್ಮಾಣ ಮಾಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು 1990ರಲ್ಲಿ ಬಿ.ಜೆ.ಪಿ. ದೇಶದಾದ್ಯಂತ ರಥಯಾತ್ರೆಯನ್ನು ಆರಂಭಿಸಿತು. ದಕ್ಷಿಣ ಭಾರತದಲ್ಲಿ ತಳವೂರಲು ಕರ್ನಾಟಕವನ್ನು ಹೆಬ್ಬಾಗಿಲು ಮಾಡಿಕೊಂಡ ಬಿ.ಜೆ.ಪಿ.ಗೆ ಅಪೂರ್ವವಾದ ಸ್ವಾಗತ ದೊರೆಯಿತು. ರಥಯಾತ್ರೆ ಸಂದರ್ಭದಲ್ಲಿ 88 ಜನರು ಪ್ರಾಣ ಕಳೆದುಕೊಂಡರು. ಅದರಲ್ಲಿ ಕರ್ನಾಟಕದ 10 ಜನರುಸೇರಿದ್ದರು. ಅಲ್ಲದೆ 4.37ಕೋಟಿ ರೂಪಾಯಿ ಆಸ್ತಿ ಹಾನಿಆಯಿತು. ಕೋಲಾರದಲ್ಲಿ 78ದಿನಗಳ ಕಾಲ ಹಾಗೂ ದಾವಣಗೇರಿಯಲ್ಲಿ 4ದಿನಗಳ ಕಾಲ ಕರ್ಫ್ಯೂವನ್ನು ವಿಧಿಸಲಾಯಿತು. ಅಲ್ಲದೇ ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಗಲಭೆಗಳು ಉಂಟಾದವು. ರಾಮಮಂದಿರ ನಿರ್ಮಾಣಕ್ಕೆ ಕರ್ನಾಟಕದಿಂದಲೂ ಕರಸೇವಕರು ತೆರಳಿದ್ದರು.

ಬಾಬ್ರಿ ಮಸೀದಿಯ ವಿವಾದದ ನಂತರ, ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿ ಹಾಗೂ ದತ್ತ ಪೀಠ ವಿವಾದವು ಕರ್ನಾಟಕದಲ್ಲಿ ಕೋಮುವಾದಿ ರಾಜಕಾರಣಕ್ಕೆ ಸಾಕಷ್ಟು ಅವಕಾಶ ಮಾಡಿಕೊಟ್ಟಿತು. ದತ್ತ ಪಾದುಕೆ ಯಾತ್ರೆಗೆ ಸರಕಾರ ಅವಕಾಶ ಮಾಡಿಕೊಡದೆ ಅಂದಿನ ಬಿ.ಜೆ.ಪಿ.ಯ ರಾಜ್ಯಾಧ್ಯಕ್ಷ ಸದಾನಂದಗೌಡ ಹಾಗೂ ಸಂಘ ಪರಿವಾರದ ಇತರ ಜನರನ್ನು ಬಂಧಿಸಲಾಯಿತು. ಇದು ತದನಂತರದ ಚುನಾವಣೆಗಳಲ್ಲಿ ಕೋಮುವಾರು ಮತ ವಿಭಜನೆಗೆ ಸಹಕಾರಿಯಾಯಿತು.

ವಾಸ್ತವವಾಗಿ ಸೂಫಿ ಸಂತ ಬಾಬಾ ಹಯಾತ್ ಖಾನ ಬುಡನ್ 1713ರಲ್ಲಿ ಚಂದ್ರದ್ರೋಣ ಪರ್ವತದಲ್ಲಿರುವ ದತ್ತಾತ್ರಯನ ಶಿಷ್ಯನಾಗಿ ನಾಥ ಪಂಥಕ್ಕೆ ಸೇರಿಕೊಳ್ಳುತ್ತಾನೆ. ನಂತರದ ಮಾಲಿಕ್ ತಾಜ್ಯೆ, ಮಾಲಿಕ್ ವಜೀರ್, ಮಾಲಿಕ್ ಕಾಬು, ಮಾಲಿಕ್ ಸಾಫಿರ್ ಎಂಬ ಅವರ ನಾಲ್ಕು ಶಿಷ್ಯರ ಗೋರಿಗಳು ಇಂದಿಗೂ ಅಲ್ಲಿ ಇವೆ. ಈ ಗುರು ಶಿಷ್ಯ ಪರಂಪರೆಯು ಕೋಮು ಸೌಹಾರ್ದತೆಗೆ ಅಂದಿನ ಕಾಲದಲ್ಲಿ ದೊಡ್ಡ ಹೆಸರು ಮಾಡಿತ್ತು. ಹಿಂದೂ ಮುಸ್ಲಿಂರು ಭಾವೈಕ್ಯದಿಂದ ಸೇರಿ ಯಾತ್ರೆ ಮತ್ತು ಉರುಸ್‌ಗಳನ್ನು ಮಾಡಿಕೊಂಡು ಬಂದಿದ್ದರು.

ಅಂಥಹ ಸಾಮರಸ್ಯವನ್ನು ಇಂದಿನ ರಾಜಕಾರಣ ಹಾಳುಗೆಡವಿತು. ಇದಕ್ಕೆ ಹೊರತಾಗಿಯೂ ಶರೀಫ್-ಗುರು ಗೋವಿಂದಭಟ್ಟ, ತಿಂತಿಣಿಯ ಕೊಡೆಕಲ್ ಬಸವಣ್ಣ, ಗುಲ್ಬರ್ಗದ ಮೋನಪ್ಪಯ್ಯ, ದಾವಣಗೇರಿಯ ಗುಲಾಮ ಶಾವಲಿ, ಶಿರಹಟ್ಟಿಯ ಫಕೀರೇಶ, ಯಮನೂರಿನ ಛಾಂಗಫೀರ್ ಉರಸ್. ನಂತಹ ಕೋಮು ಸೌಹಾರ್ದತೆಯ ಕೇಂದ್ರಗಳು ಕರ್ನಾಟಕದ ಜನರ ಐಕ್ಯತೆಯ ಭಾವನೆಗಳಿಗೆ ಸಾಕ್ಷಿಯಾಗಿ ಇಂದಿಗೂ ನಡೆದು ಕೊಂಡು ಬಂದಿವೆ.

2002ರಲ್ಲಿ ಗುಜರಾತನಲ್ಲಿ ನಡೆದ ಗೋದ್ರಾ ಹತ್ಯಾಕಾಂಡವು ದೇಶದ ಜಾತ್ಯಾತೀತ ತತ್ವಕ್ಕೆ ದೊಡ್ಡ ಹೊಡೆತವನ್ನು ಕೊಟ್ಟಿತು. (It tarnished the image of Indian secularism and the reputation of Hinduism as a tolerant faith). ಮೇ 2002ರಲ್ಲಿ ಬೆಂಗಳೂರಿನಲ್ಲಿ ನಡೆದ ಆರ್.ಎಸ್.ಎಸ್. ಸಮಾವೇಶವು "ಅಲ್ಪ ಸಂಖ್ಯಾತರ ರಕ್ಷಣೆಯು ಬಹುಸಂಖ್ಯಾತರ ಮರ್ಜಿಯ ಮೇಲೆ ನಿಂತಿದೆ." ಎಂದು ಘೋಷಿಸಿತು. ಕಾಂಗ್ರೆಸ್ ಪಕ್ಷ ಅಲ್ಪ ಸಂಖ್ಯಾತರ ಓಲೈಕೆಯನ್ನು ಬಿಡಬೇಕು. ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಅಡ್ಡಿ ಪಡಿಸಬಾರದು ಎಂದು ನಿರ್ಣಯ ತೆಗೆದುಕೊಂಡಿತು.

ಹುಬ್ಬಳ್ಳಿಯ ಈದ್ಗಾ ವಿವಾದವು ಇದಕ್ಕೆ ಕಪ್ಪು ಚುಕ್ಕೆಯಾಗಿ ಪರಿಣಮಿಸಿತು. ಸುಪ್ತವಾಗಿದ್ದ ಧಾರ್ಮಿಕ ಭಾವನೆಯನ್ನು ರಾಷ್ಟ್ರೀಯತೆಯ ಹೆಸರಿನಲ್ಲಿ ರಾಜಕೀಕರಣಗೊಳಿಸಲಾಯಿತು. ಕರ್ನಾಟಕದಾದ್ಯಂತ ಅಲ್ಲಲ್ಲಿ ಕೋಮು ಘರ್ಷಣೆಗಳು ಉಂಟಾದವು. ಕಲಂ 144ರ ಅಡಿಯಲ್ಲಿ ಹುಬ್ಬಳ್ಳಿಯಲ್ಲಿ 15 ದಿನ ಕರ್ಫ್ಯೂ ಜಾರಿ ಮಾಡಲಾಯಿತು. ನಗರಕ್ಕೆ ಬಂದಿದ್ದ ಮಧ್ಯ ಪ್ರದೇಶದ ಮುಖ್ಯಮಂತ್ರಿ ಶ್ರೀಮತಿ ಉಮಾ ಭಾರತಿಯವರನ್ನು ದೋಷಿಯೆಂದು ಬಂಧಿಸಲಾಯಿತು. ನಂತರ ಅವರು ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಳ್ಳಬೇಕಾಯಿತು. ಈ ಘಟನೆಯಿಂದ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಧಾರವಾಡ ಜಿಲ್ಲೆ ಸಂಪೂರ್ಣ ಬಿ.ಜೆ.ಪಿ.ಯಡೆಗೆ ವಾಲಿತು. ಹೀಗೆ ಒಂದು ಪ್ರಾರ್ಥನಾ ಸ್ಥಳವನ್ನು ರಾಜಕೀಕರಣಗೊಳಿಸಿ ಬಿ.ಜೆ.ಪಿ. ಲಾಭ ಮಾಡಿಕೊಂಡಿತು.

ಕೋಮುವಾದಿ ರಾಜಕಾರಣ ಕೇವಲ ಹಿಂದೂ

ಮುಸ್ಲಿಂ ಧರ್ಮಗಳ ನಡುವೆ ಮಾತ್ರ ಕೆಲಸಮಾಡಲಿಲ್ಲ. ಅದು ಮತಾಂತರದ ಹೆಸರಿನಲ್ಲಿಯೂ ಹಿಂದೂ ಕ್ರಿಶ್ಚಿಯನ್‌ರ ನಡುವೆ ದ್ವೇಷಮಯ ವಾತಾವರಣವನ್ನು ಸೃಷ್ಟಿಸಿತು. ಮಂಗಳೂರಿನಲ್ಲಿ ಸಂಘ ಪರಿವಾರದ ಸದಸ್ಯರು ಚರ್ಚ್‌ಗಳ ಮೇಲೆ ದಾಳಿ ಮಾಡಿದ್ದಾರೆ ಎಂದು ಆರೋಪಿಸಿ ಹಲವಾರು ಜನರನ್ನು ಬಂಧಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಬಿ.ಜೆ.ಪಿ.ಯ ಕೆ. ನಾಗರಾಜ ಶೆಟ್ಟಿ ಅವರ ಮೇಲೂ ಪ್ರಕರಣ ದಾಖಲಾಯಿತು. ಇದರ ಹಿಂದೆ ಅಂದಿನ ಗೃಹ ಸಚಿವ ಎಮ್.ಪಿ. ಪ್ರಕಾಶ್ ರವರ ಕೈವಾಡವಿದೆ ಎಂದು ಆರೋಪಿಸಲಾಯಿತು.

ಹುಬ್ಬಳ್ಳಿಯಲ್ಲೂ ಚರ್ಚ್‌ಗಳ ಮೇಲೆ ದಾಳಿ ಮಾಡಲಾಯಿತು. ಹಿಂದೂ, ಕ್ರಿಶ್ಚಿಯನ್‌ರ ನಡುವೆ ದ್ವೇಷವನ್ನು ಸೃಷ್ಟಿಸಲು ಹಾಗೂ ಬಿ.ಜೆ.ಪಿ. ಸರಕಾರಕ್ಕೆ ಕೆಟ್ಟ ಹೆಸರು ತರುವ ಸಲುವಾಗಿ 'ದೀನ್‌ದಾರ್ ಅಂಜುಮನ್ ಸಂಘಟನೆ' ಈ ಕೃತ್ಯವನ್ನು ಮಾಡಿದೆಯೆಂದು ಆರೋಪಿಸಲಾಯಿತು. ಒಟ್ಟಾರೆ ಕರ್ನಾಟಕದ 4 ಜಿಲ್ಲೆಗಳಲ್ಲಿ 19 ಚರ್ಚ್‌ಗಳ ಮೇಲೆ ದಾಳಿ ಮಾಡಲಾಯಿತು. ಹಾಗೂ 20 ಜನ ಮಹಿಳೆಯರ ಮೇಲೆ ಹಲ್ಲೆ ಮಾಡಲಾಯಿತು.

ಕೋಮು ಭಾವನೆಯನ್ನು ಉಲ್ಬಣಗೊಳಿಸುವಲ್ಲಿ ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿರುವ ಬಹುಪಾಲು ಯುವ ಸಂಘಟನೆಗಳಾದ ವಿ.ಎಚ್.ಪಿ., ಭಜರಂಗ ದಳ, ಶ್ರೀರಾಮ ಸೇನೆ, ಸಿಮಿ (SIMI), ಮುಸ್ಲಿಂ ಸ್ಟೂಡೆಂಟ್ ಯುನಿಯನ್ ಹಾಗೂ ದೀನ್‌ದಾರ್ ಅಂಜುಮನ್ ನಂತಹ ಸಂಸ್ಥೆಗಳು ತಮ್ಮ ಕೊಡುಗೆಯನ್ನು ನೀಡಿವೆ.

ನಮಾಜ್ ಸಂದರ್ಭದಲ್ಲಿ ಧ್ವನಿ ವರ್ಧಕವನ್ನು ಬಳಸುವದರಿಂದ ಬೆಳಗಿನ ಜಾವ ನಿದ್ರೆಗೆ ಭಂಗ ಉಂಟಾಗುತ್ತದೆ. ಪೊಲೀಸ್ ಕಾಯ್ದೆ ಪ್ರಕಾರ ರಾತ್ರಿ 10-00 ಘಂಟೆಯಿಂದ ಬೆಳಗಿನ 5-00 ಘಂಟೆಯವರೆಗೆ ಧ್ವನಿ ವರ್ಧಕಗಳನ್ನು ಬಳಸುವಂತಿಲ್ಲ. ಇದೇ ಅವಕಾಶ ಬಳಸಿಕೊಂಡು ಧ್ವನಿ ವರ್ಧಕ ಬಳಸುವದನ್ನು ನಿಲ್ಲಿಸಬೇಕೆಂದು ಹಿಂದೂ ಸಂಘಟನೆಗಳು ಕೋರ್ಟ್‌ಗೆ ಮೊರೆ ಹೋದವು. ಇದು ಧಾರ್ಮಿಕ ಅಸಹನೆಯ ಪರಮಾವಧಿಯನ್ನು ತೋರಿಸುತ್ತದೆ. ಹಿಂದೂ ಹಬ್ಬ ಹೆರಿದಿನಗಳಲ್ಲಿ ನಡೆಯುವ ಯಾತ್ರೆಗಳು, ಬ್ಯಾಂಡ್ ಬಾಜಾ, ಪಟಾಕಿ ಮತ್ತು ಧ್ವನಿ ವರ್ಧಕಗಳ ಹಾವಳಿ ಏನು ಕಡಿಮೆ ಇರುತ್ತದೆಯೇ?

ಬೆಂಗಳೂರ ದೂರದರ್ಶನದಲ್ಲಿ ಉರ್ದು ವಾರ್ತೆಯನ್ನು ಪ್ರಸಾರ ಮಾಡುವದರ ವಿರುದ್ಧ ಹಿಂದೂ ಸಂಘಟನೆಗಳು ಪ್ರತಿಭಟನೆ ಮಾಡಿದ್ದು, ಮುಸ್ಲಿಂ ಲೀಗ್‌ನ ಜಾಫರ್ ಶರೀಫ್ ಎಂಬುವರ ನೇತೃತ್ವದಲ್ಲಿ ಸದ್ದಾಂ ಹುಸೇನ್‌ನನ್ನು ಗಲ್ಲಿಗೆ ಏರಿಸಬಾರದೆಂದು ಗದ್ದಲ ಮಾಡಿದ್ದು, ಕೋಮು ಸೌಹಾರ್ದತೆಯ ವಿಷಯಕ್ಕೆ ಧಕ್ಕೆಯನ್ನು ಉಂಟುಮಾಡಿತು.

ಕರ್ನಾಟಕ ಸರಕಾರವು ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಮಾಡುವ ಮೂಲಕ ಕೋಮುವಾದಿ ರಾಜಕಾರಣ ಮಾಡುತ್ತಿದೆ ಎಂದು ವಿರೋಧ ಪಕ್ಷಗಳಾದ ಕಾಂಗ್ರೆಸ್ - ಜೆ.ಡಿ.ಎಸ್.,ಗಳು ಪ್ರತಿಭಟನೆ ಮಾಡಿದವು.

ಗದಗ, ಹುಬ್ಬಳ್ಳಿ, ಬಾಗಲಕೋಟ ಮತ್ತು ಹಳಿಯಾಳದಲ್ಲಿ ನಡೆದ ಅಂತರ್ ಧರ್ಮಿಯ ವಿವಾಹಗಳನ್ನು 'ಲವ್ ಜೇಹಾದ್' ಎಂಬ ಹೆಸರನ್ನು ಕೊಟ್ಟು ಕೋಮು ರಾಜಕಾರಣಕ್ಕೆ ಬಳಸಿಕೊಳ್ಳಲಾಯಿತು. ಹಿಂದೂ ಮತ್ತು ಮುಸ್ಲಿಂ ಸಂಘಟನೆಗಳು ಇದನ್ನು ಪ್ರತಿಷ್ಠೆಯ ವಿಷಯ

ಕಾಂಗ್ರೆಸ್ ಪಕ್ಷ ರಮಾಜನ್ ಹಬ್ಬದ ಸಂದರ್ಭದಲ್ಲಿ ಮುಸ್ಲಿಂರಿಗೆ 'ಇಫ್ತಿಯಾರ್' ಔತಣಕೂಟಗಳನ್ನು ಏರ್ಪಡಿಸಿದ ಹಾಗೆ ದೀಪಾವಳಿ ಹಾಗೂ ಕ್ರಿಸಮಸ್ ಸಂದರ್ಭಗಳಲ್ಲಿ ಇತರ ಕೋಮಿನವರಿಗೂ ಅದು ಏಕೆ ಔತಣಕೂಟಗಳನ್ನು ಏರ್ಪಡಿಸುವದಿಲ್ಲ? ಇದು ವೋಟ್ ಬ್ಯಾಂಕ್ ರಾಜಕಾರಣದ ತಂತ್ರಗಾರಿಕೆ. ಜಾತಿ ಧರ್ಮಗಳನ್ನು ರಾಜಕೀಯ ಕಾರಣಗಳಿಗಾಗಿ ಓಲೈಸುವ ಕೆಲಸವನ್ನು ಎಲ್ಲ ರಾಜಕೀಯ ಪಕ್ಷಗಳು ಮಾಡಿಕೊಂಡು ಬಂದಿವೆ. ಕರ್ನಾಟಕದಲ್ಲಿ ಲಿಂಗಾಯತರು ಬಿ.ಜೆ.ಪಿ. ಪರ, ಒಕ್ಕಲಿಗರು ಜೆ.ಡಿ.ಎಸ್. ಪರ ವಾಲಿರುವದು ಇದಕ್ಕೆ ಒಂದು ನಿದರ್ಶನ.

ಮಾಡಿಕೊಂಡಿವೆ. ರಾಜ್ಯದ ಯಾವುದೇ ಭಾಗದಲ್ಲೂ ಇಂತಹ ವಿವಾಹಗಳು ನಡೆದರೆ ಅಲ್ಲಿ ರಾಜಕೀಯ ಸಂಘಟನೆಗಳು ಪ್ರತ್ಯಕ್ಷವಾಗುತ್ತಿವೆ. ಹಳಿಯಾಳದಲ್ಲಿ ಹಿಂದೂ ಹುಡಗಿಯರನ್ನು ಮತಾಂತರ ಗೊಳಿಸುವ ಸಲುವಾಗಿಯೇ ಪ್ರೀತಿಯ ಬಲೆಯಲ್ಲಿ ಕೆಡುವಲಾಗುತ್ತಿದೆಯೆಂದು ಆರೋಪ ಮಾಡಲಾಯಿತು. ಇದು ಆ ಕ್ಷೇತ್ರದ ಚುನಾವಣೆಯ ಮೇಲೂ ಪ್ರಭಾವ ಬೀರಿತು. ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾಗ್ಯೂ ಅಲ್ಪ ಸಂಖ್ಯಾತರ ತುಷ್ಟೀಕರಣ ಮಾಡುತ್ತಿದ್ದಾರೆ ಎಂದು ಅಲ್ಲಿನ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಹಿಂದೂ ಪರ ಸಂಘಟನೆಗಳು ಕೆಲಸ ಮಾಡಿದವು.

ಶಿಕ್ಷಣದ ಕೇಸರಿಕರಣ ನಡೆಯುತ್ತಿದೆ ಎಂದು ಅದರ ವಿರುದ್ಧ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಪ್ರತಿಭಟನೆಯನ್ನು ಮಾಡಿತು. ಇದಕ್ಕೆ ಪ್ರತಿಗಾಮಿಯಾಗಿ ಮುಸ್ಲಿಂ ಪರ ಸಂಘಟನೆಗಳು ಹೆಚ್ಚು ಹೆಚ್ಚು ಉರ್ದು ಶಾಲೆಗಳತ್ತ ಮುಖ ಮಾಡಿದವು. ಇದು ಐಕ್ಯತೆಯ ಸಮಾಜದಲ್ಲಿ ಧರ್ಮ ಮತ್ತು ಭಾಷೆಯ ಹೆಸರಿನಲ್ಲಿ ವಿಭಜನಕಾರಿ ಕೆಲಸವನ್ನು ಮಾಡಿತು. ಜಾತ್ಯಾತೀತತೆ ಎಂದರೆ ರಾಜಕಾರಣ, ಶಿಕ್ಷಣ, ಕಲೆ, ಸಾಹಿತ್ಯ ಮತ್ತು ಅಭಿವೃದ್ಧಿಯನ್ನು ಧರ್ಮದಿಂದ ಮುಕ್ತಗೊಳಿಸುವದಾಗಿದೆ.

ಇದೇ ಕಾರಣವನ್ನು ಇಟ್ಟುಕೊಂಡು ಬಿ.ಜೆ.ಪಿಯು 1996ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ 'ಅಲ್ಪ ಸಂಖ್ಯಾತರಿಗೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಡುವ ಸಂವಿಧಾನ ಕಲಂ 30ನ್ನು ರದ್ದು ಪಡಿಸುತ್ತೇವೆಂದು ತಿಳಿಸಿತ್ತು'. ಈ ಕಲಂ ಮದರಸಾಗಳನ್ನು ಸ್ಥಾಪಿಸಲು ಹಾಗೂ ಪ್ರತ್ಯೇಕತಾವಾದಿ ಭಾವನೆಯನ್ನು ಪೋಷಿಸಿಲು ಸಹಾಯಕಾರಿ ಯಾಗುತ್ತದೆ ಎಂದು ಅದು ಕಾರಣಗಳನ್ನು ನೀಡಿತ್ತು.

ಆದರೆ, ಅದೇ ಪಕ್ಷದ ಸರಕಾರ ಮಠ, ಮಂದಿರಗಳಿಗೆ ಅನುದಾನ ನೀಡುವದು, ಧಾರ್ಮಿಕ ಪ್ರತಿನಿಧಿಗಳು ರಾಜಕೀಯದಲ್ಲಿ ಮತ್ತು ಸರಕಾರದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವದಕ್ಕೆ ಅವಕಾಶ ಮಾಡಿಕೊಟ್ಟು ಕೋಮುವಾದಿ ರಾಜಕಾರಣವನ್ನು ಬೆಳೆಸಿತು. ಚುನಾವಣೆ ಸಂದರ್ಭದಲ್ಲಿ ಮಠ-ಮಂದಿರ, ಮಸೀದಿ ಹಾಗೂ ಚರ್ಚ್‌ಗಳಂತಹ ಪ್ರಾರ್ಥನಾ ಸ್ಥಳಗಳು 'ಮತ ಕ್ರೋಡೀಕರಣ ಕೇಂದ್ರ' (Vote consolidation centre) ಗಳಾಗುತ್ತಿವೆ. ರಾಜಕೀಯದಲ್ಲಿ ಧಾರ್ಮಿಕ ಶಕ್ತಿಗಳು ಹಸ್ತಕ್ಷೇಪ ಮಾಡಬಾರದು. (Religious authorities should have no say in matter of the state).

ಕಾಂಗ್ರೆಸ್ ಪಕ್ಷ ರಮ್ಜಾನ್ ಹಬ್ಬದ ಸಂದರ್ಭದಲ್ಲಿ ಮುಸ್ಲಿಂರಿಗೆ 'ಇಫ್ತಿಯಾರ್' ಔತಣಕೂಟಗಳನ್ನು ಏರ್ಪಡಿಸಿದ ಹಾಗೆ ದೀಪಾವಳಿ ಹಾಗೂ ಕ್ರಿಸಮಸ್ ಸಂದರ್ಭಗಳಲ್ಲಿ ಇತರ ಕೋಮಿನವರಿಗೂ ಅದು ಏಕೆ ಔತಣಕೂಟಗಳನ್ನು ಏರ್ಪಡಿಸುವದಿಲ್ಲ? ಇದು ವೋಟ್ ಬ್ಯಾಂಕ್ ರಾಜಕಾರಣದ ತಂತ್ರಗಾರಿಕೆ. ಜಾತಿ ಧರ್ಮಗಳನ್ನು ರಾಜಕೀಯ ಕಾರಣಗಳಿಗಾಗಿ ಓಲೈಸುವ ಕೆಲಸವನ್ನು ಎಲ್ಲ ರಾಜಕೀಯ ಪಕ್ಷಗಳು ಮಾಡಿಕೊಂಡು ಬಂದಿವೆ. ಕರ್ನಾಟಕದಲ್ಲಿ ಲಿಂಗಾಯತರು ಬಿ.ಜೆ.ಪಿ.ಪರ, ಒಕ್ಕಲಿಗರು ಜೆ.ಡಿ.ಎಸ್. ಪರ ವಾಲಿರುವದು ಇದಕ್ಕೆ ಒಂದು ನಿದರ್ಶನ. ಈ ರೀತಿಯ ಓಲೈಕೆಯು ಜನತಾ ಪ್ರಾತಿನಿಧ್ಯ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗುತ್ತದೆ.

ಆಧುನಿಕ ಸರಕಾರಗಳು ಧಾರ್ಮಿಕ ಕಾರ್ಯಕ್ರಮಗಳಿಗೆ ಸಹಾಯ-ಸಹಕಾರ, ಪ್ರಚಾರ, ಪ್ರಚೋದನೆ ಹಾಗೂ ಸರಕಾರಿ ಕಾರ್ಯಕ್ರಮಗಳಂತೆ ಸ್ವತಃ ಅವುಗಳನ್ನು ಆಚರಣೆ ಮಾಡುತ್ತಿವೆ. ಇದು ಜಾತ್ಯಾತೀತ (Secular) ತತ್ವಕ್ಕೆ ವಿರುದ್ಧವಾದದ್ದು. ಭಾರತದ ಸಂವಿಧಾನ ಸರಕಾರ ಧರ್ಮನಿರಪೇಕ್ಷತೆಯನ್ನು(State should neither be religious nor ant-religious. It should have equal respect for all religions) ಅನುಸರಿಸಬೇಕೆಂದು ಹೇಳುತ್ತದೆ.

ರಾಜಕಾರಣಿಗಳು ಅದೆಷ್ಟೇ ಜಾತಿ ಧರ್ಮ ರಾಜಕಾರಣ ಮಾಡಿದರೂ ಈ ದೇಶದ ಅಖಂಡತೆಗೆ ಧಕ್ಕೆ ತರಲು ಸಾಧ್ಯವಿಲ್ಲ. ಸುಮಾರು 12 ಧರ್ಮಗಳು 300 ಜಾತಿಗಳು 4000 ಉಪಜಾತಿಗಳು 20 ಭಾಷೆಗಳು ಹಾಗೂ 300 ಉಪಭಾಷೆಗಳನ್ನು ಹೊಂದಿದ ಈ ದೇಶ ಯಾವದೇ ರಾಜಕೀಯ ಅವಕಾಶವಾದಿತನಕ್ಕೆ ಬಹುಕಾಲ ಮನ್ನಣೆಯನ್ನು ಕೊಡಲಾರದು. ಸನಾತನ ಕಾಲದಿಂದ ಹಲವಾರು ದಾಳಿಗಳನ್ನು ಸಹಿಸಿಕೊಂಡು ಆ ಎಲ್ಲ ಸಂಸ್ಕೃತಿಗಳ ಪ್ರಭಾವವನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡು ಒಂದು ವಿಶಿಷ್ಟವಾದ ನಾಗರಿಕತೆಯನ್ನು ಕಾಪಾಡಿಕೊಂಡು ಬಂದಿದೆ.

ಈ ಎಲ್ಲ ಸತ್ಯಗಳು ನಿಧಾನವಾಗಿಯಾದರೂ ನಮ್ಮ ರಾಜಕಾರಣಿಗಳಿಗೆ ಅರ್ಥವಾಗುತ್ತಿವೆ. ಆರಂಭದಲ್ಲಿ 'ಹಿಂದೂತ್ವ, ಸ್ವದೇಶಿ, ಏಕ ರೂಪ ನಾಗರಿಕ ಸಂಹಿತೆ' ಎಂದು ಬಡಬಡಿಸುತ್ತಿದ್ದ ಪಕ್ಷ 'Feel good', 'India shining' ಎಂಬ ಅಭಿವೃದ್ಧಿ ತತ್ವದ ಕಡೆಗೆ ಮುಖ ಮಾಡಿತು. ಅದೇ ರೀತಿ ಅಲ್ಪ ಸಂಖ್ಯಾತರ ಓಲೈಕೆ ಮಾಡುತ್ತಿದ್ದ ಪಕ್ಷ '21ನೇ ಶತಮಾನ ಭಾರತದ್ದಾಗಲಿದೆ' ಎಂದು ಹೇಳುತ್ತಿದೆ. ನಿಜ, ಈ ದೇಶಕ್ಕೆ ಇಂದು ಬಹು ಮುಖ್ಯವಾಗಿ ಬೇಕಾಗಿರುವದು ಆಹಾರ, ಆಶ್ರಯ ಉದ್ಯೋಗ ಮತ್ತು ಭದ್ರತೆ. ಜಾತಿ-ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುವವರನ್ನು ಜನ ಮನೆಗೆ ಕಳಿಸುತ್ತಿದ್ದಾರೆ. 'Guided Democracy ಯನ್ನು Misguide' ಮಾಡುವ ಯಾವ ರಾಜಕೀಯ ತಂತ್ರವೂ ಇಲ್ಲಿ ನಿಲ್ಲಲಾರದು. □

ನಮ್ಮವರು

ನಿಸರ್ಗ ಬಚ್ಚಿಟ್ಟ ಇಂಗಾಲವನು
ಅಗೆದಗೆದು ಹೊರ ತಂದರು
ಗಾಳಿಗೆ ಧೂಳು ಸೇರಿಸಿದರು
ಮನೆ ಮಠ ಪೈರು ಪಚ್ಚಗೆ
ಉಸಿರಾಡದಂತೆ ಧೂಳಿನ ಅಂಗಿ ತೊಡಸಿದರು
ಕಾಡು ಬೆಟ್ಟಗಳೇ ಕರಗಿ
ಟ್ರಕ್ಕುಗಳ ಬೆನ್ನೇರಿ ಅದೃಶ್ಯವಾದವು
ಆದರೂ ನಾವು ಮಾತಾಡಲಿಲ್ಲ

ಇವರಿಗೆ ಮಲಗಲು ಮನೆ ಹೊದೆಯಲು ಬಟ್ಟೆ
ಸೀರೆ ಒಗೆಯಲು ಕಲ್ಲು, ಮೆಣಸು ಅರೆಯಲು ಮಿಕ್ಸಿ
ಯಾವುದೂ ಇರಲಿಲ್ಲ
ಅವರ ಬಚ್ಚಲು ಮನೆಯ ಬಾಗಿಲಿಗೆ
ಚಿನ್ನದ ತಗಡು, ಹಾರಲು ಪುಷ್ಪಕ ವಿಮಾನ
ಆದರೂ ನಾವು ಮಾತಾಡಲಿಲ್ಲ

ತಾವಿಟ್ಟುಕೊಂಡ ಅಡುಗೆಯವರಿಗೆ
ಓಟು ಹಾಕುವ ಚಾಲಕ ಬಾಲಕ ಹಿಂಬಾಲಕರಿಗೆ
ಪ್ರಶಸ್ತಿ ಪುರಸ್ಕಾರ ಕೊಟ್ಟರು
ಕರುಣಾಳು ಬಾ ಬೆಳಕೆ
ಎಂದು ಅನ್ನದಾತರು ನಿರ್ವಸತಿಗರು
ಮಕ್ಕಳ ಹೆತ್ತು ಹೊತ್ತವರು ಗೋಗರೆದರು
ಆದರೂ ನಾವು ಮಾತಾಡಲಿಲ್ಲ



ಕೊನೆಗೆ ಎದುರಾಳಿಗಳೂ ಮಾತಾಡಲಿಲ್ಲ
ನಾವು ಇಲ್ಲಿದ್ದರೂ ಮಾಡುವುದು ಅದೇ
ಅವರು ಅಲ್ಲಿದ್ದರೂ ಮಾಡುವುದು ಇದೇ
ಎಂದಂದುಕೊಂಡು
ಯಾರೂ ಮಾತಾಡಲಿಲ್ಲ
ಏಕೆಂದರೆ
ಅವರೂ ನಮ್ಮವರು

○ ಡಾ. ಶ್ರೀಕಂಠ ಕೂಡಿಗೆ

ಭಗವಾನ್‌ದಾಸ್: ಇನ್ನಿಲ್ಲವಾದ ಅಂಬೇಡ್ಕರ್‌ವಾದಿ

ರಘೋತ್ತಮ ಹೊ. ಬ

ಭಾರತೀಯ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಕೋಮುವಾದ, ಸಮಾಜವಾದ, ಗಾಂಧೀವಾದ ಇತ್ಯಾದಿ ವಾದ ಅಥವಾ ismಗಳು ಅಸ್ತಿತ್ವದಲ್ಲಿವೆ. ಒಂದರ್ಥದಲ್ಲಿ ಇವೆಲ್ಲಾ ಪಟ್ಟಭದ್ರ ಹಿತಾಸಕ್ತಿಗಳ ಪ್ರತಿನಿಧಿಗಳೇ ಆಗಿವೆ. ಏಕೆಂದರೆ ಮನುವಾದವೆಂಬ ವಿಷಕಾರಿ ಚಿಂತನೆಯತ್ತಲೇ ಗಿರಕಿ ಹೊಡೆಯುವ ಇವುಗಳಿಗೆ ಮಾನವೀಯತೆಯ ನೈಜ ಪ್ರತಿನಿಧಿಗಳಾಗಲು ಸಾಧ್ಯವಾಗಿಲ್ಲ. ಆದರೆ ಇವೆಲ್ಲವುಗಳಿಗೆ ಪರ್ಯಾಯವಾಗಿ ಮೂಡಿಬರುವ ಅಂಬೇಡ್ಕರ್ ವಾದ? ಖಂಡಿತ ಅಂಬೇಡ್ಕರ್‌ವಾದ ಈ ಯುಗದ ಮಾನವೀಯತೆಯ ಪ್ರತಿನಿಧಿ. ಸಮಾನತೆ, ಸ್ವಾತಂತ್ರ್ಯ, ಸಹೋದರತೆ ಎಂಬ ಬುದ್ಧ ಚಿಂತನೆಗಳಿಂದ ಭರಿತವಾದ ಅದು ಪರ್ಯಾಯವಾಗಿ ಯೋಚಿಸುವವರಿಗೆ ಹೊಸ ದಿಕ್ಕಿನಂತೆ ಕಾಣುತ್ತದೆ. ದುರಂತವೆಂದರೆ ಅಂತಹ ಹೊಸ ದಿಕ್ಕಿನ ಪ್ರತಿನಿಧಿಯಾಗಿದ್ದ, ಅಂಬೇಡ್ಕರ್‌ವಾದವೆಂಬ ನೈಜ ಮಾನವತಾವಾದದ ಮುಖ್ಯ ಪ್ರವರ್ತಕರಾಗಿದ್ದ ವ್ಯಕ್ತಿಯೊಬ್ಬರು ಮೊನ್ನೆ ಕಣ್ಮರೆಯಾದರು. ಆ ವ್ಯಕ್ತಿ ಬೇರಾರೂ ಅಲ್ಲ. "ಅಂಬೇಡ್ಕರ್ ಸಿದ್ಧಾಂತದ ನಡೆದಾಡುವ ಗ್ರಂಥಾಲಯ"ದಂತಿದ್ದ ಶ್ರೀ ಭಗವಾನ್ ದಾಸ್. ಅಂಬೇಡ್ಕರ್‌ರವರ ಜೀವನ ವಿಧಾನ, ಸಿದ್ಧಾಂತವನ್ನು ಇಡೀ ಜಗತ್ತಿಗೆ ಪರಿಚಯಿಸಲು ತನ್ನ ಜೀವನವನ್ನೇ ಸಮರ್ಪಿಸಿದ ಒಂದು ಅಂಬೇಡ್ಕರ್‌ವಾದಿ ಹಣತೆ.

ಭಗವಾನ್‌ದಾಸ್‌ರವರು ಹುಟ್ಟಿದ್ದು ಏಪ್ರಿಲ್ 23, 1923 ರಂದು. ಅವಿಭಜಿತ ಪಂಜಾಬ್ ರಾಜ್ಯದ ಸಿಮ್ಲಾ ಬಳಿಯ ಜುಟೋಗ್ ಎಂಬ ಸಣ್ಣ ಗ್ರಾಮ ಇವರ ಜನ್ಮಸ್ಥಳ. ಅಸ್ಪೃಶ್ಯ ಭಂಗಿ ಸಮುದಾಯಕ್ಕೆ ಸೇರಿದ ಇವರು ಬಾಬಾಸಾಹೇಬ್ ಅಂಬೇಡ್ಕರ್‌ರವರ ಸಂಪರ್ಕ ಪಡೆದಾಗ ಅವರಿಗೆ ಕೇವಲ 16 ವರ್ಷ. ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಕಾರ್ಮಿಕ ಇಲಾಖೆಯ ಉಸ್ತುವಾರಿ ಹೊತ್ತಿದ್ದ ಅಂಬೇಡ್ಕರ್‌ರವರು 1943 ರಲ್ಲಿ ಸಿಮ್ಲಾಕ್ಕೆ ಭೇಟಿ ನೀಡಿದಾಗ ಅಂಬೇಡ್ಕರ್‌ರವರೇ ಸ್ಥಾಪಿಸಿದ್ದ "ಪರಿಶಿಷ್ಟ ಜಾತಿ ಫೆಡರೇಷನ್"ನ ಸದಸ್ಯರಾಗಿ ಭಗವಾನ್‌ದಾಸ್‌ರವರು ಅಂಬೇಡ್ಕರ್‌ರನ್ನು ಭೇಟಿಯಾದರು. ಭಗವಾನ್‌ದಾಸ್‌ರ ಅಂಬೇಡ್ಕರ್‌ವಾದದ ಯಾನ ಬಹುಶಃ ಅಂದೇ ಪ್ರಾರಂಭವಾಯಿತೆಂದೇಳಬಹುದು. ಏಕೆಂದರೆ ಅಂದಿನಿಂದ ಅಂಬೇಡ್ಕರ್‌ರವರ ಸಾವಿನವರೆಗೆ. ಅಂದರೆ ಸತತ 13 ವರ್ಷಗಳವರೆಗೆ ಅವರು ಬಾಬಾಸಾಹೇಬರ ಆಪ್ತ ಒಡನಾಡಿಯಾಗಿದ್ದರು. ಇದು ಎಂತಹ ಒಡನಾಟವೆಂದರೆ 1955 – 56 ರಲ್ಲಿ ಅವರು ಅಂಬೇಡ್ಕರರ ಜೊತೆ ಸಂಶೋಧನಾ ಸಹಾಯಕರಾಗಿಯೂ ಕೂಡ ಕೆಲಸ ಮಾಡಿದ್ದರು.



1943ರಲ್ಲೇ ಮೆಟ್ರಿಕ್ಯುಲೇಷನ್ ಮುಗಿಸಿದ ಭಗವಾನ್‌ದಾಸ್‌ರವರು ಭಾರತೀಯ ವಾಯುಪಡೆಯಲ್ಲಿ ರೇಡಾರ್ ಆಪರೇಟರ್ ಆಗಿ ಕೆಲಸಕ್ಕೆ ಸೇರಿದರು. ಎರಡನೆಯ ಮಹಾಯುದ್ಧದಲ್ಲಿ ಬರ್ಮಾ ಪಡೆಯಲ್ಲಿ ಸೇವೆ ಸಲ್ಲಿಸಿದ ಅವರು ಸ್ವಾತಂತ್ರ್ಯಾನಂತರ ಸಿಮ್ಲಾದಲ್ಲಿ ಮಹಾಲೆಕ್ಕಪರಿಶೋಧಕರ (ಸಿ..ಎ..ಜಿ) ಕಚೇರಿಯಲ್ಲಿ ಉದ್ಯೋಗಕ್ಕೆ ಸೇರಿದರು. 1971ರಲ್ಲಿ ಅಂದರೆ ತಮ್ಮ 44ನೇ ವಯಸ್ಸಿನಲ್ಲಿ ಕಠಿಣ ಪ್ರಯತ್ನದಿಂದ ಎಂ.ಎ., ಎಲ್.ಎಲ್. ಬಿ., ಪದವಿ ಪಡೆದ ಅವರು ತಮ್ಮ ಮಹಾ ಲೆಕ್ಕ ಪರಿಶೋಧಕರ ಕಛೇರಿಯ ಹುದ್ದೆಗೆ ರಾಜೀನಾಮೆ ಇತ್ತು ವಕೀಲಿ ವೃತ್ತಿ ಆರಂಭಿಸಿದರು. ಇದಿಷ್ಟು ಭಗವಾನ್‌ದಾಸ್‌ರವರ ಉದ್ಯೋಗ ಪರ್ವ. ಆದರೆ ಅವರ ಜೀವನದ ನಿಜವಾದ ಉದ್ಯೋಗ? ಖಂಡಿತ ತಮ್ಮ ಈ ಎಲ್ಲಾ ಉದ್ಯೋಗಗಳ ನಡುವೆ ಅವರು ಅವಿರತವಾಗಿ ದುಡಿದದ್ದು "ಅಂಬೇಡ್ಕರ್‌ವಾದ ವೆಂಬ ಮಹಾಸಂಸ್ಥೆ" ಯಲ್ಲಿ! ಎಡೆಬಿಡದೆ ದುಡಿದ ಅವರು ಅಂಬೇಡ್ಕರರ ಜೀವನ ಸಾಧನೆ, ಮತ್ತವರ ಬರಹಗಳ ಸಂಗ್ರಹಕ್ಕೆ, ಪ್ರಕಟಣೆಗೆ ತಮ್ಮ ಇಡೀ ಜೀವನವನ್ನೇ ಮುಡಿಪಿಟ್ಟರು. ಇದು ಹೇಗೆ ಎಂದರೆ ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳನ್ನು ಇಡೀ ಜಗತ್ತಿಗೆ ಮೊಟ್ಟ ಮೊದಲ ಬಾರಿಗೆ ಪರಿಚಯಿಸಿದ ಕೀರ್ತಿ ಇವರಿಗೇ ಸಲ್ಲುತ್ತದೆ! ಏಕೆಂದರೆ 1979ರಲ್ಲಿ ಮಹಾರಾಷ್ಟ್ರ ಸರ್ಕಾರ ದಿ. ವಸಂತ್‌ಮೂನ್‌ರವರ ನೇತೃತ್ವದಲ್ಲಿ ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳ ಸಂಪುಟಗಳನ್ನು ಪ್ರಕಟಿಸಲು ಪ್ರಾರಂಭಿಸುವುದಕ್ಕೂ ಮೊದಲೇ ಭಗವಾನ್‌ದಾಸ್‌ರವರು 1963ರಲ್ಲೇ "THUS SPOKE AMBEDKAR" (ಅಂಬೇಡ್ಕರ್ ಹೀಗೆ ಹೇಳಿದರು) ಹೆಸರಿನ ಸರಣಿಯಲ್ಲಿ ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳನ್ನು ಪ್ರಕಟಿಸಿದರು. ಈ ಸರಣಿಯಲ್ಲಿ 1963 ರಿಂದ 1980ರವರೆಗೆ "THUS SPOKE AMBEDKAR"ನ ನಾಲ್ಕು ಬೃಹತ್ ಸಂಪುಟಗಳನ್ನು ಪ್ರಕಟಿಸಿದ ಅವರು ಮುಂದೆ ಮಹಾರಾಷ್ಟ್ರ ಸರ್ಕಾರದ ಆ ಮಹಾ

ಭಗವಾನ್‌ದಾಸ್‌ರವರು ಹುಟ್ಟಿದ್ದು ಏಪ್ರಿಲ್ ೨೩, ೧೯೨೩ ರಂದು. ಅವಿಭಜಿತ ಪಂಜಾಬ್ ರಾಜ್ಯದ ಸಿಮ್ಲಾ ಬಳಿಯ ಜುಟೋಗ್ ಎಂಬ ಸಣ್ಣ ಗ್ರಾಮ ಇವರ ಜನ್ಮಸ್ಥಳ. ಅಸ್ಪೃಶ್ಯ ಭಂಗಿ ಸಮುದಾಯಕ್ಕೆ ಸೇರಿದ ಇವರು ಬಾಬಾಸಾಹೇಬ್ ಅಂಬೇಡ್ಕರ್‌ರವರ ಸಂಪರ್ಕ ಪಡೆದಾಗ ಅವರಿಗೆ ಕೇವಲ ೧೬ ವರ್ಷ. ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಕಾರ್ಮಿಕ ಇಲಾಖೆಯ ಉಸ್ತುವಾರಿ ಹೊತ್ತಿದ್ದ ಅಂಬೇಡ್ಕರ್‌ರವರು ೧೯೪೩ರಲ್ಲಿ ಸಿಮ್ಲಾಕ್ಕೆ ಭೇಟಿ ನೀಡಿದಾಗ ಅಂಬೇಡ್ಕರ್‌ರವರೇ ಸ್ಥಾಪಿಸಿದ್ದ "ಪರಿಶಿಷ್ಟ ಜಾತಿ ಫೆಡರೇಷನ್"ನ ಸದಸ್ಯರಾಗಿ ಭಗವಾನ್‌ದಾಸ್‌ರವರು ಅಂಬೇಡ್ಕರ್‌ರನ್ನು ಭೇಟಿಯಾದರು. ಭಗವಾನ್‌ದಾಸ್‌ರ ಅಂಬೇಡ್ಕರ್‌ವಾದದ ಯಾನ ಬಹುಶಃ ಅಂದೇ ಪ್ರಾರಂಭವಾಯಿತೆಂದೇಳಬಹುದು.

ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತರು. ಈ ನಿಟ್ಟಿನಲಿ ಇಂದೇನಾದರು ಅಂಬೇಡ್ಕರರ ಬಆಹಗಳು ಮತ್ತು ಭಾಷಣಗಳ ಸಮಗ್ರ ಸಾಹಿತ್ಯ ನಮ್ಮ ಕಣ್ಣ ಮುಂದಿದೆ ಎನ್ನುವುದಾದರೆ ಅದರ ಹಿಂದೆ ಭಗವಾನ್‌ದಾಸ್ ಎಂಬ ಅಧ್ಭುತ ಶಕ್ತಿಯ ಮಾಂತ್ರಿಕತೆ ಇದೆ ಎಂದರೆ ಅತಿಶ ಯೋಕ್ತಿಯೇನಲ್ಲ.

ಈ ನಡುವೆ ಭಗವಾನ್‌ದಾಸ್‌ರವರ ಅದ್ಭುತ ಕೈಗಳಿಂದ ಸುಮಾರು 23 ಕೃತಿಗಳು ಹೊರ ಬಂದವು. ಅವುಗಳಲ್ಲಿ ಪ್ರಸಿದ್ಧವಾದುದು "ಮೈ ಭಂಗೀ ಹ್ಞೂಂ"(ನಾನು ಭಂಗಿಯಾಗಿದ್ದೇನೆ) ಎಂಬ ಕೃತಿ. ಅಸ್ಪೃಶ್ಯರು ಕೀಳರಿಮೆಯಿಂದ ಹೊರಬರಬೇಕಾದರೆ ತಮ್ಮ ಜಾತಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಪ್ರತಿಪಾದಿಸಿದ ಅವರು ಆ ನಿಟ್ಟಿನಲ್ಲೇ ತಮ್ಮ "ನಾನು ಭಂಗಿಯಾಗಿದ್ದೇನೆ" ಎಂಬ ಆ ಕೃತಿ ರಚಿಸಿದರು. ಒಂದರ್ಥದಲ್ಲಿ ತಮ್ಮ ಜಾತಿಯನ್ನು ಹೇಳಿಕೊಳ್ಳಲು ಹಿಂಜರಿಯುವ .ಸ್ವಾಭಿಮಾನರಹಿತ ಅಸ್ಪೃಶ್ಯ ಸಮುದಾಯದ ಕೆಲವರಿಗೆ ಭಗವಾನ್‌ದಾಸರ ಈ ಧೋರಣೆ ಪಾಠದಂತಿತ್ತು.

ಹಾಗೆಯೇ ತಮ್ಮ ಭಂಗಿ ಸಮುದಾಯವನ್ನು "ವಾಲ್ಮೀಕಿ"ಗಳೆಂದು ಕರೆಯುವುದನ್ನು ಪ್ರಬಲವಾಗಿ ವಿರೋಧಿಸಿದ ಅವರು ಇದು ಭಂಗಿಗಳನ್ನು ಹಿಂದೂಕರಣಗೊಳಿಸುವ ದುಷ್ಟ ಹುನ್ನಾರವೆಂದು ಗುಡುಗಿದರು.(ಅಂದ ಹಾಗೆ ನಮ್ಮ ರಾಜ್ಯದಲ್ಲಿಯೂ ಕೂಡ ಬೇಡ, ನಾಯಕ ಇತ್ಯಾದಿ ಸಮುದಾಯಗಳನ್ನು ವಾಲ್ಮೀಕಿಗಳೆಂದು ಕರೆಯಲಾಗುತ್ತಿದೆ! ಇದೂ ಕೂಡ ಆ ಸಮುದಾಯಗಳನ್ನು ಹಿಂದೂಕರಣಗೊಳಿಸುವ ಪ್ರಯತ್ನವಿರಬಹುದೇ? ಆ ಸಮುದಾಯಗಳ ನಾಯಕರು ಈ ನಿಟ್ಟಿನಲಿ ಚಿಂತಿಸಿದರೆ ಒಳಿತು)

ಹಾಗೆಯೇ ತಮ್ಮನ್ನು ಅಂದರೆ ಅಸ್ಪೃಶ್ಯರನ್ನು "ದಲಿತ" (ತುಳಿತಕ್ಕೊಳಗಾದವರು, ದಮನಿತರು) ಎನ್ನುವುದನ್ನು ವಿರೋಧಿಸಿದ ಅವರು ಅಂತಹ ಕೀಳುಪದ ಬಳಸುವುದಕ್ಕಿಂತ "ಅಸ್ಪೃಶ್ಯರು" ಎನ್ನುವುದೇ ಶ್ರೇಷ್ಠವೆಂದು ಪ್ರತಿಪಾದಿಸಿದರು. ಆ ಮೂಲಕ ಇಡೀ ಜಗತ್ತಿಗೆ ಅಂಬೇಡ್ಕರ್‌ರವರು ಸಾರಿದ ಸ್ವಾಭಿಮಾನದ ನೈಜ ಅರ್ಥವನ್ನು ಬೋಧಿಸಿದರು.

ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳನ್ನು ಇಡೀ ಜಗತ್ತಿಗೆ ಪರಿಚಯಿಸಿದ ಭಗವಾನ್‌ದಾಸ್‌ರು ಅಷ್ಟಕ್ಕೆ ಸುಮ್ಮನೇ ಕೂರಲಿಲ್ಲ. ಅದನ್ನು ಇಡೀ ವಿಶ್ವಕ್ಕೆ ಪರಿಚಯಿಸುವುದು ಹೇಗೆ ಎಂಬ ದಿಸೆಯಲ್ಲಿ ಚಿಂತಿಸತೊಡಗಿದರು.. ಈ ನಿಟ್ಟಿನಲಿ 1983 ರಲ್ಲಿ ಪ್ರಪ್ರಥಮಬಾರಿಗೆ ಇಂಗ್ಲೆಡಿಗೆ ಭೇಟಿ ನೀಡಿದ ಅವರು ಇಂಗ್ಲೆಂಡಿನಲ್ಲಿ ಅಂಬೇಡ್ಕರ್ ಚಳುವಳಿಯ ಪ್ರಚಾರಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು. "ಅಂಬೇಡ್ಕರ್ ಮಿಷನ್ ಸೊಸೈಟಿ"ಯ ಹೆಸರಲ್ಲಿ ಇಂಗ್ಲೆಂಡಿನಲ್ಲಿ ಅಂಬೇಡ್ಕರ್ ವಿಚಾರಧಾರೆಗಳನ್ನು ಜನಪ್ರಿಯಗೊಳಿಸಿದ ಅವರು "ವಿಶ್ವ ಧಾರ್ಮಿಕ ಮತ್ತು ಶಾಂತಿ ಸಮ್ಮೇಳನ (WCRP)"ದ ಸ್ಥಾಪಕ ಸದಸ್ಯರೂ ಕೂಡ ಆಗಿದ್ದರು .

ವಿಶ್ವ ಧಾರ್ಮಿಕ ಮತ್ತು ಶಾಂತಿ ಸಮ್ಮೇಳನದ ಬಹುತೇಕ ಸಭೆಗಳಲ್ಲಿ ಶೋಷಿತರ (ಭಗವಾನ್‌ದಾಸ್‌ರ ಪ್ರಕಾರ ಅಸ್ಪೃಶ್ಯರನ್ನು ಹಾಗೆ ಕರೆಯುವುದು ಕೂಡ ತಪ್ಪಾಗಿತ್ತು!) ಏಕೈಕ ಪ್ರತಿನಿಧಿಯಾಗಿ ಪಾಲ್ಗೊಂಡ ಅವರು ಅಸ್ಪೃಶ್ಯರ ಸಮಸ್ಯೆಗಳನ್ನು ಒಂದರ್ಥದಲಿ .ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಚರ್ಚಿಸುವಂತೆ ಮಾಡಲು ಅವಿರತವಾಗಿ ಶ್ರಮಿಸಿದರು.

ಉದಾಹರಣೆಗೆ 1983ರಲ್ಲಿ ವಿಶ್ವಸಂಸ್ಥೆಯ ಮಾನವ ಹಕ್ಕು ಆಯೋಗಕ್ಕೆ ಅಸ್ಪೃಶ್ಯರ ಸಮಸ್ಯೆಗಳ ಬಗ್ಗೆ ಭಿನ್ನವತ್ತಳೆ ಅರ್ಪಿಸಿದ ಅವರು, 1998ರಲ್ಲಿ ಮಲೇಷಿಯಾದ ಕೌಲಾಲಂಪುರದಲ್ಲಿ ನಡೆದ "ಅಂತರಾಷ್ಟ್ರೀಯ ದಲಿತ ಸಮ್ಮೇ[illegible]ನ ಯಶಸ್ಸಿನಲ್ಲಿ ಬಹು ಮುಖ್ಯ ಪಾತ್ರ ವಹಿಸಿದರು. ಮುಂದೆ ಈ ಸಮ್ಮೇಳನ ದಕ್ಷಿಣ ಆಫ್ರಿಕಾದ ಡರ್ಬಾನ್‌ನಲ್ಲಿ 2001ರಲ್ಲಿ ನಡೆದ 'ಜನಾಂಗ ವಾದದ ವಿರುದ್ಧದ ವಿಶ್ವ ಸಮಾವೇಶಕ್ಕೆ "ಅಸ್ಪೃಶ್ಯರ ಸಮಸ್ಯೆಗಳನ್ನು ಕೊಂಡೊಯ್ಯುವಲ್ಲಿ ಮಹತ್ತರ ಪಾತ್ರ ನಿರ್ವಹಿಸಿದುದು ಈಗ ಇತಿಹಾಸ.

ಅಂತು ಭಗವಾನ್‌ದಾಸ್‌ರ ಅವಿರತ ಪ್ರಯತ್ನ ದಲಿತರ ಸಮಸ್ಯೆಗಳನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿತು. ಈ ನಡುವೆ ಅಸ್ಪೃಶ್ಯರ ಸಮಸ್ಯೆಗಳನ್ನು ಅಂತರಾಷ್ಟ್ರೀಕರಣಗೊಳಿಸಲು ನಿರಂತರ ಶ್ರಮಿಸಿದ ಭಗವಾನ್‌ದಾಸ್‌ರು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಅಸ್ಪೃಶ್ಯರ ಹಾಗೆ ಬದುಕುತ್ತಿದ್ದ ಸಮುದಾಯಗಳಿಗೂ ಕೂಡ ದನಿಯಾಗಲು ಯತ್ನಿಸಿದರು. ಈ ದಿಸೆಯಲ್ಲಿ ಜಪಾನ್ ದೇಶದ ಅಸ್ಪೃಶ್ಯ ಸಮುದಾಯವಾದ "ಬುರಾಕುಮಿನ್" ಸಮುದಾಯಕ್ಕೆ ಮಾರ್ಗದರ್ಶನ ನೀಡಲು ಅಲ್ಲಿಗೆ 3 ಬಾರಿ ಭೇಟಿ ಇತ್ತ ಅವರು ಅಲ್ಲಿಯೂ ಕೂಡ ಅಂಬೇಡ್ಕರರನ್ನು ಜನಪ್ರಿಯ ಗೊಳಿಸಿದರು. !

ಭಗವಾನ್‌ದಾಸ್‌ರವರ ಅದ್ಭುತ ಕೈಗಳಿಂದ ಸುಮಾರು 23 ಕೃತಿಗಳು ಹೊರ ಬಂದವು. ಅವುಗಳಲ್ಲಿ ಪ್ರಸಿದ್ಧವಾದುದು "ಮೈ ಭಂಗೀ ಹ್ಞೂಂ"(ನಾನು ಭಂಗಿಯಾಗಿದ್ದೇನೆ) ಎಂಬ ಕೃತಿ. ಅಸ್ಪೃಶ್ಯರು ಕೀಳರಿಮೆಯಿಂದ ಹೊರಬರಬೇಕಾದರೆ ತಮ್ಮ ಜಾತಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಪ್ರತಿಪಾದಿಸಿದ ಅವರು ಆ ನಿಟ್ಟಿನಲ್ಲೇ ತಮ್ಮ "ನಾನು ಭಂಗಿಯಾಗಿದ್ದೇನೆ" ಎಂಬ ಆ ಕೃತಿ ರಚಿಸಿದರು. ಒಂದರ್ಥದಲಿ ತಮ್ಮ ಜಾತಿಯನ್ನು ಹೇಳಿಕೊಳ್ಳಲು ಹಿಂಜರಿಯುವ ಸ್ವಾಭಿಮಾನರಹಿತ ಅಸ್ಪೃಶ್ಯ ಸಮುದಾಯದ ಕೆಲವರಿಗೆ ಭಗವಾನ್‌ದಾಸರ ಈ ಧೋರಣೆ ಪಾಠದಂತಿತ್ತು. ಹಾಗೆಯೇ ತಮ್ಮ ಭಂಗಿ ಸಮುದಾಯವನ್ನು "ವಾಲ್ಮೀಕಿ"ಗಳೆಂದು ಕರೆಯುವುದನ್ನು ಪ್ರಬಲವಾಗಿ ವಿರೋಧಿಸಿದ ಅವರು ಇದು ಭಂಗಿಗಳನ್ನು ಹಿಂದೂಕರಣ ಗೊಳಿಸುವ ದುಷ್ಟ ಹುನ್ನಾರವೆಂದು ಗುಡುಗಿದರು.

ಒಂದಂತು ನಿಜ, ಇಂದು ಅಸ್ಪೃಶ್ಯರ ಸಮಸ್ಯೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸಲ್ಪಡಿಡುತ್ತಿದ್ದರೆ, ಒಬಾಮಾ ಬಾಯಲ್ಲೂ ಅಂಬೇಡ್ಕರ್ ಪದವೇನಾದರೂ ಉಚ್ಚರಿಸಲ್ಪಡುತ್ತಿದ್ದರೆ ಅದು ಭಗವಾನ್‌ದಾಸ್‌ರ ಶ್ರೇಷ್ಠ ಪ್ರಯತ್ನದ ಫಲವಲ್ಲದೆ ಬೇರೇನಲ್ಲ.

ದುರಂತವೆಂದರೆ ಇಂತಹ ಶ್ರೇಷ್ಠ ಪ್ರಯತ್ನಕ್ಕೆ, ಶ್ರೇಷ್ಠ ವ್ಯಕ್ತಿತ್ವಕ್ಕೆ ಶೋಷಿತ ಸಮುದಾಯ ಸರಿಯಾದ ಗೌರವ ನೀಡಲಿಲ್ಲ. ಕಳೆದ ವರ್ಷವಷ್ಟೆ ಅವರ ಹೆಸರಿನಲ್ಲಿ ಹಿಂದಿ ಪತ್ರಿಕೆಯೊಂದು ವಿಶೇಷ ಸಂಚಿಕೆಯನ್ನು ತಂದದ್ದು ಬಿಟ್ಟರೆ ಅವರಿಗೆ ಸಿಗಬೇಕಾದ ನೈಜ ಗೌರವ ಅವರಿಗೆ ಸಿಗಲೇ ಇಲ್ಲ. ಇನ್ನೂ "ವಸಿ ಜೋರಾಗಿ ಕೆಮ್ಮಿದರೂ" ಪದ್ಮ, ರತ್ನ ಇತ್ಯಾದಿ ಪ್ರ[illegible]ಗಳನ್ನು ಮನುವಾದಿಗಳ ಕೊರಳಿಗೆ ಹಾಕುವ ಸರ್ಕಾರಗಳೂ ಕೂಡ ಶ್ರೇಷ್ಠ ಅಂಬೇಡ್ಕರ್‌ವಾದಿ ಭಗವಾನ್‌ದಾಸ್‌ರತ್ತ ತಿರುಗಿಯೂ ಕೂಡ ನೋಡಲೇ ಇಲ್ಲ! ಒಂದರ್ಥದಲ್ಲಿ ಸ್ವಾಭಿಮಾನಿ ಅಂಬೇಡ್ಕರ್‌ವಾದಿಗಳಿಗೆ ಏನು ಸಿಗುತ್ತದೆ, ಚಮಚಾ ಗಾಂಧಿವಾದಿಗಳಿಗೆ ಏನು ಸಿಗುತ್ತದೆ ಎಂಬುದಕ್ಕೆ ಭಗವಾನ್‌ದಾಸ್‌ರ ಜೀವನ ಅದ್ಭುತ ನಿದರ್ಶನವಾಗಿ ನಿಲ್ಲುತ್ತದೆ.

ಅದೇನೆ ಇರಲಿ, ಬಾಬಾಸಾಹೇಬ್ ಅಂಬೇಡ್ಕರರ ಹಾಗೆ ಬೌದ್ಧ ಧರ್ಮದ ಅನುಯಾಯಿಯಾಗಿ ಭಗವಾನ್‌ದಾಸ್‌ರು ತಮ್ಮ ಅರ್ಥಪೂರ್ಣ 83 ವರ್ಷಗಳ ತುಂಬು ಜೀವನದಲ್ಲಿ ಕ್ಷಣ ಕ್ಷಣಕ್ಕೂ ಅಂಬೇಡ್ಕರ್‌ವಾದದ ಪಥದಲ್ಲಿ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ನಡೆದರು. ಇಡೀ ವಿಶ್ವದ ಮೂಲೆ ಮೂಲೆ ಸುತ್ತಿ ಅಲ್ಲೆಲ್ಲಾ ಅಂಬೇಡ್ಕರ ರನ್ನು ಪ್ರತಿಷ್ಠಾಪಿಸಲು ಯತ್ನಿಸಿದರು. ಅಂಬೇಡ್ಕರ್ ರವರು ಬದುಕಿದ್ದಾಗ ಅವರ ಆಪ್ತ ಒಡನಾಡಿಯಾಗಿದ್ದ ಭಗವಾನ್‌ದಾಸ್‌ರು ಆ ಸಂಧರ್ಭದಲ್ಲಿ ಗಳಿಸಿದ ಬಾಬಾ ಸಾಹೇಬರ ಚಿಂತನೆಯ ಸಾರವನ್ನು ಇಡೀ ವಿಶ್ವಕ್ಕೆ ಧಾರೆ ಯೆರೆಯಲು ತಮ್ಮ ಜೀವನವಿಡೀ ಶ್ರಮಿಸಿದರು.

ವಿಷಾದನೀಯವೆಂದರೆ ಇಂತಹ ಶ್ರೇಷ್ಠ ಅಂಬೇಡ್ಕರ್‌ವಾದಿ, ಹುಟ್ಟು ಸ್ವಾಭಿಮಾನಿ ಮೊನ್ನೆ ಅಂದರೆ ನವೆಂಬರ್ 18ರಂದು ದೆಹಲಿಯ ತಮ್ಮ ನಿವಾಸದಲ್ಲಿ ಪರಿನಿರ್ವಾಣ ಹೊಂದಿದರು. ರಾಹುಲ್ ದಾಸ್ ಎಂಬ ಓರ್ವ ಪುತ್ರ, ಶುಭಾ ದಾರಾಪುರಿ ಮತ್ತು ಝೋಲಾ ಹಡ್ಕೆ ಎಂಬ ತಮ್ಮಿಬ್ಬರು ಪುತ್ರಿಯರು, ಒಟ್ಟಾರೆ ಇಡೀ ಅಸ್ಪೃಶ್ಯ ಸಮು ದಾಯವನ್ನು ಅಗಲಿದ ಅವರು ತಮ್ಮ ಅಂಬೇಡ್ಕರ್‌ವಾದದ ಯಾನಕ್ಕೆ ಪೂರ್ಣ ವಿರಾಮವನ್ನಿಟ್ಟು ಹೊರಟರು.

ಬಾಬಾಸಾಹೇಬರ ಆಪ್ತ ಒಡನಾಡಿಯಾಗಿ ನಮ್ಮ ಮತ್ತು ಬಾಬಾಸಾಹೇಬರ ನಡುವಣ ಕೊಂಡಿಯಂತ್ತಿದ್ದ ಭಗವಾನ್‌ದಾಸ್‌ರ ಅಗಲುವಿಕೆ ನಿಜಕ್ಕೂ ಆಘಾತಕಾರಿಯಾದುದು. ಅಸ್ಪೃಶ್ಯ ಸಮುದಾಯಕ್ಕೆ ಉಂಟಾದ ಭರಿಸಲಾಗದ ನಷ್ಟವದು. ಅಂತಹ ನಷ್ಟ ತುಂಬಬೇಕಾದರೆ ಭಗಾವಾನ್‌ದಾಸ್‌ರಂತಹ ಶ್ರೇಷ್ಠ ಮತ್ತು ನಿಷ್ಠ ಅಂಬೇಡ್ಕರ್‌ವಾದಿಗಳು ನಾವಾಗಬೇಕಷ್ಟೆ.

ಕಡೆಯದಾಗಿ ಹೇಳುವುದಾದರೆ, ತಮ್ಮ ಪ್ರತಿಯೊಂದು ಬರಹದ ಕೊನೆಯ ಪುಟದಲ್ಲಿ ಭಗವಾನ್‌ದಾಸ್‌ರು ಬಳಸುತ್ತಿದ್ದ ಕೊನೆಯ ಪದ "ಜೈ ಭೀಮ್" ಎಂದು. ತಮ್ಮ ಅರ್ಥಪೂರ್ಣ ಅಂಬೇಡ್ಕರ್‌ವಾದಿ ಜೀವನದ ಕೊನೆಯ ಪುಟ ಪೂರೈಸಿರುವ ಭಗವಾನ್‌ದಾಸ್‌ರಿಗೂ ನಾವು ಅವರ "ಆ ಶ್ರೇಷ್ಠ ಕೊನೆಯ ಪದ" ಬಳಸುವುದೂ ಸೂಕ್ತವಲ್ಲವೇ?

ಜೈ ಭೀಮ್ ಭಗವಾನ್‌ದಾಸ್‌ಜೀ. □

ಅರುಣಾಚಲದಲ್ಲಿ ಬುದ್ಧ

ಎಸ್. ಮರಿಸ್ವಾಮಿ

ಅರುಣಾಚಲ ಪ್ರದೇಶ – ಹಿಂದಿನ ನೇಫಾ (ನಾರ್ತ್ ವೆಸ್ಟ್ ಫ್ರಾಂಟಿಯರ್ ಏಜೆನ್ಸಿ) – ಭಾರತದ ಉತ್ತರದ ತುತ್ತ ತುದಿಯಲ್ಲಿರುವ ರಾಜ್ಯ. ಹಿಮಾಲಯದ ತಪ್ಪಲಲ್ಲಿನ ಬೆಟ್ಟಗುಡ್ಡಗಳಿಂದ ಸಂಪೂರ್ಣವಾಗಿ ಆವರಿಸಲ್ಪಟ್ಟ ಸೌಂದರ್ಯಭರಿತ ನಾಡು. ಮೂರು ದೇಶಗಳೊಡನೆ – ಪೂರ್ವಕ್ಕೆ ಮ್ಯಾನ್ಮಾರ್, ಉತ್ತರಕ್ಕೆ ಟಿಬೆಟ್ ಮತ್ತು ಪಶ್ಚಿಮಕ್ಕೆ ಭೂತಾನ್ ಗಡಿ ಹೊಂದಿರುವ ಏಕೈಕ ರಾಜ್ಯ. 1962ರ ಭಾರತ ಮತ್ತು ಚೀನಾ ಯುದ್ಧದ ಸಮಯದಲ್ಲಿ ಚೀನಾ ತವಾಂಗ್, ದಿರಾಂಗ್ ಮುಂತಾದ ಇಲ್ಲಿನ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿತ್ತು ಮತ್ತು ಸ್ವ ಇಚ್ಛೆಯಿಂದಲೇ ಅವನ್ನು ತೆರವುಮಾಡಿ ಹಿಂದೆ ನಡೆಯಿತು. ಈಗಲೂ ಸಹ ಇವುಗಳ ಮೇಲೆ ಚೀನಾ ತನ್ನ ಹಕ್ಕನ್ನು ಮುಂದಿಡುತ್ತಲೇ ಇದೆ.

ಒಂದು ಸಾವಿರ ವರ್ಷಗಳು ಇಡೀ ಭಾರತದುದ್ದಕ್ಕೂ ಪಸರಿಸಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬೌದ್ಧ ಧರ್ಮ ಹೇಳ ಹೆಸರಿಲ್ಲದಂತೆ ಭಾರತದಿಂದ ಮಾಯವಾಗಿತ್ತು. ಬುದ್ಧನೊಬ್ಬನಿದ್ದ, ಅವನು ಜಗತ್ತಿನ ಒಳಿತಿಗಾಗಿ ಒಂದು ಶ್ರೇಷ್ಠ ಧರ್ಮವನ್ನು ಭೋದಿಸಿದ್ದ ಎಂದು ಗುರುತಿಸುವುದೂ ಸಾಧ್ಯವಿರಲಿಲ್ಲ. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಜತೆಗೆ ಬಂದ ಕೆಲವು ಯುವ ಆಡಳಿತಗಾರರು ಮತ್ತು ಸೇನಾಧಿಕಾರಿಗಳ ಸತತ ಪರಿಶ್ರಮದ ಫಲವಾಗಿ ಬುದ್ಧ, ಚಂದ್ರಗುಪ್ತ ಮೌರ್ಯ, ಅಶೋಕ, ಇವರನ್ನು ಗುರುತಿಸಬೇಕಾಯಿತು ಎಂಬುದು ವಿಪರ್ಯಾಸ.

ಅದೇನೇ ಇರಲಿ ಬೌದ್ಧ ಧರ್ಮ ಭಾರತದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಅರುಣಾಚಲದಲ್ಲಿ ಅದು ಹಬ್ಬಿದ್ದಂತೆ ಕಾಣುವುದಿಲ್ಲ. ಆದರೆ ಇಂದು ಅರುಣಾಚಲ ಅಧಿಕ ಸಂಖ್ಯೆಯ ಬೌದ್ಧ ಧರ್ಮೀಯರನ್ನು ಹೊಂದಿರುವ ಏಕೈಕ ರಾಜ್ಯ. ಸುಮಾರು ನೂರು ಬುಡಕಟ್ಟುಗಳು, ಪ್ರತಿ ಬುಡಕಟ್ಟಿಗೆ ತನ್ನದೇ ಭಾಷೆ, ಪ್ರತಿ ಬುಡಕಟ್ಟಿಗೂ ತನ್ನದೇ ಆದ ವಿಶೇಷ ಉಡಿಗೆ, ತೊಡಿಗೆ ಮತ್ತು ಪ್ರತಿ ಬುಡಕಟ್ಟಿನ ಜನ ತಮ್ಮ ವಿಶಿಷ್ಟತೆಯನ್ನು ಸಂರಕ್ಷಿಸಿಕೊಂಡು ಬಂದಿರುವ ಈ ನಾಡಿನಲ್ಲಿ ಹೆಚ್ಚು ಬುಡಕಟ್ಟುಗಳ ಜನರು ಬೌದ್ಧ ಧರ್ಮೀಯರು. ಬೌದ್ಧ ಧರ್ಮದ ಆದರ್ಶಗಳಲ್ಲಿ ಅಚಲ ನಂಬಿಕೆ ಹೊಂದಿ ಅದರ ಧಾರ್ಮಿಕ ಆಚರಣೆಗಳನ್ನು ಚಾಚೂ ತಪ್ಪದೆ ನಡೆಸಿಕೊಂಡು ಬಂದಿರುವಂತಹವರು.

ಬೌದ್ಧ ಧರ್ಮ ಅರುಣಾಚಲಕ್ಕೆ ಎರಡು ದಿಕ್ಕಿನಿಂದ ಬಂದಂತೆ ಕಾಣುತ್ತದೆ. ಪೂರ್ವದ ಪ್ರದೇಶಗಳಾದ ಚಾಂಗ್‌ಲಾಂಗ್, ಲೋಹಿತ ಮುಂತಾದ ಜಿಲ್ಲೆಗಳಿಗೆ ಅದು ಬರ್ಮ ಮತ್ತು ತಾಯ್ಲೆಂಡ್‌ನಿಂದಲೂ, ಪಶ್ಚಿಮದ ಜಿಲ್ಲೆಗಳಾದ ತವಾಂಗ್, ದಿರಾಂಗ್, ಬೋಮ್ಡಿಲ್ಲಾ ಮುಂತಾದವುಗಳಿಗೆ ಟಿಬೆಟ್‌ನಿಂದಲೂ ಬಂದಿದೆ. ಆದ್ದರಿಂದಲೇ ಪೂರ್ವದ ಜಿಲ್ಲೆಗಳಲ್ಲಿ ವಾಸಿಸುವ ಬೌದ್ಧ ಪಂಥೀಯರು ಥೇರವಾದಿಗಳಾದರೆ, ಪಶ್ಚಿಮದವರು ವಜ್ರಯಾನಿಗಳು.

ಚಾಂಗ್‌ಲಾಂಗ್ ಮತ್ತು ಲೋಹಿತ ಜಿಲ್ಲೆಗಳ ದಿಯನ್, ನಾಮ್‌ಸಾಯ್, ಚೋಕುಮ್, ಗೋಜು ಮುಂತಾದ ಹಳ್ಳಿಗಳಿಗೆ ನಾನು ಇತ್ತೀಚೆಗೆ ಭೇಟಿ ನೀಡಿದ್ದೆ. ದಿಯುನ್‌ನಲ್ಲಿ ಬೆಂಗಳೂರಿನ ಮಹಾಬೋಧಿ ಸೊಸೈಟಿ ಸ್ಥಾಪಿಸಿರುವ ಶಾಲೆ ಮತ್ತು ಹಾಸ್ಟೆಲ್, ಹೊಸ ಸ್ತೂಪ ಮತ್ತು ವಿಹಾರಗಳ ಉದ್ಘಾಟನೆಯಲ್ಲಿ ಭಾಗವಹಿಸುವ ಅವಕಾಶ ಒದಗಿತ್ತು. ಇವು ಸ್ವಿಟ್ಜರ್‌ಲೆಂಡ್‌ನ ಬೌದ್ಧ ಧರ್ಮೀಯರಾದ ಶ್ರೀಮತಿ ಮೊನಿಕಾ ಥಾಡ್ಡೆ ಮತ್ತು ಅವರ ಪತಿ ಶ್ರೀ ಅಲೆಕ್ಸ್ ಇವರ ಸಹಯೋಗದೊಂದಿಗೆ ನಿರ್ಮಿಸಿದಂತಹವು. ಅಲ್ಲಿಂದ ಅವರು ಮತ್ತು ಅವರ ಕೆಲ ಸ್ನೇಹಿತರು ಬಂದಿದ್ದರು. ಥಾಯ್ಲೆಂಡ್, ಬರ್ಮಾ ಮತ್ತು ಕಾಂಬೋಡಿಯಾಗಳಿಂದ ಬೌದ್ಧ ಗುರುಗಳು ಮತ್ತು ಅವರ ಜತೆ

ಬೌದ್ಧ ಧರ್ಮ ಭಾರತದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಅರುಣಾಚಲದಲ್ಲಿ ಅದು ಹಬ್ಬಿದ್ದಂತೆ ಕಾಣುವುದಿಲ್ಲ. ಆದರೆ ಇಂದು ಅರುಣಾಚಲ ಅಧಿಕ ಸಂಖ್ಯೆಯ ಬೌದ್ಧ ಧರ್ಮೀಯರನ್ನು ಹೊಂದಿರುವ ಏಕೈಕ ರಾಜ್ಯ. ಸುಮಾರು ನೂರು ಬುಡಕಟ್ಟುಗಳು, ಪ್ರತಿ ಬುಡಕಟ್ಟಿಗೆ ತನ್ನದೇ ಭಾಷೆ, ಪ್ರತಿ ಬುಡಕಟ್ಟಿಗೂ ತನ್ನದೇ ಆದ ವಿಶೇಷ ಉಡಿಗೆ, ತೊಡಿಗೆ ಮತ್ತು ಪ್ರತಿ ಬುಡಕಟ್ಟಿನ ಜನ ತಮ್ಮ ವಿಶಿಷ್ಟತೆಯನ್ನು ಸಂರಕ್ಷಿಸಿಕೊಂಡು ಬಂದಿರುವ ಈ ನಾಡಿನಲ್ಲಿ ಹೆಚ್ಚು ಬುಡಕಟ್ಟುಗಳ ಜನರು ಬೌದ್ಧ ಧರ್ಮೀಯರು. ಬೌದ್ಧ ಧರ್ಮದ ಆದರ್ಶಗಳಲ್ಲಿ ಅಚಲ ನಂಬಿಕೆ ಹೊಂದಿ ಅದರ ಧಾರ್ಮಿಕ ಆಚರಣೆಗಳನ್ನು ಚಾಚೂ ತಪ್ಪದೆ ನಡೆಸಿಕೊಂಡು ಬಂದಿರುವಂತಹವರು.

ಕೆಲ ಉಪಾಸಕರು ಸಹ ಬಂದಿದ್ದರು.

ಎರಡು ದಿನಗಳ ಈ ಸಮಾರಂಭ ಎಲ್ಲಾ ಕಾರ್ಯಕ್ರಮಗಳ ಉದ್ಘಾಟನೆಗಳ ಜತೆಗೆ ಪವಿತ್ರ ಅವಶಿಷ್ಟಗಳ ಮೆರವಣಿಗೆ ಮತ್ತು ಸ್ತೂಪದಲ್ಲಿ ಪ್ರತಿಷ್ಠಾಪನೆ, ಬಿಕ್ಕುಗಳಿಗೆ ತೊಡಿಗೆ ನೀಡುವ 'ಕಠಿನ' 'ಚೀವ್ರದಾನ', ಸಮಾರಂಭ ಮತ್ತು ಸಾರ್ವಜನಿಕ ಸಭೆ ಇವುಗಳನ್ನೊಳಗೊಂಡು ಬಹಳ ವಿಜೃಂಭಣೆಯಿಂದ ನಡೆಯಿತು. ಆಚರಣೆಯ ಅಂಗವಾಗಿ ಸಾವಿರದ ಎಂಟು ಮೊಂಬತ್ತಿ ಹಚ್ಚಿ, ನೂರ ಎಂಟು ಉರಿಯುವ ಬಲೂನುಗಳನ್ನು ಆಕಾಶಕ್ಕೆ ಬಿಡಲಾಯಿತು. ಈ ಬಲೂನುಗಳು ಉರಿಯುತ್ತಾ ಆಕಾಶದಲ್ಲಿ ಬಹಳ ಎತ್ತರದಲ್ಲಿ ನಿಂತು ಹೊಸ ನಕ್ಷತ್ರಗಳಂತೆ ಎಲ್ಲರನ್ನೂ ರಂಜಿಸಿದವು. ಪ್ರತಿ ಆಚರಣೆಯ ಕ್ರಮಬದ್ಧತೆ, ಶಿಸ್ತು, ಧರ್ಮ ಮತ್ತು ಅದರ ಆಚರಣೆಗಳಲ್ಲಿ ಜನರು ತಮ್ಮನ್ನು ತೊಡಗಿಸಿಕೊಂಡಿದ್ದ ತನ್ನಯತೆ, ಭಕ್ತಿ, ಭಾವ ಮೆಚ್ಚುವಂಹದಾಗಿತ್ತು.

ಭಗವಾನರು ತಮ್ಮ ಅದಮ್ಯ ಕರುಣೆಯ ಫಲವಾಗಿ ಜಗತ್ತಿಗೆ ಧರ್ಮ ಭೋದನೆ ಮಾಡಲು ಪ್ರಾರಂಭಿಸಿದ ಮೇಲೆ ಬಿಕ್ಕುಗಳ ಸಂಘ ಸ್ಥಾಪನೆ ಸಹಜವಾಯಿತು. ಧಮ್ಮಾಚರಣೆಗಾಗಿ ಮನೆಮಠಗಳನ್ನು ತೊರೆದು ಅತಿ ಸರಳ ಜೀವನವನ್ನಾರಿಸಿದ ಬಿಕ್ಕುಗಳಿಗೆ ಅಂತಹ ಜೀವನ ನಡೆಸಲು ಅನುವು ಮಾಡಿಕೊಡುವುದು ಒಂದಾದರೆ, ಧರ್ಮ ಸಾಮಾನ್ಯ ಜನರಿಗೆ ತಲುಪಿ, ಅದರ ಪರಿಣಾಮ ಜನರ ಜೀವನದ ಮೇಲೆ ಆಗಿ ಅವರು ಈ ಜೀವನದಲ್ಲಿ ಸುಖ ಸಂತೋಷಗಳನ್ನು ಕಾಣುವುದಲ್ಲದೆ, ಮುಂದೆ ಒಳ್ಳೆಯ ಮರುಹುಟ್ಟನ್ನು ಪಡೆಯುವಂತೆ ಮಾಡಲು ಬೇಕಾದ ಪರಿಸರ ನಿರ್ಮಾಣ ಸಹ ಒಂದು ತುರ್ತು ಅವಶ್ಯಕತೆಯಾಗಿತ್ತು.

ಇದಕ್ಕಾಗಿ ಬಿಕ್ಕುಗಳು ತಮ್ಮ ಜೀವನ ನಿರ್ವಹಣೆಗೆ ಉಪಾಸಕರನ್ನು ಮತ್ತು ಉಪಾಸಕರು ತಮ್ಮ ಆಧ್ಯಾತ್ಮಿಕ ವೃದ್ಧಿಗೆ ಬಿಕ್ಕುಗಳನ್ನು ಅವಲಂಬಿಸುವಂತಾಗಿ ಈ ಗುಂಪುಗಳು ಒಂದಕ್ಕೊಂದು ಪೂರಕವಾಗಿ ನಿರ್ಮಾಣವಾದವು. ಬಿಕ್ಕು ಸಂಸಾರ ತೊರೆದು ಸರಳ ಹಾಗೂ ಕಠಿಣ ಜೀವನ ನಡೆಸುತ್ತಾ ಉಪಾಸಕರಿಗೆ ಧರ್ಮ ಬೋದನೆ ಮಾಡುವುದೂ, ಉಪಾಸಕ ಬಿಕ್ಕುಗಳಿಗೆ ಬೇಕಾದ ಆಹಾರ ಮತ್ತು ಬಟ್ಟೆ ಒದಗಿಸುವುದೂ ಆಚರಣೆಗೆ ಬಂದಾಗ ಧರ್ಮ ಜನರಲ್ಲಿ ಪ್ರಚಾರವಾಗಲು ಅನುಕೂಲವಾಯಿತು.

ಅರುಣಾಚಲದ ಬೌದ್ಧರು ತಮ್ಮ ಧರ್ಮ ಬೋಧಕರಾದ ಬಿಕ್ಕುಗಳಿಗೆ ಬಹಳ ಗೌರವ ಮತ್ತು ಮನ್ನಣೆ ನೀಡುತ್ತಾರೆ. ಅವರು ಸಂಘದಾನ ಮತ್ತು ಚೀವ್ರದಾನಗಳನ್ನು ಬಹಳ ಶ್ರದ್ಧೆಯಿಂದ ನಡೆಸಿಕೊಂಡು ಬಂದಿದ್ದಾರೆ. ಅವರ ಸಂಘದಾನ ಮತ್ತು ಚೀವ್ರದಾನಗಳು ಪೂರ್ಣ ಭಕ್ತಿಭಾವದಿಂದ ಕೂಡಿರುತ್ತವೆ.

ಅರುಣಾಚಲದ ಹಳ್ಳಿ ಪಟ್ಟಣಗಳಲ್ಲಿ ಕಾಣುವ ಎಲ್ಲಾ ಬೌದ್ಧಮಂದಿರ ಮತ್ತು ವಿಹಾರಗಳಲ್ಲಿ ಚಾಚೂ ತಪ್ಪದೆ ಸಂಘದಾನ ಮತ್ತು ಚೀವ್ರದಾನಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಪ್ರತಿ ಸಂದರ್ಭದಲ್ಲಿ ದಮ್ಮಬೋದನೆ ಮತ್ತು ಪಂಚಶೀಲಗಳ ಸ್ವೀಕರಣೆ ನಡೆಯುತ್ತದೆ. ಬಿಕ್ಕುಗಳಿಗೆ ಬೆಳಗ್ಗೆ ಸುಮಾರು 6.30ಕ್ಕೆ ಉಪಹಾರ ನೀಡಲಾಗುತ್ತದೆ. ಮತ್ತು ಮಧ್ಯಾಹ್ನ 12.00 ಘಂಟೆಯ ಒಳಗೆ ಊಟ ಮುಗಿಸಬೇಕು. ಇಲ್ಲದಿದ್ದಲ್ಲಿ ಅವರು ಊಟದಿಂದ ವಂಚಿತರಾಗುತ್ತಾರೆ. ಆದುದರಿಂದ ಇಲ್ಲಿನ ಜನರು ಜತೆಗೂಡಿ ಇಲ್ಲವೆ ಪ್ರತ್ಯೇಕವಾಗಿ ತಮ್ಮ ಜವಾಬ್ದಾರಿಯನ್ನು ಹಂಚಿಕೊಂಡು ಬಿಕ್ಕುಗಳು ಮತ್ತು ಅವರ ಜತೆಯವರಿಗೆ ಬೇಕಾದ ಆಹಾರ ತಯಾರಿಸುವುದು ಮತ್ತು ಸಮಯಕ್ಕೆ ಸರಿಯಾಗಿ ಒದಗಿಸುವುದು ಇಲ್ಲಿನ ರೂಢಿ.

ಇಲ್ಲಿನ ಉಪಾಸಕರ ಶ್ರದ್ಧೆಯ ಒಂದು ಉದಾಹರಣೆಯನ್ನು ನಾವು ಅವರು 'ಕಠಿನ ಚೀವ್ರದಾನ' ಆಚರಿಸುವ ಸಮದರ್ಭದಲ್ಲಿ ಕಾಣಬಹುದು. ಚಾಂಗ್ ಲಾಂಗ್ ಜಿಲ್ಲೆಯ ದಿಯೂನ್‌ನಲ್ಲಿ ಚೀವ್ರ ದಾನದ ಆಚರಣೆಯನ್ನು ನೋಡುವ ಅವಕಾಶ ಒದಗಿತ್ತು. ಅತೀವ ಬಯಕೆಯೆ ದುಃಖಗಳ ಮೂಲ ಎಂದ ಭಗವಾನರ ಆಸೆಗಳ ನಿರ್ಮೂಲನೆಯ ದಾರಿ ಕೂಡ ತ್ರೀವ್ರವಾದುದು. ಬಿಕ್ಕುವಾದವರು ಏನು ಉಡಬೇಕು, ಉಣ್ಣಬೇಕು, ಎಲ್ಲಿ ವಾಸಿಸಬೇಕು ಎಂಬುದರ ಬಗ್ಗೆಯೂ ದೀರ್ಘವಾಗಿ ಅವರು ಸೂಚಿಸಿರುತ್ತಾರೆ. ಬಿಕ್ಕುಗಳಿಗೆ ಅವರು ಸಮ್ಮತಿಸಿದ್ದು ವರ್ಷಕ್ಕೆ ಕೇವಲ ಮೂರು ಜತೆ ಬಟ್ಟೆ, ಒಂದೊಂದರಲ್ಲಿ ಮೂರು ತುಂಡುಗಳು– ಒಂದು ಮಾನ ಮುಚ್ಚಲು, ಎರಡನೆಯದು ಸೊಂಟದಿಂದ ಕೆಳಭಾಗಕ್ಕೆ, ಮೂರನೆಯದು ಸೊಂಟದಿಂದ ಮೇಲ್ಭಾಗಕ್ಕೆ ಒದೆಯಲು. ಇವುಗಳನ್ನು ಪಡೆಯಲು ವರ್ಷದಲ್ಲೊಂದು ಪ್ರತ್ಯೇಕ ದಿನ. ಆ ದಿನದಂದು ಸಾಮಾನ್ಯವಾಗಿ ಉಪಾಸಕರು ಈ ಬಟ್ಟೆಗಳನ್ನು ಕೊಂಡು ಅವರಿಗೆ ಭಕ್ತಿ ಪೂರ್ವಕವಾಗಿ ನೀಡುತ್ತಾರೆ.

ದಿಯೂನ್‌ನಲ್ಲಿ ಇದು ಬಹಳ ವಿಶಿಷ್ಟವಾಗಿ ನಡೆಯುತ್ತದೆ. ಚೀವ್ರದಾನದ ದಿನದ ಹಿಂದಿನ ರಾತ್ರಿ ಸುತ್ತಮುತ್ತಲಿನ ಹಳ್ಳಿಗಳ ಹೆಂಗಸರು ಅಲ್ಲಿ ಸೇರುತ್ತಾರೆ. ಅದಕ್ಕಾಗಿಯೇ ವಿಶಾಲವಾದ ಚಪ್ಪರ ಹಾಕಲಾಗುತ್ತದೆ. ಅವರೆಲ್ಲರೂ ಬಟ್ಟೆ ನೇಯುವವರಾಗಿದ್ದು ತಮ್ಮ ಜತೆ ತಾತ್ಕಾಲಿಕವಾಗಿ ಸರಳೀಕೃತ ಮಗ್ಗ ಸ್ಥಾಪಿಸಲು ಬಿದಿರಿನ ಚಕ್ರ ಮತ್ತು ಕೆಲವು ಬಿದಿರ ಕಡ್ಡಿಗಳನ್ನು ತರುತ್ತಾರೆ. ಅದಕ್ಕೆ ಮುನ್ನ ಅವರು ಮಿಂದು, ಅಷ್ಟ ಶೀಲಗಳನ್ನು ಬಿಕ್ಕುಗಳಿಂದ ಪಡೆಯುತ್ತಾರೆ. ಹೀಗೆ ಸೇರಿದ ಅವರು ವ್ಯವಸ್ಥಾಪಕರಿಂದ ದಾರದ ಉಂಡೆಗಳನ್ನು ಪಡೆದು ಐದು ಆರು ಜನರ ಗುಂಪಾಗಿ ಬಟ್ಟೆ ನೇಯಲು ತೊಡಗುತ್ತಾರೆ.

ದಾರ ಹುರಿ ಮಾಡುವುದು, ಚಕ್ರಕ್ಕೆ ಜೋಡಿಸುವುದು, ಕಡ್ಡಿಗಳ ಮೂಲಕ ಬೇಕಾದ ಉದ್ದಕ್ಕೆ ನೇಯ್ಗೆಯನ್ನು ಎಳೆದು ಹಿಡಿದು ಕೊಳ್ಳುವುದು, ನೇಯ್ಗೆಯ ಉಂಕಿ ಮತ್ತು ಹೊಕ್ಕುಗಳನ್ನುಪಯೋಗಿಸಿ ಬಟ್ಟೆ ನೇಯುವುದು ನೋಡುವವರಿಗೆ ಹರ್ಷದಾಯಕ. ಈ ಸಾಮೂಹಿಕ ಕೆಲಸದಲ್ಲಿ ಅವರು ಒಬ್ಬರಿಗೊಬ್ಬರು ಸಹಕರಿಸುವ ರೀತಿ ಒಂದು ಪಾಠ. ಅವರೆಲ್ಲರೂ ಚಕ್ಮ ಪಂಗಡದವರಾಗಿದ್ದು, ಆ ಪಂಗಡದ ಉಡಿಗೆ – ಅಲ್ಲಲ್ಲಿ ಕಪ್ಪಿನ ಎಳೆಗಳುಳ್ಳ ಕಡುಕೆಂಪು ಮುಂಡಾಸು, ಮೇಲೊದಿಕೆ ಮತ್ತು ಬಿಳಿ ಅಂಗಿ ತೊಟ್ಟಿರುತ್ತಾರೆ.

ಇದು ಅವರ ತೆಳು ಕೆಂಪು ಬಣ್ಣದ ಮೈ ಜತೆ ಸೇರಿ ಅವರ ಸೌಂದರ್ಯವನ್ನು ಮತ್ತಷ್ಟೂ ಹೆಚ್ಚಿಸುತ್ತದೆ. ಇಡೀ ರಾತ್ರಿ ಅವರು ಬಟ್ಟೆ ನೇಯುತ್ತಾರೆ. ಹಿಂಡುತ್ತಿರುವ ಹಸಿವು, ಕೊರೆಯುವ ಚಳಿಯ ಗೊಡವೆ ಅವರಿಗಿರುವುದಿಲ್ಲ. ರಾತ್ರಿ ಇಡೀ ಬಟ್ಟೆ ನೇಯ್ದು, ಬೆಳಗಿನ ಜಾವ ಅದನ್ನು ಒಲಿದು ಸುಮಾರು ಬೆಳಗಿನ ಐದು ಘಂಟೆಗೆ ಅದನ್ನು ಭಕ್ತಿ ಪೂರ್ವಕವಾಗಿ ಬಿಕ್ಕುಗಳಿಗೆ ನೀಡಿ ಅವರಿಂದ ದಮ್ಮೋಪದೇಶ ಪಡೆದ ನಂತರವೇ ಅವರು ಉಪಹಾರ ಮಾಡುವುದು. ದಮ್ಮದ ಮೇಲಿನ ಅವರ ಅತೀವ ಶ್ರದ್ಧೆಯನ್ನು ಇದರಿಂದ ಕಾಣಬಹುದು.

ಧಮ್ಮಾಚರಣೆ ಮತ್ತು ತಮ್ಮ ಬುಡಕಟ್ಟು ವಿಶಿಷ್ಟತೆಯನ್ನು ಕಾಪಾಡುವ ಕಡೆಗೆ ಅವರು ನೀಡುವ ಗಮನ ಅಷ್ಟಿಷ್ಟಲ್ಲ. ಹೆಚ್ಚು ಕಡಿಮೆ ಈ ಪ್ರದೇಶಗಳ ಹಳ್ಳಿ ಪಟ್ಟಣಗಳಲ್ಲಿ ಉತ್ತಮ ಬೌದ್ಧ ಮಂದಿರಗಳನ್ನು, ವಿಹಾರಗಳನ್ನು, ಸಾಕಷ್ಟು ಸಂಖ್ಯೆಯಲ್ಲಿ ಬೌದ್ಧ ಬಿಕ್ಕುಗಳನ್ನೂ ನೋಡಬಹುದು. ತೆಂಗಪಾನಿ ಎಂಬಲ್ಲಿ ಇತ್ತೀಚೆಗಷ್ಟೆ ನಿರ್ಮಿಸಿದ ಸುಂದರ ಬೌದ್ಧಮಂದಿರ, ವಿಹಾರ, ಅತಿಥಿ ಗೃಹಗಳಿವೆ. ನದಿಯ ದಡದ ಎತ್ತರ ಪ್ರದೇಶದಲ್ಲಿ ಸ್ಥಾಪನೆಗೊಂಡಿರುವ ಈ ಮಂದಿರ ಅದರ ವಾಸ್ತು ಶೈಲಿ, ಸುತ್ತಲಿನ ವನ, ಸ್ವಚ್ಛತೆ, ಅನುಕೂಲತೆಗಳಿಂದ ಗಮನ ಸೆಳೆಯುತ್ತದೆ. ಇದನ್ನು ಚೌನಾಮೂನ್ ಎಂಬ ಅಲ್ಲಿನ ಮಂತ್ರಿಯವರೊಬ್ಬರು ನಿರ್ಮಿಸಿರುತ್ತಾರೆ. ಅಲ್ಲದೆ ಚೋಕುಮ್‌ನಲ್ಲಿ ಬುದ್ಧ ಧರ್ಮ ಭೋಧನೆ ಮಾಡಿದ ಪಾಲಿ ಭಾಷೆಯನ್ನು ಅಲ್ಲಿನ ಯುವಕರು ಕಲಿತು ಧರ್ಮದ ಉಪದೇಶಗಳನ್ನು ಮೂಲ ಗ್ರಂಥಗಳಿಂದ ಅಭ್ಯಾಸಿಸಲು ಅನುಕೂಲವಾಗುವಂತೆ ಒಂದು ಪಾಲಿ ವಿದ್ಯಾಪೀಠ ಸಹ ಇದೆ.

ಬುಡಕಟ್ಟಿನ ಜನ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುತ್ತಾರೆ ಎಂಬುದಕ್ಕೆ ಮತ್ತೊಂದು ನಿದರ್ಶನ ಚೋಕುಮ್‌ನ 'ಕಾಮ್‌ಟಿ – ಸಿಂಗ್‌ಫೊ' ವಸ್ತುಸಂಗ್ರಹಾಲಯ. ಕಾಮ್‌ಟಿ ಮತ್ತು ಸಿಂಗ್‌ಫೊ ಪಂಗಡಗಳ ಜನ ಚಾಂಗ್‌ಲಾಂಗ್ ಮತ್ತು ಲೋಟಿ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಈ ಜನ ಸ್ವಾಭಿಮಾನಿಗಳು ಮತ್ತು ತಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಉಳ್ಳವರು. ಇವರು ಚೋಕುಮ್‌ನಲ್ಲಿ ಹೊಸದಾಗಿ ಕಾಮ್‌ಟಿ ಮತ್ತು ಸಿಂಗ್‌ಫೊ ಪಂಗಡಗಳ ಪರಂಪರೆ ರಕ್ಷಿಸಲು ಒಂದು ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ್ದಾರೆ. ಅವರ ಭಾಷೆಯ ಹಸ್ತಾಕ್ಷರದ ಪ್ರತಿಗಳು, ಉಡುಗೆ, ತೊಡಿಗೆ, ಆಯುಧಗಳು, ದಿನನಿತ್ಯದ ಬಳಕೆ ವಸ್ತುಗಳು, ಹೀಗೆ ಪರಂಪರೆಯನ್ನು ನೆನಪಿಗೆ ತರುವಂತಹ ಎಲ್ಲಾ ವಸ್ತುಗಳ ಸಂಗ್ರಹ ನಡೆದಿದೆ.

ಬೆಂಗಳೂರಿನ ನಾವು ನಾಲ್ಕು ಮಂದಿ, ವಿಹಾರದಲ್ಲಿ ಸ್ಥಳದ ಕೊರತೆ ಇದ್ದುದರಿಂದ ಉಪಾಸಕರೊಬ್ಬರ ಮನೆಯಲ್ಲಿ ತಂಗಿದ್ದೆವು. ಮನೆಯಲ್ಲಿ ಗಂಡ, ಹೆಂಡತಿ ಇಬ್ಬರೆ. ಇಬ್ಬರೂ ಸರ್ಕಾರಿ ಕೆಲಸದಲ್ಲಿ ಇರುವಂತಹವರು. ಗಂಡ ಬ್ಯಾಂಕ್ನಲ್ಲಿ ಕೆಲಸದಲ್ಲಿದ್ದರೆ ಹೆಂಡತಿ ಶಿಕ್ಷಕಿ. ಅವರು ನಮ್ಮನ್ನು ತಮ್ಮ ಮನೆಯವರಂತೆಯೇ ನೋಡಿಕೊಂಡರು ಮತ್ತು ತುಂಬ ಆತ್ಮೀಯತೆಯಿಂದ ನಮ್ಮೊಡನೆ ಬೆರೆತಿದ್ದರು. ಇಂತಹ ನಡವಳಿಕೆಯನ್ನು ನಾವು ಎಲ್ಲಾ ಕಡೆ ಕಾಣಬಹುದಾಗಿತ್ತು.

ರಾಜ್ಯದ ಪಶ್ಚಿಮ ಭಾಗದ ಬೋಮ್ಡಿಲಾದ ಬೌದ್ಧ ಮಂದಿರದ ಮುಂಭಾಗದಲ್ಲಿ ಒಂದು ಪ್ರದರ್ಶನವನ್ನು ವೀಕ್ಷಿಸಿದೆ. ಅದೊಂದು ಹೊರಾಂಗಣ ನಾಟಕ. ಮುಖವಾಡ ಧರಿಸಿ ಬಣ್ಣ ಬಣ್ಣದ ತೊಡಿಗೆ ತೊಟ್ಟ ರಾಜ ಮಧ್ಯದಲ್ಲಿ ಕುಳಿತಿದ್ದಾನೆ. ಅವನ ನಿಲುವು ಗಂಭೀರ. ಅವನ ಹತ್ತಿರದಲ್ಲೇ ಅವನ ಆಪ್ತ ಸಹಾಯಕ, ಬಹುಶಃ ಲೆಕ್ಕಿಗ ಅವನ ಆಜ್ಞೆ ಅಪೇಕ್ಷಿಸಿ ನಿಂತಿದ್ದಾನೆ. ಅವರ ಸುತ್ತ ಬಣ್ಣ ಬಣ್ಣದ ದಿರಿಸು, ಮುಖವಾಡ ಧರಿಸಿದ ಮತ್ತಷ್ಟು ಸೇವಕರು. ಸ್ವಲ್ಪ ದೂರದಲ್ಲಿ ಒಬ್ಬ ಮುಖವಾಡ ಧರಿಸಿ ಕುಳಿತಿದ್ದಾನೆ. ಪಕ್ಕದ ಪೀಠದಲ್ಲಿ ತಾಳ ಮದ್ದಲೆ ತಂಡ. ಅವರೆಲ್ಲರೂ ಬಿಕ್ಕುಗಳೆ. ಕರಡಿ ವೇಷ ಧರಿಸಿದವನೊಬ್ಬನ ಭೀಭತ್ಸ ಕುಣಿತದ ನಂತರ ರಾಜ ತನ್ನ ಸಹಾಯಕನಿಂದ ಲೆಕ್ಕ ನೀಡಿಸಿ ಕೆಳಗೆ ಕುಳಿತಿದ್ದವನನ್ನು ಎಳೆದು ತರಲು ತನ್ನ ಸೇವಕರನ್ನು ಕಳುಹಿಸುತ್ತಾನೆ.

(35ನೇ ಪುಟಕ್ಕೆ)

ಜನಸತ್ತೆಯ ಕರಾಳ ಮುಖಗಳು

ನಾ ದಿವಾಕರ

(ಮುಂದುವರೆದ ಭಾಗ)

ರಾಜಕಾರಣದ ಗೆಲುವು ಪ್ರಜಾತಂತ್ರದ ಸೋಲು

ಯಡಿಯೂರಪ್ಪ ನೇತೃತ್ವದ ರಾಜ್ಯ ಭಾಜಪ ಸರ್ಕಾರ ನಾಲ್ಕು ದಿನಗಳ ಅಂತರದಲ್ಲಿ ಎರಡು ಬಾರಿ ವಿಶ್ವಾಸಮತ ಪಡೆದು ದಾಖಲೆ ಸೃಷ್ಟಿಸಿದ್ದರೂ, ಮೌಲ್ಯಾಧಾರಿತ ರಾಜಕಾರಣಕ್ಕೆ ಬುನಾದಿ ಹಾಕಿದ ಕರ್ನಾಟಕದಲ್ಲಿ ಮೌಲ್ಯ ಎಂದರೇನು ಎಂದು ಪ್ರಶ್ನಿಸಬೇಕಾದ ಸನ್ನಿವೇಶದಲ್ಲಿ, ರಾಜಕಾರಣಿಗಳ ಮಾರುಕಟ್ಟೆ ಮೌಲ್ಯವೇ ಗೆಲುವು ಸಾಧಿಸಿರುವುದು ಕರ್ನಾಟಕದ ರಾಜಕಾರಣವನ್ನು ಹೊಸ ಮೌಲ್ಯಗಳತ್ತ ಕೊಂಡೊಯ್ಯುತ್ತಿರುವ ಸಂಕೇತವಾಗಿದೆ. ಯಾವುದೇ ಪ್ರಜಾಸತ್ತಾತ್ಮಕ ವ್ಯವಸ್ಥೆ ತನ್ನ ಧ್ಯೇಯೋದ್ದೇಶಗಳಿಗನುಗುಣವಾಗಿ ಕಾರ್ಯ ನಿರ್ವಹಿಸಬೇಕಾದಲ್ಲಿ, ಪ್ರಜಾಸತ್ತೆಯ ಪ್ರಮುಖ ಅಂಗಗಳಾದ ನ್ಯಾಯಾಂಗ–ಶಾಸಕಾಂಗ ಮತ್ತು ಕಾರ್ಯಾಂಗಗಳು ಸಂವಿಧಾನ ಬದ್ಧತೆಯಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದು ಅಗತ್ಯ. ಆದರೆ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕಳೆದ ಐದು ವರ್ಷಗಳಲ್ಲಿ ಕಾರ್ಯಾಂಗವು ಭ್ರಷ್ಟತೆಯ ಕೂಪವಾಗಿದ್ದರೆ, ಶಾಸಕಾಂಗ ಈ ಕೂಪದ ಪಾಪಗಳನ್ನು ಪೊರೆವ ಆಶ್ರಯ ತಾಣವಾಗಿದೆ.

ಯಡಿಯೂರಪ್ಪ ನೇತೃತ್ವದ ಸರ್ಕಾರದ ಮೂಲ ದೋಷ ಅದರ ಜನ್ಮಕುಂಡಲಿಯಲ್ಲೇ ಇದೆ. ಗರ್ಭಾವಸ್ಥೆಯಲ್ಲೇ ರೋಗದ ಸೋಂಕು ಹೊತ್ತು ಬಂದ ಭಾಜಪ ಸರ್ಕಾರ ತನ್ನ ಆಪರೇಷನ್ ಕಮಲ ಎಂಬ ಮಾರುಕಟ್ಟೆ ಪ್ರಕ್ರಿಯೆಯ ಮೂಲಕ ರಾಜಕಾರಣದ ಸ್ವರೂಪವನ್ನೇ ಬದಲಾಯಿಸಿದ್ದು ಅದರ ಪ್ರತಿಫಲವನ್ನು ರಾಜ್ಯದ ಜನತೆ ಈಗ ಅನುಭವಿಸುತ್ತಿದ್ದಾರೆ. ವಿಧಾನಸಭೆಯಲ್ಲಿ ಬಹುಮತ ಪಡೆಯಲು ಶಾಸಕರ ಬೆಂಬಲ ಪಡೆಯುವ ನಿಟ್ಟಿನಲ್ಲಿ ಸಂವಿಧಾನದ ಎಲ್ಲ ಕಟ್ಟಳೆಗಳನ್ನೂ ಮೀರಿ ಅನ್ಯ ಪಕ್ಷಗಳ ಶಾಸಕರನ್ನು ಖರೀದಿಸಿದ ಭಾಜಪ ಈಗ ತನ್ನ ಸರಕುಗಳನ್ನು ಕಳೆದುಕೊಳ್ಳುತ್ತಿದೆ. ಗಣಿಧಣಿಗಳ ಹಣಬಲ ಮತ್ತು ರಿಯಲ್ ಎಸ್ಟೇಟ್ ಮಾಫಿಯಾಗಳ ತೋಳ್ಬಲದಿಂದಲೇ ಸರ್ಕಾರ ನಡೆಸಬಹುದೆಂಬ ಭ್ರಮಾಲೋಕದಲ್ಲೇ ಎರಡು ವರ್ಷ ಪೂರೈಸಿದ ಯಡಿಯೂರಪ್ಪನವರ ಸರ್ಕಾರ ಇಂದು ಮಾರುಕಟ್ಟೆಯ ವ್ಯತ್ಯಯಗಳಿಗೆ ಬಲಿಯಾಗಿದ್ದರೆ ಅದು ಸ್ವಯಂಕೃತ ಅಪರಾಧವೇ ಹೊರತು ಮತ್ತೇನಲ್ಲ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ಸಾಂವಿಧಾನಾತ್ಮಕವಾಗಿ ಚುನಾಯಿತರಾದ ಸದಸ್ಯರನ್ನು ತಮ್ಮ ಹಣಬಲದಿಂದ ಕೊಳ್ಳುವುದೇ ಅಲ್ಲದೆ, ಅಂತಹ ಶಾಸಕರಿಗೆ ಲಾಭದಾಯಕ ಹುದ್ದೆ, ಮಂತ್ರಿಗಿರಿಯ ಆಮಿಷ ಒಡ್ಡುವ ಅಸಹ್ಯ ಪರಂಪರೆಯನ್ನು ವಿದ್ಯುಕ್ತವಾಗಿ ಹುಟ್ಟು ಹಾಕಿದ ಭಾಜಪ ಇಂದು ತನ್ನಿಂದ ಕೊಳ್ಳಲ್ಪಟ್ಟ ಶಾಸಕರು ಇನ್ನೂ ಹೆಚ್ಚಿನ ಬೆಲೆಗೆ ಬಿಕರಿಯಾಗುತ್ತಿರುವುದನ್ನು ಕಂಡು ಹಲುಬುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಹಣದಾಸೆಗೆ ಜನತೆಯ ವಿಶ್ವಾಸ, ಸಂವಿಧಾನದ ತತ್ವಗಳು ಮತ್ತು ಪ್ರಜಾಸತ್ತೆಯ ಮೌಲ್ಯಗಳನ್ನೇ ಮಾರಿಕೊಳ್ಳುವ ಶಾಸಕರಿಗೆ ಪಕ್ಷಬೇಧ ಇರುವುದಿಲ್ಲ. ಅನ್ಯ ಪಕ್ಷಗಳ ಮೌಲ್ಯಗಳನ್ನು ಒಪ್ಪಿ ತಮ್ಮ ಮಾತೃ ಪಕ್ಷಗಳನ್ನು ತೊರೆಯುತ್ತಿದ್ದ ಪಕ್ಷಾಂತರ ಪದ್ಧತಿಯಿಂದ ಬಹುದೂರ ಸಾಗಿರುವ ರಾಜಕಾರಣಿಗಳು ಈಗ ಪಕ್ಷ, ಮೌಲ್ಯ, ತತ್ವ, ಸಿದ್ಧಾಂತ ಎಲ್ಲವನ್ನೂ ಬದಿಗಿಟ್ಟು ತಮ್ಮ ಸ್ವಹಿತಾಸಕ್ತಿ ಮತ್ತು ಸ್ವಾರ್ಥಸಾಧನೆಗಳನ್ನೇ ಪ್ರಧಾನ ಮೌಲ್ಯಗಳಾಗಿ ಸ್ವೀಕರಿಸಿದ್ದಾರೆ. ಹರಾಜು ಮಾರುಕಟ್ಟೆಯಲ್ಲಿ ಮಾಲುಗಳ ಮೌಲ್ಯವನ್ನು ಹೆಚ್ಚಿಸಲು ಅನ್ಯ ವ್ಯಾಪಾರಸ್ಥರೂ ಸಿದ್ಧವಾಗಿಯೇ ಬಂದಿರುತ್ತಾರೆ ಎಂಬ ಸತ್ಯವನ್ನು ಈಗಲಾದರೂ ಭಾಜಪ ಗ್ರಹಿಸಿರಬೇಕು.



ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ಸಾಂವಿಧಾನಾತ್ಮಕವಾಗಿ ಚುನಾಯಿತರಾದ ಸದಸ್ಯರನ್ನು ತಮ್ಮ ಹಣಬಲದಿಂದ ಕೊಳ್ಳುವುದೇ ಅಲ್ಲದೆ, ಅಂತಹ ಶಾಸಕರಿಗೆ ಲಾಭದಾಯಕ ಹುದ್ದೆ, ಮಂತ್ರಿಗಿರಿಯ ಆಮಿಷ ಒಡ್ಡುವ ಅಸಹ್ಯ ಪರಂಪರೆಯನ್ನು ವಿದ್ಯುಕ್ತವಾಗಿ ಹುಟ್ಟು ಹಾಕಿದ ಭಾಜಪ ಇಂದು ತನ್ನಿಂದ ಕೊಳ್ಳಲ್ಪಟ್ಟ ಶಾಸಕರು ಇನ್ನೂ ಹೆಚ್ಚಿನ ಬೆಲೆಗೆ ಬಿಕರಿಯಾಗುತ್ತಿರುವುದನ್ನು ಕಂಡು ಹಲುಬುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಹಣದಾಸೆಗೆ ಜನತೆಯ ವಿಶ್ವಾಸ, ಸಂವಿಧಾನದ ತತ್ವಗಳು ಮತ್ತು ಪ್ರಜಾಸತ್ತೆಯ ಮೌಲ್ಯಗಳನ್ನೇ ಮಾರಿಕೊಳ್ಳುವ ಶಾಸಕರಿಗೆ ಪಕ್ಷಬೇಧ ಇರುವುದಿಲ್ಲ.

ಗಣಿ ಹಣವೊಂದೇ ಎಷ್ಟರ ಮಟ್ಟಿಗೆ ಹರಾಜು ಕೂಗಲು ಸಾಧ್ಯ. ಈಗ ರಿಯಲ್ ಎಸ್ಟೇಟ್ ಮಾಫಿಯಾಗಳೂ ಬಿಡ್ ಮಾಡಲಾರಂಭಿಸಿದ್ದಾರೆ. ಹಾಗಾಗಿ ಮಾರುಕಟ್ಟೆಯ ಸರಕುಗಳ ಮೌಲ್ಯ ದುಪ್ಪಟ್ಟಾಗಿದೆ. ಮಾರುಕಟ್ಟೆಯ ಪ್ರಾಂಗಣವೂ ಚಲನಶೀಲವಾಗಿದೆ. ಗೋವಾ, ಪೂನಾ, ಚೆನ್ನೈ, ದೇವನ ಹಳ್ಳಿ, ದೊಡ್ಡಬಳ್ಳಾಪುರ ಹೀಗೆ ಹಲವು ಸ್ಥಳಗಳಲ್ಲಿ ಶಾಸಕರ ಹರಾಜು ನಡೆಯುತ್ತಿದೆ. ರಾಜಕೀಯ ಉದ್ಯಮಿಗಳಿಗೆ ಮಾರುಕಟ್ಟೆಯ ಸರಕುಗಳನ್ನು ಸುಲಭವಾಗಿ ಒದಗಿಸಲು ಸಂಪರ್ಕ ಸಾಧನಗಳೂ, ಸಾರಿಗೆ ವ್ಯವಸ್ಥೆಗಳೂ ಸಿದ್ಧವಾಗಿವೆ. ಇರಲೇಬೇಕಲ್ಲವೇ, ಮುಂದೊಂದು ದಿನ ವಿಧಾನಪರಿಷತ್ತಿಗೋ, ರಾಜ್ಯಸಭೆಗೋ ಆಯ್ಕೆಯಾಗಲು ಈ ವೈಮಾನಿಕ ಉದ್ಯಮಿಗಳು, ರೆಸಾರ್ಟ್ ಉದ್ಯಮಿಗಳು ಈಗಲೇ ಸ್ಥಾನ ಗಟ್ಟಿ ಮಾಡಿಕೊಳ್ಳಬೇಕಾಗಿದೆ. ಮೇಲಾಗಿ ಇಡೀ ರಾಜಕೀಯ ರಂಗವೇ ಒಂದು ಉದ್ಯಮದಂತಾಗಿರುವಾಗ ನೈಜ ಉದ್ಯಮಿಗಳೇ ಪ್ರಧಾನ ಭೂಮಿಕೆ ನಿರ್ವಹಿಸುತ್ತಿರುವುದೂ ಸ್ವಾಭಾವಿಕವೇ.

ಕರಾಳ ವ್ಯವಸ್ಥೆ–ನಗ್ನ ನರ್ತನ

"ರಾಜಕಾರಣ ತಕ್ಕರ ಅಂತಿಮ ಆಶ್ರಯ

ತಾಣ" "ರಾಜಕೀಯ ಎಂದರೆ ಚುನಾಯಿತ ಭ್ರಷ್ಟರ ಅಧಿಕೃತ ಕೂಟ" "ಮೂರನ್ನೂ ಬಿಟ್ಟವರು ಎಲ್ಲೂ ಸಲ್ಲದಿದ್ದರೂ ರಾಜಕೀಯದಲ್ಲಿ ಸಲ್ಲುವರು" "ರಾಜಕೀಯಕ್ಕೆ ಪಾದಾರ್ಪಣೆ ಮಾಡಲು ಭ್ರಷ್ಟಾಚಾರವೇ ಮೊದಲ ಮೆಟ್ಟಿಲು" "ನೋಡಿ ಸ್ವಾಮಿ ನಾವಿರೋದೇ ಹೀಗೆ" "ಯಾರೇ ಕೂಗಾಡಲಿ......" "ನೈತಿಕ ಅಧಃಪತನದ ಮೊದಲ ಸೋಪಾನವೇ ರಾಜಕಾರಣ" ಈ ಎಲ್ಲಾ ಸಾಲುಗಳು ಭಾರತದ ಮಾಧ್ಯಮಗಳಲ್ಲಿ, ಚರ್ಚೆಗಳಲ್ಲಿ, ಸಾರ್ವಜನಿಕ ವಲಯಗಳಲ್ಲಿ ಹಲವು ವರ್ಷಗಳಿಂದ ಕೇಳಿಬರುತ್ತಿರುವ ಗುಣವಿಶೇಷಣಗಳು. ಈ ಪದಪುಂಜಗಳು ಜನರ ನಡುವೆಯೇ ಸೃಷ್ಟಿಯಾದರೂ, ಸ್ವಯಂಭೂಗಳಲ್ಲ. ಹಲವಾರು ವರ್ಷಗಳ ರಾಜಕೀಯ ಅನುಭವದ ನಂತರ ದೇಶದ ಪ್ರಜೆಗಳು ತಮ್ಮ ಆಳ್ವಿಕರನ್ನು ನೋಡಿ ನೋಡಿ ಬೇಸತ್ತು ಕಟ್ಟಿದ ಕಾವ್ಯಾತ್ಮಕ ಪದಗಳಿವು. ಪ್ರಸಕ್ತ ರಾಜ್ಯ ರಾಜಕಾರಣದಲ್ಲಿ ಬಂಡವಾಳದ ಪ್ರಭಾವ ಸರ್ವವ್ಯಾಪಿಯಾಗಿರುವ ಹಿನ್ನೆಲೆಯಲ್ಲಿ ಈ ನುಡಿಗಟ್ಟುಗಳು ಮತ್ತಷ್ಟು ಅರ್ಥಪೂರ್ಣ ಎನಿಸಬಹುದು.

ಚುನಾವಣೆಗಳಲ್ಲಿ ಮತದಾರರ ಮನವೊಲಿಸಲು ತಮ್ಮೆಲ್ಲಾ ಶಕ್ತಿ, ಸಾಮರ್ಥ್ಯ, ಬುದ್ಧಿವಂತಿಕೆ ಮತ್ತು ಹಣ ಖರ್ಚು ಮಾಡುವ ರಾಜಕಾರಣಿಗಳು, ತಮ್ಮಿಂದ ಹಣ ಪಡೆದ ಪ್ರತಿಯೊಬ್ಬ ನಾಗರಿಕನೂ ತಮ್ಮ ಪಕ್ಷಕ್ಕೇ ಮತ ನೀಡುತ್ತಾರೆ ಎಂಬ ಭ್ರಮೆಯಿಂದ ಬೀಗುವ ರಾಜಕಾರಣಿಗಳು ಮತ್ತೊಂದೆಡೆ ತಮ್ಮ ಜಾತಿ ಸಮುದಾಯದ ಪ್ರತಿಯೊಬ್ಬ ಸದಸ್ಯರೂ ತಮಗೇ ಬೆಂಬಲಿಸುವ ಭ್ರಮೆಯಲ್ಲೂ ಮುಳುಗಿರುವುದು ಪ್ರಸಕ್ತ ರಾಜಕಾರಣದ ವಿಪರ್ಯಾಸ. ಈ ಎರಡೂ ಭ್ರಮೆಗಳು ಇಡೀ ರಾಜಕೀಯ ಕ್ಷೇತ್ರವನ್ನೇ ಕಲುಷಿತಗೊಳಿಸಿದ್ದು, ವೈಯ್ಯಕ್ತಿಕ ನೆಲೆಗಟ್ಟಿನಲ್ಲಿ ತಮಗಾದ ಅನ್ಯಾಯವನ್ನು ಇಡೀ ಸಮುದಾಯಕ್ಕೆ ಆರೋಪಿಸುವ ಮಟ್ಟಿಗೆ ರಾಜಕಾರಣಿಗಳನ್ನು ತಂದು ನಿಲ್ಲಿಸಿದೆ. ಹಾಗಾಗಿ ಶಾಸಕರಾಗಿ, ಸಂಸದರಾಗಿ ಚುನಾಯಿತರಾದವರು ಜನಸಾಮಾನ್ಯರನ್ನು ಪ್ರತಿನಿಧಿಸುವುದಕ್ಕಿಂತಲೂ ತಮ್ಮ ಜಾತಿ ಬಾಂಧವರನ್ನು ಪ್ರತಿನಿಧಿಸುವುದೇ ಹೆಚ್ಚು. ಜಾತಿ, ಮತ, ಧರ್ಮ, ಭಾಷೆ, ಸಮುದಾಯ, ಪ್ರದೇಶ ಹೀಗೆ ಎಲ್ಲಾ ಅಸ್ಮಿತೆಗಳನ್ನೂ ನುಂಗಿಹಾಕುತ್ತಾ ಮುನ್ನಡೆದಿರುವ ರಾಜಕೀಯ ವಾಮನ ಮೂರ್ತಿಗಳು ತಮ್ಮ ಅಂತಿಮ ಗುರಿ ತಲುಪಲು ಅನುಸರಿಸದಿರುವ ಮಾರ್ಗಗಳೇ ಇಲ್ಲವೆಂದು ಹೇಳಬಹುದು. ವಾಮಮಾರ್ಗ, ಕಾಮಮಾರ್ಗಗಳೂ ಸರ್ವೆಸಾಮಾನ್ಯ. ಪಕ್ಷಾಂತರ ಎಂಬ ಪದ ಅರ್ಥಹೀನವೆನಿಸುವ ಮಟ್ಟಿಗೆ ಬೇಲಿ ಹಾರುವ ಪ್ರವೃತ್ತಿ ಬೆಳೆದು ನಿಂತಿದೆ.

ಈ ಎಲ್ಲಾ ಪ್ರಕ್ರಿಯೆಯಲ್ಲೂ ಕಂಡುಬರುವ ಏಕೈಕ ಸಮಾನ ಪ್ರವೃತ್ತಿ ಎಂದರೆ ಅಧಿಕಾರ ದಾಹ ಮತ್ತು ಧನಾರ್ಜನೆಯ ಲಾಲಸೆ. ತಾವು ಬಯಸಿದ ಅಧಿಕಾರ ಅಥವಾ ಸಂಪತ್ತು ತಮಗೆ ದೊರೆಯದೆ ಹೋದಾಗ ಮನಸ್ಸು ವಿಚಲಿತವಾಗುವುದು ಸಹಜ. ಈ ಪ್ರವೃತ್ತಿಗೆ ಯಾರೂ ಹೊರತಲ್ಲ. ಆದರೆ ರಾಜಕಾರಣಿಗಳಲ್ಲಿ ಈ ಪ್ರವೃತ್ತಿ ಪರಾಕಾಷ್ಠೆ ತಲುಪಿರುತ್ತದೆ. ಏಕೆಂದರೆ ರಾಜಕಾರಣವನ್ನು ಪ್ರವೇಶಿಸುವ ಮುನ್ನವೇ ಸಂಪತ್ತಿನ ಕ್ರೂಢೀಕರಣದ ಕನಸು ಹೊತ್ತು ಬಂದಿರುವ ಜನಪ್ರತಿನಿಧಿಗಳಿಗೆ ತಮ್ಮ ಭವಿಷ್ಯ ಕಾಣುವುದು ತಾವು ಸಂಪಾದಿಸುವ ಧನಬಲದಲ್ಲಿಯೇ ಹೊರತು ಜನಬಲದಲ್ಲಲ್ಲ. ಹಾಗಾಗಿಯೇ ಸಚಿವ ಸ್ಥಾನ, ಉಸ್ತುವಾರಿ ಸಚಿವ ಸ್ಥಾನ, ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನ

ಚುನಾವಣೆಗಳಲ್ಲಿ ಮತದಾರರ ಮನವೊಲಿಸಲು ತಮ್ಮೆಲ್ಲಾ ಶಕ್ತಿ, ಸಾಮರ್ಥ್ಯ, ಬುದ್ಧಿವಂತಿಕೆ ಮತ್ತು ಹಣ ಖರ್ಚು ಮಾಡುವ ರಾಜಕಾರಣಿಗಳು, ತಮ್ಮಿಂದ ಹಣ ಪಡೆದ ಪ್ರತಿಯೊಬ್ಬ ನಾಗರಿಕನೂ ತಮ್ಮ ಪಕ್ಷಕ್ಕೇ ಮತ ನೀಡುತ್ತಾರೆ ಎಂಬ ಭ್ರಮೆಯಿಂದ ಬೀಗುವ ರಾಜಕಾರಣಿಗಳು ಮತ್ತೊಂದೆಡೆ ತಮ್ಮ ಜಾತಿ ಸಮುದಾಯದ ಪ್ರತಿಯೊಬ್ಬ ಸದಸ್ಯರೂ ತಮಗೇ ಬೆಂಬಲಿಸುವ ಭ್ರಮೆಯಲ್ಲೂ ಮುಳುಗಿರುವುದು ಪ್ರಸಕ್ತ ರಾಜಕಾರಣದ ವಿಪರ್ಯಾಸ. ಈ ಎರಡೂ ಭ್ರಮೆಗಳು ಇಡೀ ರಾಜಕೀಯ ಕ್ಷೇತ್ರವನ್ನೇ ಕಲುಷಿತಗೊಳಿಸಿದ್ದು, ವೈಯ್ಯಕ್ತಿಕ ನೆಲೆಗಟ್ಟಿನಲ್ಲಿ ತಮಗಾದ ಅನ್ಯಾಯವನ್ನು ಇಡೀ ಸಮುದಾಯಕ್ಕೆ ಆರೋಪಿಸುವ ಮಟ್ಟಿಗೆ ರಾಜಕಾರಣಿಗಳನ್ನು ತಂದು ನಿಲ್ಲಿಸಿದೆ. ಹಾಗಾಗಿ ಶಾಸಕರಾಗಿ, ಸಂಸದರಾಗಿ ಚುನಾಯಿತರಾದವರು ಜನಸಾಮಾನ್ಯರನ್ನು ಪ್ರತಿನಿಧಿಸುವುದಕ್ಕಿಂತಲೂ ತಮ್ಮ ಜಾತಿ ಬಾಂಧವರನ್ನು ಪ್ರತಿನಿಧಿಸುವುದೇ ಹೆಚ್ಚು. ಜಾತಿ, ಮತ, ಧರ್ಮ, ಭಾಷೆ, ಸಮುದಾಯ, ಪ್ರದೇಶ ಹೀಗೆ ಎಲ್ಲಾ ಅಸ್ಮಿತೆಗಳನ್ನೂ ನುಂಗಿಹಾಕುತ್ತಾ ಮುನ್ನಡೆದಿರುವ ರಾಜಕೀಯ ವಾಮನ ಮೂರ್ತಿಗಳು ತಮ್ಮ ಅಂತಿಮ ಗುರಿ ತಲುಪಲು ಅನುಸರಿಸದಿರುವ ಮಾರ್ಗಗಳೇ ಇಲ್ಲವೆಂದು ಹೇಳಬಹುದು.

ಇವೆಲ್ಲವೂ ಅಪ್ಯಾಯಮಾನವಾಗಿರುತ್ತವೆ. ಜನಸೇವೆ ಮಾಡಲು ಈ ಸ್ಥಾನ ಮಾನಗಳೇ ಪರಿಕರಗಳಾಗುವುದೇ ಹೊರತು ಸಂವೇದನೆ, ಸೇವಾ ಮನೋಭಾವಗಳಲ್ಲ. ಈ ಸವಲತ್ತು ಸೌಕರ್ಯಗಳನ್ನು ಭೋಗಿಸಲು ಭದ್ರ ಕೋಟೆಯೂ ಬೇಕಲ್ಲವೇ?

ಅಭಿಮಾನಿ ಸಂಘಗಳು ಈ ಕಾರ್ಯ ನಿರ್ವಹಿಸುತ್ತವೆ. ಒಂದು ಕಾಲದಲ್ಲಿ ಸಿನಿಮಾ ಹೀರೋಗಳಿಗೆ ಸೀಮಿತವಾಗಿದ್ದ ಅಭಿಮಾನಿ ಸಂಘದ ಪರಂಪರೆ ಈಗ ರಾಜಕಾರಣಿಗಳನ್ನೂ ಆವರಿಸಿರುವುದು ಇಲ್ಲಿ ಗಮನಾರ್ಹ. ಶಾಸಕರೊಬ್ಬರಿಗೆ ಸೂಕ್ತ(!) ಸ್ಥಾನಮಾನ ದೊರೆಯದೆ ಹೋದಲ್ಲಿ ಅಭಿಮಾನಿಗಳು ರೊಚ್ಚಿಗೇಳುತ್ತಾರೆ, ರಸ್ತೆಗಿಳಿದು ಹೋರಾಡುತ್ತಾರೆ, ಸಾರ್ವಜನಿಕ ಆಸ್ತಿಗಳನ್ನು ನಾಶಪಡಿಸುತ್ತಾರೆ. ಕೊನೆಗೆ ಜನತೆಯ ಆಗ್ರಹಕ್ಕೆ ಮಣಿದು ಶಾಸಕರಿಗೆ ಯಾವುದೋ ಒಂದು ಲಾಭದಾಯಕ ಸ್ಥಾನ ಲಭಿಸುತ್ತದೆ. ಈ ಲಾಭಗಳಿಕೆಯ ದಂಧೆಯನ್ನೇ ಸೂಕ್ತ ಸ್ಥಾನಮಾನ ಎಂದು ಗೌರವದಿಂದ ಕರೆಯಲಾಗುತ್ತದೆ.

ಇಷ್ಟೆಲ್ಲಾ ನಡೆದರೂ ಶಾಸಕರು ತಮ್ಮ ಪಕ್ಷ ನಿಷ್ಠೆಗೆ ಕುಂದು ಬರದಂತೆ ನಡೆದುಕೊಂಡು, ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿರುತ್ತಾರೆ. ನಮ್ಮ ರೇಣುಕಾ ಮಹಾತ್ಮೆಯನ್ನು ಅವಲೋಕಿಸಿದರೆ, ಈ ಕುರಿತು ಹೆಚ್ಚು ಹೇಳುವ ಅಗತ್ಯವಿಲ್ಲ. ವಾಸ್ತವವಾಗಿ ಈ ಹೈಕಮಾಂಡ್ ಎನ್ನುವುದು ಹಣದ ಥೈಲಿಯ ಸಾರ್ವತ್ರಿಕ ರಾಜಕೀಯ ಸ್ವರೂಪ ಎಂದು ಹೇಳಬೇಕಿಲ್ಲ. ಹಳೆಯ ಬಾಂಡ್ ಸಿನಿಮಾಗಳಲ್ಲಿ ಖಳನಾಯಕರು ಗುಪ್ತ ಸ್ಥಳದಲ್ಲಿ ಸೇರಿ, ಸೂಟ್‌ಕೇಸ್ ನೀಡಿ ಚಿನ್ನದ ಗಟ್ಟಿಗಳನ್ನು ಪಡೆಯುವಂತೆ ಸ್ಥಾನಮಾನಗಳನ್ನು ಪಡೆಯಲಾಗುತ್ತದೆ. ಪ್ರವಾಸ ಎಂದರೆ ಸ್ಥಾನ ಇದ್ದಲ್ಲಿ ಮಾನ ಇರುವುದಿಲ್ಲವಷ್ಟೆ

ಇತ್ತೀಚೆಗೆ ರಾಜ್ಯ ಸರ್ಕಾರದಲ್ಲಿ ಮಂತ್ರಿ ಮಂಡಲ ವಿಸ್ತರಣೆಯಾದ ನಂತರ ಅವಕಾಶವಂಚಿತರಾದ ಕೆಲವು ಶಾಸಕರು ತಮ್ಮ ಪಕ್ಷದ ವರಿಷ್ಠರ ವಿರುದ್ಧ ಅಬ್ಬರಿಸಿ, ಬೊಬ್ಬಿರಿದು ಕೊನೆಗೆ ತೆಪ್ಪಗಾದದ್ದು, ನಂತರ ಭಿನ್ನಮತ ಭುಗಿಲೆದ್ದಿದ್ದು, ರಾಜ್ಯ ರಾಜಕಾರಣ ಕೇರಾಫ್ ರೆಸಾರ್ಟ್ ಆಗಿದ್ದು, ರೆಸಾರ್ಟುಗಳೇ ಭದ್ರಕೋಟೆಗಳಾಗಿದ್ದು, ಇವೆಲ್ಲವನ್ನೂ ನೋಡಿದಾಗ, ಇವರ ಎಲ್ಲ ವರ್ತನೆಗಳನ್ನು ನಿಗ್ರಹಿಸುವ ಸೂತ್ರ ಯಾವುದೆಂದು ತಿಳಿಯುತ್ತದೆ. ಮೈಸೂರಿನ ಶಾಸಕರ ಕೂಗಾಟ, ರಂಪಾಟ, ವಿಷಸೇವಿಸುವ ಪ್ರಹಸನಗಳು ಕೇವಲ ಒಬ್ಬ ವ್ಯಕ್ತಿಯ ವೇದನೆಗಳ ಸೂಚನೆಯಲ್ಲ. ಇದು ಪ್ರಸಕ್ತ ಭಾರತದ ರಾಜಕಾರಣದಲ್ಲಿ ನುಸುಳಿ ಒಳಗೊಳಗೇ ಕೊರೆಯುತ್ತಿರುವ ರೋಗದ ಚಿಹ್ನೆಯಷ್ಟೆ. ಪರಸ್ಪರ ಕೆಸರೆರಚಾಟದಲ್ಲೇ ಇಡೀ ರಾಜಕೀಯ ಕುಟುಂಬದ ಬಂಡವಾಳವನ್ನು ಬಯಲು ಮಾಡುತ್ತಿರುವ ರಾಜಕೀಯ ನಾಯಕರುಗಳಿಗೆ ಮತಬಾಂಧವರು ಚಿರಋಣಿಗಳಾಗಿರಬೇಕು. ಏಕೆಂದರೆ ರಾಜಕಾರಣಿಗಳಲ್ಲಿ ಮನೆ ಮಾಡಿರುವ ಭ್ರಷ್ಟಾಚಾರವನ್ನು ಹೊರಹಾಕಲು ಯಾವ ಲೋಕಾಯುಕ್ತವೂ ಅಗತ್ಯವಿಲ್ಲ, ನ್ಯಾಯಾಲಯವೂ ಅಗತ್ಯವಿಲ್ಲ.

ಪ್ರಸ್ತುತ ರಾಜಕೀಯ ಪಕ್ಷಗಳು ಮತ್ತು ನಾಯಕರು(?) ಆಳುವ ಹೊಣೆಗಾರಿಕೆಯನ್ನು ಹೊರಲು ಶಕ್ಯರಲ್ಲ. ಏಕೆಂದರೆ ನವ ಉದಾರವಾದದ ಕಾಲ್ತುಳಿತಕ್ಕೆ ಒಳಗಾಗಿರುವ ಭಾರತದ ರಾಜಕಾರಣದಲ್ಲಿ ಮಾರುಕಟ್ಟೆ ಶಕ್ತಿಗಳ ಪ್ರಾಬಲ್ಯದಿಂದ ಆಳ್ವಿಕರಿಗೆ ತಮ್ಮದೇ ಆದ ರಾಜಕೀಯ ಕುಟುಂಬಗಳನ್ನು ನಿಗ್ರಹಿಸುವುದಿರಲಿ, ನಿಭಾಯಿಸುವುದೂ ಕಷ್ಟವಾಗುತ್ತಿದೆ. ಎಲ್ಲರೂ ಭ್ರಷ್ಟರೇ ಎಂಬ ಸಿನಿಕತೆ ಜನಸಾಮಾನ್ಯರನ್ನೂ ಆವರಿಸಿರುವ ಈ ಸಂದರ್ಭದಲ್ಲಿ ಭ್ರಷ್ಟತೆಯೂ ಒಂದು ಅರ್ಹತೆಯ ಮಾಪನವಾಗಿರುವುದು ಭಾರತೀಯ ಪ್ರಜಾತಂತ್ರದ ದುರಂತ. ಪ್ರಸಕ್ತ ರಾಜಕಾರಣಕ್ಕೆ ಬಟ್ಟೆ ಹರಿದುಕೊಂಡು ಅರಚಾಡಿದ ಗೂಳಿಹಟ್ಟಿ, ದಿನಕ್ಕೊಂದು ಬಣ್ಣ ಬದಲಿಸುವ ವರ್ತೂರು ಪ್ರಕಾಶ್, ವಿಷ ಸೇವಿಸುವ ಶಂಕರಲಿಂಗೇಗೌಡ ಸಂಕೇತಗಳಾಗಿ ನಿಲ್ಲುತ್ತಾರೆ. ಇಲ್ಲಿ ವಂಚಿತರು ಯಾರು ಎಂಬುದೇ ಪ್ರಶ್ನೆ!

ಭವಿಷ್ಯದ ಮಾದರಿಗಳು

ಇತ್ತೀಚಿನ ರಾಜಕೀಯ ವಿದ್ಯಮಾನಗಳಲ್ಲಿ ಎದ್ದು ಕಾಣುವ ಅಂಶಗಳೆಂದರೆ ರಾಜ್ಯಪಾಲರ ಕಾರ್ಯವೈಖರಿ, ಕಾಂಗ್ರೆಸ್-ಜೆಡಿಎಸ್‌ನ ಅಸಹಾಯಕ ವರ್ತನೆ ಮತ್ತು ಭಾಜಪದ ಅಧಿಕಾರ ದಾಹ, ಇವೆಲ್ಲದರ ನಡುವೆ ಅರಾಜಕತೆಯನ್ನು ಸಹಿಸಿಕೊಂಡಿರುವ ರಾಜ್ಯ ಜನತೆಯ ಬವಣೆ. ರಾಜ್ಯ ವಿಧಾನಸಭೆಯಲ್ಲಿ ನಡೆದ ಕೋಲಾಹಲ

[illegible] ಆಳುವ ವರ್ಗಗಳ ಅಸಹಾಯಕತೆಯನ್ನು ಪ್ರತಿಬಿಂಬಿಸುವಂತಿದ್ದು, ಆಳುವ ವರ್ಗಗಳ ಅಸಮರ್ಥತೆಯ ಪ್ರತೀಕವಾಗಿದೆ. ಈ ಪ್ರಹಸನವನ್ನು ಪಕ್ಷಗಳ ಚೌಕಟ್ಟಿನಲ್ಲೇ ನೋಡುವುದು ಹೆಚ್ಚು ಸಮಂಜಸವಾಗಲಾರದು. ಏಕೆಂದರೆ ಪ್ರಸ್ತುತ ರಾಜ್ಯ ಅಥವಾ ರಾಷ್ಟ್ರ ರಾಜಕಾರಣವನ್ನು ಸಂವಿಧಾನವಾಗಲೀ, ಜನತಾ ಜನಾರ್ಧನರಾಗಲೀ ನಿರ್ವಹಿಸುತ್ತಿಲ್ಲ.

ಬದಲಾಗಿ ವಿದೇಶಿ ಹಣಕಾಸು ಬಂಡವಾಳ ಮತ್ತು ಕಾರ್ಪೋರೇಟ್ ಉದ್ದಿಮೆಗಳು ನಿರ್ವಹಿಸುತ್ತಿವೆ. ಈ ಬಂಡವಾಳದ ಹೊರೆ ಮತ್ತು ಅದರೊಂದಿಗೇ ಎರಗಿಬರುವ ಆಳ್ವಿಕೆಯ ನಿರ್ಬಂಧಗಳು ನಮ್ಮ ಆಳ್ವಿಕರಿಗೆ ಹೊರಲಾರದ ಹೊರೆಯಾಗಿ ಪರಿಣಮಿಸಿದೆ. ಏಕೆಂದರೆ ಇಂದಿನ ಚುನಾಯಿತ ಸರ್ಕಾರಗಳ ಗುರಿ ಅಭಿವೃದ್ಧಿಯೇ ಆದರೂ ಅದು ಜನಸಮುದಾಯಗಳ ಶ್ರೇಯಸ್ಸನ್ನು ಕೋರುವ ಅಭಿವೃದ್ಧಿಯಲ್ಲ. ಬದಲಾಗಿ ಕಾರ್ಪೋರೇಟ್ ಬಂಡವಾಳದ ಕ್ರೋಢೀಕರಣ ಮತ್ತು ವೃದ್ಧಿಯನ್ನು ಪೋಷಿಸುವ ಅಭಿವೃದ್ಧಿಯಾಗಿರುತ್ತದೆ. ವೇದಾಂತ, ಮಿಟ್ಟಲ್, ಕಿಂಗ್‌ಫಿಷರ್‌ಗಳು ಈ ಪ್ರಗತಿಪಥದ ಮೈಲಿಗಲ್ಲುಗಳಾಗಿರುತ್ತಾರೆ. ಈ ಮಾರ್ಗದಲ್ಲಿ ಬರುವ ಯಾವುದೇ ಅಡ್ಡಿ ಆತಂಕಗಳನ್ನು ನಿವಾರಿಸಲು ಸ್ವಯಂಚಾಲಿತ ಜೆಸಿಬಿಗಳು ಸದಾ ಸಿದ್ಧವಾಗಿರುತ್ತವೆ. ಈ ಜೆಸಿಬಿಗಳ ಚಾಲಕರು ಸ್ವಯಂ ರಾಜಕಾರಣಿಗಳೇ ಆಗಿರುವುದರಿಂದ ರಾಜಕಾರಣಿಗಳ ವ್ಯಕ್ತಿಗತ ಮೌಲ್ಯ ಮಾರುಕಟ್ಟೆಯ ಸೂಚ್ಯಂಕದ ಮೇರೆಗೆ ಏರುಪೇರು ಆಗುತ್ತಿರುತ್ತದೆ. ಈ ಮಾರುಕಟ್ಟೆ ವ್ಯತ್ಯಯಗಳ ಪರಿಣಾಮವಾಗಿಯೇ ಶಾಸಕ ಮಹಾಶಯರು ಪಕ್ಷ, ಸಿದ್ಧಾಂತ, ತತ್ವಗಳನ್ನು ಬದಿಗಿಟ್ಟು ಹರಾಜು ಮಾರುಕಟ್ಟೆಯಲ್ಲಿ ಬಿಕರಿಯಾಗಲು ಸದಾ ಸಿದ್ಧರಾಗಿರುತ್ತಾರೆ.

ಈ ನಿಟ್ಟಿನಲ್ಲಿ ರಾಜ್ಯದ ಕೆಲವು ಶಾಸಕರು ಉತ್ತಮ ಮಾದರಿಯಾಗೂ ನಿಲ್ಲುತ್ತಾರೆ. ನಿಮಿಷಕ್ಕೊಂದು ಬಣ್ಣ ಬದಲಿಸಿ, ಮಾನವ ರೂಪಿ ಊಸುರವಳ್ಳಿ ಎಂಬ ಬಿರುದು ಪಡೆದಿರುವ ವರ್ತೂರು ಪ್ರಕಾಶ್, ಮಂತ್ರಿ ಪದವಿಯ ಆಸೆಗೆ ಬಲಿಯಾಗಿ ತಮ್ಮನ್ನೇ ಮಾರಿಕೊಂಡ ಪಕ್ಷೇತರರು ಈ ಮಾದರಿಗಳ ಸಿದ್ಧ ರೂಪಗ ಳಾಗಿ ಕಾಣುತ್ತಾರೆ. ರಾಜ್ಯಸದ ನದಲ್ಲಿ ನಡೆದ ಹೊಡೆದಾಟ, ಬಡಿದಾಟ, ಗಲಭೆ, ಪ್ರಕ್ಷುಬ್ಧತೆ ಇವೆಲ್ಲವೂ ಯಾವುದೇ ಮಾರು ಕಟ್ಟೆಯಲ್ಲಿ ನಡೆಯುವ ಪ್ರಕ್ರಿಯೆ ಗಳಿಗೆ ಸಮನಾಗಿಯೇ ಕಂಡುಬರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ರಾಜ್ಯ ಸದನದಲ್ಲಿ ಪೊಲೀಸ ಸರ ಪ್ರವೇಶ, ವಿರೋಧ ಪಕ್ಷಗಳಿಂದ ನಡೆ ಯುವದಾಂಧಲೆ ಇವೆಲ್ಲವೂ ಆಳುವ ವರ್ಗಗಳ ಅಸಹಾ ಯಕತೆಯ ಸಂಕೇತಗಳಾಗಿ ಕಂಡುಬಂದರೆ ಅಚ್ಚರಿಯೇನಿಲ್ಲ.

ರಾಜ್ಯಾಂಗದ ಸೋಲು

ಭಾಜಪ ಸರ್ಕಾರ ವಿಶ್ವಾಸಮತ ಗೆದ್ದಿದೆ ಎಂದು ಮಾಧ್ಯಮಗಳಲ್ಲಿ, ರಾಜಕೀಯ ವಲಯಗಳಲ್ಲಿ ಬಿಂಬಿಸಲಾಗುತ್ತಿದೆ. ನಿಜ. ಸಂಖ್ಯಾ ಬಲದ ಮೇಲೆ ಆಡಳಿತ ಯಂತ್ರವನ್ನು ನಿರ್ವಹಿಸುವ ಅಧಿಕಾರ ಪಡೆಯುವ ಮಟ್ಟಿಗೆ ಭಾಜಪ ಸರ್ಕಾರ ವಿಶ್ವಾಸಮತ ಗೆದ್ದಿದೆ. ಮತ್ತೊಂದೆಡೆ ಒಂದು ಭ್ರಷ್ಟ ರಾಜಕೀಯ ವ್ಯವಸ್ಥೆಗೆ ಪರ್ಯಾಯವನ್ನು ಒದಗಿಸದೆ, ಅಧಿಕಾರಗಳಿಸುವು ದನ್ನೇ ಪರಮಧ್ಯೇಯವನ್ನಾಗಿ ರಿಸಿಕೊಂಡ ವಿರೋಧ ಪಕ್ಷ ಗಳು ಮತ್ತೊಮ್ಮೆ ಸೋಲನುಭ ವಿಸಿವೆ. ಹೈಕೋರ್ಟಿನ ತೀರ್ಪು ಏನೇ ಆಗಿರಲಿ, ಯಾವುದೋ ಒಂದು ಸ್ವರೂಪದ ಸರ್ಕಾರ ಕರ್ನಾಟಕದ ಜನತೆಯನ್ನು ಆಳುತ್ತದೆ. ಅದೇ ನವ ಉದಾರವಾದಿ ನೀತಿಗಳು, ಅದೇ ಆರ್ಥಿಕ ನೀತಿಗಳು, ಅದೇ ಸಾಮಾಜಿಕ ಬದ್ಧತೆಗಳು ಮತ್ತೊಂದು ರೂಪದಲ್ಲಿ ಜಾರಿಗೊಳ್ಳುತ್ತವೆ. ರಾಜ್ಯಪಾಲರು ಬದಲಾಗಬಹುದು, ಆದರೆ ರಾಜ್ಯಪಾಲರನ್ನು ನೇಮಿಸುವ ವ್ಯವಸ್ಥೆಯಾಗಲೀ, ಈ ಸಾಂವಿಧಾನಿಕ ಹುದ್ದೆಯನ್ನು ನಿಭಾಯಿಸುವ ವ್ಯವಸ್ಥೆಯಲ್ಲಾಗಲೀ ಬದಲಾವಣೆ ಆಗುವುದಿಲ್ಲ. ಈ ಬದಲಾವಣೆ ಯಾವುದೇ ಪಕ್ಷಕ್ಕೆ ಅವಶ್ಯ ಎನಿಸುವುದೂ ಇಲ್ಲ. ಇಂದು ವಿರೋಧ ಪಕ್ಷವಾಗಿದ್ದರೂ ನಾಳೆ ಆಳುವ ಪಕ್ಷವಾಗಬಹುದಲ್ಲವೇ?

ಆಳುವ ವರ್ಗಗಳ ದೃಷ್ಟಿಯಲ್ಲಿ ಸಾಂವಿಧಾನಿಕ ಸಂಸ್ಥೆಗಳು ಮತ್ತು ನಿಯಮಗಳು ಆಳ್ವಿಕೆಯ ಅಸ್ತ್ರಗಳಾಗಿ ಪರಿಣಮಿಸಿದಾಗ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅರಾಜಕತೆ ಮೂಡುತ್ತದೆ. ಕರ್ನಾಟಕದ ರಾಜಕಾರಣದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಈ ಅರ್‍ಾಜಕತೆಯ ಸಂಕೇತವಾಗಿದೆ. ಇಲ್ಲಿ ಭಾಜಪ ತಾತ್ಕಾಲಿಕ ಗೆಲುವು ಸಾಧಿಸಿದೆ, ವಿರೋಧ ಪಕ್ಷಗಳು ಸೋಲು ಅನುಭವಿಸಿವೆ. ಆದರೆ ಸಂವಿಧಾನದ ದೃಷ್ಟಿಯಲ್ಲಿ ಪಕ್ಷ ರಾಜಕಾರಣ ಎನ್ನುವುದು ತಾತ್ಕಾಲಿಕ ತಂಗುದಾಣಗಳಷ್ಟೆ. ನಿಜವಾಗಿ ಗೆಲ್ಲಬೇಕಾಗಿರುವುದು ಸಾಂವಿಧಾನಿಕ ತತ್ವಗಳು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳು. ನವ ಉದಾರವಾದಿ ಬಂಡವಾಳ ವ್ಯವಸ್ಥೆಯಲ್ಲಿ ಅರಾಜಕತೆ ಹೆಚ್ಚಾದಷ್ಟೂ ಆಳ್ವಿಕರ ಅಸಹಾಯಕತೆಯೂ ಹೆಚ್ಚಾಗುವುದು ಸ್ವಾಭಾವಿಕ. ಇದರ ಸ್ಪಷ್ಟ ಉದಾ ಹರಣೆಯನ್ನು ಕರ್ನಾಟಕದಲ್ಲಿ ಕಾಣುತ್ತಿದ್ದೇವೆ.

ತಮ್ಮ ಭವಿಷ್ಯ ಉಜ್ವಲವಾಗುವುದೆಂಬ ಆಶಯದಿಂದ ದೇಶದ ಸಂವಿಧಾನಕ್ಕೆ ಬದ್ಧರಾಗಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಅವರಿಗೆ ಆಳ್ವಿಕರೆಂಬ ಪಟ್ಟ ನೀಡುವ ಪ್ರಜೆಗಳಿಗೆ ಆಳ್ವಿಕರ ಈ ಅಸಹಾಯಕತೆ ಭ್ರಮನಿರಸನ ಉಂಟುಮಾಡುವುದರಲ್ಲಿ ಸಂದೇಹವೇ ಇಲ್ಲ. ಆದರೂ ಜನ ಮತ್ತೆ ಮತದಾನ ಮಾಡುತ್ತಾರೆ, ಇದೇ ಪರಂಪರೆಯನ್ನು ಮುಂದುವರೆಸುವ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸುತ್ತಾರೆ. ಮತ್ತೊಂದು ಸರ್ಕಾರ ರಚನೆಯಾಗುತ್ತದೆ. ಸೋಲು ಗೆಲುವುಗಳ ಹಾವು ಏಣಿಯಾಟ ಮುಂದುವರೆಯುತ್ತಿರುತ್ತದೆ. ಗೆದ್ದವರು ಕುದುರೆ ಏರುತ್ತಾರೆ, ಸೋತವರು ಕುದುರೆ ವ್ಯಾಪಾರದಲ್ಲಿ ತೊಡಗುತ್ತಾರೆ. ಆದರೆ ಎಲ್ಲೋ ಒಂದು ಕಡೆ, ತನ್ನ ಎಲ್ಲಾ ಆಶಯಗಳೂ ಮಣ್ಣುಪಾಲಾದ ವ್ಯಥೆಯಲ್ಲಿ ನಲುಗಿ ನಲುಗಿ, ಮೂಲೆಗುಂಪಾಗಿ, ಅನಾಥ ಪ್ರಜ್ಞೆಯಿಂದ ಬಳಲಿ, ನಿಸ್ತೇಜವಾಗಿ ದೇಶದ ಸಂವಿಧಾನ ಮತ್ತು ಪ್ರಜಾತಂತ್ರ ಎಂಬ ಪವಿತ್ರ ಕಲ್ಪನೆಗಳು ಸೋತು, ಸೊರಗಿ ನೇಪಥ್ಯಕ್ಕೆ ಸರಿಯುತ್ತವೆ.

> **ರಾಷ್ಟ್ರ ರಾಜಕಾರಣವನ್ನು ಸಂವಿಧಾನವಾಗಲೀ, ಜನತಾ ಜನಾರ್ಧನರಾಗಲೀ ನಿರ್ವಹಿಸುತ್ತಿಲ್ಲ. ಬದಲಾಗಿ ವಿದೇಶಿ ಹಣಕಾಸು ಬಂಡವಾಳ ಮತ್ತು ಕಾರ್ಪೋರೇಟ್ ಉದ್ದಿಮೆಗಳು ನಿರ್ವಹಿಸುತ್ತಿವೆ. ಈ ಬಂಡವಾಳದ ಹೊರೆ ಮತ್ತು ಅದರೊಂದಿಗೇ ಎರಗಿಬರುವ ಆಳ್ವಿಕೆಯ ನಿರ್ಬಂಧಗಳು ನಮ್ಮ ಆಳ್ವಿಕರಿಗೆ ಹೊರಲಾರದ ಹೊರೆಯಾಗಿ ಪರಿಣಮಿಸಿದೆ. ಏಕೆಂದರೆ ಇಂದಿನ ಚುನಾಯಿತ ಸರ್ಕಾರಗಳ ಗುರಿ ಅಭಿವೃದ್ಧಿಯೇ ಆದರೂ ಅದು ಜನಸಮುದಾಯಗಳ ಶ್ರೇಯಸ್ಸನ್ನು ಕೋರುವ ಅಭಿವೃದ್ಧಿಯಲ್ಲ. ಬದಲಾಗಿ ಕಾರ್ಪೋರೇಟ್ ಬಂಡವಾಳದ ಕ್ರೋಢೀಕರಣ ಮತ್ತು ವೃದ್ಧಿಯನ್ನು ಪೋಷಿಸುವ ಅಭಿವೃದ್ಧಿಯಾಗಿರುತ್ತದೆ ವೇದಾಂತ, ಮಿಟ್ಟಲ್, ಕಿಂಗ್‌ಫಿಷರ್‌ಗಳು ಈ ಪ್ರಗತಿಪಥದ ಮೈಲಿಗಲ್ಲುಗಳಾಗಿರುತ್ತಾರೆ.**

ಶಾಸಕರ ಅನರ್ಹತೆ ನ್ಯಾಯಾಂಗದ ಪಾತ್ರ

ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ಸಂವಿಧಾನದ ಮೌಲ್ಯಗಳನ್ನು ಮತ್ತು ಪ್ರಜಾತಂತ್ರವನ್ನು ರಕ್ಷಿಸುವುದು ನ್ಯಾಯಾಂಗದ ಹೊಣೆಗಾರಿಕೆ ಎಂದೇ ನಂಬಲಾಗಿದೆ. ಅದರೆ ಕರ್ನಾಟಕದ ವಿಧಾನಸಭೆಯಲ್ಲಿ ಸಂಭವಿಸಿರುವ ವಿದ್ಯಮಾನಗಳು ಪ್ರಜಾಸತ್ತೆಯನ್ನು ಮಾತ್ರ ಅಣಕಿಸುತ್ತಿಲ್ಲ. ಪ್ರಜಾತಂತ್ರದ ಅಸ್ತಿತ್ವವನ್ನು ರಕ್ಷಿಸುವ ನ್ಯಾಯಾಂಗವನ್ನೂ ಅಣಕಿಸುತ್ತಿದೆ. ಸಭಾಧ್ಯಕ್ಷ ಮಾನ್ಯ ಬೋಪಯ್ಯ ಆಡಳಿತ ಪಕ್ಷದ 11 ಸದಸ್ಯರನ್ನು ಅನರ್ಹಗೊಳಿಸಿದ ಪ್ರಕರಣಕ್ಕೆ ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪು ತಾತ್ಕಾಲಿಕ ಪರದೆ ಎಳೆದಿದೆ. ಅನರ್ಹಗೊಂಡ ಶಾಸಕರು ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಇಡೀ ಪ್ರಕರಣದ ಸುತ್ತ ನಡೆದಿರುವ ರಾಜಕೀಯ ಪ್ರಹಸನಗಳೇನೇ ಇರಲಿ, ನ್ಯಾಯಮೂರ್ತಿ ಸಭಾಹಿತ ಮತ್ತು ಇತರ ನ್ಯಾಯಮೂರ್ತಿಗಳ ತೀರ್ಪು ಚರ್ಚಾರ್ಹವಾಗಿರುವುದಂತೂ ಸತ್ಯ. ಪ್ರಸ್ತುತ ತೀರ್ಪು ಆಳುವ ಭಾಜಪದ ನಾಯಕರಿಗೆ ಅಪ್ಯಾಯಮಾನವಾಗಿರಬಹುದು, ಸರ್ಕಾರವನ್ನು ಉರುಳಿಸಲು ಶತಾಯಗತಾಯ ಪ್ರಯತ್ನ ಮಾಡುತ್ತಿರುವ ವಿರೋಧ ಪಕ್ಷಗಳಿಗೆ ಅಪಥ್ಯವಾಗಿರಬಹುದು. ಆದರೆ ನ್ಯಾಯಾಲಯದ ತೀರ್ಪಿಗೆ, ಒಪ್ಪಲಾಗದಿದ್ದರೂ, ತಲೆಬಾಗಲೇ ಬೇಕು. ಹಾಗಾಗಿ ಸದ್ಯಕ್ಕೆ ಯಡಿಯೂರಪ್ಪನವರ ಸರಕಾರ ಸದ್ಯಕ್ಕೆ ಸುರಕ್ಷಿತವೆಂದೇ ಹೇಳಬಹುದು.

ಹೈಕೋರ್ಟಿನ ತೀರ್ಪು ಭಾಜಪದ ಗೆಲುವು ಎಂದು ಬೀಗುತ್ತಿರುವ ಪಕ್ಷದ ನಾಯಕರು ಗ್ರಹಿಸಬೇಕಾದ ಸಂಗತಿ ಎಂದರೆ ಇದು ಸೋಲು 'ಗೆಲುವಿನ ಪ್ರಶ್ನೆಯಲ್ಲ. ಮುಂದೊಂದು ದಿನ ಇದೇ ರೀತಿಯ ತೀರ್ಪು ಭಾಜಪಕ್ಕೆ ಅಪಥ್ಯವಾಗಬಹುದು. ತಮ್ಮ ಸರಕಾರ ಉಳಿಯಿತೆಂಬ ಸಂತಸ ಯಡಿಯೂರಪ್ಪ ಅಂಡ್ ಸನ್ಸ್ ಕಂಪನಿಯಲ್ಲಿ ಮೂಡಿದ್ದರೂ, ಉಳಿಯಬೇಕಾಗಿದ್ದ ಸಂವಿಧಾನ, ಪ್ರಜಾತಂತ್ರ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳು ನಶಿಸುತ್ತಿರುವುದನ್ನು ಯಾವುದೇ ಪ್ರಜ್ಞಾವಂತ(!) ರಾಜಕಾರಣಿ ಗಮನಿಸಬೇಕಾಗಿದೆ. ಚುನಾಯಿತ ಸದಸ್ಯರನ್ನು ಅನರ್ಹಗೊಳಿಸಲು ಸಂವಿಧಾನದಲ್ಲಿ ಸೂಚಿಸಲಾಗಿರುವ ನಿಯಮಗಳು ಮತ್ತು ಸ್ವತಂತ್ರ ಭಾರತದ ಇತಿಹಾಸದಲ್ಲಿ ಈ ಕುರಿತು ನ್ಯಾಯಾಂಗದಲ್ಲಿ ನೀಡಲಾಗಿರುವ ತೀರ್ಪುಗಳನ್ನು ಗಮನಿಸಿದಾಗ ಎಲ್ಲೋ ಒಂದೆಡೆ ಭಾರತದ ಪ್ರಜಾತಂತ್ರ ವ್ಯವಸ್ಥೆ

> **ಸಂವಿಧಾನದ ಮೌಲ್ಯಗಳನ್ನು ಮತ್ತು ಪ್ರಜಾತಂತ್ರವನ್ನು ರಕ್ಷಿಸುವುದು ನ್ಯಾಯಾಂಗದ ಹೊಣೆಗಾರಿಕೆ ಎಂದೇ ನಂಬಲಾಗಿದೆ. ಅದರೆ ಕರ್ನಾಟಕದ ವಿಧಾನಸಭೆಯಲ್ಲಿ ಸಂಭವಿಸಿರುವ ವಿದ್ಯಮಾನಗಳು ಪ್ರಜಾಸತ್ತೆಯನ್ನು ಮಾತ್ರ ಅಣಕಿಸುತ್ತಿಲ್ಲ. ಪ್ರಜಾತಂತ್ರದ ಅಸ್ತಿತ್ವವನ್ನು ರಕ್ಷಿಸುವ ನ್ಯಾಯಾಂಗವನ್ನೂ ಅಣಕಿಸುತ್ತಿದೆ. ಸಭಾಧ್ಯಕ್ಷ ಮಾನ್ಯ ಬೋಪಯ್ಯ ಆಡಳಿತ ಪಕ್ಷದ 11 ಸದಸ್ಯರನ್ನು ಅನರ್ಹಗೊಳಿಸಿದ ಪ್ರಕರಣಕ್ಕೆ ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪು ತಾತ್ಕಾಲಿಕ ಪರದೆ ಎಳೆದಿದೆ. ಅನರ್ಹಗೊಂಡ ಶಾಸಕರು ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಇಡೀ ಪ್ರಕರಣದ ಸುತ್ತ ನಡೆದಿರುವ ರಾಜಕೀಯ ಪ್ರಹಸನಗಳೇನೇ ಇರಲಿ, ನ್ಯಾಯಮೂರ್ತಿ ಸಭಾಹಿತ ಮತ್ತು ಇತರ ನ್ಯಾಯಮೂರ್ತಿಗಳ ತೀರ್ಪು ಚರ್ಚಾರ್ಹವಾಗಿರುವುದಂತೂ ಸತ್ಯ.**

ಮತ್ತು ಪ್ರಭುತ್ವ ಸಂವಿಧಾನದ ಮರುವ್ಯಾಖ್ಯಾನದಲ್ಲಿ ಎಡವುತ್ತಿರುವುದು ಸ್ಪಷ್ಟವಾಗುತ್ತಿದೆ.

ಪ್ರಕರಣದ ಹಿನ್ನೆಲೆ

ಕರ್ನಾಟಕ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ಅಕ್ಟೋಬರ್ 11 2010ರಂದು ವಿಶ್ವಾಸ ಮತ ಯಾಚಿಸಬೇಕಿತ್ತು. ಕಾರಣ, ಆಳುವ ಪಕ್ಷದ 11 ಸದಸ್ಯರು ಮತ್ತು ಐವರು ಪಕ್ಷೇತರರು ಮುಖ್ಯಮಂತ್ರಿಗಳಲ್ಲಿ ತಮಗೆ ವಿಶ್ವಾಸವಿಲ್ಲವೆಂದೂ, ನಾಯಕತ್ವ ಬದಲಿಸದಿದ್ದಲ್ಲಿ ತಾವು ಸರಕಾರಕ್ಕೆ ಬೆಂಬಲ ನೀಡುವುದಿಲ್ಲವೆಂದೂ ರಾಜ್ಯಪಾಲರಿಗೆ ಸಲ್ಲಿಸಿದ ಪತ್ರದಲ್ಲಿ ನಿವೇದಿಸಿಕೊಂಡಿದ್ದರು. ಆದರೆ ವಿಶ್ವಾಸಮತ ಯಾಚಿಸುವ ಮುನ್ನವೇ ಸಭಾಧ್ಯಕ್ಷರು ಎಲ್ಲಾ 16 ಶಾಸಕರನ್ನು ಅನರ್ಹಗೊಳಿಸುವ ಮೂಲಕ, ಆಳುವ ಪಕ್ಷಕ್ಕೆ ಸುಗಮ ಹಾದಿಯನ್ನು ನಿರ್ಮಿಸಿದ್ದರು. ಅನರ್ಹ ಶಾಸಕರು ಉಚ್ಚ ನ್ಯಾಯಾಲಯದ ಮೊರೆಹೋಗುವುದು ಅನಿವಾರ್ಯವಾಯಿತು. ನ್ಯಾಯಾಲಯದಲ್ಲಿ ಇಬ್ಬರು ನ್ಯಾಯಾಧೀಶರು ವಿಭಿನ್ನ ತೀರ್ಪು ನೀಡಿದ್ದರಿಂದ ಪ್ರಕರಣವನ್ನು ಏಕಪೀಠ ನ್ಯಾಯಾಧೀಶರಿಗೆ ವಹಿಸಲಾಯಿತು. ಈಗ ನ್ಯಾಯಮೂರ್ತಿ ಸಭಾಹಿತ ಅವರು ಸ್ಪೀಕರ್ ಕೈಗೊಂಡ ನಿರ್ಣಯವನ್ನು ಎತ್ತಿಹಿಡಿಯುವ ಮೂಲಕ, ಶಾಸಕರ ಅನರ್ಹತೆಯನ್ನು ಊರ್ಜಿತಗೊಳಿಸುತ್ತಾರೆ. ನ್ಯಾಯಾಲಯದ ಸುತ್ತಲಿನ ಈ ಪ್ರಹಸನ ಪ್ರಸ್ತುತ ಸಂದರ್ಭದಲ್ಲಿ ಸಾಂವಿಧಾನಿಕ ವಿವಾದವನ್ನು ಸೃಷ್ಟಿಸಿರುವುದರಿಂದ ಇದರ ಹಿಂದಿನ ರಾಜಕೀಯ ಆಗುಹೋಗುಗಳು ಅಪ್ರಸ್ತುತವೆನಿಸುತ್ತದೆ.

ವಿಧಾನಸಭಾಧ್ಯಕ್ಷರು 16 ಶಾಸಕರನ್ನು ಅನರ್ಹಗೊಳಿಸಿದ್ದು ಸಂವಿಧಾನದ 10ನೆಯ ಅನುಬಂಧದ ನಿಯಮಗಳ ಅಡಿಯಲ್ಲಿ. ಪಕ್ಷಾಂತರ ಮಾಡಿದ ಶಾಸಕರನ್ನು ಅನರ್ಹಗೊಳಿಸುವ ನಿಯಮಗಳನ್ನು ಸಂವಿಧಾನದ ಈ ಅನುಬಂಧದಲ್ಲಿ ನಮೂದಿಸಲಾಗಿದೆ. ಈ ಅನುಬಂಧದ ಪ್ಯಾರಾ 2(1)(ಎ) ಅನ್ವಯ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಸದಸ್ಯನು ಸ್ವಪ್ರೇರಣೆಯಿಂದ ತನ್ನ ಮಾತೃಪಕ್ಷವನ್ನು ತೊರೆದರೆ ಅಂತಹ ಸದಸ್ಯನು ಅನರ್ಹತೆಗೊಳಗಾಗುತ್ತಾನೆ. ಪ್ಯಾರಾ 2(1)(ಬಿ) ಅನ್ವಯ ಯಾವುದೇ ಸದಸ್ಯ ಪಕ್ಷದ ಆದೇಶವನ್ನು (ವಿಪ್) ಉಲ್ಲಂಘಿಸಿ ಮತ ಚಲಾಯಿಸಿದ ಸಂದರ್ಭದಲ್ಲಿಯೂ ಅನರ್ಹತೆಗೊಳಗಾಗುತ್ತಾನೆ. ಪ್ರಸ್ತುತ ಕರ್ನಾಟಕದ ಸಂದರ್ಭದಲ್ಲಿ ಎರಡನೆಯ ನಿಯಮ ಅನ್ವಯಿಸುವುದಿಲ್ಲ. ಆದರೆ ಸಭಾಧ್ಯಕ್ಷರು ಮೊದಲನೆಯ ನಿಯಮವನ್ನು ಆಧರಿಸಿ ಭಾಜಪದ 11 ಶಾಸಕರಿಗೆ ನೋಟೀಸನ್ನು ನೀಡಿ, ತಾವುಗಳು ಸ್ವಪ್ರೇರಣೆಯಿಂದ ತಮ್ಮ ಮಾತೃಪಕ್ಷದ ಸದಸ್ಯತ್ವವನ್ನು ತ್ಯಜಿಸಿರುವುದರಿಂದ ತಮ್ಮನ್ನು ಅನರ್ಹಗೊಳಿಸಬಾರದೇಕೆ ಎಂದು ಪ್ರಶ್ನಿಸಿದ್ದರು.

ಪ್ಯಾರಾ 2(1)(ಎ)ದಲ್ಲಿ "ಸ್ವಪ್ರೇರಣೆಯಿಂದ ಮೂಲ ರಾಜಕೀಯ ಪಕ್ಷವನ್ನು ತೊರೆಯುವುದು" ಎಂದು ಹೇಳಿರುವುದನ್ನು ರಾಜೀನಾಮೆಗೆ ಸಮೀಕರಿಸಲಾಗುವುದಿಲ್ಲ ಎಂದು ಸಂವಿಧಾನ ತಜ್ಞರು ಪ್ರತಿಪಾದಿಸುತ್ತಾರೆ. ಆದರೆ, ರಾಜಕೀಯ ಪಕ್ಷದ ಸದಸ್ಯರು ರಾಜೀನಾಮೆ ನೀಡದಿದ್ದರೂ ಸಹ, ಅಂತಹ ಸದಸ್ಯರ ನಡವಳಿಕೆಗಳು ಸ್ವಪ್ರೇರಣೆಯಿಂದ ಪಕ್ಷವನ್ನು ತೊರೆದಂತೆ ಕಂಡುಬಂದರೂ ಅದನ್ನು ರಾಜೀನಾಮೆ ಎಂದೇ ಪರಿಗಣಿಸಬಹುದು ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯ ಪಡುತ್ತದೆ. (ರವಿ ನಾಯಕ್ ಮತ್ತು ಭಾರತ ಸರ್ಕಾರ). ಮತ್ತೊಂದು ಪ್ರಕರಣದಲ್ಲಿ "ಸ್ವಪ್ರೇರಣೆಯಿಂದ ಪಕ್ಷವನ್ನು ತೊರೆಯುವ ನಿಲುವನ್ನು ಸ್ಪಷ್ಟವಾಗಿ ವ್ಯಕ್ತಪಡಿಸದೆ ಹೋದಲ್ಲಿ ಸೂಚ್ಯಾರ್ಥವಾಗಿ ಪರಿಗಣಿಸಬಹುದು" ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

ಆದರೆ ಇದೇ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ಸ್ವಪ್ರೇರಣೆಯನ್ನು ಕುರಿತಂತೆ ಸ್ಪಷ್ಟ ನಿಲುವು ತಾಳಲು ವಾಸ್ತವ ಸನ್ನಿವೇಶಗಳನ್ನು ವಸ್ತುನಿಷ್ಠವಾಗಿ ಪರಿಗಣಿಸಬೇಕೆಂದೂ ಸ್ಪಷ್ಟೀಕರಿಸುತ್ತದೆ. ಅಂದರೆ ಅನರ್ಹತೆಗೊಳಗಾಗುವ ಸದಸ್ಯರಿಗೆ ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಲು ಅವಕಾಶ ನೀಡಬೇಕೆಂದು ಹೇಳುತ್ತದೆ. ಕರ್ನಾಟಕದ ಸಂದರ್ಭದಲ್ಲಿ 11 ಅನರ್ಹಗೊಂಡ ಸದಸ್ಯರಿಗೆ ಅಕ್ಟೋಬರ್ 6ರಂದು ನೋಟೀಸು ನೀಡಲಾಗಿತ್ತು. ಈ ನೋಟೀಸುಗಳನ್ನು ಅವರ ಶಾಸಕ ಭವನದ ಕೊಠಡಿಗಳಿಗೆ ಅಂಟಿಸಲಾಗಿತ್ತು. ತಮ್ಮ ಉತ್ತರ ನೀಡಲು ಅಕ್ಟೋಬರ್ 10ರ ಸಂಜೆ ಐದು ಗಂಟೆಯವರೆಗೆ ಗಡುವು ನೀಡಲಾಗಿತ್ತು. ಆದರೆ ಕರ್ನಾಟಕ ವಿಧಾನಸಭಾ ನಿಯಮಗಳ ಪ್ರಕಾರ ಈ ರೀತಿಯ ನೋಟಿಸನ್ನು ಒಂದು ವಾರದ ಮುನ್ನವೇ ನೀಡಬೇಕಾಗುತ್ತದೆ. ಅಂದರೆ ಸಭಾಧ್ಯಕ್ಷರು ಕೆಲವು ಅನಿವಾರ್ಯತೆಗಳಿಗೆ ಕಟ್ಟುಬಿದ್ದು ಆತುರದಲ್ಲಿ ನೋಟಿಸ್ ನೀಡಿರುವುದು ಸ್ಪಷ್ಟವಾಗುತ್ತದೆ. ಹಾಗಾಗಿಯೇ ಸಭಾಧ್ಯಕ್ಷರ ನಿಲುವು ಪ್ರಶ್ನಾರ್ಹವಾಗಿತ್ತು.

ಈ ಸಂದರ್ಭದಲ್ಲಿ ಉತ್ತರ ಪ್ರದೇಶದಲ್ಲಿ ನಡೆದ ಪ್ರಕರಣವನ್ನು ನೆನೆಯುವುದು ಸೂಕ್ತವೆನಿಸುತ್ತದೆ. 2003 ರಲ್ಲಿ 13 ಬಹುಜನ ಸಮಾಜ ಪಕ್ಷದ ಸದಸ್ಯರು ಮುಖ್ಯಮಂತ್ರಿ ಮಾಯಾವತಿಯವರ ವಿರುದ್ಧ ಬಂಡಾಯ ಹೂಡಿ ಪರ್ಯಾಯ ಸರ್ಕಾರ ರಚಿಸಲು ಮುಲಾಯಂ ಸಿಂಗ್ ಅವರೊಡನೆ ಸೇರಿದ್ದರು. ಆದರೆ ವಿಧಾನಸಭೆಯಲ್ಲಿ ಸಮಾಜವಾದಿ ಪಕ್ಷಕ್ಕೆ ಈ ಭಿನ್ನಮತೀಯರ ಬೆಂಬಲವನ್ನು ವ್ಯಕ್ತಪಡಿಸುವ ಮುನ್ನವೇ ಬಹುಜನ ಸಮಾಜ ಪಕ್ಷ ಈ ಶಾಸಕರು ಸ್ವಪ್ರೇರಣೆಯಿಂದ ಪಕ್ಷ ತೊರೆದಿರುವುದರಿಂದ ಅನರ್ಹಗೊಳಿಸಬೇಕೆಂದು ಮನವಿ ಸಲ್ಲಿಸಿತ್ತು. ಸಭಾಧ್ಯಕ್ಷರು ಮತ್ತು ಲಕ್ನೋದ ಹೈಕೋರ್ಟ್ ಪೀಠ ಮಾಯಾವತಿಯವರ ನಿಲುವನ್ನು ಸಮರ್ಥಿಸದೆ ಹೋದಾಗ ಪ್ರಕರಣ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿತ್ತು. ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ " ವಿರೋಧ ಪಕ್ಷದ ನಾಯಕರಿಗೆ ಹೊಸ ಸರ್ಕಾರ ರಚಿಸಲು ಬೆಂಬಲ ನೀಡುವುದೇ ಸ್ವಪ್ರೇರಣೆಯಿಂದ ಮಾತೃ ಪಕ್ಷವನ್ನು ತೊರೆದಂತಾಗುತ್ತದೆ. ಆಳುವ ಪಕ್ಷದ ಮುಖ್ಯಮಂತ್ರಿಗಳು ವಿಧಾನಸಭೆಯ ವಿಸರ್ಜನೆಗೆ ಶಿಫಾರಸು ಮಾಡಿದ್ದರೂ ಸಹ ಈ ಭಿನ್ನಮತೀಯ ಸದಸ್ಯರು ತಮ್ಮ ನಡವಳಿಕೆಯ ಮೂಲಕ ಪಕ್ಷ ತೊರೆದಿರುವುದನ್ನು ಸಾಬೀತು ಪಡಿಸಿದ್ದಾರೆ. ಹಾಗಾಗಿ 10ನೆಯ ಅನುಬಂಧದ ಪ್ಯಾರ 2(1)(ಎ) ಅನ್ವಯ ಅನರ್ಹತೆಗೊಳಗಾಗುತ್ತಾರೆ " ಎಂದು ಹೇಳಿತ್ತು.

ಈ ಪ್ರಕರಣದಲ್ಲಿ ಭಿನ್ನಮತೀಯ ಸದಸ್ಯರು ವಿರೋಧ ಪಕ್ಷದ ನಾಯಕರಿಗೆ ಪರ್ಯಾಯ ಸರ್ಕಾರ ರಚಿಸಲು ಬೆಂಬಲ ನೀಡಿದ್ದರಿಂದ ಸರ್ವೋಚ್ಚ ನ್ಯಾಯಾಲಯವು ಈ ರೀತಿಯ ನಿಲುವು ತಾಳಿತ್ತು. ಅಂದರೆ ಒಂದು ವೇಳೆ ಮಾಯಾವತಿಯವರು ವಿಧಾನ ಸಭೆಯ ವಿಸರ್ಜನೆಗೆ ಶಿಫಾರಸು ಮಾಡದೆ ಹೋಗಿದ್ದಲ್ಲಿ, 13 ಭಿನ್ನಮತೀಯರು ವಿರೋಧ ಪಕ್ಷಕ್ಕೆ ಸರ್ಕಾರ ರಚಿಸಲು ಬೆಂಬಲ ನೀಡದೆ ಹೋಗಿದ್ದಲ್ಲಿ ನ್ಯಾಯಾಲಯ ಈ ಸದಸ್ಯರ ನಡವಳಿಕೆಯನ್ನು ಸ್ವಪ್ರೇರಣೆಯಿಂದ ಪಕ್ಷ ತೊರೆಯುವ ವರ್ತನೆ ಎಂದು ಹೇಳುತ್ತಿರಲಿಲ್ಲ. ಕರ್ನಾಟಕದ ಸಂದರ್ಭದಲ್ಲಿ ಇದು ಗಮನಾರ್ಹವಾಗುತ್ತದೆ. ಯಡಿಯೂರಪ್ಪ ಸರ್ಕಾರ ವಿಧಾನಸಭೆ ವಿಸರ್ಜನೆಗೆ ಯಾವುದೇ ಶಿಫಾರಸು ಮಾಡಿರಲಿಲ್ಲ. ಅಥವಾ ಭಿನ್ನಮತೀಯರು ವಿರೋಧ ಪಕ್ಷದ ನಾಯಕರನ್ನು ಪರ್ಯಾಯ ಸರ್ಕಾರ ರಚಿಸಲು ಆಹ್ವಾನಿಸುವಂತೆ ರಾಜ್ಯಪಾಲರನ್ನು ವಿನಂತಿಸಿಕೊಳ್ಳಲೂ ಇಲ್ಲ. ಇಲ್ಲಿ ಭಿನ್ನಮತೀಯರ ಬೇಡಿಕೆ ಇದ್ದುದು ಶಾಸಕಾಂಗ ಪಕ್ಷದ ನಾಯಕತ್ವದಲ್ಲಿ ಬದಲಾವಣೆ ಮಾತ್ರ.

11 ಜನ ಭಾಜಪ ಶಾಸಕರು ತಾವು ಯಡಿಯೂರಪ್ಪನವರ ನಾಯಕತ್ವವನ್ನು ಬೆಂಬಲಿಸುವುದಿಲ್ಲ ಎಂದು ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ್ದರೇ ಹೊರತು ಪರ್ಯಾಯ ಸರ್ಕಾರ ರಚನೆಗೆ ಮುಂದಾಗಿರಲಿಲ್ಲ. ಹಾಗಾಗಿ ಈ ಶಾಸಕರ ವರ್ತನೆಯನ್ನು "ಸ್ವಪ್ರೇರಣೆಯಿಂದ ಪಕ್ಷವನ್ನು ತೊರೆಯುವ" ವರ್ತನೆ ಎಂದು ಪರಿಗಣಿಸಲಾಗುವುದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಸ್ತುತ ತೀರ್ಪಿಗೆ ತಲೆಬಾಗುತ್ತಲೇ ಈ ಪ್ರಕರಣದಿಂದ ಉದ್ಭವಿಸಿರುವ ಸಾಂವಿಧಾನಿಕ ಬಿಕ್ಕಟ್ಟನ್ನು ಸೂಕ್ತ ರೀತಿಯಲ್ಲಿ ಪರಿಹರಿಸುವ ಅನಿವಾರ್ಯತೆ ಇದೆ.

ಏಕೆಂದರೆ ಕರ್ನಾಟಕದ ವಿಧಾನಸಭೆಯಲ್ಲಿ ಇತ್ತೀಚೆಗೆ ನಡೆದಿರುವ ಹಗರಣಗಳು ಪಕ್ಷ, ಸರ್ಕಾರ ಮತ್ತು ಆಳ್ವಿಕರ ಹಿತಾಸಕ್ತಿಗಳನ್ನು ರಕ್ಷಿಸಿದರೂ ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮಾರಕವಾಗಿ ಪರಿಣಮಿಸಿದೆ. ಜೆಡಿಎಸ್, ಕಾಂಗ್ರೆಸ್ ಮತ್ತು ಭಾಜಪಗಳು ಆಗಾಗ್ಗೆ ಬಂದು ಹೋಗುವ ಅತಿಥಿಗಳು, ತಮ್ಮ ಸ್ವಹಿತಾಸಕ್ತಿಗಳನ್ನು ರಕ್ಷಿ

ಕೊಳ್ಳಲು ಹೆಣಗಾಡುವ ರಾಜಕೀಯ ಪಕ್ಷಗಳು. ಈ ಪಕ್ಷಗಳ ಒಳಿತು ಕೆಡಕುಗಳು ಕ್ಷಣಿಕ. ಆದರೆ ಈ ಪಕ್ಷಗಳ ರಾಜಕೀಯ ನಿಲುವು ಮತ್ತು ಗೆಲುವುಗಳ ಚದುರಂಗ ದಾಟದಲ್ಲಿ ಸಾಂವಿಧಾನಿಕ ಮೌಲ್ಯಗಳು, ಪ್ರಜಾಸತ್ತಾತ್ಮಕ ನಿಯಮಗಳು ಹಾಗು ಪ್ರಜೆಗಳ ಹಿತಾಸಕ್ತಿಗಳು ಹರಕೆಯ ಕುರಿಗಳಂತಾಗಿವೆ. ಈ ಮೌಲ್ಯಗಳನ್ನು ರಕ್ಷಿಸುವ ನಿಟ್ಟಿನಲ್ಲಾದರೂ ಒಂದು ಸ್ಪಷ್ಟವಾದ ಸಾಂವಿಧಾನಿಕ ಸಂಹಿತೆಯನ್ನು ರೂಪಿಸುವುದು ಅತ್ಯಗತ್ಯವಾಗಿದೆ.

ಹಾರುತಿದೆ ನೋಡಿ ಸ್ವಾತಂತ್ರ್ಯದ ಹಾಡು ಹಕ್ಕಿ

ಸಮಕಾಲೀನ ಇತಿಹಾಸದಲ್ಲೇ ನೋಡಿದರೆ ವ್ಯಕ್ತಿಗತ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಮಾನವನ ಮೂಲಭೂತ ಹಕ್ಕುಗಳು ಮತ್ತು ಮಾನವನ ಸಮಾನತೆಗಾಗಿ ಹೋರಾಡಿದ ಅನೇಕ ಜನಪರ ಹೋರಾಟಗಾರರು ತಮ್ಮ ಜೀವನದ ಬಹುಭಾಗವನ್ನು ಬಂಧನದಲ್ಲಿ ಕಳೆದಿರುವುದೇ ಹೆಚ್ಚು. ತನ್ನ ಜೀವಮಾನದ ಮೂರನೇ ಒಂದು ಭಾಗವನ್ನು ಬಂಧನದಲ್ಲೇ ಕಳೆದಿರುವ ಹೋರಾಟಗಾರರು ವಿಶ್ವದ ಇತಿಹಾಸದಲ್ಲಿ ವಿರಳ. ಅಂತಹ ಧೀಮಂತ ಹೋರಾಟಗಾರರಲ್ಲಿ ಮ್ಯಾನ್ಮಾರ್ ದೇಶದ ಅಪ್ರತಿಮ ಹೋರಾಟಗಾರ್ತಿ ಡಾ ಅಂಗ್ ಸಾನ್ ಸೂಕಿ ಎತ್ತರದ ಸ್ಥಾನವನ್ನ ಲಂಕರಿಸುತ್ತಾರೆ.

1945ರ ಜೂನ್ 19ರಂದು ರಂಗೂನ್‌ನಲ್ಲಿ ಜನಿಸಿದ ಸೂಕಿ, ಬರ್ಮಾದ ಆಧುನಿಕ ಸೇನೆಯ ಸಂಸ್ಥಾಪಕ ಆಂಗ್ ಸನ್ ಅವರ ಪುತ್ರಿ 1947ರಲ್ಲಿ ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆದ ಬರ್ಮಾದ ನಾಯಕತ್ವ ವಹಿಸಿದ್ದ ಆಂಗ್ ಸನ್ ತನ್ನ ಪ್ರತಿಸ್ಪರ್ಧಿಗಳಿಂದಲೇ ಹತರಾದಾಗ ಸೂಕಿ ಇನ್ನೂ ಹಸುಳೆ. ತನ್ನ ತಾಯಿಯ ಮಡಿಲಲ್ಲೇ ಬೆಳೆದ ಸೂಕಿ ಅವರಿಗೆ ತಂದೆಯ ದಾರುಣ ಹತ್ಯೆಯೇ ಭವಿಷ್ಯವನ್ನು ರೂಪಿಸಿದ ಕರಾಳ ಚರಿತ್ರೆಯಾಗಿತ್ತು. ತೇರವಾದ ಬೌದ್ಧ ಪರಂಪರೆಗೆ ಸೇರಿದ ಸೂಕಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸ್ವದೇಶದಲ್ಲೇ ಪಡೆದರೂ ಉನ್ನತ ಶಿಕ್ಷಣ ಪಡೆದದ್ದು ವಿದೇಶಗಳಲ್ಲಿ.

ಸೂಕಿ ಅವರ ತಾಯಿ ಬರ್ಮಾದ ರಾಜಕಾರಣದಲ್ಲಿ ಮಹತ್ವದ ಸ್ಥಾನ ಗಳಿಸಿದ್ದರು. ಭಾರತ ಮತ್ತು ನೇಪಾಲ ದೇಶಗಳಿಗೆ 1960ರಲ್ಲಿ ರಾಯಭಾರಿಯಾಗಿಯೂ ಸೇವೆ ಸಲ್ಲಿಸಿದ್ದರು. ಈ ಸಂದರ್ಭದಲ್ಲೇ ಸೂಕಿ ದೆಹಲಿಯ ಲೇಡಿ ಶ್ರೀರಾಂ ಕಾಲೇಜಿನಲ್ಲಿ ಪದವಿ ವ್ಯಾಸಂಗ ಪೂರೈಸಿದ್ದರು. ನಂತರ ಆಕ್ಸ್‌ಫರ್ಡ್‌ನಲ್ಲಿ ತತ್ವಶಾಸ್ತ್ರ, ರಾಜಕೀಯ ಮತ್ತು ಅರ್ಥಶಾಸ್ತ್ರದಲ್ಲಿ ಉನ್ನತ ಪದವಿ ಪಡೆದಿದ್ದರು. ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಮೂರು ವರ್ಷಗಳ ಕಾಲ ದುಡಿದ ನಂತರ 1972ರಲ್ಲಿ ವಿವಾಹವಾದ ನಂತರ ತಮ್ಮ ಅಧ್ಯಯ ನವನ್ನೇ ಮುಂದುವರೆಸಿದ್ದು ವಿಶೇಷ. ಲಂಡನ್ ವಿಶ್ವವಿ ದ್ಯಾಲಯದಲ್ಲಿ ಪಿಹೆಚ್‌ಡಿ ಪಡೆದ ನಂತರ ಸೂಕಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನಲ್ಲಿ ಗೌರವ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. 1988ರಲ್ಲಿ ತನ್ನ ರೋಗಗ್ರಸ್ತ ತಾಯಿಯನ್ನು ನೋಡಲೆಂದು ಬರ್ಮಾಗೆ ತೆರಳಿದ ಸೂಕಿ ಅವರಿಗೆ ತಾಯಿಗಿಂತಲೂ ಹೆಚ್ಚು ತಾಯಿನಾಡು ಸ್ವಾಗತ ಬಯಸಿತ್ತು. ಪ್ರಜಾಪ್ರಭುತ್ವಕ್ಕಾಗಿ ನಡೆಯುತ್ತಿದ್ದ ಜನಾಂದೋಲನ ಸೂಕಿ ಅವರ ನೇತೃತ್ವಕ್ಕೆ ಕಾತರದಿಂದ ಕಾಯುತ್ತಿತ್ತು. ಪ್ರಜಾತಂತ್ರದ ಉಳಿವಿಗಾಗಿ ದೇಶಾ ದ್ಯಂತ ವ್ಯಾಪಕವಾಗಿ ಹರಡಿದ್ದ ಜನಾಂದೋಲನದ ನೇತೃತ್ವ ವಹಿಸಿದ ಸೂಕಿ, ಬರ್ಮಾದ ಸೇನಾಡಳಿತದ ದಬ್ಬಾಳಿಕೆಗೆ ಸಿಲುಕಿ ತನ್ನ ಪತಿಯಿಂದಲೂ ದೂರವಾಗುವುದು ಅನಿವಾರ್ಯವಾಗಿತ್ತು.

ಸಮಕಾಲೀನ ಇತಿಹಾಸದಲ್ಲೇ ನೋಡಿದರೆ ವ್ಯಕ್ತಿಗತ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಮಾನವನ ಮೂಲಭೂತ ಹಕ್ಕುಗಳು ಮತ್ತು ಮಾನವನ ಸಮಾನತೆಗಾಗಿ ಹೋರಾಡಿದ ಅನೇಕ ಜನಪರ ಹೋರಾಟಗಾರರು ತಮ್ಮ ಜೀವನದ ಬಹುಭಾಗವನ್ನು ಬಂಧನದಲ್ಲಿ ಕಳೆದಿರುವುದೇ ಹೆಚ್ಚು. ತನ್ನ ಜೀವಮಾನದ ಮೂರನೇ ಒಂದು ಭಾಗವನ್ನು ಬಂಧನದಲ್ಲೇ ಕಳೆದಿರುವ ಹೋರಾಟಗಾರರು ವಿಶ್ವದ ಇತಿಹಾಸದಲ್ಲಿ ವಿರಳ. ಅಂತಹ ಧೀಮಂತ ಹೋರಾಟಗಾರರಲ್ಲಿ ಮ್ಯಾನ್ಮಾರ್ ದೇಶದ ಅಪ್ರತಿಮ ಹೋರಾಟಗಾರ್ತಿ ಡಾ. ಅಂಗ್ ಸಾನ್ ಸೂಕಿ ಎತ್ತರದ ಸ್ಥಾನವನ್ನಲಂಕರಿಸುತ್ತಾರೆ.

ಹೋರಾಟದ ಹಾದಿಯಲ್ಲಿ

ಬರ್ಮಾದ ಆಡಳಿತಾರೂಢ ಸಮಾಜವಾದಿ ಪಕ್ಷದ ನೇತಾರ ನೆವಿನ್ ಅವರ ಪದಚ್ಯುತಿಯ ನಂತರ ಆಗಸ್ಟ್ 8–1988ರಂದು ದೇಶಾದ್ಯಂತ ಪ್ರಜಾಪ್ರಭುತ್ವಕ್ಕಾಗಿ ಜನಾಂದೋಲನ ಆರಂಭವಾಯಿತು. ಆದರೆ ಬರ್ಮಾದ ಸೇನಾ ಆಡಳಿತ ಜನತೆಯ ಪ್ರತಿರೋಧವನ್ನು ಬರ್ಬರವಾಗಿ ದಮನಿಸಿ ಹತ್ತಿಕ್ಕಿತು. 1988ರ ದಂಗೆ ಎಂದೇ ಕರೆಯಲಾಗುವ ಈ ಚಳುವಳಿಯ ನೇತೃತ್ವ ವಹಿಸಿದ್ದ ಸೂಕಿ ಆಗಸ್ಟ್ 26ರಂದು ಐದು ಲಕ್ಷ ಜನರನ್ನುದ್ದೇಶಿಸಿ ಮಾಡಿದ ಭಾಷಣ ಇಂದಿಗೂ ಅಲ್ಲಿನ ಮನೆಮಾತಾಗಿದೆ. ಸೂಕಿ ಅವರ ರಾಜಕೀಯ ಪಾದಾರ್ಪಣೆಯಾದದ್ದೂ ಈ ಸಂದರ್ಭದಲ್ಲೇ. ಪ್ರಜಾಸತ್ತಾತ್ಮಕ ಸರ್ಕಾರದ ಸ್ಥಾಪನೆ ಮತ್ತು ಮಿಲಿಟರಿ ಆಡಳಿತದ ಪದಚ್ಯುತಿಗಾಗಿ ನಡೆದ ಈ ಹೋರಾಟ ಇಂದಿನವರೆಗೂ ತನ್ನ ಕಾವನ್ನು ಉಳಿಸಿಕೊಂಡುಬಂದಿರುವುದು ಸೂಕಿ ಅವರ ಮಾರ್ಗದರ್ಶನದಲ್ಲೇ ಎಂದು ಹೇಳಬೇಕಿಲ್ಲ. ಆದರೆ ಸೆಪ್ಟೆಂಬರ್ 1988ರಲ್ಲಿ ಸೇನಾ ಕೂಟವು ಬರ್ಮಾದ ಆಡಳಿತವನ್ನು ವಹಿಸಿಕೊಂಡ ನಂತರ ಸೂಕಿ ಅವರ ಹೋರಾಟದ ಕಿಚ್ಚು ಹೆಚ್ಚಾಗುತ್ತಲೇ ಹೋಯಿತು. ಹಾಗೆಯೇ ಹೋರಾಟದ ವ್ಯಕ್ತಿಗತ ಬದುಕೂ ದುಸ್ತರವಾಗುತ್ತಾ ಹೋಯಿತು.

ಮಹಾತ್ಮ ಗಾಂಧಿಯವರ ಅಹಿಂಸಾ ತತ್ವದಿಂದ ಪ್ರಭಾವಿತರಾಗಿದ್ದ ಸೂಕಿ ವಿಶೇಷವಾಗಿ ಬೌದ್ಧ ತತ್ವಗಳ ಅನುಯಾಯಿ. ಬರ್ಮಾ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯನ್ನೇ ಧ್ಯೇಯವನ್ನಾಗಿರಿಸಿಕೊಂಡು 1988ರ ಸೆಪ್ಟೆಂಬರ್ 1988ರಲ್ಲಿ ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಎಂಬ ಪಕ್ಷ ಸ್ಥಾಪಿಸಿದ ಸೂಕಿ ಅವರನ್ನು ಬರ್ಮಾದ ಸೇನಾಡಳಿತ ಕೂಡಲೇ ಗೃಹಬಂಧನಕ್ಕೆ ಒಳಪಡಿಸಿತ್ತು. ದೇಶವನ್ನು ತೊರೆದರೆ ಮಾತ್ರ ವಿಮೋಚನೆ ನೀಡುವ ಆಡಳಿತದ ಕರೆಗೆ ಮಾನ್ಯತೆ ನೀಡದ ಸೂಕಿ ಬಂಧನವನ್ನೇ ಸ್ವೀಕರಿಸಿದ್ದರು. "ವ್ಯಕ್ತಿಯನ್ನು ಭ್ರಷ್ಟನನ್ನಾಗಿ ಮಾಡುವುದು ಅಧಿಕಾರವಲ್ಲ ಭಯ, ಅಧಿಕಾರ ಕಳೆದುಕೊಳ್ಳುವ ಭೀತಿಯೇ ಅಧಿಕಾರಸ್ಥರನ್ನು ಭ್ರಷ್ಟರನ್ನಾಗಿ ಮಾಡುತ್ತದೆ ಹಾಗಾಗಿ ಭಯದಿಂದ ಮುಕ್ತಿ ಹೊಂದಿ" ಎಂಬ ಸೂಕಿ ಅವರ ಬಿರುನುಡಿಗಳು ಸೇನಾಡಳಿತವನ್ನು ನಡುಗಿಸಿದ್ದವು.

1990ರಲ್ಲಿ ನಡೆದ ಮಹಾ ಚುನಾವಣೆಗಳಲ್ಲಿ ಸೂಕಿ ಅವರ ಪಕ್ಷ ಶೇ. 59ರಷ್ಟು ಮತ ಗಳಿಸಿ, ಶೇ 80ರಷ್ಟು ಸಂಸದೀಯ ಸ್ಥಾನ ಗಳಿಸಿತ್ತು. ಸಹಜವಾಗಿಯೇ ಸೂಕಿ ದೇಶದ ಪ್ರಧಾನಿಯಾಗಬೇಕಿತ್ತು. ಆದರೆ ಮಿಲಿಟರಿ ಕೂಟದ ಆಡಳಿತ ಚುನಾವಣಾ ಫಲಿತಾಂಶವನ್ನೇ ಅನೂರ್ಜಿತಗೊಳಿಸಿತ್ತು. ಅಧಿಕಾರ ಹಸ್ತಾಂತರ ನಿರಾಕರಿಸಲಾಗಿತ್ತು. ತತ್ಪರಿಣಾಮವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿರೋಧ ವ್ಯಕ್ತವಾಗತೊಡಗಿತು. ಸೂಕಿ ಅವರನ್ನು ಪುನಃ ಗೃಹಬಂಧನದಲ್ಲಿರಿಸಲಾಯಿತು. ಈ ಅವಧಿಯಲ್ಲೇ ಸೂಕಿ ಅವರಿಗೆ ಚಿಂತನಾ ಸ್ವಾತಂತ್ರ್ಯಕ್ಕಾಗಿ ಸಕ್ರೋವ್

ಪ್ರಶಸ್ತಿ ಮತ್ತು ವಿಶ್ವಶಾಂತಿಗಾಗಿ ನೊಬೆಲ್ ಪ್ರಶಸ್ತಿ ಪ್ರಧಾನ ಮಾಡಲಾಗಿತ್ತು. ಆದರೆ ಅಂದಿನಿಂದ ಇಂದಿನವರೆಗೂ ಎರಡು ದಶಕಗಳಲ್ಲಿ 15 ವರ್ಷಗಳ ಕಾಲ ಸೂಕಿ ಗೃಹ ಬಂಧನದಲ್ಲೇ ಕಾಲ ಕಳೆದಿದ್ದಾರೆ. ಈ ಅವಧಿಯಲ್ಲಿ ಯಾವುದೇ ವಿದೇಶಿ ರಾಯಭಾರಿಗಳಾಗಲೀ, ಬೆಂಬಲಿಗರಾಗಲೀ ಸೂಕಿ ಅವರನ್ನು ಭೇಟಿ ಮಾಡುವ ಅವಕಾಶ ಇರಲಿಲ್ಲ. ಮಾಧ್ಯಮದವರಿಗೂ ಸೂಕಿ ಅವರನ್ನು ಭೇಟಿ ಮಾಡುವುದು ನಿಷಿದ್ಧವಾಗಿತ್ತು.

ಬಹುತೇಕ 15 ವರ್ಷಗಳ ಕಾಲ ಗೃಹಬಂಧನದಲ್ಲೇ ಕಾಲಕಳೆದ ಸೂಕಿ ಆಗಾಗ್ಗೆ ಬಿಡುಗಡೆ ಹೊಂದಿದ್ದರೂ ತಮ್ಮ ಮುಕ್ತ ಸಮಯದಲ್ಲಿ ಹೋರಾಟದಲ್ಲಿ ತೊಡಗಿದ್ದೇ ಹೆಚ್ಚು. ಇದು ಸೂಕಿ ಅವರ ಹೋರಾಟದ ಸ್ಫೂರ್ತಿ ಮತ್ತು ಆಕೆಯಲ್ಲಿದ್ದ ಪ್ರಜಾಪ್ರಭುತ್ವದ ತುಡಿತದ ಸಂಕೇತವಾಗಿ ಕಾಣುತ್ತದೆ. ರೇಡಿಯೋ, ಪಿಯಾನೋ, ಸಂಗೀತ ಮತ್ತು ಪುಸ್ತಕಗಳ ಸಂಗದಲ್ಲೇ ಕಾಲ ಕಳೆಯುತ್ತಿದ್ದ ಸೂಕಿ ಅವರ ಏಕಮೇವ ಗುರಿ ಮ್ಯಾನ್ಮಾರ್‌ನ ಸ್ವಾತಂತ್ರ್ಯ, ಮಿಲಿಟರಿ ಆಡಳಿತದ ಅವಸಾನ ಮತ್ತು ಪ್ರಜಾಪ್ರಭುತ್ವದ ಸ್ಥಾಪನೆ. ತಮ್ಮ ಕುಟುಂಬ ಸದಸ್ಯರನ್ನು ಭೇಟಿ ಮಾಡಲು ಒಮ್ಮೆ ಹೊರದೇಶಕ್ಕೆ ಹೋದರೆ ಮತ್ತೆ ಹಿಂದಿರುಗುವ ಅವಕಾಶವೇ ಇಲ್ಲದಿದ್ದ ಸೂಕಿ ತಮ್ಮ ಬಾಂಧವರನ್ನು ಕಂಡಿದ್ದೇ ಇಲ್ಲ. ಆದರೂ ಇದಾವುದಕ್ಕೂ ಎದೆಗುಂದದೆ ತಮ್ಮ ಹೋರಾಟವನ್ನು ಮುಂದುವರೆಸಿರುವ ಸೂಕಿ ಮುಕ್ತ ವಾತಾವರಣವನ್ನು ಕಂಡದ್ದು ಇದೇ ನವಂಬರ್ 12ರಂದು.

ಭವಿಷ್ಯದ ಹಾದಿ

ದೀರ್ಘ ಕಾಲದ ಗೃಹ ಬಂಧನದಿಂದ ಮುಕ್ತಿ ಹೊಂದಿದ್ದರೂ ಸೂಕಿ ಅವರ ರಾಜಕೀಯ ಜೀವನ ಸುಗಮವಾಗಿದೆ ಎಂದು ಹೇಳಲಾಗುವುದಿಲ್ಲ. ಪುನಃ ಯಾವುದೇ ಕ್ಷಣದಲ್ಲಾದರೂ ಸೂಕಿ ಬಂಧನಕ್ಕೊಳಗಾಗಬಹುದು. ಮ್ಯಾನ್ಮಾರ್‌ನ ಜನತೆ ಪ್ರಜಾಪ್ರಭುತ್ವಕ್ಕಾಗಿ ತಮ್ಮ ಪ್ರಾಣತ್ಯಾಗ ಮಾಡಲೂ ಸಿದ್ಧರಾಗಿದ್ದರೂ, ಅಲ್ಲಿನ ಮಿಲಿಟರಿ ಕೂಟದ ಆಡಳಿತ ಅಷ್ಟೇ ಕ್ರೂರವಾಗಿದೆ. ಮುಖ್ಯವಾಗಿ ಮ್ಯಾನ್ಮಾರ್ ಸರ್ಕಾರಕ್ಕೆ ಚೀನಾದ ಬೆಂಬಲವಿದೆ. ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು ಸೂಕಿ ಅವರ ಬಂಧನಕ್ಕೆ ಮ್ಯಾನ್ಮಾರ್ ಸರ್ಕಾರದ ಮೇಲೆ ಒತ್ತಡ ಹೇರಿದ್ದರೂ, ವಾಣಿಜ್ಯ ಹಿತಾಸಕ್ತಿಗಳು ಮತ್ತು ರಾಜತಾಂತ್ರಿಕ ಅನಿವಾರ್ಯತೆಗಳಿಂದ ಬಹುಪಾಲು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಮ್ಯಾನ್ಮಾರ್‌ನ ಮಿಲಿಟರಿ ಆಡಳಿತವನ್ನು ಪರೋಕ್ಷವಾಗಿ ಬೆಂಬಲಿಸುತ್ತವೆ. ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ಭಾರತವೂ ಇದೇ ಮಾರ್ಗ ಅನುಸರಿಸುತ್ತಿದೆ. ಚೀನಾದೊಡನೆ ತನ್ನ ವಾಣಿಜ್ಯ ಸಂಬಂಧಗಳನ್ನು ಕಾಪಾಡಿಕೊಳ್ಳಲು ಭಾರತ ಮ್ಯಾನ್ಮಾರ್‌ನ ಮಿಲಿಟರಿ ದಬ್ಬಾಳಿಕೆಯನ್ನು ಖಂಡಿಸಲೂ ಹಿಂಜರಿಯುತ್ತಿರುವುದು ಸ್ಪಷ್ಟ ನಿದರ್ಶನ.

ಆದರೆ ಸೂಕಿ ಅವರ ಮುಂದಿನ ಹಾದಿ ಸುಗಮವೇನಲ್ಲ. ಮ್ಯಾನ್ಮಾರ್ ಒಂದು ಪುಟ್ಟ ದೇಶ. ಅಲ್ಲಿನ ಆರ್ಥಿಕತೆ ಚೀನಾದ ಮಾರುಕಟ್ಟೆಯನ್ನೇ ಅವಲಂಬಿಸಿದೆ. ನವಉದಾರವಾದದ ಆಕ್ರಮಣದಿಂದ ಮ್ಯಾನ್ಮಾರ್ ತನ್ನ ಸ್ವಂತಿಕೆಯನ್ನೇ ಕಳೆದುಕೊಂಡಿದೆ. ಅತ್ಯಂತ ಕನಿಷ್ಠ ಮಟ್ಟದ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಒಂದಾಗಿರುವ ಮ್ಯಾನ್ಮಾರ್‌ನ ಜಿಡಿಪಿ ಅಭಿವೃದ್ಧಿ ದರ ಕೇವಲ 2.9ರಷ್ಟಿದೆ. ಮ್ಯಾನ್ಮಾರ್‌ನಲ್ಲಿರುವ ಕೃಷಿ ಯೋಗ್ಯ ಭೂಮಿಯಲ್ಲಿ ಶೇ. 60ರಷ್ಟರಲ್ಲಿ ಭತ್ತ ಬೆಳೆಯಲಾಗುತ್ತದೆ. ಇದನ್ನು ಹೊರತಾಗಿ ತೈಲ ಮತ್ತು ಅನಿಲ ಸಂಪತ್ತು ಇಲ್ಲಿನ ಆರ್ಥಿಕತೆಯ ಅಡಿಪಾಯ. ಇತ್ತೀಚೆಗೆ ಪ್ರವಾಸೋದ್ಯಮವೂ ಆದಾಯದ ಪ್ರಮುಖ ಮೂಲವಾಗಿದೆ.

ಆದರೆ ಇಲ್ಲಿನ ಸಮಸ್ಯೆ ಇರುವುದು ತಂತ್ರಜ್ಞಾನ ಪರಿಣತಿಯುಳ್ಳ ಸುಶಿಕ್ಷಿತ ಯುವ ಜನಾಂಗ ಇಲ್ಲದಿರುವುದು. ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಮ್ಯಾನ್ಮಾರ್‌ನ ಜನತೆ ನೆರೆ ರಾಜ್ಯಗಳನ್ನು ಅವಲಂಬಿಸಿಯೇ ಬಾಳುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಚೀನಾ ಈ ಸನ್ನಿವೇಶವನ್ನು ಬಳಸಿಕೊಳ್ಳುತ್ತಿದೆ.

ಈ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳಿಗಾಗಿ ಹೋರಾಡುತ್ತಿರುವ ಸೂಕಿ ರಾಜಕೀಯವಾಗಿ ಗಾಂಧೀಜಿಯ ಅಹಿಂಸಾ ತತ್ವವನ್ನು ಪಾಲಿಸಿದರೂ, ಯಾವುದೇ ಪರ್ಯಾಯ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸದಿರುವುದು ಆತಂಕಕಾರಿ ವಿಷಯವಾಗಿದೆ. ಒಂದು ವೇಳೆ ಮಿಲಿಟರಿ ಕೂಟದ ಆಳ್ವಿಕೆಯಿಂದ ಮುಕ್ತಿ ಪಡೆದು ಮ್ಯಾನ್ಮಾರ್ ಸ್ವತಂತ್ರ ಸ್ವಾವಲಂಬಿ ರಾಷ್ಟ್ರವಾಗಿ ಹೊರಹೊಮ್ಮಿದಲ್ಲಿ, ಸಹಜವಾಗಿಯೇ ನೇತೃತ್ವ ವಹಿಸುವ ಸೂಕಿ ಅವರ ಆರ್ಥಿಕ ಪರ್ಯಾಯಗಳೇನು? ಸಾಮಾಜಿಕ ಪರ್ಯಾಯಗಳೇನು? ಈವರೆಗೂ ಎಲ್ಲಿಯೂ ಸೂಕಿ ಅವರಾಗಲೀ ಅವರ ಬೆಂಬಲಿಗರಾಗಲೀ ಈ ವಿಷಯಗಳನ್ನು ಚರ್ಚೆಗೊಳಪಡಿಸಿಲ್ಲ. ಪ್ರಜಾತಂತ್ರವೊಂದೇ ಮ್ಯಾನ್ಮಾರ್ ಜನತೆಯ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸುವುದಿಲ್ಲ. ಪ್ರವಾಸೋದ್ಯಮ ಮತ್ತು ತತ್ಸಂಬಂಧಿ ನವಉದಾರವಾದದ ಆಕ್ರಮಣದಿಂದ ತತ್ತರಿಸಿರುವ ಮ್ಯಾನ್ಮಾರ್‌ನ ಜನತೆ ಕವಲು ಹಾದಿಯಲ್ಲಿದ್ದಾರೆ. ಇಲ್ಲಿನ ಜನತೆಗೆ ಮುಕ್ತ ವಾತಾವರಣ ಅಗತ್ಯವಿರುವಷ್ಟೇ ಸ್ಪಷ್ಟ ಮಾರ್ಗದ ಅವಶ್ಯಕತೆಯೂ ಇರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಆದರೆ ಸೂಕಿ ಅವರ ರಾಜಕೀಯ ಕಾರ್ಯಸೂಚಿಯಲ್ಲಿ ಇದಾವುದೂ ಗಣನೆಗೆ ಬಂದಂತಿಲ್ಲ. ಯಾವುದೇ ಪರ್ಯಾಯ ಕಾರ್ಯಸೂಚಿ ಇಲ್ಲದೆ, ಆಳ್ವಿಕೆಯ ಸೂತ್ರವಿಲ್ಲದೆ, ಸೈದ್ಧಾಂತಿಕ ಬದ್ಧತೆ ಇಲ್ಲದೆ ಒಂದು ದೇಶದ ನಾಯಕತ್ವವನ್ನು ವಹಿಸಲು ಮುಂದಾಗಿರುವ ಸೂಕಿ ಮತ್ತು ಅವರ ಪಕ್ಷ ಮ್ಯಾನ್ಮಾರ್‌ನ ಜನತೆಗೆ ಪ್ರಜಾಪ್ರಭುತ್ವವನ್ನು ಮಾತ್ರ ದೊರಕಿಸಿಕೊಟ್ಟರೆ ಸಾಲದು, ಉತ್ತಮ ಭವಿಷ್ಯದತ್ತ ಸಾಗುವ ಸಮತಾ ಸಮಾಜವನ್ನೂ ದೊರಕಿಸಿಕೊಡಬೇಕಾಗಿದೆ. ಮ್ಯಾನ್ಮಾರ್‌ನ ಯುವ ಜನಾಂಗದಲ್ಲಿ ಅಡಗಿರುವ ಕ್ರಾಂತಿಕಾರಿ ಹೋರಾಟ ಮನೋಭಾವವನ್ನು ಸ್ಪಷ್ಟ ಸೈದ್ಧಾಂತಿಕ ಚೌಕಟ್ಟಿನಲ್ಲಿ ಕೊಂಡೊಯ್ಯುವ ಮಹತ್ತರ ಹೊಣೆಗಾರಿಕೆ ಸೂಕಿ ಅವರ ಮೇಲಿದೆ.

ಇತ್ತೀಚೆಗಷ್ಟೇ ಮ್ಯಾನ್ಮಾರ್‌ನಲ್ಲಿ ನಡೆದ ಸಂತರ ಕ್ರಾಂತಿಯ ಸಂದರ್ಭದಲ್ಲೂ ಪರ್ಯಾಯ ರಾಜಕಾರಣದ ದನಿಯಾಗಲೀ, ಶ್ರಮಜೀವಿಗಳ ಪರವಾದ ದನಿಯಾಗಲೀ ಕೇಳಿಬರಲಿಲ್ಲ. ಪ್ರಸ್ತುತ ಬಂಡವಾಳ ವ್ಯವಸ್ಥೆಯಡಿಯಲ್ಲೇ ಪ್ರಜಾಸತ್ತೆಗಾಗಿ ಹೋರಾಡುವುದೇ ಆದಲ್ಲಿ ಸೂಕಿ ಅವರ ಆಂದೋಲನ ತನ್ನ ಪರಿಪೂರ್ಣತೆಯನ್ನು ಸಾಧಿಸಿಲ್ಲವೆಂದೇ ಹೇಳಬಹುದು.

ಈಗ ತಾನೇ ಮುಕ್ತ ವಾತಾವರಣದಲ್ಲಿ ರೆಕ್ಕೆಗಳನ್ನು ಪಟಪಟಿಸುತ್ತಿರುವ ಸ್ವಾತಂತ್ರ್ಯದ ಹಾಡು ಹಕ್ಕಿಯ ಪಯಣ ಎತ್ತ ಸಾಗುವುದೋ ಕಾದು ನೋಡಬೇಕು.

(ಮುಗಿಯಿತು) □

ಅಸಲಿ ದೇಶದ್ರೋಹಿಗಳು ಮತ್ತು

(6ನೇ ಪುಟದಿಂದ)

"ಪುಂಡರು ಕೊನೆಯದಾಗಿ ದೇಶಭಕ್ತಿಯ ಆಸರೆ ಪಡೆದುಕೊಳ್ಳುತ್ತಾರೆ"ಎಂದು ಸುಮಾರು 250 ವರ್ಷಗಳ ಹಿಂದೆ ಹೇಳಿದ್ದ ಸ್ಯಾಮುವೆಲ್ ಜಾನ್ಸನ್ ಮಾತುಗಳು ಭಾರತದ ರಾಷ್ಟ್ರೀಯವಾದದ ಮಟ್ಟಿಗೆ ಅದೆಷ್ಟು ನಿಜವೆಂದು ಸಾಬೀತಾಗುತ್ತಿದೆ. ಸಂಘ ಪರಿವಾರ ವಾಸ್ತವದಲ್ಲಿ ಒಂದು ಪ್ರತ್ಯೇಕ ರಾಷ್ಟ್ರಧ್ವಜ ಮತ್ತು ಸಂವಿಧಾನ ಹೊಂದಿರುವ "ಹಿಂದೂ ರಾಷ್ಟ್ರ" ವನ್ನು ಸ್ಥಾಪಿಸುವ ಕಾಯಕದಲ್ಲಿ ತೊಡಗಿದೆಯೆಂಬ ಸತ್ಯಾಂಶ ಮಾಲೆಗಾಂವ್ ಸ್ಫೋಟದ ಬಳಿಕ ಬೆಳಕಿಗೆ ಬಂದಿದೆ.

ಈ ರಾಷ್ಟ್ರ ದ್ರೋಹಿ ಕೃತ್ಯವನ್ನು ಬಹಳ ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಆರಂಭದಲ್ಲಿ ಕೋಮು ಗಲಭೆಗಳಿಗಷ್ಟೆ ಸೀಮಿತವಾಗಿದ್ದ ಸಂಘ ಪರಿವಾರ ಇತ್ತೀಚಿನ ದಿನಗಳಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸುವ ಸ್ತರಕ್ಕೆ ತಲುಪಿದೆ. ಆಯ್ದ ಯುವ ಕಾರ್ಯಕರ್ತರಿಗೆ ನಿವೃತ್ತ ಪೊಲೀಸ್ ಮತ್ತು ಸೇನಾಧಿಕಾರಿಗಳ ಮೂಲಕ ಶಸ್ತ್ರಾಸ್ತ್ರಗಳ ಬಳಕೆ ಮತ್ತು ಬಾಂಬು ತಯಾರಿ, ಸ್ಫೋಟ ನಡೆಸುವ ವಿಧಾನಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಇದಕ್ಕೆ ಪರ್ಭನಿ, ಪೂರ್ಣಾ, ಜಾಲ್ನಾ, ಕಾನ್‌ಪುರ, ಮೋದಸಾ, ನಾಂದೇಡ್, ಥಾಣೆ, ವಾಶಿ, ಪನ್ವೇಲ್, ಮಾಲೆಗಾಂವ್, ಗೋವಾ, ಅಜ್ಮೀರ, ಹೈದರಾ ಬಾದ್, ಸಂಝೋತಾ ಎಕ್ಸ್‌ಪ್ರೆಸ್ ಇತ್ಯಾದಿ ಬಾಂಬು ಸ್ಫೋಟಗಳೇ ಸಾಕ್ಷಿ. ಆದರೆ ಇದುವರೆಗಿನ ಕೇಂದ್ರ ಸರಕಾರಗಳು ಒಂದು ರೀತಿಯ ಉಪೇಕ್ಷೆಯ ಧೋರಣೆ ತಾಳಿದ್ದರಿಂದಾಗಿ ಸಮಸ್ಯೆ ಉಲ್ಬಣಗೊಂಡು ದೈತ್ಯಾಕಾರವನ್ನು ಪಡೆದುಕೊಂಡಿದೆ. ಇಂದು ಸಂಘ ಪರಿವಾರ ತನ್ನನ್ನು ಯಾರೂ ಹೇಳು, ಕೇಳುವವರೇ ಇಲ್ಲವೆಂಬಂತೆ ವರ್ತಿಸುತ್ತಿದೆ.

ಆದರೂ ಕಾನೂನಿನ ಉರುಳು ಮೆಲ್ಲಮೆಲ್ಲನೆ ಸಂಘ ಪರಿವಾರದ ಕೊರಳಿನ ಸಮೀಪಕ್ಕೆ ಬರುತ್ತಿದೆ. ಸಾಧ್ವಿ ಪ್ರಜ್ಞಾಸಿಂಗ್ ಠಾಕುರ್, ಲೆ। ಕ। ಪ್ರಸಾದ್ ಪುರೋಹಿತ್, ದಯಾನಂದ್ ಪಾಂಡೆ, ರಾಕೇಶ್ ಧಾವಡೆ, ಸಮೀರ್ ಶರದ್ ಕುಲಕರ್ಣಿ, ಸುಧಾಕರ್ ಓಂಕಾರ್‌ನಾಥ್ ಚತುರ್ವೇದಿ, ಶಿವ್‌ನಾರಾಯಣ್ ಗೋಪಾಲ್‌ಸಿಂಗ್ ಕಲ‌ಸ್‌ಸಾಗರ್, ಶ್ಯಾಂ ಭವರ್‌ಲಾಲ್ ಸಾಹು, ರಮೇಶ್ ಉಪಾಧ್ಯಾಯ, ಅಜಯ್ ಏಕ್‌ನಾಥ್ ರಾಹಿರ್ಕರ್, ಜಗ್‌ದೀಶ್ ಚಿಂತಾಮಣ್ ಮ್ಹಾತ್ರೆ, ರಾಮ್‌ಚಂದ್ರ ಗೋಪಾಲ್ ಸಿಂಗ್ ಕಲ್ಸಂಗ್ರ, ಸಂದೀಪ್ ವಿಶ್ವಾಸ್ ಡಾಂಗೆ, ಪ್ರವೀಣ್ ಮುತಾಲಿಕ್, ಇಂದ್ರೇಶ್ ಕುಮಾರ್ ಮುಂತಾದವರು ಆರೋಪಿ ಸ್ಥಾನದಲ್ಲಿ ನಿಂತಿದ್ದಾರೆ.

ಮುಂದಿನ ದಿನಗಳಲ್ಲಿ ಇನ್ನಷ್ಟು ಮಂದಿ ಕಟಕಟೆಗೇರುವ ಸಾಧ್ಯತೆ ಇದೆ. ಇಂದ್ರೇಶ್ ಕುಮಾರ್ ಮತ್ತು ಮೋಹನ್ ಭಾಗ್ವತ್ ಪಾಕಿಸ್ತಾನದ ಐಎಸ್‌ಐಯಿಂದ ಹಣ ಪಡೆಯುತ್ತಿದ್ದಾರೆಂದು ತಿಳಿಸಿದಾತ ಇನ್ಯಾರೂ ಅಲ್ಲ, ಆರೆಸ್ಸೆಸ್ ಸದಸ್ಯ ಶ್ಯಾಮ್ ಆಪ್ಟೆ! ಇಂತಹ ಇನ್ನೆಷ್ಟು ಘಟಸರ್ಪಗಳಿವೆಯೋ ಯಾರು ಬಲ್ಲರು!! ಇವರೆಲ್ಲರ ಮೇಲೆ ಪ್ರಭುತ್ವದ ವಿರುದ್ಧ ಯುದ್ಧ ಕೈಕಸುವುದಕ್ಕೆ ಮತ್ತು ರಾಷ್ಟ್ರದ್ರೋಹಕ್ಕೆ ಸಂಬಂಧಿಸಿದ ಐಪಿಸಿ ಸೆಕ್ಷನ್ 121, 121ಎ, 122, 123, 124ಎ ನೇರವಾಗಿ ಅನ್ವಯವಾಗುತ್ತವೆ. ಆದರೆ ಪ್ರಶ್ನೆ ಏನೆಂದರೆ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವ ಎದೆಗಾರಿಕೆಯನ್ನು ತೋರಿಸಲಾಗುವುದೇ? □

ಜಾತಿ ವಿನಾಶಕ್ಕಾಗಿ ಜಾತಿ ಜನಗಣತಿ!?

ಶಿವಸುಂದರ್

(ಮುಂದುವರೆದ ಭಾಗ)

ಜಾತಿ ಪದ್ಧತಿಯ ಭೌತಿಕ ಮತ್ತು ಭೌದ್ಧಿಕ ಚೌಕಟ್ಟುಗಳೆರಡನ್ನೂ ಮುರಿಯುವುದು ಅಂಬೇಡ್ಕರ್‌ರವರ ಕಾರ್ಯಕ್ರಮವಾಗಿತ್ತು. ಬಂಡವಾಳವಾದ ಮತ್ತು ಬ್ರಾಹ್ಮಣವಾದ ದಲಿತರ ಶತ್ರುವೆಂದೂ ಅವರು ಮೊದಲಿಂದಲೂ ಹೇಳಿಕೊಂಡು ಬಂದಿದ್ದರು. ಈ ದೇಶದ ಸಂಪತ್ತಿನ ಮತ್ತು ಅಧಿಕಾರದ ಅಸಮಾನ ಹಂಚಿಕೆಯನ್ನು ತಡೆಗಟ್ಟಲು ಹಲವು ಕ್ರಮಗಳನ್ನು ಪ್ರಸ್ತಾಪಿಸಿದ್ದರು. ಪ್ರಭುತ್ವವು ಆರ್ಥಿಕ ನೀತಿಗಳನ್ನು ರೂಪಿಸುವಾಗ ಸಂಪತ್ತು ಒಂದೇ ಕಡೆ ಸಂಗ್ರಹವಾಗದಂಥಾ, ಈ ದೇಶದ ಎಲ್ಲಾ ಸಂಪನ್ಮೂಲಗಳ ಮೇಲೆ ಎಲ್ಲರಿಗೂ ಸಮಾನ ಅಧಿಕಾರ ವನ್ನು ಖಾತರಿ ಪಡಿಸುವಂಥಾ ಮತ್ತು ಅಂಥಾ ಸಂಪತ್ತಿನ ಮೇಲೆ ಜಾತಿ, ವರ್ಗ, ವರ್ಣ, ಲಿಂಗ, ಪ್ರದೇಶ ಮತ್ತು ಧರ್ಮದ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದೆ ಎಲ್ಲರಿಗೂ ಸಮಾನವಾದ ಅವಕಾಶ ಒದಗಿಸುವಂಥಾ ನೀತಿಗಳನ್ನು ರಚಿಸಬೇಕೆಂಬ ನಿರ್ದೇಶನವನ್ನು ನಮ್ಮ ಸಂವಿಧಾನ ಸರ್ಕಾರಗಳಿಗೆ ನೀಡುತ್ತದೆ.

ಐತಿಹಾಸಿಕವಾಗಿ ನೋಡಿದರೆ ಸಂಪತ್ತಿನ ಒಡೆತನವನ್ನು ಮತ್ತು ಆ ಮೂಲಕ ಅಧಿಕಾರವನ್ನು ಮತ್ತು ಅವಕಾಶಗಳನ್ನು ಶಾಶ್ವತವಾಗಿ ನಿರಾಕರಿಸುವ ಭಾಗವಾಗಿಯೇ ಜಾತಿ ಪದ್ಧತಿ ಈ ದೇಶದಲ್ಲಿ ಹುಟ್ಟಿದೆ, ಬೆಳೆದಿದೆ. ಇದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದರಿಂದಲೇ ಅಂಬೇಡ್ಕರ್ ಜಾತಿ ಶೋಷಣೆಯ ಅಂತ್ಯಕ್ಕೆ ಎರಡು ಕ್ರಾಂತಿಕಾರಿ ಕ್ರಮಗಳನ್ನು ಪ್ರತಿಪಾದಿಸಿದ್ದರು. ಒಂದು ಜಾತಿ ಶೋಷಣೆಗೆ ಭೌತಿಕ ನೆಲೆಯನ್ನು ಒದಗಿಸುತ್ತಿರುವ ಸಂಪತ್ತಿನ ಅಸಮಾನ ಹಂಚಿಕೆಯನ್ನು ಕ್ರಾಂತಿಕಾರಕವಾಗಿ ಕೊನೆ ಗಾಣಿಸಲು ಈ ದೇಶದ ನಿಜವಾದ ಸಂಪತ್ತಾದ ಭೂಮಿಯನ್ನು ರಾಷ್ಟ್ರೀಕರಣಗೊಳಿಸುವುದು. ಆ ಮೂಲಕ ಭೂ ಮಾಲೀಕ–ಜೀತಗಾರ ಎಂಬ ಸಂಬಂಧಗಳೂ ಅಳಿಸಿ ಹೋಗುತ್ತದೆ. ಏಕಕಾಲದಲ್ಲಿ ಜೀತಗಾರನಿಗೆ ಸ್ವಾಭಿಮಾನ ದಕ್ಕುತ್ತದೆ. ಶೋಷಕ ಭೂಮಾಲಿಕನ ಸೊಕ್ಕನ್ನು ಅಡಗಿಸಿ ಸಮಾನ ನೆಲೆಯಲ್ಲಿ ಬದುಕುವಂತಾಗುತ್ತದೆ. ಎರಡನೆಯದು ಜಾತಿ ಶೋಷಣೆಗೆ ಧಾರ್ಮಿಕ ಮತ್ತು ಬೌದ್ಧಿಕ ನೆಲೆ ಒದಗಿಸುವ ಹಿಂದೂ ಧರ್ಮದ ಚೌಕಟ್ಟನ್ನು ಮುರಿದು ಹೊರಬರುವುದು.

ಬಂಡವಾಳವಾದ, ಬ್ರಾಹ್ಮಣವಾದ ಮತ್ತು ಸಂವಿಧಾನ ಸಭೆ

ಹೀಗೆ ಜಾತಿ ಪದ್ಧತಿಯ ಭೌತಿಕ ಮತ್ತು ಭೌದ್ಧಿಕ ಚೌಕಟ್ಟುಗಳೆರಡನ್ನೂ ಮುರಿಯುವುದು ಅಂಬೇಡ್ಕರ್‌ರವರ ಕಾರ್ಯಕ್ರಮವಾಗಿತ್ತು. ಬಂಡವಾಳವಾದ ಮತ್ತು ಬ್ರಾಹ್ಮಣವಾದ ದಲಿತರ ಶತ್ರುವೆಂದೂ ಅವರು ಮೊದಲಿಂದಲೂ ಹೇಳಿಕೊಂಡು ಬಂದಿದ್ದರು. ಆದ್ದರಿಂದಲೇ ಸಂವಿಧಾನದ ರಚನಾ ಸಮಿತಿಯ ಅಧ್ಯಕ್ಷರೂ ಆಗಿದ್ದ ಅಂಬೇಡ್ಕರ್‌ರವರು ಜಾತಿ ಶೋಷಣೆಯ ಅಡಿಪಾಯಗಳನ್ನು ಅಲುಗಾಡಿಸಲು ಮೀಸಲಾತಿ ಕ್ರಮಗಳನ್ನು ಮಾತ್ರವಲ್ಲದೆ ಈ ದೇಶದ ಸಂಪತ್ತಿನ ಮತ್ತು ಅಧಿಕಾರದ ಅಸಮಾನ ಹಂಚಿಕೆಯನ್ನು ತಡೆಗಟ್ಟಲು ಹಲವು ಕ್ರಮಗಳನ್ನು ಪ್ರಸ್ತಾಪಿಸಿದ್ದರು. ಪ್ರಭುತ್ವವು ಆರ್ಥಿಕ ನೀತಿಗಳನ್ನು ರೂಪಿಸುವಾಗ ಸಂಪತ್ತು ಒಂದೇ ಕಡೆ ಸಂಗ್ರಹವಾಗದಂಥಾ, ಈ ದೇಶದ ಎಲ್ಲಾ ಸಂಪನ್ಮೂಲಗಳ ಮೇಲೆ ಎಲ್ಲರಿಗೂ ಸಮಾನ ಅಧಿಕಾರವನ್ನು ಖಾತರಿ ಪಡಿಸುವಂಥಾ ಮತ್ತು ಅಂಥಾ ಸಂಪತ್ತಿನ ಮೇಳೆ ಜಾತಿ, ವರ್ಗ, ವರ್ಣ, ಲಿಂಗ, ಪ್ರದೇಶ ಮತ್ತು ಧರ್ಮದ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದೆ ಎಲ್ಲರಿಗೂ ಸಮಾನವಾದ ಅವಕಾಶ ಒದಗಿಸುವಂಥಾ ನೀತಿಗಳನ್ನು ರಚಿಸಬೇಕೆಂಬ ನಿರ್ದೇಶನವನ್ನು ನಮ್ಮ ಸಂವಿಧಾನ ಸರ್ಕಾರಗಳಿಗೆ ನೀಡುತ್ತದೆ.

ಆದರೆ ಈ ದೇಶದ ಸ್ವಾತಂತ್ರ್ಯ ಮತ್ತು ಪ್ರಜಾ ತಂತ್ರದ ವಿಧಿವಿಧಾನವನ್ನು ರೂಪಿಸಲು ರಚಿಸಲಾಗಿದ್ದ ಸಂವಿಧಾನ ರಚನಾ ಸಭೆ ಅಂಬೇಡ್ಕರ್‌ರವರ ಈ ಎಲ್ಲಾ ಕ್ರಾಂತಿಕಾರಿ ಕ್ರಮಗಳನ್ನು ಶಾಸನಾತ್ಮಕವಾದ ಮತ್ತು ಆಚರಣೆಗೆ ತರಲು ಸರ್ಕಾರವನ್ನು ನಿರ್ಬಂಧಿಸುವ ಅಧಿಕಾರವಿಲ್ಲದ ಸಂವಿಧಾನದ ನಿರ್ದೇಶನಾ ತತ್ವದಲ್ಲಿ ಸೇರಿಸಿಬಿಟ್ಟಿತು. ಇದಕ್ಕೆ ಸಂವಿಧಾನ ರಚನಾಸಭೆಯಲ್ಲಿ ಮೇಲ್ವರ್ಗ ಮತ್ತು ಮೇಲ್ಜಾತಿ ಆಸಕ್ತಿಗಳ ಪ್ರತಿನಿಧಿಗಳೇ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಇದ್ದದ್ದೇ ಪ್ರಧಾನ ಕಾರಣ. ಇದು ಒಂದರ್ಥದಲ್ಲಿ 1947ರ ನಂತರದ ನಮ್ಮ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರದ ನಿಜವಾದ ವರ್ಗ ಮತ್ತು ಜಾತಿ ಸ್ವಭಾವವನ್ನು ಪ್ರತಿನಿಧಿಸುತ್ತದೆ.

ಇಲ್ಲಿ ವಿಷಯಕ್ಕೇ ನೇರವಾಗಿ ಸಂಭಂಧ ಪಡದಿದ್ದರೂ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಬಯಸುತ್ತೇನೆ. ನಮ್ಮ ಸಂವಿಧಾನ ರಚನಾ ಸಭೆ ಆಯ್ಕೆಗೊಂಡಿದ್ದು ಸಾರ್ವತ್ರಿಕ ಮತದಾನದ ಆಧಾರದ ಮೇಲಲ್ಲ. ಬದಲಿಗೆ 1935ರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಡಿಯಲ್ಲಿ ಪ್ರಾಂತೀಯ ಶಾಸನ ಸಭೆಗಳನ್ನು ರೂಪಿಸಲು ಹಾಕಿಕೊಂಡ ಮತದಾರರ ಮಾನದಂಡವನ್ನೇ ಸಂವಿಧಾನ ರಚನಾ ಸಭೆಯ ಆಯ್ಕೆಗೂ ವಿಸ್ತರಿಸಲಾಯಿತು.

ಅದರ ಪ್ರಕಾರ ಆಸ್ತಿವಂತರೂ ಮತ್ತು ಸುಶಿಕ್ಷಿತರೂ ಮಾತ್ರ

ಸಂವಿಧಾನ ರಚನಾ ಸಭೆಯನ್ನು ಆಯ್ಕೆ ಮಾಡುವ ಮತದಾರರಾದರು! ಅಂದರೆ ಶೇ.17ರಷ್ಟು ಭಾರತೀಯರು ಮಾತ್ರ ಈ ದೇಶದ ಸಂವಿಧಾನ ರಚನಾ ಸಭೆಯನ್ನು ಆಯ್ಕೆ ಮಾಡಿದರು! ಆಗ ಆಸ್ತಿವಂತರೂ ಮತ್ತು ಶಿಕ್ಷಣ ಪಡೆದ ದಲಿತರೂ, ಶೂದ್ರರೂ, ಮಹಿಳೆಯರೂ ಎಷ್ಟಿದ್ದಿರಬಹುದು? ಈ ಮಾನದಂಡಗಳಲ್ಲಿ ಶೇ.90ಕ್ಕಿಂತಲೂ ಹೆಚ್ಚು ದಲಿತ, ಶೂದ್ರ, ಮಹಿಳೆಯರಿಗೆ ಓಟಿನ ಹಕ್ಕೇ ಸಿಗಲಿಲ್ಲ. ಹೀಗೆ ಆಧುನಿಕ ಪ್ರಜಾತಂತ್ರ ನಮ್ಮ ದೇಶಕ್ಕೆ ಬಂದದ್ದು ಹಳೆಯ ಮನುಸ್ಮೃತಿಯ ಮಾನದಂಡಗಳನ್ನು ಆಧರಿಸಿಯೇ! ಇನ್ನು ಅದರಲ್ಲಿ 1/3 ಭಾಗದಷ್ಟು ಸದಸ್ಯರು ರಾಜಪ್ರತಿನಿಧಿಗಳಾಗಿ ನೇಮಕವಾದವರು. ಹೀಗೆ ಪ್ರಧಾನವಾಗಿ ಭೂಮಾಲೀಕ, ರಾಜಾಸಕ್ತ, ಮೇಲ್ವರ್ಗ ಮತ್ತು ಮೇಲ್ಜಾತಿ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದ 350ಕ್ಕೂ ಹೆಚ್ಚು ಸದಸ್ಯರ ನಡುವೆ ಪ್ರಧಾನವಾಗಿ ಅಂಬೇಡ್ಕರ್ ಮತ್ತು ಕೈಬೆರಳೆಣಿಕೆಯಷ್ಟು ಇನ್ನು ಕೆಲವರು ದಮನಿತ ಜಾತಿಗಳ ಮತ್ತು ವರ್ಗಗಳ ಆಸಕ್ತಿಯನ್ನು ಸಂವಿಧಾನದಲ್ಲಿ ಖಾತರಿ ಪಡಿಸಿಕೊಳ್ಳಲು ಹೋರಾಡಬೇಕಿತ್ತು.

ಆದ್ದರಿಂದಲೇ ದಮನಿತ ಸಮುದಾಯಗಳ ಬದುಕಿನಲ್ಲಿ ಕ್ರಾಂತಿಕಾರಿ ಮತ್ತು ದೂರಗಾಮಿ ಪರಿಣಾಮಗಳನ್ನು ತರಬಹುದಿದ್ದ ಕ್ರಮಗಳಲ್ಲಿ ಬಹುಪಾಲು ಶಾಸನಾತ್ಮಕ ಬೆಂಬಲವಿಲ್ಲದ ಕೇವಲ ಆಶಯರೂಪಿಯಾದ ನಿರ್ದೇಶನಾ ತತ್ವಗಳಲ್ಲಿ ಸೇರಿಕೊಂಡಿತು. ಆದರೆ ರಾಜಕೀಯ ಸಮಾನತೆ ಸಂವಿಧಾನ ಎಲ್ಲರಿಗೂ ಖಾತರಿ ಪಡಿಸುತ್ತದೆ. ಒಂದು ಓಟು ಒಂದು ಮೌಲ್ಯವೆಂಬುದು ಒಂದು ಕ್ರಾಂತಿಕಾರಿ ಬದಲಾವಣೆಯೇ. ಆದರೆ ಅಂಥಾ ಮೌಲ್ಯವನ್ನು ಜಗತ್ತೇ ಒಪ್ಪಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಈ ದೇಶ ಒಂದು ಪ್ರಜಾತಂತ್ರ ಎಂದು ಕರೆಸಿಕೊಳ್ಳಬೇಕೆಂದರೂ ಈ ರಾಜಿಯನ್ನು ಈ ದೇಶದ ಮೇಲ್ಜಾತಿ ಮತ್ತು ಮೇಲ್ವರ್ಗದ ಆಳುವವರ್ಗಗಳು ಮಾಡಿಕೊಳ್ಳಲೇ ಬೇಕಾಯಿತು. ಆದರೆ ಆ ಮೌಲ್ಯಕ್ಕೆ ನಿಜವಾದ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಮೌಲ್ಯದ ಅರ್ಥವನ್ನು ತಂದುಕೊಡುವ ಎಲ್ಲಾ ಕ್ರಮಗಳನ್ನು ಹೇಗೆ ಸೋಲಿಸಲಾಯಿತೆಂಬುದನ್ನು ಸಂವಿಧಾನ ರಚನಾ ಸಭೆಯ ಚರ್ಚೆಗಳನ್ನು ನೋಡಿದರೆ ಗೊತ್ತಾಗುತ್ತದೆ.

ಇಂದಿಗೂ ನಮ್ಮ ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದೆಯೇ ವಿನಃ ಜಾತಿ ಪದ್ಧತಿಯನ್ನು ನಿಷೇಧಿಸಲಾಗಿಲ್ಲ! ಒಬ್ಬ ಹಿರಿಯ ಸಂವಿಧಾನ ತಜ್ಞರ ಪ್ರಕಾರ ನಮ್ಮ ಸಂವಿಧಾನದ ರೀತಿಯಲ್ಲಿ ಒಂದು ಕೈಯಲ್ಲಿ ಕೊಟ್ಟು ಮತ್ತೊಂದು ಕೈಯಲ್ಲಿ ಕಸಿದುಕೊಳ್ಳುವ ಸಂವಿಧಾನ ಬೇರೊಂದಿಲ್ಲ. ಹಾಗೂ ನಮ್ಮ ದೇಶದ ಕಾನೂನುಗಳೆಲ್ಲದರ ಆಶಯ ಹಾಗೂ ತಾತ್ಪರ್ಯ ಖಾಸಗಿ ಆಸ್ತಿಯನ್ನು ಅರ್ಥಾತ್ ಸಂಪತ್ತಿನ ಸಂಗ್ರಹಣೆಯನ್ನು ರಕ್ಷಿಸುವ ಮತ್ತು ಅದರ ವಿತರಣೆಯನ್ನು ವಿರೋಧಿಸುವ ಕಾನೂನುಗಳೇ ಆಗಿದೆ. ರಾಜೀವ್ ಧವನ್ ಎಂಬ ಮತ್ತೊಬ್ಬ ಸಂವಿಧಾನ ತಜ್ಞರ ಪ್ರಕಾರ ಸ್ವಾತಂತ್ರ್ಯಾ ನಂತರ ನ್ಯಾಯಾಂಗಕ್ಕೂ ಮತ್ತು ಶಾಸಕಾಂಗಕ್ಕೂ ಎರಡು ದಶಕಗಳ ಕಾಲ ನಡೆದ ಸಂಘರ್ಷ ಭೂಮಿ ಎಂಬ ಆಸ್ತಿಯ ಹಂಚಿಕೆಯ ಕುರಿತಾದದ್ದೇ. ಆಗ ಸುಪ್ರೀಂ ಕೋರ್ಟು ಭೂಮಿ ಹಂಚಿಕೆ ಸಂಬಂಧದ ಎಲ್ಲಾ ಕಾನೂನುಗಳನ್ನು ರದ್ದುಗೊಳಿಸಿತಲ್ಲದೆ ಸರ್ಕಾರದ ವಜಾ ಕ್ರಮಗಳನ್ನು ಸಮರ್ಥಿಸಿಕೊಂಡಿತು.

ಅಂಬೇಡ್ಕರ್ ಬರೆದ ಸಂವಿಧಾನ ಎಂದು ನಾವು ಸಂಭ್ರಮಿಸಬೇಕಾದರೆ ಅಂಬೇಡ್ಕರ್ ಸಂವಿಧಾನವನ್ನು ಯಾವ ವ್ಯತಿರಿಕ್ತ ಸಂದರ್ಭಗಳಲ್ಲಿ ರಚಿಸಬೇಕಾಯಿತು ಮತ್ತು ಅದಕ್ಕಿದ್ದ ಮಿತಿಗಳೇನು ಎಂಬುದನ್ನು ಮರೆಯಬಾರದು. ವಾಸ್ತವವಾಗಿ ಭಾರತದ ದಮನಿತ ಜನತೆ ಇದನ್ನು ಮರೆಯಬಾರದೆಂಬುದೇ ಅಂಬೇಡ್ಕರ್ ಅವರ ಆಶಯವೂ ಆಗಿತ್ತು. ಆದ್ದರಿಂದಲೇ 1949ರ ನವಂಬರ್ 26ರಂದು ಅವರು ಸಂವಿಧಾನವನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡುತ್ತಾ "ಇಂದು ನಾವು ವೈರುಧ್ಯಗಳಿಂದ ಕೂಡಿದ ಯುಗವೊಂದನ್ನು ಪ್ರವೇಶಿಸುತ್ತಿದ್ದೇವೆ. ರಾಜಕೀಯವಾಗಿ ಭಾರತೀಯರೆಲ್ಲರು ಸಮಾನರಾಗಿದ್ದರೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನತೆ ಮುಂದುವರೆಯಲಿದೆ. ಆದಷ್ಟು ಬೇಗ ಈ ಅಸಮಾನತೆಗಳನ್ನು ನಿವಾರಿಸಿಕೊಳ್ಳದಿದ್ದರೆ ಯಾವ ಜನರ ಹೆಸರಿನಲ್ಲಿ ಸಂವಿಧಾನವನ್ನು ರಚಿಸಲಾಗಿದೆಯೋ ಅದೇ ಜನ ಇದರ ವಿರುದ್ಧ ಬಂಡೇಳುತ್ತಾರೆ" ಎಂದು ಎಚ್ಚರಿಸಿದ್ದರು.

ಭಾರತದಂಥಾ ದೇಶದಲ್ಲಿ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ನೀಡಲಾಗುವ ಮೀಸಲಾತಿಯು ದಮನಿತ ಜಾತಿಗಳ ಸಬಲೀಕರಣದಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಇಡೀ ಸಮುದಾಯದ ಏಳಿಗೆಗೆ ಸಹಾಯಕವಾಗದಿದ್ದರೂ ಈವರೆಗೆ ವಿದ್ಯೆ ಮತ್ತು ಪ್ರತಿಷ್ಠಾತ್ಮಕ ಸ್ಥಾನಗಳಿಂದ ಶಾಶ್ವತವಾಗಿ ಬಹಿಷ್ಕೃತವಾಗಿದ್ದ ಸಮುದಾಯಗಳ ಪ್ರತಿನಿಧಿಗಳಿಗಾದರೂ ಅವಕಾಶ ಕಲ್ಪಿಸಿಕೊಡುತ್ತದೆ. ಇದಕ್ಕೆ ಒಂದು ಸಾಂಕೇತಿಕ ಅರ್ಥವೂ ಇರುವುದರಿಂದ ಇದು ಸಮುದಾಯಗಳಲ್ಲಿ ಒಂದು ಆತ್ಮವಿಶ್ವಾಸನ್ನೂ ತಂದುಕೊಡುತ್ತದೆ.

ನಂತರ ಅಂಬೇಡ್ಕರ್‌ರವರೇ ಮಂತ್ರಿಗಿರಿಗೆ ರಾಜೀನಾಮೆ ಕೊಟ್ಟು ಹೊರಬಂದದ್ದು ಮತ್ತು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧಧರ್ಮವನ್ನು ಸೇರಿಕೊಂಡದ್ದು ಎಲ್ಲವೂ ಸಾಂಕೇತಿಕವಾಗಿ ಜಾತಿ ವಿನಾಶದ ಮತ್ತು ಅಸಮಾನತೆ ವಿರೋಧಿ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಸ್ವಾತಂತ್ರ್ಯೋತ್ತರ ಭಾರತೀಯ ಪ್ರಭುತ್ವದ ಮತ್ತು ಸಮಾಜದ ಮಿತಿಗಳನ್ನೇ ಸೂಚಿಸುತ್ತವೆ.

ಹೀಗೆ ಜಾತಿ ವಿನಾಶದೆಡೆಗೆ ಕ್ರಾಂತಿಕಾರಿ ಕ್ರಮಗಳನ್ನು ತೆಗೆದುಕೊಳ್ಳದಂತೆ ನಮ್ಮ "ಸ್ವಾತಂತ್ರ್ಯ" ಮತ್ತು "ಪ್ರಜಾತಂತ್ರ"ಕ್ಕೆ ಅಡ್ಡಿಯುಂಟು ಮಾಡಿದ್ದು ಈ ದೇಶದಲ್ಲಿ ಸಾಂಪ್ರದಾಯಿಕವಾಗಿ ಸಾಮಾಜಿಕ ಮತ್ತು ಆರ್ಥಿಕ ಶ್ರೇಣೀಕರಣವನ್ನು ಕಾಪಾಡಿಕೊಂಡು ಬಂದ ಶಕ್ತಿಗಳೇ. ಆದರೆ ಅದರ ವಿರುದ್ಧ ದಮನಿತ ಜನತೆಯು ನಡೆಸಿದ ಸಂಘಟಿತ ಮತ್ತು ನಿರಂತರ ಸಂಘರ್ಷದ ಕಾರಣದಿಂದಲೇ "ಮೀಸಲಾತಿ"ಯಂಥಾ ಕ್ರಮಗಳು ಅನುಷ್ಠಾನಗೊಂಡವು.

ಮೀಸಲಾತಿಯ ಸಾಂಕೇತಿಕ ಶಕ್ತಿಗಳು ಮತ್ತು ಅಂತರ್ಗತ ಮಿತಿಗಳು

ಮೀಸಲಾತಿಯು ಜಾತಿ ವಿನಾಶದ ಕಾರ್ಯಕ್ರಮವಲ್ಲದಿದ್ದರೂ ಪ್ರಧಾನವಾಗಿ ದಮನಿತ ಜಾತಿಗಳ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಬಲೀಕರಣದ ಕಾರ್ಯಕ್ರಮ. ಮತ್ತು ಜಾತಿ ವಿನಾಶದೆಡೆಗೆ ಒಂದು ಧೃಢವಾದ ಮತ್ತು ಪ್ರಮುಖವಾದ ಹೆಜ್ಜೆ. ಆದರೆ ಮೀಸಲಾತಿ ಅಸಮಾನತೆಗೆ ಮೂಲಕಾರಣವಾದ ಸಂಪತ್ತಿನ ಅಸಮಾನ ಹಂಚಿಕೆಯನ್ನು ತಡೆಯುವಂಥಾ ಯಾವುದೇ ಕ್ರಮಗಳನ್ನು ತೆಗೆದುಕೊಳಲು ಶಕ್ತವಲ್ಲ. ಏಕೆಂದರೆ ಮೀಸಲಾತಿ ಕೇವಲ ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣಗಳಲ್ಲಿ ಮಾತ್ರ ಅವಕಾಶಗಳನ್ನು ಖಾತರಿಗೊಳಿಸುತ್ತದೆ.

ಭಾರತದಂಥಾ ದೇಶದಲ್ಲಿ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ನೀಡಲಾಗುವ ಮೀಸಲಾತಿಯು ದಮನಿತ ಜಾತಿಗಳ ಸಬಲೀಕರಣದಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಇಡೀ ಸಮುದಾಯದ ಏಳಿಗೆಗೆ ಸಹಾಯಕವಾಗದಿದ್ದರೂ ಈವರೆಗೆ ವಿದ್ಯೆ ಮತ್ತು ಪ್ರತಿಷ್ಠಾತ್ಮಕ ಸ್ಥಾನಗಳಿಂದ ಶಾಶ್ವತವಾಗಿ ಬಹಿಷ್ಕೃತವಾಗಿದ್ದ ಸಮುದಾಯಗಳ ಪ್ರತಿನಿಧಿಗಳಿಗಾದರೂ ಅವಕಾಶ ಕಲ್ಪಿಸಿಕೊಡುತ್ತದೆ. ಇದಕ್ಕೆ ಒಂದು ಸಾಂಕೇತಿಕ ಅರ್ಥವೂ ಇರುವುದರಿಂದ ಇದು ಸಮುದಾಯಗಳಲ್ಲಿ ಒಂದು ಆತ್ಮವಿಶ್ವಾಸವನ್ನೂ ತಂದುಕೊಡುತ್ತದೆ. ಅಷ್ಟು ಮಾತ್ರವಲ್ಲ. ಈವರೆಗೆ ಮೀಸಲಾತಿಯ ಅವಕಾಶಗಳಿಂದ 12 ಲಕ್ಷಕ್ಕೂ ಹೆಚ್ಚು ದಲಿತ ಕುಟುಂಬಗಳು ಸಾಮಾಜಿಕವಾಗಿ ಅಲ್ಲವಾದರೂ ಆರ್ಥಿಕವಾಗಿ ಮೇಲ್ಚಲನೆ ಪಡೆಯುವಂತಾಗಿದೆ.

ಲಕ್ಷಾಂತರ ಇತರ ಹಿಂದುಳಿದ ವರ್ಗಗಳ ಕುಟುಂಬಗಳೂ ಆರ್ಥಿಕವಾಗಿ ಸಬಲೀಕರಣಗೊಂಡಿವೆ. ಇವೆಲ್ಲವೂ ಭಾರತೀಯ ಸಮಾಜದಲ್ಲಿ ಸಾರರೂಪಿ ಬದಲಾವಣೆ ತರದಿದ್ದರೂ ಸಾಂಕೇತಿಕ ಬದಲಾವಣೆಯನ್ನು ತರುತ್ತಿದ್ದವು. ಹಾಗೂ ಇಂಥಾ ಬದಲಾವಣೆಗೆ ಮೂಲಭೂತ ಭೂಮಿಕೆ ಒದಗಿಸಿಕೊಟ್ಟಿದ್ದು ಸರ್ಕಾರಿ ಕ್ಷೇತ್ರದಲ್ಲಿ ದೊರೆಯುತ್ತಿದ್ದ ಶಿಕ್ಷಣ ಮತ್ತು ಉದ್ಯೋಗಗಳು.

ಸ್ವಾತಂತ್ರ್ಯ ಬಂದ ತರುಣದಲ್ಲಿ ನಾವು ಅನುಸರಿಸಿದ್ದು ಮಿಶ್ರ ಆರ್ಥಿಕ ವ್ಯವಸ್ಥೆ. ಎಂದರೆ ಸರ್ಕಾರಿ–ಮತ್ತು ಖಾಸಗಿ ಕ್ಷೇತ್ರಗಳೆರಡು ಇರುವಂಥಾ ಆದರೆ ಪ್ರಧಾನವಾಗಿ ಸರ್ಕಾರಿ ಕ್ಷೇತ್ರವೇ "ಕಮ್ಯಾಂಡಿಂಗ್ ಹೈಟ್ಸ್"ನಲ್ಲಿ ಇರುವಂಥಾ ಆರ್ಥಿಕ ವ್ಯವಸ್ಥೆ. ಆದ್ದರಿಂದ ಸರ್ಕಾರಿ ಕ್ಷೇತ್ರದಲ್ಲಿ ಶಿಕ್ಷಣ ಸಂಸ್ಥೆಗಳು, ಕಾರ್ಖಾನೆಗಳು ಮತ್ತು ಸ್ವಯಂ ಸರ್ಕಾರಿ ಆಡಳಿತ ಯಂತ್ರಾಂಗ ಬೃಹದಾಕಾರವಾಗಿ ಬೆಳೆಯಿತು. ಇವು ಕಡ್ಡಾಯವಾಗಿ ಮೀಸಲಾತಿಯನ್ನು ನೀಡಲೇ ಬೇಕಿದ್ದರಿಂದ ಈವರೆಗೆ ಅವಕಾಶ ವಂಚಿತರಾಗಿದ್ದ ದಲಿತ ಮತ್ತು ಇತರೆ ಹಿಂದುಳಿದ ಜಾತಿಗಳಿಗೆ ಕೋಟ್ಯಾಂತರವಲ್ಲದಿದ್ದರೂ ಲಕ್ಷಾಂತರ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು ಸಿಕ್ಕವು. ಹಾಗೂ ನಮ್ಮ ಪ್ರಭುತ್ವವನ್ನು ಪ್ರಧಾನವಾಗಿ "ವೆಲ್‌ಫೇರ್ ಸ್ಟೇಟ್" ಎಂದು ಪರಿಕಲ್ಪಿಸಿಕೊಂಡಿದ್ದರಿಂದ ಉಚಿತ ಅಥವಾ ರಿಯಾಯತಿ ದರದಲ್ಲಿ ಆರೋಗ್ಯ ಸೇವೆ, ಆಹಾರ ಧಾನ್ಯ, ವಿದ್ಯುತ್ ಇತ್ಯಾದಿಗಳು ದೊರಕುವಂತಾಗಿತ್ತು.

ಜಾಗತೀಕರಣವೆಂಬ ಅಂತರರಾಷ್ಟ್ರೀಯ ಬಂಡವಾಳವಾದ ಮತ್ತು ಸಾಮಾಜಿಕ ನ್ಯಾಯ

ಆದರೆ 1991ರಿಂದ ಭಾರತವು ಅನುಸರಿಸುತ್ತಿರುವ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳು "ವೆಲ್‌ಫೇರ್ ಸ್ಟೇಟ್–ಕಲ್ಯಾಣ ರಾಜ್ಯ"ದ ಪರಿಕಲ್ಪನೆಯನ್ನೇ ಮೂಲಭೂತವಾಗಿ ಬದಲಾಯಿಸಿದೆ. ಸರ್ಕಾರವು ತನ್ನ ಗಾತ್ರವನ್ನು ಕಡಿಮೆ ಮಾಡಿಕೊಂಡು ಆಡಳಿ

ತ್ರದಲ್ಲಿ ಕೆಲವು ಕೀಲಕವಾದ ಕ್ಷೇತ್ರವನ್ನು ಹೊರತುಪಡಿಸಿ ಮಿಕ್ಕಂತೆ ಆಡಳಿತ, ಶಿಕ್ಷಣ, ಉದ್ಯೋಗ, ಆರೋಗ್ಯ, ಆಹಾರ ಸರಬರಾಜು, ವಿದ್ಯುತ್, ಇತರ ಎಲ್ಲಾ ಕ್ಷೇತ್ರಗಳನ್ನು ಖಾಸಗಿಯವರಿಗೆ ವಹಿಸಬೇಕೆಂಬುದು ಈ ಬದಲಾವಣೆಯ ಮೂಲ ಧಾತು. ಸಾಮಾಜಿಕ ನ್ಯಾಯದ ಸೂತ್ರಗಳಿಗಿಂತ, ಬಲವಿದ್ದವರು ಪ್ರತಿಭೆ ಇದ್ದವರು ಮಾತ್ರ ಮೇಲೆ ಬರಲು ಸಾಧ್ಯವಾಗುವಂಥಾ ಮಾರುಕಟ್ಟೆ ಸೂತ್ರವೇ ಆಡಳಿತ ನೀತಿ ಸಂಹಿತೆಯಾಗಬೇಕೆಂಬುದು ಇದರತಾತ್ಪರ್ಯ.

ಒಂದು ರೀತಿಯಲ್ಲಿ ಇದು ಈ ದೇಶದ ಸಂವಿಧಾನದ ಮೂಲ ರಚನೆಗೆ ತದ್ವಿರುದ್ಧವಾದ ಕ್ರಮ. ಇದು ದೇಶದ ಸಂಪತ್ತು ಮತ್ತು ಅಧಿಕಾರವನ್ನು ಎಲ್ಲರ ಬದಲು ಕೆಲವೇ ಜನರ ಸ್ವತ್ತನ್ನಾಗಿ ಮಾಡುವ ಕ್ರಮವಾಗಿತ್ತು. ಆದರೆ ಕಳೆದ 20 ವರ್ಷಗಳಿಂದ ಇಂಥಾ ಸಾಮಾಜಿಕ ನ್ಯಾಯ ವಿರೋಧೀ ನೀತಿಗಳೇ ಜಾರಿಯಲ್ಲಿವೆ. ಈ ದೇಶದ ಸಂವಿಧಾನದ ಮೂಲ ಆಶಯವನ್ನು ಕಾಪಾಡಬೇಕಾದ ಕೋರ್ಟುಗಳೂ ಸಹ ಇವಕ್ಕೆ ಬೆಂಬಲ ನೀಡಿರುವುದು ಮಾತ್ರವಲ್ಲ, ತಮ್ಮ ಹಲವಾರು ನ್ಯಾಯಾದೇಶಗಳ ಮೂಲಕ ಈ ಅನ್ಯಾಯವನ್ನು ನ್ಯಾಯಬದ್ಧ ಗೊಳಿಸಿದೆ.

ಈ ದೇಶದಲ್ಲಿ ಜಾಗತೀಕರಣ ನೀತಿ ಜಾರಿಗೆ ಬಂದ ಕಳೆದ 20 ವರ್ಷಗಳಲ್ಲಿ ಮೀಸಲಾತಿ ದೊರಕಬಹುದಾದ ಸರ್ಕಾರಿ ಕ್ಷೇತ್ರದ ಗಾತ್ರವೇ ಕಿರಿದಾಗುತ್ತಾ ಸಾಗಿದೆ. ಹಾಗೂ ಖಾಸಗಿ ಕ್ಷೇತ್ರದ ಗಾತ್ರ ಹೆಚ್ಚಾಗುತ್ತಿದೆ. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯ ಮತ್ತು ಸಾಮಾಜಿಕ ನ್ಯಾಯದ ಬೇಡಿಗಳನ್ನು ತೊಡಿಸುವ ಅಗತ್ಯವಿಲ್ಲವೆಂದು ಸಾಕ್ಷಾತ್ ಸುಪ್ರೀಂಕೋರ್ಟೇ ತನ್ನ ಹಲವು ನಿರ್ಣಯಗಳ ಮೂಲಕ ಪರೋಕ್ಷವಾಗಿ ಘೋಷಿಸಿದೆ. ಇದರಿಂದಾಗಿ ಮೀಸಲಾತಿ ಚರ್ಚೆಯೇ ಅಪ್ರಸ್ತುತವಾಗುವಂಥಾ ಸಂದರ್ಭ ಎದುರಾಗಿದೆ!

ಈ ಜಾಗತೀಕರಣದ ಹಿಂದಿನ ಸ್ವದೇಶಿ ಮತ್ತು ವಿದೇಶಿ ಮಾರುಕಟ್ಟೆ ಶಕ್ತಿಗಳು ಅಂದರೆ ಬಂಡವಾಳಶಾಹಿ ಶಕ್ತಿಗಳು ಸರ್ಕಾರವು ಸಮಾಜಕಲ್ಯಾಣ ಕಾರ್ಯಕ್ರಮಗಳಿಗೆ ಮಾಡುತ್ತಿದ್ದ ವೆಚ್ಚವನ್ನು ಕಡಿತಗೊಳಿಸಿ ಮಾರುಕಟ್ಟೆಗೆ ಅರ್ಥಾತ್ ಬಂಡವಾಳಶಾಹಿಗಳಿಗೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಬೇಕೆಂದು ತಾಕೀತು ಮಾಡುತ್ತವೆ. ಅಂದರೆ ಸರ್ಕಾರಿ ಹಣದಿಂದ ಶಾಲೆ, ಆಸ್ಪತ್ರೆ ಮತ್ತು ಕಾರ್ಖಾನೆಗಳನ್ನು ಕಟ್ಟುವ ಬದಲು ಅದರಲ್ಲಿ ಉದ್ದಿಮೆಗಳ ತ್ವರಿತ ವಹಿವಾಟಿಗೆ ಅನುಕೂಲವಾಗುವ ಎಕ್ಸ್‌ಪ್ರೆಸ್ ಹೈವೇ, ಮೆಟ್ರೊ, ವಿಮಾನ ನಿಲ್ದಾಣ, ಸಂಪರ್ಕ ಸಾಧನ, ಇತ್ಯಾದಿಗಳನ್ನು ಕಟ್ಟಬೇಕೆಂಬುದೇ ಅವರ ಒತ್ತಾಯ.

1991ರಲ್ಲಿ ಅಂತರರಾಷ್ಟ್ರಿಯ ಹಣಕಾಸು ನಿಧಿ (IMF) ನಿಂದ ಸಾಲ ಪಡೆದು ಅವರ ಶರತ್ತುಗಳಿಗೆ ಸಹಿ ಹಾಕಿದ ಮೇಲೆ ಈ ಬಗೆಯ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮಗಳು ಅಂದರೆ ಈ ದೇಶವನ್ನು ಅಂತರರಾಷ್ಟ್ರಿಯ ಬಂಡವಾಳಶಾಹಿಗಳ ಲೂಟಿಗೆ ಹೊಂದಾಣಿಕೆ ಮಾಡಿಕೊಳ್ಳುವಂಥಾ ಕಾರ್ಯಕ್ರಮಗಳು ತೀವ್ರಗತಿಯಲ್ಲಿ ಪ್ರಾರಂಭವಾದವು. 1995ರಲ್ಲಿ ಭಾಗವಾಗಿ ವಿಶ್ವ ವಾಣಿಜ್ಯ ಸಂಸ್ಥೆ (WTO) ಒಪ್ಪಂದಗಳಿಗೆ ಸಹಿ ಮಾಡಿದ ಮೇಲೆ ದೇಶದ ಬಹುಪಾಲು ಎಲ್ಲಾ ಕ್ಷೇತ್ರಗಳನ್ನು ವಿದೇಶಿ ಹೂಡಿಕೆಗೆ ಮುಕ್ತಗೊಳಿಸಲಾಯಿತು. 2002ರಲ್ಲಿ Fiscal Responsibility Act ಅನ್ನು ಜಾರಿಗೆ ತಂದ ಮೇಲಂತೂ ದೇಶದ ಇಡೀ ಸಂಪನ್ಮೂಲವನ್ನು ದೇಶದ ಜನರ ಮೂಲಭೂತ ಸಂಕ್ಷೇಮಕ್ಕಲ್ಲದೆ ಮಾರುಕಟ್ಟೆಗೆ ಪೂರಕ ಸಾಧನಗಳ ಅಭಿವೃದ್ಧಿಗೆ ವ್ಯಯಮಾಡಬೇಕೆಂಬುದು ಮತ್ತು ಯಾವುದೇ ಸರ್ಕಾರ ಬದಲಾದರೂ ಈ ನೀತಿಗಳಲ್ಲಿ ಮಾತ್ರ ಬದಲಾವಣೆ ಮಾಡಬಾರದೆಂಬುದು ಶಾಸನಬದ್ಧವೇ ಆಗಿಬಿಟ್ಟಿತು. **ಮೀಸಲಾತಿ ಮತ್ತು ಸಾಮಾಜಿಕ ನ್ಯಾಯಗಳ ಮೇಲೆ ಈ ನೀತಿಗಳು ಬಹಳ ಗಂಭೀರ ಪರಿಣಾಮ ಬೀರಿವೆ.**

ದಮನಿತ ಸಮುದಾಯಗಳು ಸಾಮಾಜಿಕ ಮೇಲ್ಚಲನೆ ಪಡೆಯಲು ಮೊದಲು ಬೇಕಾದದ್ದು ಶಿಕ್ಷಣ. ಸಂವಿಧಾನ ರಚನೆಯ ತರುವಾಯ ಎಲ್ಲರಿಗೂ ಕನಿಷ್ಠ ಪ್ರಾಥಮಿಕ ಶಿಕ್ಷಣ ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿತ್ತು ಹಾಗೂ ಉನ್ನತ ಶಿಕ್ಷಣವೂ ಜಾತಿ, ವರ್ಗ, ಲಿಂಗ ತಾರತಮ್ಯವಿಲ್ಲದೆ ಎಲ್ಲರಿಗೂ ದಕ್ಕುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿತ್ತು. ಈ ಹಿನ್ನೆಲೆಯಲ್ಲೇ ಸರ್ಕಾರಿ ಶಾಲೆಗಳು ಲಕ್ಷಾಂತರ ಸಂಖ್ಯೆಯಲ್ಲಿ ಪ್ರಾರಂಭಗೊಂಡು ಅದರಲ್ಲಿ ದಮನಿತ ಸಮುದಾಯಗಳ ಎಲ್ಲರೂ ಅಲ್ಲವಾದರೂ ಕೆಲವರಾದರೂ ಅವಕಾಶಗಳನ್ನು ಪಡೆಯುವಂತಾಯಿತು.

ಆದರೆ 91ರ ನಂತರ ಶಿಕ್ಷಣವನ್ನು ಒಂದು ಸರಕೆಂದು ಪರಿಗಣಿಸಲಾಗಿದೆ. ಮತ್ತು ಸರ್ಕಾರ ಶಿಕ್ಷಣದ ಮೇಲೆ ಮಾಡುವ ವೆಚ್ಚವನ್ನು ಕಡಿತಗೊಳಿಸಬೇಕೆಂದು ಆದೇಶಿಸಲಾಗಿದೆ. ಇದರ ಪರಿಣಾಮವಾಗಿ ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತವೆ. ಅಲ್ಲಿನ ಗುಣಮಟ್ಟ ಕುಸಿಯುತ್ತದೆ. ಬದಲಿಗೆ ಖಾಸಗೀ ಶಾಲೆಗಳು ಹೆಚ್ಚುತ್ತಿವೆ. ಹೊಸ ಬಗೆಯ ವರ್ಣಾಶ್ರಮ ಪದ್ಧತಿ ಜಾರಿಗೆ ಬರುತ್ತಿದೆ. ಇತ್ತೀಚೆಗೆ ಜಾರಿಗೆ ತಂದ Right To Education-ಶಿಕ್ಷಣದ ಹಕ್ಕು ಕಾಯಿದೆಯೂ ಸಹ ಸಾರಾಂಶದಲ್ಲಿ ಶಿಕ್ಷಣದ ಖಾಸಗೀಕರಣವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಅದು ಎಲ್ಲರಿಗೂ ಸಮಾನ ಶಿಕ್ಷಣ ಒದಗಿಸುವುದರ ಬದಲಿಗೆ ಉಳ್ಳವರಿಗೆ ಒಳ್ಳೆಯ ಶಿಕ್ಷಣ ಮತ್ತು ದಮನಿತ ಸಮುದಾಯಗಳಿಗೆ ಕಳಪೆ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಇನ್ನಷ್ಟು ತೀವ್ರವಾಗಿ ಅನುಷ್ಠಾನಕ್ಕೆ ತರುತ್ತಿದೆ. ಅದು ಖಾಸಗಿ ಶಾಲೆಗಳಲ್ಲಿ ಶೇ.25ರಷ್ಟು ಸರ್ಕಾರಿ ಅಂದರೆ ದಮನಿತ ಸಮುದಾಯಗಳ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡಬೇಕೆಂಬ ಪ್ರಸ್ತಾಪವನ್ನು ಹೊಂದಿದೆ.

ಈ ಶೇ.25ರಷ್ಟು ವಿದ್ಯಾರ್ಥಿಗಳ ಶುಲ್ಕವನ್ನು ಸರ್ಕಾರವೇ ಭರಿಸುತ್ತದೆ. ಅಂದರೆ ಸರ್ಕಾರವೇ ಖಾಸಗಿ ಶಾಲೆಗಳ ದೊರೆಗಳಿಗೆ ಹಣವನ್ನು ತುಂಬುತ್ತದೆ. ಈ ತರ್ಕದ ಇನ್ನೊಂದು ಮುಖವೇನು? ಅಂದರೆ ಇನ್ನುಳಿದ ಶೇ. 75 ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನಿರಾಕರಿಸುವ ಶಿಕ್ಷಣದ ಖಾಸಗೀಕರಣ ನೀತಿಯನ್ನು ಶಾಸನಬದ್ಧಗೊಳಿಸಿದಂತಾಗಲಿಲ್ಲವೇ? ಆದರೆ ನಮ್ಮ ದೇಶದ ಜಾತಿ ವಾಸ್ತವವೇನೆಂದರೆ ಪ್ರತಿಷ್ಠಿತ ಶಾಲೆಗಳಲ್ಲಿ ಶೇ. 25ರಷ್ಟು ದಮನಿತ ವಿದ್ಯಾರ್ಥಿಗಳಿಗೆ ಅವಕಾಶ ಕೊಟ್ಟರೆ ಅದು ತಮ್ಮ ವಿದ್ಯಾರ್ಥಿಗಳ "ಸಾಂಸ್ಕೃತಿಕ" ಮಟ್ಟಕ್ಕೆ ಧಕ್ಕೆ ತರುತ್ತದೆಂದು ಈಗಾಗಲೇ ಖಾಸಗಿ ಶಾಲೆಗಳ ಆಡಳಿತ ಮಂಡಲಿಗಳು, ಮಧ್ಯಮ ಮತ್ತು ಮೇಲ್‌ಮಧ್ಯಮವರ್ಗದ, ಮತ್ತು ಸಹಜವಾಗಿಯೇ ಮೇಲ್ಜಾತಿಗೆ, ಸೇರಿದ ಪೋಷಕರನ್ನು ಸೇರಿಸಿಕೊಂಡು ವಿರೋಧಿಸಲು ಪ್ರಾರಂಭಿಸಿದ್ದಾರೆ! ಹೀಗೆ ಜಾಗತೀಕರಣದ ಕಾಲಘಟ್ಟದಲ್ಲಿ ಶಿಕ್ಷಣದಲ್ಲಿ ಮೀಸಲಾತಿಯು ಮಾರುಕಟ್ಟೆ ಧಾಳಿಗೆ ಒಳಗಾಗಿ ಶಾಸನಬದ್ಧವಾಗಿಯೇ ಕಣ್ಮರೆಯಾಗುತ್ತಿದೆ. ಈ ಸಮಯದಲ್ಲೇ ಈವರೆಗೆ ತಮ್ಮ ಹಕ್ಕುಗಳ ಬಗ್ಗೆ ಎಚ್ಚರವಿರದಿದ್ದ ಹಲವಾರು ಸಮುದಾಯಗಳು ಮೀಸಲಾತಿಯಲ್ಲಿ ತಮ್ಮ ಪಾಲನ್ನು ಕೇಳುತ್ತಿವೆ.

ಅಂದರೆ ಮೀಸಲಾತಿ ಕೊಡಮಾಡಬಹುದಾದ ಅವಕಾಶಗಳ ಗಾತ್ರವೇ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಅದಕ್ಕೆ ಪಾಲುದಾರರು ಹೆಚ್ಚಾಗುತ್ತಿದ್ದಾರೆ! ಮತ್ತು ಮೀಸಲಾತಿ ದೊರೆತರೆ ತಮ್ಮ ವಿಮೋಚನೆಯಾಗಬಹುದೆಂಬ ನಿರೀಕ್ಷೆಯಲ್ಲಿದ್ದಾರೆ.

ಆದರೆ ಮಾರುಕಟ್ಟೆ ಶಕ್ತಿಗಳು ಮೀಸಲಾತಿಯನ್ನೇ ಅಪ್ರಸ್ತುತಗೊಳಿಸಿಬಿಡುತ್ತಿವೆ. ಅಂದರೆ ಮೀಸಲಾತಿಯನ್ನು ಬಹುದೊಡ್ಡ ಕ್ಷೇತ್ರದಲ್ಲಿ ಶಾಸನಬದ್ಧವಾಗಿಯೇ ನಿರಾಕರಿಸಲಾಗುತ್ತಿದೆ. ಹೀಗೆ ಮೀಸಲಾತಿಯ ನಿರಾಕರಣೆಯನ್ನೂ ಒಳಗೊಂಡಂತೆ ದಮನಿತ ಸಮುದಾಯಗಳ ವಿಮೋಚನೆಗೆ ದೊಡ್ಡ ಆತಂಕವನ್ನು ಸೃಷ್ಟಿ ಮಾಡಿರುವ ಈ ಶತ್ರುವಿನ ಬಗ್ಗೆ ದಮನಿತ ಜನರನ್ನು ಹೋರಾಟಕ್ಕೆ ಸಜ್ಜುಗೊಳಿಸದೆ ಕೇವಲ ಮೀಸಲಾತಿಗಾಗಿ ಮಾತ್ರ ಹೋರಾಡಿದರೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ಅಪಹಾಸ್ಯಕ್ಕೊಳಪಡಿಸಿದಂತಾಗುತ್ತದೆ.

ಅದೇರೀತಿ ಉದ್ಯೋಗದ ಪ್ರಶ್ನೆ. ಈವರೆಗೆ ಈ ದೇಶದಲ್ಲಿ ಕೃಷಿಯನ್ನು ಬಿಟ್ಟರೆ ಅತಿ ಹೆಚ್ಚು ಉದ್ಯೋಗ ನೀಡುತ್ತಿದ್ದದ್ದು ಸರ್ಕಾರಿ ಆಡಳಿತ ಯಂತ್ರಾಂಗ ಮತ್ತು ರೈಲ್ವೆ, ವಿಮೆ, ಬ್ಯಾಂಕಿಂಗ್, ಹೆಚ್.ಎ.ಎಲ್, ಹೆಚ್.ಎಂ.ಟಿ. ಬಿ.ಹೆಚ್.ಇ.ಎಲ್, ಬಿ.ಇ.ಎಲ್ ಇನ್ನಿತ್ಯಾದಿ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳು. ಆದರೆ 91ರ ನಂತರ ಜಾರಿಗೆ ಬಂದಿರುವ ಖಾಸಗೀಕರಣ ನೀತಿಗಳಿಂದಾಗಿ ದಮನಿತ ಸಮುದಾಯದ ಲಕ್ಷಾಂತರ ಜನರಿಗೆ ನೌಕರಿ ನೀಡುತ್ತಿದ್ದ ಕಾರ್ಖಾನೆಗಳನ್ನು ಖಾಸಗೀಕರಿಸಲಾಗಿದೆ. ಹಾಗೂ ಆಡಳಿತ ಯಂತ್ರಾಂಗದ ಬಹುಪಾಲು ಔಟ್ ಸೋರ್ಸಿಂಗ್ ಹೆಸರಿನಲ್ಲಿ ಖಾಸಗೀಕರಣವಾಗಿದೆ.

ಅಲ್ಲದೆ ಉದಾರೀಕರಣದ ಭಾಗವಾಗಿ ಸರ್ಕಾರಿ ಕ್ಷೇತದಲ್ಲಿ ನಷ್ಟವನ್ನು ತಡೆಗಟ್ಟಬೇಕೆಂಬ ಹೆಸರಿನಲ್ಲಿ ಆಡಳಿತ ಮತ್ತು ಸರ್ಕಾರಿ ಉದ್ದಿಮೆಗಳಲ್ಲೂ ಶಾಶ್ವತ ಉದ್ಯೋಗ ಭದ್ರತೆಯಿಲ್ಲದ ವ್ಯವಸ್ಥೆಯಾದ ಮತ್ತು ಮೀಸಲಾತಿ ಅನ್ವಯಿಸದ ಕಾಂಟ್ರಾಕ್ಟ್ ಮತ್ತು ಕ್ಯಾಸುಯಲ್ ಪದ್ಧತಿಯಲ್ಲಿ ಬಹುಪಾಲು ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಹೀಗಾಗಿ ಸರ್ಕಾರಿ ಕ್ಷೇತ್ರ ಕಿರಿದಾಗುತ್ತಿರುವುದು ಮಾತ್ರವಲ್ಲ. ಮೀಸಲಾತಿಗೆ ಸಿಗುತ್ತಿದ್ದ ಉದ್ಯೋಗದ

ಉದಾರೀಕರಣದ ಭಾಗವಾಗಿ ಸರ್ಕಾರಿ ಕ್ಷೇತದಲ್ಲಿ ನಷ್ಟವನ್ನು ತಡೆಗಟ್ಟಬೇಕೆಂಬ ಹೆಸರಿನಲ್ಲಿ ಆಡಳಿತ ಮತ್ತು ಸರ್ಕಾರಿ ಉದ್ದಿಮೆಗಳಲ್ಲೂ ಶಾಶ್ವತ ಉದ್ಯೋಗ ಭದ್ರತೆಯಿಲ್ಲದ ವ್ಯವಸ್ಥೆಯಾದ ಮತ್ತು ಮೀಸಲಾತಿ ಅನ್ವಯಿಸದ ಕಾಂಟ್ರಾಕ್ಟ್ ಮತ್ತು ಕ್ಯಾಸುಯಲ್ ಪದ್ಧತಿಯಲ್ಲಿ ಬಹುಪಾಲು ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಹೀಗಾಗಿ ಸರ್ಕಾರಿ ಕ್ಷೇತ್ರ ಕಿರಿದಾಗುತ್ತಿರುವುದು ಮಾತ್ರವಲ್ಲ. ಮೀಸಲಾತಿಗೆ ಸಿಗುತ್ತಿದ್ದ ಉದ್ಯೋಗದ ಗಾತ್ರವೇ ಕಡಿಮೆಯಾಗುತ್ತಿದೆ.

ಗಾತ್ರವೇ ಕಡಿಮೆಯಾಗುತ್ತಿದೆ. ಹೀಗಾಗಿ ಖಾಸಗೀಕರಣವನ್ನು ವಿರೋಧಿಸದೇ, ಹೊಸ ಕಾರ್ಮಿಕ, ಕೈಗಾರಿಕಾ ನೀತಿಗಳನ್ನು ವಿರೋಧಿಸದೇ, ಮತ್ತು ಒಟ್ಟಾರೆಯಾಗಿ ಜಾಗತೀಕರಣ ನೀತಿಯನ್ನೇ ವಿರೋಧಿಸದೇ ಕೇವಲ ಮೀಸಲಾತಿಗಾಗಿ ಹೋರಾಡುವುದು ಮತ್ತು ಅದನ್ನೇ ವಿಮೋಚನಾಸ್ತ್ರವೆಂದುಕೊಳ್ಳುವುದು ಆತ್ಮವಂಚನೆಯೇ ಆಗಿಬಿಡುತ್ತದೆ.

ಫಲಾನುಭವಿಗಳಾಗುತ್ತಿರುವ ವರ್ಗಗಳು – ಬೀದಿಗೆಬೀಳುತ್ತಿರುವ ಸಮುದಾಯಗಳು

ರವೀಂದ್ರ ರೇಷ್ಮೆಯವರು ತಮ್ಮ ಭಾಷಣದಲ್ಲಿ ಹೇಳಿದಂತೆ ಮೀಸಲಾತಿ ಇಂದ ಇಡೀ ಸಮುದಾಯವೇ ಸಬಲೀಕರಣಗೊಳ್ಳುವುದಿಲ್ಲ. ಲಿಂಗಾಯತರು ಈ ರಾಜ್ಯದಲ್ಲಿ 65 ಲಕ್ಷ ಜನರಿದ್ದಾರೆ ಎಂದಿಟ್ಟುಕೊಂಡರೆ ಅವರಲ್ಲಿ ಕನಿಷ್ಠ 30–40 ಲಕ್ಷ ಜನ ಸಣ್ಣ ಹಾಗೂ ಅತಿ ಸಣ್ಣ ರೈತರಿದ್ದಾರೆ. ಒಕ್ಕಲಿಗರು 40 ಲಕ್ಷ ಜನರಿದ್ದಾರೆ ಎಂದಿಟ್ಟುಕೊಂಡರೆ ಅವರಲ್ಲಿ 20–25 ಲಕ್ಷ ಜನ ಸಣ್ಣ ಹಾಗೂ ಅತಿ ಸಣ್ಣ ರೈತರಿರುತ್ತಾರೆ. ಅದೇ ರೀತಿ ಕುರುಬ, ಈಡಿಗ ಇನ್ನಿತ್ಯಾದಿ ಗ್ರಾಮೀಣ ಸಮುದಾಯದಲ್ಲಿ ಅತಿ ಹೆಚ್ಚು ಸಂಖ್ಯೆಯ ಜನ ಕೂಲಿಕಾರರೋ ಅಥವಾ ಸಣ್ಣ ರೈತಾಪಿಯೋ ಆಗಿರುತ್ತಾರೆ. ಇನ್ನು ಬಡಗಿ, ಕಮ್ಮಾರ, ನೇಕಾರ ಇನ್ನಿತ್ಯಾದಿ ಗ್ರಾಮೀಣ ಕುಶಲ ವೃತ್ತಿಗಳ ಜಾತಿಗಳಿರುತ್ತಾರೆ. ಈ ಸಮುದಾಯಗಳ ಬಹುಸಂಖ್ಯಾತರಿಗೆ ಮೀಸಲಾತಿ ಸೌಲಭ್ಯದಿಂದ ಏನೂ ಈವರೆಗೆ ಉಪಯೋಗವಾಗಿಲ್ಲ.

ದ್ವಾರಕಾನಾಥರು ಹೇಳಿದಂತೆ ಪ್ರವರ್ಗ ಎ ದಲ್ಲಿರುವ 90ಕ್ಕೂ ಹೆಚ್ಚಿನ ಜಾತಿಗಳಲ್ಲಿ ಈವರೆಗೆ ಮೀಸಲಾತಿ ಸೌಲಭ್ಯದ ಪ್ರಯೋಜನ ಪಡೆದುಕೊಂಡಿರುವವರು ಕೇವಲ 25 ಜಾತಿಗಳು. ಪ್ರವರ್ಗ ಬಿ. ದಲ್ಲಿರುವ 80ಕ್ಕೂ ಹೆಚ್ಚು ಜಾತಿಗಳಲ್ಲಿ ಈವರೆಗೆ ಮೀಸಲಾತಿ ಸೌಲಭ್ಯ ಪಡೆದುಕೊಂಡಿರುವುದು ಕೇವಲ 20 ಜಾತಿಗಳು ಮಾತ್ರ. ಅಂದರೆ ಉಳಿದ ಜಾತಿಗಳಿಗೆ ಮೀಸಲಾತಿಯ ಬಗ್ಗೆ ಗೊತ್ತೇ ಇಲ್ಲ. ಅಥವಾ ಫಲಾನುಭವಿಗಳಾಗಲು ಬೇಕಾದ ಶೈಕ್ಷಣಿಕ ಅಥವಾ ಔದ್ಯೋಗಿಕ ಅರ್ಹತೆಯನ್ನು ಪಡೆದುಕೊಂಡಿಲ್ಲ.

ಆದರೂ ಜಾಗತೀಕರಣಕ್ಕೆ ಮುನ್ನ ಈ ಸಮುದಾಯಗಳು ಬೇಸಾಯ ಮತ್ತು ಅದನ್ನು ಆಧರಿಸಿದ ವೃತ್ತಿಗಳನ್ನು ನಂಬಿಕೊಂಡು ಹೇಗೋ ಬಡತನದಿಂದಲೇ ಜೀವನ ಸಾಗಿಸುತ್ತಿದ್ದವು. ತೀರಾ ಬಡತನವಾದರೆ ಕನಿಷ್ಠ ಪಕ್ಷ ರೇಷನ್ ಅಂಗಡಿಗಳಲ್ಲಿ ಅರೆಹೊಟ್ಟೆಯಾದರೂ ತುಂಬುವಷ್ಟು ಧಾನ್ಯಗಳು, ಅನಾರೋಗ್ಯವಾದರೆ ಏನಿಲ್ಲವೆಂದರೂ ಸರ್ಕಾರಿ ಆಸ್ಪತ್ರೆಯಲ್ಲಿ ಬಣ್ಣದ ನೀರು, ಬಿಳಿ ಮಾತ್ರೆಯಾದರೂ ದಕ್ಕುತ್ತಿತ್ತು. ಇಷ್ಟಾದರೂ ಸಾಧ್ಯವಾಗುತ್ತಿದ್ದದ್ದು ನಮ್ಮ ಪ್ರಭುತ್ವ ಜಾಗತೀಕರಣ ಜಾರಿಯಾಗುವ ಮುನ್ನ ಒಂದು "ವೆಲ್‌ಫೇರ್ ಸ್ಟೇಟ್"ನ ಚಹರೆಗಳಲ್ಲಿ ಕೆಲಸ ಮಾಡುತ್ತಿದ್ದಕ್ಕೆ.

ಇಂದು ಜಾಗತೀಕರಣದ ನೀತಿಗಳಿಂದ ಸರ್ಕಾರದ ಚಹರೆಯೇ ಬದಲಾಗಿದೆ. ಸಾಮಾಜಿಕ ನ್ಯಾಯದ ಮಾತಿರಲಿ, ತನ್ನ ಜನರಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿಯಿಂದಲೂ ಸರ್ಕಾರ ಹಿಂದಕ್ಕೆ ಸರಿಯುತ್ತಿದೆ. ಉಚಿತ ವಿದ್ಯುತ್, ರಿಯಾಯತಿ ದರದ ಗೊಬ್ಬರ, ನೀರು, ಬೆಂಬಲ ಬೆಲೆಗಳನ್ನು ಆಮಿಷ ತೋರಿ, ಅಮೆರಿಕದ ಅಣತಿಗನುಸಾರ ಈ ದೇಶದ ರೈತರನ್ನು ಪಾರಂಪರಿಕ ಕೃಷಿ ವ್ಯವಸ್ಥೆಯನ್ನು ಬಿಟ್ಟು ಹಸಿರು ಕ್ರಾಂತಿಯಂಥಾ ಮಾರುಕಟ್ಟೆ ಆಧಾರಿತ ಕೃಷಿ ವ್ಯವಸ್ಥೆಯನ್ನು ಅವಲಂಬಿಸುವಂತೆ ಮಾಡಿದ್ದೇ ಸರ್ಕಾರ. ಆದರೆ ಈಗ? ಜಾಗತೀಕರಣದ ನೀತಿಗಳು ಪ್ರಾರಂಭವಾದ ಮೇಲೆ ಅದೇ ಅಮೆರಿಕದ ಬದಲಾದ ಅಗತ್ಯಗಳಿಗಾಗಿ ಏಕಾಏಕಿ ಅವೆಲ್ಲ ರಿಯಾಯತಿ–ವಿನಾಯತಿಗಳನ್ನು ಹಿಂತೆಗೆದುಕೊಂಡಿರುವ ಸರ್ಕಾರ ಮಾರುಕಟ್ಟೆಯ ಪ್ರಹಾರಕ್ಕೆ ರೈತರನ್ನು ದೂಡಿದೆ. ಕೈಯಲ್ಲಿದ್ದ ಗುರಾಣಿಯೇ ಶತ್ರುವಿನ ಕತ್ತಿಯಾದಾಗ ಬಡಪಾಯಿ ರೈತ ಆತ್ಮಹತ್ಯೆ ಮಾಡಿಕೊಳ್ಳದೇ ಬೇರೆ ದಾರಿಯೇನಿತ್ತು?

ಮೀಸಲಾತಿ ಸೌಲಭ್ಯದಿಂದ ಲಾಭ ಪಡೆದ ಜನರಿಗಿಂತಲೂ ಅದರ ಸೌಲಭ್ಯವನ್ನೇ ಉಣ್ಣದೆ, ಇದೀಗ ಜಾಗತೀಕರಣದ ದಾಳಿಯಿಂದ ಮತ್ತು ಸರ್ಕಾರದ ದ್ರೋಹದಿಂದ ತತ್ತರಗೊಳ್ಳುತ್ತಿರುವವರ ಸಂಖ್ಯೆ ಅತಿ ದೊಡ್ಡದು. ಸಾಮಾಜಿಕ ನ್ಯಾಯವೆಂದರೆ ಸಮುದಾಯದ ಈ ಬೃಹತ್ ಸಂಖ್ಯೆಯ ಜನರನ್ನು ಉಳಿಸುವುದು ಕೂಡಾ ಆಗಬೇಕಲ್ಲವೇ? ಆದ್ದರಿಂದ ಹಿಂದುಳಿದ ಸಮುದಾಯದ ಐಡೆಂಟಿಟಿಯ ಜೊತೆಗೆ ರೈತ–ಕಾರ್ಮಿಕರೆನ್ನುವ ಐಡೆಂಟಿಟಿಯ ಆಧಾರದಲ್ಲೂ ಹೋರಾಡುವ ಅಗತ್ಯವನ್ನಷ್ಟೇ ಇದು ಎತ್ತಿತೋರಿಸುತ್ತದೆ.

1995–2009ರ ನಡುವಿನಲ್ಲಿ ಈ ದೇಶದಲ್ಲಿ 2,15,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಲಿಸ್ಟಿನಲ್ಲಿ ಕರ್ನಾಟಕ ಮೊದಲ ಐದರಲ್ಲೇ ಸ್ಥಾನ ಗಿಟ್ಟಿಸಿದೆ! ಆತ್ಮಹತ್ಯೆ ಮಾಡಿಕೊಂಡಿರುವ ಕರ್ನಾಟಕದ 30,000ಕ್ಕೂ ಹೆಚ್ಚು ರೈತರು ಲಿಂಗಾಯತರೂ ಆಗಿದ್ದಾರೆ. ಒಕ್ಕಲಿಗರೂ ಆಗಿದ್ದಾರೆ. ಈಡಿಗರೂ ಆಗಿದ್ದಾರೆ. ಕುರುಬರೂ ಆಗಿದ್ದಾರೆ. ಎಲ್ಲರೂ ಹಿಂದುಳಿದ ಸಮುದಾಯದವರೇ.

ಈ ಸಮುದಾಯಗಳಲ್ಲಿ ಮೀಸಲಾತಿ ಸೌಲಭ್ಯದಿಂದ ಲಾಭ ಪಡೆದ ಜನರಿಗಿಂತಲೂ ಅದರ ಸೌಲಭ್ಯವನ್ನೇ ಉಣ್ಣದೆ, ಇದೀಗ ಜಾಗತೀಕರಣದ ದಾಳಿಯಿಂದ ಮತ್ತು ಸರ್ಕಾರದ ದ್ರೋಹದಿಂದ ತತ್ತರಗೊಳ್ಳುತ್ತಿರುವವರ ಸಂಖ್ಯೆ ಅತಿ ದೊಡ್ಡದು. ಸಾಮಾಜಿಕ ನ್ಯಾಯವೆಂದರೆ ಸಮುದಾಯದ ಈ ಬೃಹತ್ ಸಂಖ್ಯೆಯ ಜನರನ್ನು ಉಳಿಸುವುದು ಕೂಡಾ ಆಗಬೇಕಲ್ಲವೇ? ಆದ್ದರಿಂದ ಹಿಂದುಳಿದ ಸಮುದಾಯದ ಐಡೆಂಟಿಟಿಯ ಜೊತೆಗೆ ರೈತ–ಕಾರ್ಮಿಕರೆನ್ನುವ ಐಡೆಂಟಿಟಿಯ ಆಧಾರದಲ್ಲೂ ಹೋರಾಡುವ ಅಗತ್ಯವನ್ನಷ್ಟೇ ಇದು ಎತ್ತಿತೋರಿಸುತ್ತದೆ. ಜಾಗತೀಕರಣದ ನೀತಿಗಳೇ ಇಲ್ಲೂ ಬಹುಸಂಖ್ಯಾತ ಹಿಂದುಳಿದ ಸಮುದಾಯವನ್ನು ಬೀದಿಪಾಲು ಮಾಡುತ್ತಿದೆ. ಹೀಗಾಗಿ ಸಾಮಾಜಿಕ ನ್ಯಾಯದ ಹೋರಾಟ ಇಡೀ ಸಮುದಾಯದ ಆಸಕ್ತಿಯನ್ನು ಒಳಗೊಳ್ಳಬೇಕಾದಲ್ಲಿ ಮೀಸಲಾತಿಯ ಆಗ್ರಹವನ್ನು ಒಳಗೊಳ್ಳುತ್ತಲೇ ಅದನ್ನೂ ಮೀರಿ ಇನ್ನೂ ಹೆಚ್ಚಿನ ವಿಸ್ತಾರವನ್ನು ಪಡೆಯುವ ಅಗತ್ಯವಿದೆ.

ಅದೇರೀತಿ ಕುಲಕಸುಬುಗಳನ್ನು ಆಧರಿಸಿದ್ದ ಹಿಂದುಳಿದ ಜಾತಿಗಳ ಅಂದರೆ ಉಪ್ಪಾರ, ನೇಕಾರ, ಕಂಬಾರ, ಕುಂಬಾರ ಇನ್ನಿತ್ಯಾದಿ ಜಾತಿಗಳ ವೃತ್ತಿಗಳೇ ಜಾಗತೀಕರಣದ ಆಕ್ರಮಣದಲ್ಲಿ ಕಣ್ಮರೆಯಾಗುತ್ತಿವೆ. ಆ ಸಮುದಾಯದ ಜನ ಪರ್ಯಾಯ ಜೀವನಾಧಾರವಿಲ್ಲದೆ ಬೀದಿಪಾಲಾಗುತ್ತಿದ್ದಾರೆ. ಮೀಸಲಾತಿಯ ಸೌಲಭ್ಯ ಪಡೆದುಕೊಂಡು ಆಧುನಿಕ ಆರ್ಥಿಕತೆಯಲ್ಲಿ ಭಾಗೀದಾರರಾಗುವ ಅವಕಾಶವನ್ನು ಪ್ರಸ್ತುತ ವಾಣಿಜ್ಯೀಕರಣಗೊಂಡ ಶಿಕ್ಷಣ ವ್ಯವಸ್ಥೆ ನಿರಾಕರಿಸುವುದರಿಂದ ಈ ಸಮುದಾಯಗಳ ಜನ ಅಗ್ಗದ ಬೆಲೆಯ ಅಸಂಘಟಿತ ಕೂಲಿ ಕಾರ್ಮಿಕರಾಗಿ ಪಟ್ಟಣ ಸೇರುತ್ತಿದ್ದಾರೆ. ಹೀಗಾಗಿ ಇಂದಿನ ಸಂದರ್ಭದಲ್ಲಿ ಕೇವಲ ಮೀಸಲಾತಿಗಾಗಿನ ಹೋರಾಟದಿಂದ ಮಾತ್ರ ಈ ಎಲ್ಲಾ ಸಮುದಾಯಗಳಿಗೆ ನ್ಯಾಯವನ್ನು ಒದಗಿಸಲು ಸಾಧ್ಯವಿಲ್ಲ.

ಇಂದು ವೆಚ್ಚ ಕಡಿತ ಕಾರ್ಯಕ್ರಮದ ಭಾಗವಾಗಿ ಪಡಿತರ ವ್ಯವಸ್ಥೆಯ ಮೇಲೆ ಮತ್ತು ಆರೋಗ್ಯ ವ್ಯವಸ್ಥೆಯ ಮೇಲೆ ಪ್ರಧಾನ ಪ್ರಹಾರವಾಗಿದೆ. ಸಕ್ಸೇನಾ ವರದಿಯ ಪ್ರಕಾರ ಈ ದೇಶದ ಶೇ.50ರಷ್ಟು ಜನ ಬಡತನ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಅರ್ಜುನ್‌ಗುಪ್ತಾ ವರದಿಯ ಪ್ರಕಾರ ಶೇ.77ರಷ್ಟು ಗ್ರಾಮೀಣ ಜನತೆಯ ದೈನಂದಿನ ಆದಾಯ ದಿನಕ್ಕೆ 20 ರೂಪಾಯಿ. ಈ ವಾಸ್ತವ ಹೆಚ್ಚೆಚ್ಚು ಜನರಿಗೆ ಕಡಿಮೆ ದರದಲಿ ಆಹಾರ ಧಾನ್ಯವನ್ನು ಒದಗಿಸುವ ನೀತಿಯನ್ನು ರೂಪಿಸುವಂತೆ ಸರ್ಕಾರಕ್ಕೆ ಕಡ್ಡಾಯ ಮಾಡಬೇಕಿತ್ತು.

ಆದರೆ ಅದರ ಬದಲಿಗೆ ಸರ್ಕಾರ Fiscal Responsibility Act ಅನ್ನು ಜಾರಿ ಮಾಡಿದ ಮೇಲೆ ವೆಚ್ಚ ಕಡಿತ ಯೋಜನೆಯ ಭಾಗವಾಗಿ ಪಡಿತರ ಫಲಾನುಭವಿಗಳ ಸಂಖ್ಯೆಯನ್ನು ಕಡಿತ ಗೊಳಿಸುತ್ತಿದೆ. ಬಡವರಲ್ಲಿ ಬಡವ, ಕಡು ಬಡವ ಎಂಬ ಕೃತಕ ವಿಬೇಧವನ್ನು ಸೃಷ್ಟಿಸಿ ನಿಜಕ್ಕೂ ಬಡವರಾದ ಕೋಟ್ಯಾಂತರ ಜನರನ್ನು ಈ ಯೋಜನೆಯಿಂದ ಹೊರಗಟ್ಟಿದೆ. ಹಾಗೆಯೇ ಆರೋಗ್ಯ ಸೇವೆಯ ಖಾಸಗೀಕರಣದ ಭಾಗವಾಗಿ ಆರೋಗ್ಯ ಸೇವೆಯನ್ನು ಎಲ್ಲಾ ಸಮುದಾಯಗಳ ಬಡವರಿಗೆ ಆರೋಗ್ಯ ಸೇವೆಯನ್ನು ಗಗನ ಕುಸುಮ ಮಾಡಿಟ್ಟಿದೆ.

ಬಲಿಯಾನಾಧಿಪತಿಗಳು ಯಾರು? ಭಿಕ್ಷಾಧಿಪತಿಗಳು ಯಾರು?

ಈ ಎಲ್ಲಾ ನೀತಿಗಳ ಪರಿಣಾಮವೇನು? ಇಂದು ಈಗಾಗಲೇ ಹೇಳಿದಂತೆ 2 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶೇ. 50ಕ್ಕೂ ಹೆಚ್ಚು ಜನತೆ ಬಡತನ ರೇಖೆಗಿಂತ ಕೆಳಗಿಳಿದಿದ್ದಾರೆ. ಪ್ರಪಂಚದ ಬಾಲ ಕಾರ್ಮಿಕರಲ್ಲಿ ಅರ್ಧದಷ್ಟು ಜನ ಭಾರತೀಯರಾಗಿದ್ದಾರೆ. ಅಪೌಷ್ಟಿಕತೆಯಿಂದ ನರಳುತ್ತಿರುವ ಪ್ರಪಂಚದ 100 ಬಾಲಕ–ಬಾಲಕಿಯರಲ್ಲಿ 35 ಜನ ಭಾರತೀಯರು. ಶಿಶು ಮರಣಗಳಲ್ಲಿ 100ರಲ್ಲಿ 30 ಭಾರತದ ಶಿಶುಗಳೇ. ಮಗು ಹುಟ್ಟಿದ ಮೂರು ತಿಂಗಳಲ್ಲಿ ಸಾಯುತ್ತಿರುವ 100 ಬಾಣಂತಿಯರಲ್ಲಿ 35 ಜನ ಭಾರತ ಮಾತೆಯರೇ. ಫಿಲಿಫೈನ್ಸ್ ಮತ್ತು ಥೈಲೆಂಡ್ ಬಿಟ್ಟರೆ ಮೈಮಾರಿಕೊಂಡು ಬದುಕ ಬೇಕಾದ ಅನಿವಾರ್ಯತೆಗೆ ದೂಡಲ್ಪಟ್ಟ ಮಹಿಳೆಯರಲ್ಲಿ ಅತಿ ಹೆಚ್ಚು ಜನ ಭಾರತ ಮಾತೆಯರೇ. ಇವರಲ್ಲಿ ಅತಿ ಹೆಚ್ಚು ಜನ ಶೇ.90ಕ್ಕಿಂತ ಜಾಸ್ತಿ ದಲಿತ ಮತ್ತು ಹಿಂದುಳಿದ ವರ್ಗದ ಸಮುದಾಯಗಳ ಜನರೇ ಎಂದರೆ ಅತಿಶಯೋಕ್ತಿ ಏನಲ್ಲ.

ಆದರೆ ಇದೇ ಅವಧಿಯಲ್ಲಿ ಭಾರತೀಯರ ಮತ್ತೊಂದು ಸಣ್ಣ ವರ್ಗ ವೇಗವಾಗಿ ಬೆಳೆದಿದೆ. ಉದಾ

ಹರಣೆಗೆ 1991ಕ್ಕೆ ಮುನ್ನ ನಮ್ಮಲ್ಲಿ ಬಿಲಿಯನಾಧೀಶ್ವರರೂ ಇರಲೇ ಇಲ್ಲ. ಈಗ ನಮ್ಮಲ್ಲಿ 41 ಬಿಲಿಯನಾಧೀಶ್ವರಿದ್ದಾರೆ. ಅಂದರೆ 5000 ಕೋಟಿಗೂ ಹೆಚ್ಚು ಆಸ್ತಿ–ಪಾಸ್ತಿ ಹೊಂದಿರುವವರು. ಅದರಲ್ಲೂ ಅನಿಲ್ ಮತ್ತು ಮುಕೇಶ್ ಅಂಬಾನಿಗಳ ಒಟ್ಟು ಆಸ್ತಿ–ಪಾಸ್ತಿ 2,50,000ಕೋಟಿ. 6ಕೋಟಿ ಜನರಿರುವ ಕರ್ನಾಟಕದ ವಾರ್ಷಿಕ ಬಜೆಟ್ 60,000 ಕೋಟಿ ಎಂದಿಟ್ಟುಕೊಂಡರೆ ಈ ಅಂಬಾನಿಗಳಲ್ಲಿ ಕೇಂದ್ರೀಕರಣಗೊಂಡಿರುವ ಸಂಪತ್ತು ಎಷ್ಟು ಎಂಬ ಅಂದಾಜು ಸಿಗುತ್ತದೆ.

ಈ ದೇಶದ 40 ಉದ್ದಿಮೆಪತಿಗಳ ಒಟ್ಟು ಆಸ್ತಿಪಾಸ್ತಿ 17 ಲಕ್ಷ ಕೋಟಿ ಅಂದರೆ ಈ ದೇಶದ ಒಟ್ಟಾರೆ ವಾರ್ಷಿಕ ಉತ್ಪನ್ನದ ಹೆಚ್ಚೂ ಕಡಿಮೆ ಅರ್ಧದಷ್ಟು ಸಂಪತ್ತು 40 ಜನರಲ್ಲಿ ಸಂಗ್ರಹವಾಗಿದೆ. ಮತ್ತು ಈ ಪಟ್ಟಿಯಲ್ಲಿ ಒಬ್ಬ ದಲಿತನಾಗಲೀ, ಹಿಂದುಳಿದ ವರ್ಗದವರಾಗಲೀ (ಪ್ರೇಂಜಿ ಯಂಥ ಮುಸ್ಲಿಮನನ್ನು ಬಿಟ್ಟರೆ) ಇಲ್ಲವೆಂಬುದನ್ನು ವಿಶೇಷವಾಗಿ ಹೇಳಬೇಕಿಲ್ಲ. ಆದರೆ ಈ ದೇಶದ 10 ಕೋಟಿಗೂ ಹೆಚ್ಚು ಮಧ್ಯಮ ವರ್ಗದ ಜನತೆ ಸಹ ಜಾಗತೀಕರಣದ ಫಲಾನುಭವಿಗಳಾಗಿದ್ದು ಅದರಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳ ಮೇಲ್‌ಸ್ತರದವರೂ ಸೇರಿಕೊಂಡಿದ್ದಾರೆ ಎಂಬುದನ್ನು ಮರೆಯುವಂತಿಲ್ಲ. ಮತ್ತು ಅವರೆಲ್ಲ ಮೀಸಲಾತಿಯೆಂಬ ಸಾಮಾಜಿಕ ನ್ಯಾಯದ ನೀತಿಯ ಫಲಾನುಭವಿಗಳೇ ಆಗಿದ್ದು ಈಗ ಅದೇ ವರ್ಗವೇ ಜಾಗತೀಕರಣದ ಪ್ರಧಾನ ವಕ್ತಾರರೂ ಆಗಿದ್ದಾರೆ.

ಆದರೆ ಅದೇ ಸಮುದಾಯಗಳ ಮೀಸಲಾತಿಯ ಯಾವ ಸೌಲಭ್ಯವನ್ನೂ ಪಡೆಯದ ಬಹುಸಂಖ್ಯಾತ ಜನರಾದ ಗ್ರಾಮೀಣ ರೈತರ ದೈನಂದಿನ ಆದಾಯ ದಿನಕ್ಕೆ ಇಪ್ಪತ್ತು ರೂಪಾಯಿ. ಅಸಾಧಾರಣವಾದ ಸಂಪತ್ತು ಒಂದು ಕಡೆ. ಅಸಹನೀಯ ದಾರಿದ್ರ್ಯ ಒಂದು ಕಡೆ. ಈ ದೇಶ ಎಷ್ಟು ದಿನ ಹೀಗೆ ವೈರುಧ್ಯದಲ್ಲಿ ನಡೆದೀತು?

ಈ ಹಿಂದೆ ಭೂಮಿ ಹಂಚಿಕೆ ಪ್ರಶ್ನೆ ಬಂದಾಗ ಕಮ್ಯುನಿಸ್ಟರು ಮೊದಲು ಟಾಟಾ–ಬಿರ್ಲಾಗಳ ಆಸ್ತಿ ಹಂಚಿಕೆಯಾಗಲೀ ಆಮೇಲೆ ಭೂಮಿ ಇತ್ಯಾದಿ ಪ್ರಶ್ನೆಯೆಲ್ಲಾ ತಾನಾಗಿಯೇ ಬದಲಾಗುತ್ತದೆಂಬ ಹುಂಬವಾದವನ್ನು ಮುಂದಿಟ್ಟಿದ್ದನ್ನು ವಿಮರ್ಶಿಸುತ್ತಾ ಶಾಂತವೇರಿ ಗೋಪಾಲ ಗೌಡರು ಈ ಕಮ್ಯುನಿಸ್ಟರು ಮೊದಲು ಆಕಾಶ ಹಂಚಿಕೆ ಯಾಗಲೀ ಆಮೇಲೆ ಭೂಮಿ ಹಂಚಿಕೆಯ ಪ್ರಶ್ನೆಯನ್ನು ಕೈಗೆತ್ತಿಕೊಳ್ಳೋಣ ಎನ್ನುತ್ತಾರೆ ಎಂದು ವಿಡಂಬನೆ ಮಾಡಿ ದ್ದನ್ನು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಡಾ. ಕೃಷ್ಣರವರು ನೆನಪಿಸಿಕೊಂಡರು.

ಆದರೆ ಇಂದು ಈ ದೇಶದ ಸಂಪತ್ತಿನಲ್ಲಿ ಶೇ.56ಕ್ಕಿಂತ ಹೆಚ್ಚು ಸೃಷ್ಟಿಯಾಗುತ್ತಿರುವುದು ಆಕಾಶದಲ್ಲೇ! ಅರ್ಥಾತ್ ಮೂರ್ತ ರೂಪವಿಲ್ಲದ ಸೇವಾ ಕ್ಷೇತ್ರದಲ್ಲಿ. ಭೂಮಿ ಮೂಲದ ಆದಾಯ ಶೇ.18 ಮಾತ್ರ. ಭೂಮಿ ಹಂಚಿಕೆಯ ಪ್ರಶ್ನೆ ಈಗಲೂ ಇದೆ. ಅದು ಜೀವನೋಪಾಯದ್ದು. ಆದರೆ ಅಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗೆ ಉತ್ತರ ಸಿಗಬೇಕೆಂದರೆ ಭೂಮ್ಯಾಕಾಶಗಳೆರಡನ್ನೂ ಏಕಕಾಲದಲ್ಲಿ ಸಮಾನವಾಗಿ ಹಂಚಿಕೊಳ್ಳಬೇಕು. ಅದಾಗದಿದ್ದರೆ ಭೂಮಿ ಆಧಾರಿತ ಜೀವನವೂ ದುಸ್ತರವಾಗುವುದನ್ನು ರೈತರ ಆತ್ಮಹತ್ಯೆಗಳೂ ಮತ್ತು ಹಳ್ಳಿಗಳಿಂದ ನಗರಕ್ಕೆ ಹೆಚ್ಚುತ್ತಿರುವ ವಲಸೆಗಳೂ ಸಾಬೀತು ಪಡಿಸುತ್ತಿವೆ.

ಈ ವೈರುಧ್ಯ ಸಂಭವಿಸಿದ್ದು ಅಕಸ್ಮಿಕವೇನಲ್ಲ. ಸರ್ಕಾರ ಜಾಗತೀಕರಣದ ನೀತಿಗಳನ್ನು ಅಪ್ಪಿಕೊಂಡಿದ್ದರಿಂದಲೇ ಈ ಬಗೆಯ ವೈರುಧ್ಯಗಳು ಏರ್ಪಟ್ಟಿವೆ. ಉದಾಹರಣೆಗೆ ಒಂದೆಡೆ ಸರ್ಕಾರ ಬಡವರೆಲ್ಲರಿಗೂ ಪಡಿತರ ನೀಡಲು ತಮ್ಮಲ್ಲಿ ಸಂಪನ್ಮೂಲಗಳಿಲ್ಲವೆಂದು ಹೇಳುತ್ತವೆ. ಆದರೆ ಜೀನ್‌ಡ್ರೇಜ್ ಎಂಬ ಜನಪರ ಅರ್ಥಶಾಸ್ತ್ರಜ್ಞ ಮಾಡಿರುವ ಅಂದಾಜಿನ ಪ್ರಕಾರ ಕಳೆದ ಬಜೆಟ್ಟಿನಲ್ಲಿ ಸರ್ಕಾರವು ಕೇವಲ ಮೂರು ಬಾಬತ್ತಿನಲ್ಲಿ ಈ ದೇಶದ 40 ಉದ್ದಿಮೆಪತಿಗಳಿಗೆ ಒದಗಿಸಿದ ರಿಯಾಯತಿಯು 5 ಲಕ್ಷ ಕೋಟಿ ರೂಪಾಯಿಗಳು. ಈ ದೇಶದ 80 ಕೋಟಿ ಬಡವರಿಗೆ ತಿಂಗಳಿಗೆ 30ಕೆಜಿ ಆಹಾರ ಧಾನ್ಯವನ್ನು ಒಂದು ರೂಪಾಯಿ ಲೆಕ್ಕದಲ್ಲಿ ಪೂರೈಸಲು ಹೆಚ್ಚುವರಿಯಾಗಿ 50,000 ಕೋಟಿ ರೂಪಾಯಿಗಳು ಸಾಕು. ಹೀಗೆ ಸರ್ಕಾರದ ಜಾಗತೀಕರಣದ ನೀತಿಯಿಂದಾಗಿಯೇ ಏಕಕಾಲದಲ್ಲಿ ಹಿಂದುಳಿದ ಸಮುದಾಯಗಳು ಇನ್ನಷ್ಟು ನಿರ್ಗತಿಕರಾಗುತ್ತಿದ್ದಾರೆ. ಮೇಲ್‌ಜಾತಿಯ ಮೇಲ್‌ವರ್ಗದ ಜನ ಹೆಚ್ಚೆಚ್ಚು ಧನಿಕರಾಗುತ್ತಿದ್ದಾರೆ.

ಹೀಗೆ ಇಂದು ಜಾಗತೀಕರಣದ ನೀತಿಗಳು ದಲಿತ ಮತ್ತು ಹಿಂದುಳಿದ ವರ್ಗಗಳಮೇಲೆ ಮತ್ತು ಸಾಮಾಜಿಕ ನ್ಯಾಯದ ಮೇಲೆ ಸಮರವನ್ನೇ ಸಾರಿವೆ. ಈ ಯುದ್ಧದವನ್ನು ಸಮಗ್ರವಾಗಿ ಎದುರಿಸದೇ ಕೇವಲ ಮೀಸಲಾತಿಗೆ ಮತ್ತು ಅನನ್ಯತೆಗಳ ಗುರುತನ್ನು ಪಡೆಯುವುದಕ್ಕೆ ಮಾತ್ರ ನಮ್ಮ ಹೋರಾಟವನ್ನು ಸೀಮಿತಗೊಳಿಸಿಕೊಂಡರೆ ಯುದ್ಧ ಪ್ರಾರಂಭವಾಗುವ ಮುನ್ನವೇ ಸೋಲನ್ನು ಒಪ್ಪಿಕೊಂಡಂತಾಗುತ್ತದೆ.

ಹಿಂದೂತ್ವ– ಬ್ರಾಹ್ಮಣವಾದದ ಹೊಸ ಅವತಾರ

ಒಂದೆಡೆ ಜಾಗತೀಕರಣದ ನೀತಿಗಳು ಜಾತಿ ವ್ಯವಸ್ಥೆಯನ್ನು ಉಳಿಸಿಕೊಂಡು ಹೋಗಲು ಬೇಕಾದ ಅಸಮಾನ ಭೌತಿಕ ಪರಿಸ್ಥಿತಿಯನ್ನು ಉಳಿಸಿ ಬೆಳೆಸುತ್ತಿದ್ದರೆ ಮತ್ತೊಂದೆಡೆ ಜಾಗತೀಕರಣದ ಜೊತೆಜೊತೆಗೆ ಬೆಳೆಯುತ್ತಿರುವ ಹಿಂದೂತ್ವ ಸಿದ್ಧಾಂತ ಜಾತಿ ವ್ಯವಸ್ಥೆಯನ್ನು ಉಳಿಸಿ ಬೆಳೆಸಲು ಬೇಕಾದ ಬ್ರಾಹ್ಮಣೀಯ ಬೌದ್ಧಿಕ ಮನಸ್ಥಿತಿಯನ್ನು ಹುಟ್ಟುಹಾಕುತ್ತಿದೆ. ಹೀಗಾಗಿ ಹಿಂದೂತ್ವ ಇಂದು ಮೀಸಲಾತಿಯ ಮಾತ್ರವಲ್ಲ ಸಾಮಾಜಿಕ ನ್ಯಾಯದ ಪರಿಕಲ್ಪನೆಗೇ ಅತ್ಯಂತ ದೊಡ್ಡ ಶತ್ರುವಾಗಿದೆ. ಆದರೆ ಮೀಸಲಾತಿಯ ಫಲಾನುಭವಿಗಳಲ್ಲಿ ಅತಿ ಹೆಚ್ಚು ಜನ ಈ ಶತ್ರುವಿನ ಮಿತ್ರರೇ ಆಗಿಬಿಟ್ಟಿದ್ದಾರೆ.

ಹಿಂದೂತ್ವದ ಸಾಮಾಜಿಕ ಸಿದ್ಧಾಂತ ಬ್ರಾಹ್ಮಣ್ಯ. ಅದು ಹಿಂದುಗಳೆಲ್ಲಾ ಒಂದು ಎನ್ನುವ ಹೆಸರಿನಲ್ಲಿ ಎಚ್ಚೆತ್ತ ದಲಿತ ಪ್ರಜ್ಞೆ ಮತ್ತು ಶೂದ್ರ ಪ್ರಜ್ಞೆಗಳನ್ನು ಮತ್ತೆ ಬ್ರಾಹ್ಮಣ್ಯದ ಅಡಿಯಲ್ಲಿ ತಂದುಕೊಳ್ಳುವ ರಾಜಕೀಯ ಕಾರ್ಯಕ್ರಮವೂ ಆಗಿದೆ. ದಲಿತ ಮತ್ತು ಶೂದ್ರ ಸಮುದಾಯಗಳು 70–80ರ ದಶಕಗಳಲ್ಲಿ ನಡೆಸಿದ ಹೋರಾಟಗಳಲ್ಲಿ ಭೌತಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಜೊತೆಗೆ ಬ್ರಾಹ್ಮಣ್ಯ ವಿರೋಧಿ ಸಾಮಾಜಿಕ ನ್ಯಾಯದ ಪ್ರಜ್ಞೆಯನ್ನು ಪಡೆದುಕೊಂಡಿದ್ದವು. ಆದರೆ 70–80ರ ದಶಕದಲ್ಲಿ ಜಾರಿಗೆ ಬಂದ ಭೂ ಸುಧಾರಣೆ, ಹಸಿರು ಕ್ರಾಂತಿ ನೀತಿಗಳು ಈ ಸಮುದಾಯಗಳಲ್ಲಿ ಒಂದು ಫಲಾನುಭವಿ ಸ್ತರವನ್ನು ಸೃಷ್ಟಿಸಿದವು. ಈ ಸ್ತರ ರಾಜಕೀಯ ಅವಕಾಶಗಳನ್ನು ಪಡೆದುಕೊಂಡು ಆಯಾ ಸಮುದಾಯಗಳ ವಕ್ತಾರರಾಗಿವೆ. ಮತ್ತು ಒಂದು ವರ್ಗವಾಗಿ ಪಟ್ಟಭದ್ರ ಹಿತಾಸಕ್ತಿಯಾಗಿ ಆಯಾ ಸಮುದಾಯಗಳಲ್ಲಿ ಪ್ರತಿಷ್ಠಾಪಿತಗೊಂಡಿವೆ.

ಇಡೀ ಸಮುದಾಯ ಬೀದಿಗೆ ಬಿದ್ದಿದ್ದರೂ ತಾನು ಮಾತ್ರ ಸಮುದಾಯದಿಂದ ಬೇರ್ಪಟ್ಟು ಮೇಲ್ಚಲನೆ ಪಡೆದುಕೊಳ್ಳಲು ಒಂದು (ಅ)ನೈತಿಕ ಸಮರ್ಥನೆ ಬೇಕಾಗುತ್ತದೆ. ಅದನ್ನು ಬ್ರಾಹ್ಮಣ್ಯ ಸಿದ್ಧಾಂತ ನೀಡಿತು. ಆದ್ದರಿಂದಲೇ ಒಬ್ಬ ಬುದ್ಧಿಜೀವಿ "Brhaminism is the ideology of propertied" ಎಂದು ಹೇಳುತ್ತಾರೆ. ಇದು ಜಾಗತೀಕರಣ ಹುಟ್ಟುಹಾಕುವ ಸಾಮಾಜಿಕ ಶ್ರೇಣೀಕರಣದ ಸಿದ್ಧಾಂತವಾದ "Social Darwinism" ಗೂ ಒಳ್ಳೆ ತಾಳೆಯಾಗುತ್ತದೆ. ಆದ್ದರಿಂದಲೇ ಇಂದು ಬಿಜೆಪಿ ಎಲ್ಲಾ ಸಮುದಾಯಗಳ ಈ ಮೇಲ್ಚಲನೆ ಉಳ್ಳ ಸ್ತರಗಳಲ್ಲಿ ಒಂದು ನೆಲೆಯನ್ನು ಪಡೆದುಕೊಳ್ಳುತ್ತಿದೆ. ಅವರೇ ಇಂದು ಹಲವರನ್ನು ತುಳಿದು ಕೆಲವರಿಗೆ ಲಾಭ ಮಾಡಿಕೊಡುವ ಜಾಗತೀಕರಣವನ್ನು ಮತ್ತು ಅದನ್ನು ಸೈದ್ಧಾಂತಿಕವಾಗಿ ಸಮರ್ಥಿಸಿ ಸಾಮಾಜಿಕವಾಗಿ ಜಾರಿಗೆ ತರುವ ಹಿಂದೂತ್ವ ಸಿದ್ಧಾಂತಕ್ಕೂ ಕಾಲಾಳುಗಳಾಗುತ್ತಿದ್ದಾರೆ. ಇದು ಸಾಮಾಜಿಕ ನ್ಯಾಯದ ಹೋರಾಟಗಾರರು ಎದುರಿಸಬೇಕಾದ ಎರಡನೇ ಅತಿ ದೊಡ್ಡ ಅಪಾಯವಾಗಿದೆ.

ಹೀಗೆ ಇಂದು ದಲಿತ ಮತ್ತು ಹಿಂದುಳಿದ ಸಮುದಾಯಗಳಲ್ಲಿ ಒಂದು ವರ್ಗಕ್ಕೆ ಅವಕಾಶಗಳನ್ನು ಒದಗಿಸುತ್ತಿದ್ದ ಮೀಸಲಾತಿಯೂ ಸಹ ಅಪಾಯದಲ್ಲಿದೆ. ಮತ್ತು ಅದಕ್ಕಿಂತ ಹೆಚ್ಚಾಗಿ ದಲಿತ ಮತ್ತು ಹಿಂದುಳಿದ ಸಮುದಾಯದ ಬಹುಸಂಖ್ಯಾತ ಜನತೆಯ ಬದುಕನ್ನೇ ಜಾಗತೀಕರಣ ಮತ್ತು ಹಿಂದೂತ್ವವಾದಿ ಶಕ್ತಿಗಳು ಭೌತಿಕವಾಗಿ ಮತ್ತು ಬೌದ್ಧಿಕವಾಗಿ ದಾಳಿ ಮಾಡುತ್ತಿವೆ. ಅದೇ ಶಕ್ತಿಗಳೇ ಇಂದು ಜಾತಿ ಜನಗಣತಿಯನ್ನು ಅರೆಮನಸ್ಸಿನಿಂದ ಒಪ್ಪಿಕೊಂಡು ಜಾರಿಗೆ ತರುತ್ತಿವೆ. ಏಕೆಂದರೆ ಮೀಸಲಾತಿಯೇ ಅಪ್ರಸ್ತುತವಾಗುತ್ತಿರುವ ಈ ಸಂದರ್ಭದಲ್ಲಿ ಜಾತಿ ಜನಗಣತಿ ಮತ್ತು ಅದರಿಂದ ಪರಿಣಾಮಕಾರಿಯಾಗಿ ಜಾರಿ ಮಾಡಬಹುದಾದ ಜಾತಿ ಮೀಸಲಾತಿಗಳು ಸಂಪತ್ತನ್ನಾಗಲೀ, ಅಧಿಕಾರವನ್ನಾಗಲೀ ಮರು ಹಂಚಿಕೆ ಮಾಡುವ

ಜಾಗತೀಕರಣದ ನೀತಿಗಳು ಜಾತಿ ವ್ಯವಸ್ಥೆಯನ್ನು ಉಳಿಸಿಕೊಂಡು ಹೋಗಲು ಬೇಕಾದ ಅಸಮಾನ ಭೌತಿಕ ಪರಿಸ್ಥಿತಿಯನ್ನು ಉಳಿಸಿ ಬೆಳೆಸುತ್ತಿದ್ದರೆ ಮತ್ತೊಂದೆಡೆ ಜಾಗತೀಕರಣದ ಜೊತೆ ಜೊತೆಗೆ ಬೆಳೆಯುತ್ತಿರುವ ಹಿಂದೂತ್ವ ಸಿದ್ಧಾಂತ ಜಾತಿ ವ್ಯವಸ್ಥೆಯನ್ನು ಉಳಿಸಿ ಬೆಳೆಸಲು ಬೇಕಾದ ಬ್ರಾಹ್ಮಣೀಯ ಬೌದ್ಧಿಕ ಮನಸ್ಥಿತಿಯನ್ನು ಹುಟ್ಟು ಹಾಕುತ್ತಿದೆ. ಹೀಗಾಗಿ ಹಿಂದೂತ್ವ ಇಂದು ಮೀಸಲಾತಿಯ ಮಾತ್ರವಲ್ಲ ಸಾಮಾಜಿಕ ನ್ಯಾಯದ ಪರಿಕಲ್ಪನೆಗೇ ಅತ್ಯಂತ ದೊಡ್ಡ ಶತ್ರುವಾಗಿದೆ. ಆದರೆ ಮೀಸಲಾತಿಯ ಫಲಾನುಭವಿಗಳಲ್ಲಿ ಅತಿ ಹೆಚ್ಚು ಜನ ಈ ಶತ್ರುವಿನ ಮಿತ್ರರೇ ಆಗಿಬಿಟ್ಟಿದ್ದಾರೆ.

ಶಕ್ತಿಯನ್ನೇ ಕಳೆದುಕೊಂಡಿದೆಯೆಂದು ಅವರು ಬಲ್ಲರು.

ಪರ್ಯಾಯ ರಾಜಕೀಯ್ಮ ಶಕ್ತಿ ಎಂದರೇನು? ಎಲ್ಲಿದೆ?

ಆದರೆ ಇಂದು ದಮನಿತ ಜಾತಿಗಳ ಸಬಲೀಕರಣಕ್ಕೆ ಹಾಗೂ ಆ ಮೂಲಕ ಜಾತಿ ಸಮಾನತೆಗೆ ಮತ್ತು ಅಂತಿಮವಾಗಿ ಜಾತಿ ವಿನಾಶಕ್ಕೆ ಭೌತಿಕವಾಗಿ ಮತ್ತು ಭೌದ್ಧಿಕವಾಗಿ ಅಡ್ಡಿಯಾಗಿ ನಿಂತಿರುವ ಜಾಗತೀಕರಣ (ಅರ್ಥಾತ್ ವಿದೇಶಿ ಮತ್ತು ಸ್ವದೇಶಿ ಬಂಡವಾಳಶಾಹಿ ಶಕ್ತಿಗಳನ್ನು) ಮತ್ತು ಹಿಂದೂತ್ವದ ಹೆಸರಲ್ಲಿ ಚಲಾವಣೆಯಲ್ಲಿರುವ ಬ್ರಾಹ್ಮಣ್ಯದ ಶಕ್ತಿಗಳನ್ನು ಸೋಲಿಸುವಂಥ ಪರ್ಯಾಯ ರಾಜಕೀಯ ಶಕ್ತಿ ಎಲ್ಲಿದೆ? ಅಂಬೇಡ್ಕರ್ ಹೇಳಿದಂತೆ ಬಂಡವಾಳವಾದ ಮತ್ತು ಬ್ರಾಹ್ಮಣವಾದ ಇವೆರಡು ಸಾಮಾಜಿಕ ನ್ಯಾಯಕ್ಕೆ ಪ್ರಮುಖ ಶತ್ರುಗಳು. ಆದರೆ ಸ್ವಾತಂತ್ರ್ಯಾ ನಂತರದಲ್ಲಿ ಎಲ್ಲಾ ಪಕ್ಷಗಳೂ ದಮನಿತರ ಈ ಎರಡೂ ಶತ್ರುಗಳನ್ನು ಗಟ್ಟಿಗೊಳಿಸಿವೆ. ಹೀಗಾಗಿ ಆಡಳಿತರೂಢ ಯಾವ ಪಕ್ಷಗಳಲ್ಲೂ ಪರ್ಯಾಯವನ್ನು ಹುಡುಕಲು ಸಾಧ್ಯವಿಲ್ಲ. ಎಲಕ್ಕಿಂತ ಹೆಚ್ಚಾಗಿ ಸಂವಿಧಾನ ಮತ್ತು ಶಾಸನಬದ್ಧವಾಗಿಯೇ ಸಾಮಾಜಿಕ ನ್ಯಾಯದ ಶತ್ರುವಾದ ಜಾಗತೀಕರಣದ ನೀತಿಗಳು ಜಾರಿಯಲ್ಲಿವೆ. ಹಿಂದೂತ್ವವಾದಿಗಳು ಅಧಿಕಾರ ಪಡೆಯುತ್ತಿದ್ದಾರೆ. ಸಾಮಾಜಿಕವಾಗಿ ಪ್ರಬಲರಾಗುತ್ತಿದ್ದಾರೆ. ಅಂದರೆ ನಮ್ಮ ಪ್ರಜಾತಂತ್ರಕ್ಕೆ ಈ ಜನರ ಶತ್ರುಗಳನ್ನು ನಿವಾರಿಸಿಕೊಳ್ಳುವ ಶಕ್ತಿ ಸಾಂಸ್ಥಿಕವಾಗಿಯೇ ಕುಸಿಯುತ್ತಿದೆ.

ಹೀಗಿರುವಾಗ ಮೀಸಲಾತಿಯನ್ನು ಒಳಗೊಳ್ಳುತ್ತಲೇ, ಅಸ್ಮಿತೆಗಳನ್ನು ಪಡೆದುಕೊಳ್ಳುತ್ತಲೇ ಅದರ ಮಿತಿಗಳ ಬಗ್ಗೆ, ಇಡೀ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಎದುರಾಗಿರುವ ಆಪತ್ತಿನ ಬಗ್ಗೆ ಗಮನವನ್ನು ವಿಸ್ತರಿಸಬೇಕಿದೆ. ಇರುವ ಶಾಸನಾತ್ಮಕ ಮತ್ತು ಸಾಂಸ್ಥಿಕ ಅವಕಾಶಗಳನ್ನು ಬಳಸಿಕೊಳ್ಳುತ್ತಲೇ ಜಾಗತೀಕರಣ ಮತ್ತು ಹಿಂದೂತ್ವದ ದಾಳಿಯಿಂದ ರಕ್ಷಿಸುವಂಥಾ ಸಾಮರ್ಥ್ಯ ಕಳೆದುಕೊಂಡಿರುವ ಪ್ರಸ್ತುತ ಸಾಂಸ್ಥಿಕ ರಚನೆಗಳಾಚೆಗೆ ಪರಿಹಾರದ ಹುಡುಕಾಟವನ್ನು ಮತ್ತು ಹೋರಾಟದ ವ್ಯಾಪ್ತಿಯನ್ನು ವಿಸ್ತರಿಸಬೇಕಿದೆ. ಹಾಗೆಯೇ ಇರುವ ಎಲ್ಲಾ ಪಕ್ಷಗಳು ಬಂಡವಾಳವಾದ ಮತ್ತು ಬ್ರಾಹ್ಮಣವಾದವನ್ನು ಮುಲಭೂತವಾಗಿ ಎದುರಿಸಲು ದುರ್ಬಲವಾಗಿರುವುದನ್ನು ಅರ್ಥಮಾಡಿಕೊಂಡು ಪಕ್ಷಗಳಾಚೆಗೆ ನೂತನ ಜನಪರ ಮತ್ತು ನೈಜ ಜನತಂತ್ರಕ್ಕಾಗಿನ ಹೋರಾಟಗಳ ಕಡೆಗೆ ಪರ್ಯಾಯದ ಹುಡುಕಾಟವನ್ನು ವಿಸ್ತರಿಸಬೇಕಿದೆ.

ಇದು ಸಂಕ್ರಮಣ ಕಾಲ. ಸರಿಯಾದ ಪ್ರಶ್ನೆಗಳನ್ನು ಹಾಕಿಕೊಂಡರೆ ಮಾತ್ರ ಸರಿಯಾದ ಉತ್ತರಗಳನ್ನು ಪಡೆಯುತ್ತೇವೆ. ಇಲ್ಲದಿದ್ದರೆ ತಪ್ಪನ್ನೇ ಸರಿಯೆಂದು ಭ್ರಮಿಸುತ್ತೇವೆ. ಹೀಗಾಗಿ ಈಗಲಾದರೂ ಈ ದೇಶದ ಸ್ವಾತಂತ್ರ್ಯದ ಬಗ್ಗೆ, ನಾವು ಪ್ರಜಾತಂತ್ರ ಎಂದು ಭಾವಿಸುತ್ತಿರುವ ವ್ಯವಸ್ಥೆಯ ಬಗ್ಗೆ, ಸಾಮಾಜಿಕ ನ್ಯಾಯ ಘೋಷಿತ ಮೌಲ್ಯವಾದರೂ ಅದರ ತದ್ವಿರುದ್ಧ ಶಕ್ತಿಗಳಾದ ಜಾಗತೀಕರಣ ಮತ್ತು ಹಿಂದೂತ್ವಗಳು ಶಾಸನಬದ್ಧವಾಗಿಯೇ ವಿಜ್ರುಂಭಿಸುವುದನ್ನು ತಡೆಯಲಾಗದ ನಮ ಪ್ರಜಾತಂತ್ರದ ಸಾಂಸ್ಥಿಕ ಮಿತಿಗಳ ಬಗ್ಗೆ, ಮೀಸಲಾತಿಯ ಮಿತಿ ಮತ್ತು ಶಕ್ತಿಗಳ ಬಗ್ಗೆ, ರಾಜಕೀಯ ಪಕ್ಷ ಹಾಗೂ ಚಳವಳಿಗಳ ಬಗ್ಗೆ ಮತ್ತು ಹುಟ್ಟಲೇಬೇಕಿರುವ ಪರ್ಯಾಯ ರಾಜಕಾರಣದ ಬಗ್ಗೆ – ಈಗಲಾದರೂ ಸರಿಯಾದ ಪ್ರಶ್ನೆಗಳನ್ನು ಕೇಳೋಣ...ಸರಿಯಾದ ಉತ್ತರ ಹುಡುಕೋಣ!

(ಮುಗಿಯಿತು)

ಉದ್ಯೋಗ ಖಾತರಿಯ ನಾಟಕ

(7ನೇ ಪುಟದಿಂದ)

ನಿರುದ್ಯೋಗ ಭತ್ಯೆಗಾಗಿ ಧರಣಿ ಕೂಡ್ರಲು ನಿರ್ಧರಿಸಿತು. ತಾಲೂಕಾ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಒಂದು ವಾರದೊಳಗೆ ಎಲ್ಲಾ ಕೂಲಿಕಾರ್ಮಿಕರಿಗೂ ನಿರುದ್ಯೋಗ ಭತ್ಯೆಯನ್ನು ಕೊಟ್ಟುಬಿಡುತ್ತೇವೆಂದು ಒಂದು ವಾರದ ಅವಧಿ ತೆಗೆದುಕೊಂಡಿದ್ದರು.

ಆದರೆ ತಾವು ಪಡೆದ ಒಂದು ವಾರದ ಅವಕಾಶವನ್ನು ಕೆಲಸ ಪಡೆಯದ ಕೂಲಿಕಾರರಿಗೆ ಭತ್ಯೆಕೊಟ್ಟು ಸಿಗದ ಕೂಲಿಯ ಬದಲಿಗೆ ಪರಿಹಾರ ಕೊಡಬೇಕಾಗಿದ್ದವರು ಬದಲಿಗೆ ಹಳ್ಳಿ ಹಳ್ಳಿಗೆ ತಿರುಗಿ ಜನರನ್ನು ಒಡೆಯುವ ಕೆಲಸದಲ್ಲಿ ಮಗ್ನರಾದರು. ಎಲ್ಲ ಹಳ್ಳಿಗಳಲ್ಲಿಯೂ, 'ನಿರುದ್ಯೋಗ ಭತ್ಯೆ ಕೊಟ್ಟರೆ ಆ ಪಂಚಾಯತಿಗದು ದೊಡ್ಡ ಕರಿನಾಮ. ಮುಂದೆ ಜಿಲ್ಲಾ ಪಂಚಾಯತಿಯಿಂದ ಯಾವುದೇ ಸೌಲಭ್ಯ ಆ ಪಂಚಾಯತಿಗೆ ಬರುವುದಿಲ್ಲ' ಎಂದು ಸುದ್ದಿ ಹಬ್ಬಿಸಿದರು. ನಂಬಿದ ಹಿರಿಯರು ಕೂಲಿಗಳನ್ನು ಕರೆದು ಬುದ್ದಿ ಹೇಳಿ ಸಹಿ ಪಡೆಯಲು ಮುಂದಾದರು. ಜಾಗೃತಿಯವರು ಹಳ್ಳಿ ಹಳ್ಳಿ ತಿರುಗಿ ಉದ್ಯೋಗ ಖಾತರಿ ಕಾನೂನಿನ ಮರು ಪಾಠ ಮಾಡಿ ಭತ್ತೆ ಕೊಡುವುದು ಪಂಚಾಯತಿಯ ಕಾರ್ಯದರ್ಶಿಯ ಹೊಣೆ ಹೊರತು ಪಂಚಾಯತಿಯ ಹೊಣೆಯಲ್ಲ ಎಂದು ತಿಳಿಸಿ ಹೇಳಬೇಕಾಯ್ತು.

ಆದರೆ ಹೀಗೆ ನಂಬಿದಂತೆ ಮಾಡುವುದು ಅವರ ಸೋಗು ಆಗಿತ್ತು. ಕಾನೂನು ಏನು ಹೇಳುತ್ತದೆ ಎನ್ನುವುದಷ್ಟೇ ಅಲ್ಲ, ಅದರಡಿಗೆ ನುಸುಳುವುದು ಹೇಗೆ ಎಂದು ಸೆಕ್ರೆಟರಿಗೂ ಮತ್ತು ಆತನೊಂದಿಗೆ ಕೈ ಜೋಡಿಸಿದವರಿಗೂ ಚೆನ್ನಾಗಿಯೇ ಗೊತ್ತು. 'ನೀವು ಸಹಿ ಮಾಡದಿದ್ದರೆ ನಿಮ್ಮ ಊರಿಗೆ ನೀರನ್ನೇ ಬಿಡುವುದಿಲ್ಲ' ಎಂದು ಕರಿಕಟ್ಟಿ ಗ್ರಾಮದ ಜನರಿಗೆ ಬೆದರಿಕೆ ಹಾಕಿ ಗಂಡಂದಿರ ಮೂಲಕ ಹೆಂಡಿರ ಸಹಿ ತೆಗೆದುಕೊಂಡರು. 'ನಿಮಗೆ ಮನೆ ಮಂಜೂರಾಗಿದೆ ಸಹಿ ಮಾಡಿ ಬನ್ನಿ' ಎಂದು ಮುಗಳಿಹಾಳದ ವಿಧವೆ ಹೆಣ್ಣುಮಕ್ಕಳನ್ನು ಒಲಿಸಿ ಸಹಿ ಮಾಡಿಸಿಕೊಂಡರು.

ಕಡೆಗೆ ಕರುವಿನ ಕೊಪ್ಪ ಎಂಬ ಗ್ರಾಮದಲ್ಲಂತೂ ನಿರುದ್ಯೋಗ ಭತ್ಯೆಗಾಗಿ ಅರ್ಜಿ ಕೊಟ್ಟಿದ್ದ ದಲಿತರನ್ನು ಒಂದಷ್ಟು ಜನರು ಕರೆಸಿ ಗ್ರಾಮದವರೊಂದಿಗೆ ಸಹಬಾಳ್ವೆ ಮಾಡುವ ಆಶಯ ಇದ್ದಲ್ಲಿ ಸಹಿ ಹಾಕಬೇಕೆಂದೂ ಇಲ್ಲವಾದರೆ ಅವರಿಗೆ ಬಹಿಷ್ಕಾರ ಹಾಕಬೇಕಾಗುತ್ತದೆಂದೂ ಬೆದರಿಕೆ ಹಾಕಿದಾಗ ಆ ಗ್ರಾಮದಲ್ಲಿ ಕಡಿಮೆ ಸಂಖ್ಯೆಯಲ್ಲಿ ಇರುವ ದಲಿತರಿಗೆ ಮಣಿಯದೇ ಬೇರೆ ಮಾರ್ಗವಿರಲಿಲ್ಲ.

ಇದು ನಡೆಯುತ್ತಿರುವ ಸಂಗತಿ. ಉದ್ಯೋಗ ಖಾತರಿ ಹೆಸರಿನಲ್ಲಿ ನಡೆಯುತ್ತಿರುವ ನಾಟಕ.

ಬಡಜನರ ಉದ್ಯೋಗಕ್ಕಾಗಿ ಇಟ್ಟಿರುವ ಹಣವನ್ನು ಉಚ್ಚ ವರ್ಗವನ್ನು ಪ್ರತಿನಿಧಿಸುವ ನಾಟಕ ತಂಡಕ್ಕೆ ಕೊಡಮಾಡಲಾಗಿದೆ. ಆ ತಂಡವು ನಿಜವಾಗಿ ಯಾರಿಗೆ ತರಬೇತಿಯ ಅವಶ್ಯಕತೆ ಇದೆಯೋ ಅವರಿಗೇ, ತರಬೇತಿಗಳನ್ನು ನೀಡುವಲ್ಲಿ ಈ ಹಣವನ್ನು ಬಳಕೆ ಮಾಡಿ ಹಣದ ನಿಜವಾದ ಪ್ರಯೋಜನ ಆಗುವಂತೆ ಮಾಡಲಿ. ಇಲ್ಲವೆಂದರೆ ಈ ರೀತಿಯಾಗಿ ಹಣವನ್ನು ಬಳಸುವುದು ಉದ್ಯೋಗ ಖಾತರಿಯಲ್ಲಿ ಜೆಸಿಬಿ ಬಳಸಿದಂತೆಯೇ ಸರಿ.

ಅರುಣಾಚಲದಲ್ಲಿ ಬುದ್ಧ

(23ನೇ ಪುಟದಿಂದ)

ಅವರು ಅವನನ್ನು ಎಲ್ಲಾ ಹಾವ ಭಾವಗಳೊಡನೆ, ಅವನು ಬರಲೊಪ್ಪದೆ ಇವರು ಬಿಡದೆ, ಎಳೆತರುತ್ತಾರೆ. ಅವನ ಲೆಕ್ಕ ಪರಿಶೀಲಿಸಿದ ರಾಜ ಅವನನ್ನು ನರಕಕ್ಕೆ ದೂಡುತ್ತಾನೆ. ಅದೇ ರೀತಿ ಮತ್ತೂಬ್ಬನನ್ನು ಕರೆತರಲಾಗುತ್ತದೆ. ಅವನ ಲೆಕ್ಕ ಪರಿಶೀಲಿಸಿ ಅವನು ಅನೇಕ ಸತ್ಕಾರ್ಯಗಳನ್ನು ಮಾಡಿರುವುದನ್ನು ಗಮನಿಸಿ ಅವನಿಗೆ ಒಳ್ಳೆಯ ಮರುಹುಟ್ಟನ್ನು ನೀಡುತ್ತಾನೆ. ಹೇಗೆ ಒಳ್ಳೆಯ ಜೀವನ ನಡೆಸಿದವರಿಗೆ ಒಳ್ಳೆಯ ಮರುಹುಟ್ಟು ಕೆಟ್ಟ ಜೀವನ ನಡೆಸಿದವರಿಗೆ ಹೀನ ಮರುಹುಟ್ಟು ದೊರೆಯುತ್ತದೆ ಎಂಬ ವಿವರಣೆ ಕೊನೆಯಲ್ಲಿ ದೊರೆಯುತ್ತದೆ. ಆದುದರಿಂದ ಎಲ್ಲರೂ ನೀತಿಯುತ ಬದುಕನ್ನು ನಡೆಸಬೇಕು ಎಂದು ಬೋಧಿಸಲಾಗುತ್ತದೆ. ಯಮರಾಜ ಮತ್ತು ಆತನ ಕತೆಯನ್ನು ಜ್ಞಾಪಿಸುವ ಈ ಪ್ರದರ್ಶನ ಬೌದ್ಧ ಧರ್ಮದ ಕರ್ಮ ಮತ್ತು ಮರುಹುಟ್ಟಿನ ಅತೀ ಸರಳೀಕೃತ ಚಿತ್ರ, ಬುದ್ಧ ಬೋಧಿಸಿದ ಕರ್ಮ ಮತ್ತು ಮರುಹುಟ್ಟು ಬಹಳ ಕ್ಲಿಷ್ಟ, ವೈಜ್ಞಾನಿಕ ತತ್ವ, ಆದರೆ ಅದನ್ನು ಸರಳೀಕರಿಸಿ ಸಾಮಾನ್ಯ ಜನರಿಗೆ ತಿಳುವಳಿಕೆ ನೀಡಿದ ರೀತಿ ಮಾತ್ರ ಬೌದ್ಧ ಧರ್ಮದ ತಿರುಳು ಆಶಯಗಳಾದ "ಒಳ್ಳೆಯವನಾಗಿರು, ಯಾವಾಗಲೂ ಒಳ್ಳೆ ಯದನ್ನು ಮಾಡು. ಮನಸ್ಸನ್ನು ಶುದ್ಧೀಕರಿಸು" ಎಂಬುದಕ್ಕೆ ಸಹಕಾರಿಯಾಗಿದೆ.

ಅರುಣಾಚಲ ಸಂಪೂರ್ಣವಾಗಿ ಗುಡ್ಡಗಾಡುಗಳಿಂದ ತುಂಬಿದ ಪ್ರದೇಶ. ಇಲ್ಲಿ ಜೀವನ ಕಷ್ಟಕರ. ಆದುದರಿಂದ ಜನಸಂಖ್ಯೆಯೂ ಕಡಿಮೆ. ಪೂರ್ವದ ಜಿಲ್ಲೆಗಳಲ್ಲಿ ಭತ್ತ ಹೆಚ್ಚು ಬೆಳೆಯುತ್ತಾರೆ. ಪಶ್ಚಿಮಕ್ಕೆ ಸೇಬು, ಕಿವಿ ಹಣ್ಣುಗಳ ತೋಟಗಳನ್ನು ಕಾಣಬಹುದು. ಕನ್ನಡಿಗರಿಗೆ ಸಂತೋಷ ಮತ್ತು ಆಶ್ಚರ್ಯದ ವಿಷಯವೆಂದರೆ ತವಾಂಗ್, ದಿರಾಂಗ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ನಮ್ಮ 'ರಾಗಿ' ಬೆಳೆಯುವುದು. ಅದು ಅವರ ಒಂದು ಮುಖ್ಯ ಆಹಾರ. ಅವರು ರಾಗಿ ಹೊಕ್ಕಣೆ ಮಾಡುವುದನ್ನು ನೋಡಲೂ ಸಾಧ್ಯವಾಯಿತು.

ಅರುಣಾಚಲ ಮರ, ಗಿಡ, ಬೆಟ್ಟ, ನದಿ, ಆಕರ್ಷಕ ಹವಾಮಾನ ಹೊಂದಿರುವ ಒಂದು ಸುಂದರ ತಾಣ. ಜನರು ಬಡವರಾದರೂ ಸ್ನೇಹಪರರು. ಪ್ರವಾಸಿಗಳನ್ನು ಸೆಳೆಯುವಂತ ಅನೇಕ ಸ್ಥಳಗಳು ಇಲ್ಲಿವೆ. ವನ್ಯಮೃಗ ರಕ್ಷಿತ ಪ್ರದೇಶಗಳಿವೆ. ಆಕರ್ಷಕ ಬೌದ್ಧ ಮಂದಿರಗಳೂ, ಗೊಂಪಾ(ವಿಹಾರ)ಗಳೂ ಇವೆ. ಚಾರಿತ್ರಿಕ ಸ್ಥಳಗಳೂ ಇವೆ. ಸಂಪರ್ಕ ಅಷ್ಟು ಉತ್ತಮವಾಗಿಲ್ಲ. ದೇಶದ ಇತರ ಪ್ರವಾಸಿ ತಾಣಗಳನ್ನು ಕಾಡುವ ಸಮಸ್ಯೆಗಳೂ ಇಲ್ಲಿವೆ. ಆದರೂ ಇದೊಂದು ಉತ್ತಮ ಪ್ರವಾಸಿ ತಾಣ ಮತ್ತು ಬೌದ್ಧ ಯಾತ್ರಾಸ್ಥಳ.



ಆಡು ತಿನ್ನುತ್ತದೆ ಜಾಲಿ
ಗುಟಕಾ ತಿನ್ನುತ್ತದೆ ಪ್ಯಾಲಿ!

○ ಅಲ್ಲಮಪ್ರಭು ಬೆಟ್ಟದೂರು

ಸ್ವಾರ್ಥಿಗಳ ಭಾಗ್ಯಲಕ್ಷ್ಮಿ ಜಪ

-೬-

ಜ್ಯೋತಿ ಗುರುಪ್ರಸಾದ್

‘ಭಾಗ್ಯಲಕ್ಷ್ಮಿ ಯೋಜನೆ’ ಯೆಂದು ಹೆಣ್ಣುಮಗು ಹುಟ್ಟಿದರೆ ಲಕ್ಷ ರೂಪಾಯಿ ಬಾಂಡ್ ಸಿಗುತ್ತದೆ, ಬಡವರಿಗೆ ಹೆಣ್ಣು ಮಗುವನ್ನು ವಿದ್ಯಾವಂತೆ ಮಾಡುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದೆಂಬ ಸಂದೇಶದ ಅನುಷ್ಠಾನ ಈಗ ಬರೀ ಸೀರೆ ವಿತರಿಸುವ ಆಮಿಷವಾಗಿ ಪರಿವರ್ತಿತವಾಗಿ ತೀವ್ರವಾಗುತ್ತಿರುವುದು ಶೋಚನೀಯ ಸಂಗತಿ. ಸ್ವತಃ ಮುಖ್ಯ ಮಂತ್ರಿಗಳೇ ಹೊರಟು ನಿಂತು ಸಮಾವೇಶ ನೆಡಸಿ ಕೆಲವು ಪ್ರದೇ ಶಗಳಲ್ಲಿ ಹೆಣ್ಣು ಮಕ್ಕಳನ್ನು ವೇದಿಕೆಯ ಮೇಲೆ ‘ತಾಯಿ’ ಎಂದು ಕೆರೆದು ಉಡುಗೊರೆಯಾಗಿ ಹಂಚುವ ಪರಿಪಾಠ ವನ್ನು ಬೆಳಸಿಕೊಳ್ಳ ತ್ತಿದ್ದಾರೆ. ಆದರೆ ಈ ‘ಉಡುಗೊರೆ’ ಕೊಡುವ ಹಿನ್ನಲೆಯಲ್ಲಿ ಮುಖ್ಯ ಮಂತ್ರಿಗಳ ಪ್ರಚಾರ ಸಭೆ ಯನ್ನು ಸೇರಿಸುವ ಹಿನ್ನ ಲೆಯಲ್ಲಿ ಅದೆಷ್ಟೋ ದುಂದು ವೆಚ್ಚಗಳು ಹರಿದು ಹೋಗುತ್ತಿದೆ.

ಪುರಂದರ ದಾಸರ ಪದ ‘ಭಾಗ್ಯದಾ ಲಕ್ಷ್ಮಿ ಬಾರಮ್ಮ’ ಹಾಡಿನ ಜೊತ ಜೊತೆಗೇ ಈ ಸಂವೇದನೆಯ ಸಾಂಸ್ಕೃತಿಕ ಮಹತ್ವ ವನ್ನು ಬಗೆಯಬಹುದೆನಿಸುತ್ತದೆ.

‘ಭಾಗ್ಯಲಕ್ಷ್ಮಿಯನ್ನು ಕುರಿತ ಹಾಡು ನನ್ನ ತಾಯಿ, ಚಿಕ್ಕಮ್ಮ, ಅಜ್ಜಿಯರಿಂದ ಹಿಡಿದು ಅಕ್ಕಪಕ್ಕದ ಮನೆಯ ಹಿರಿಯ ಹೆಂಗಸರ ಕೊರಳ ಸಿರಿಕಂಠದವರೆಗೆ ಹರಿದು ಬಂದು ನನ್ನ ಕಿವಿ ಸೇರಿ ನಾನೂ ಅನುಕರಿಸಿ ಹಾಡುವಂತೆ ಮಾಡುತ್ತಿದ್ದ ಭಾಗ್ಯವನ್ನು ಬರಮಾಡಿ ಕೊಳ್ಳುವ ಸಂಪ್ರದಾಯದ ರಾಷ್ಟ್ರಗೀತೆಯಂತೆ ಕೇಳುತ್ತಿದ್ದ ಈ ಹಾಡು ಒಂದು ಮುಗ್ಧ ಭಾವವಾಗಿ ಮಾತ್ರ ಮನವನ್ನು ಹೊಕ್ಕಿತ್ತು.

ಅದೇನೆಂದು ಈಗ ಇದೇ ಹಾಡನ್ನಿಟ್ಟುಕೊಂಡು ವಿಶ್ಲೇಷಿಸ ಹೊರಟರೆ ಆ ‘ಭಾಗ್ಯದಲಕ್ಷ್ಮಿ’ ಬೇರೆ ಯಾರೂ ಅಲ್ಲ ‘ಅಮ್ಮ’ನನ್ನು ತೋರುವಂಥ ಹೆಣ್ತನದ ಶಕ್ತಿ. ಅದು ತಾಯ್ತನದ ಗೌರವವನ್ನು ಸೌಭಾಗ್ಯದ ಸಂಕೇತವಾಗಿ ಪರಿಗಣಿಸಿ ಆ ಸಂಕೇತವನ್ನು ಪೂಜ್ಯ ಭಾವನೆಯಿಂದ ಧ್ಯಾನಿಸಿ ಪ್ರಾರ್ಥಿಸುತ್ತಿದ್ದ ಹಾಡು. ಮುಖ್ಯವಾಗಿ ಆ ಪ್ರಾರ್ಥನೆಯ ಒಳಗುಟ್ಟು ತಲುಪಿಸುವ ಅಂಶಗಳೆಂದರೆ.

೧) ಮಜ್ಜಿಗೆಯನ್ನು ಕಡೆದ ನಂತರ ಬರುವ ಬೆಣ್ಣೆಯಂತೆ ಪರಿಶ್ರಮದ ಕಸುವಾಗಿ ತುಂಬಿ ಬರುವ ಭಾಗ್ಯ ‘ಲಕ್ಷ್ಮಿ’

೨) ಸಂಖ್ಯೆಯಿಲ್ಲದ ಭಾಗ್ಯವನ್ನು ಕರುಣಿಸಬಲ್ಲ ಸ್ತ್ರೀ ಶಕ್ತಿ, ‘ಲಕ್ಷ್ಮಿ’

೩) ಮನಕ್ಕೆ ‘ಸಿದ್ಧಿ’ಯನ್ನು ತಂದು ಸುಭೀಕ್ಷಗೊಳಿಸುವ ‘ಲಕ್ಷ್ಮಿ’

ಈ ‘ಲಕ್ಷ್ಮಿ’ಯನ್ನು ಸ್ತ್ರೀವಾದಿ ನೆಲೆಗಟ್ಟಿನಲ್ಲಿ ಸಾಂಕೇತಿಕವಾಗಿ ನೋಡುವುದಾದರೆ ಅವಳು ‘ಪ್ರಕೃತಿ’ ಅವಳು ಅಕ್ಕರೆ ತುಂಬಿಕೊಂಡಿರುವ ಪುರುಷನ ಚಿತ್ತದಲ್ಲಿ ಪುತ್ಥಳಿಯಾಗಿ ಹೊಳೆಯುವವಳು. ಎಂದರೆ ಪುರುಷ ಪ್ರಧಾನವಾದ ಯಾವ ದೌರ್ಜನ್ಯವೂ ಸ್ತ್ರೀಯ ಮೇಲೆ ನಡೆಯದಂಥ ‘ಚೊಕ್ಕ’ವಾದ ಹೃದಯವನ್ನು ಆಳುವವಳು. ಅವನನ್ನು ‘ಪುರಂದರ ವಿಠಲ’ಎಂದಾದರೂ ಕರೆಯಬಹುದು ಅಥವಾ ಹೆಣ್ಣನ್ನು ಶೋಷಿಸದೆ ತನ್ನ ಸಮಾನವಾಗಿ ಹೃದಯದಿಂದ ಪ್ರೀತಿಸುವ ಯಾವ ಗಂಡಿನ ಹೆಸರಿಂದಾದರೂ ಕರೆಯಬಹುದು! ಇಂಥ ಪ್ರೀತಿ ತುಂಬಿದ ಗಂಡು ಭಾಗ್ಯಶಾಲಿ. ಯಾಕೆಂದರೆ ಅವನು ನಿಸರ್ಗದ ಅಭೂತಪೂರ್ವ ಎಲ್ಲ ಸಕಾರಾತ್ಮಕ ಬಲವನ್ನೂ-ಒಲವನ್ನೂ ಪಡೆದು ಉಸಿರ ಸಿರಿಯನ್ನು ವೃದ್ಧಿಗೊಳಿಸಬಲ್ಲ ‘ಸ್ತ್ರೀ’ ಎಂಬ ಶಕ್ತಿಯನ್ನೂ ತನ್ನ ಸಂಗಾತಿಯಾಗಿ ಅರ್ಧಾಂಗಿಯಾಗಿ ಪಡೆದಿರುತ್ತಾನೆ.

ಹೆಣ್ಣೇ ಭಾಗ್ಯ. ಆ ಭಾಗ್ಯವನ್ನು ಪಡೆಯುವವನು ಭಾಗ್ಯವಂತ. ಆನಂತರ ಹೆಣ್ಣು-ಗಂಡು ಇಬ್ಬರೂ ಪೂರಕವಾಗಿ ಜೀವನದ ಪಯಣದಲ್ಲಿ ನಂಬಿಕೆಯ ನಡೆಯಲ್ಲಿ ಒಬ್ಬರಿ ಗೊಬ್ಬರು ಆಸರೆಯಾಗಿ ಸಾಗುತ್ತಿದ್ದರೆ ಆ ದಾರಿ ದುಡಿಮೆಯಿಂದ ಬೆವರು ಹರಿಸಿ ಫಲಗಳಿಸುವಂಥ ಶ್ರೀಮಂತಿಕೆಯ ದಾರಿ. ಅರಿತು ಸಾಗುವ ದಾರಿ. ಈ ;ಲಕ್ಷ್ಮಿ’ಯಂಥ ಹೆಣ್ಣು ಅಥವಾ ‘ಹೆಣ್ಣಿನಂಥ’ ಲಕ್ಷ್ಮಿ ಸಜ್ಜನರಾದ ಸಾಧು ಮನಸ್ಸುಗಳಿಗೆ ಒಲಿದು ಓಗೊಡುವ ಭಾಗ್ಯ ಎಂಬುದು ಇನ್ನೊಂದು ಅರಿಯಬೇಕಾದ ಮುಖ್ಯ ಸಂಗತಿ. ಸಜ್ಜನರಾದ ಸಾಧು ಸ್ವಭಾವದವರು ಏನು ಬೇಡಲು ಸಾಧ್ಯ? ಎಲ್ಲರಿಗೂ ಒಳಿತಾಗಲಿ, ಎಂಬ ಮನಸ್ಥಿತಿಯ ಸರಳ ಜೀವನದ ಸಮೃದ್ಧಿಯನ್ನಲ್ಲದೆ ‘ಸಜ್ಜನ ಸಾಧು’ಗಳು ಬೇರೇನು ಕೋರಲು ಸಾಧ್ಯ?! ‘ವರದಕ್ಷಿಣೆ’ ತೆಗೆದು ಕೊಂಡು ತನ್ನನ್ನು ಮಾರಿ ಕೊಳ್ಳುವ ಪೈಶಾಚಿಕ ವರ್ತನೆಯ ದೌರ್ಜನ್ಯ ಸಜ್ಜನ ಸಾಧುಗಳಿಂದ ಎಂದೂ ಸಾಧ್ಯವಾಗುವಂಥದ್ದಲ್ಲ. ಅಂದರೆ ‘ಭಾಗ್ಯಲಕ್ಷ್ಮಿ’ ಎಂದರೆ ದಿಡೀರ್ ಶ್ರೀಮಂತರಾಗಬೇಕೆನ್ನುವ ಅತಿಯಾಸೆಯ ಲಾಭಗ್ರಸ್ತ - ರೋಗಗ್ರಸ್ತ ಮನಸ್ಸಿಗೆ ಒಲಿಯುವ ಭಾಗ್ಯ ಅಲ್ಲವೇ ಅಲ್ಲ. ಅಂದರೆ ಲಂಚ ತೆಗೆದುಕೊಂಡು ಬ್ಯಾಂಕ್ ಬ್ಯಾಲೆನ್ಸ್ ಜಾಸ್ತಿ ಮಾಡಿಕೊಂಡು, ರಿಯಲ್ ಎಸ್ಟೇಟ್ ಖರೀದಿಸಿ ಕೊಳೆಯು ವಷ್ಟು -ಅಜೀರ್ಣವಾಗುವಷ್ಟು ಹಣ-ಚಿನ್ನ-ಸಂಪತ್ತನ್ನು ಕೂಡಿ ಹಾಕಿ ಉಸಿರುಗಟ್ಟುವ ಐಶ್ವರ್ಯ ಹೊಂದಿ ಸ್ವಾರ್ಥಿಯಾಗಿ ಮೆರೆಯುವ ಹುಲು ಮಾನವನ ಅಂಗಳದಲ್ಲಿ ‘ಭಾಗ್ಯಲಕ್ಷ್ಮಿ’ ಸುಳಿಯಲು ಸಾಧ್ಯವಿಲ್ಲ.

‘ಕೃಷಿ’ಯ ಸೋಗು ಹಾಕಿಕೊಂಡು ರಾಜಕೀಯದ ಮುಖವಾಡದಲ್ಲಿ ಸಿಕ್ಕಾಪಟ್ಟೆ ಜಮೀನನ್ನು ಖರೀದಿಸಿ ಮಂತ್ರಿ ಮಹೋದಯರೆನ್ನಿಸಿಕೊಂಡವರೇ ತನ್ನ ಮಕ್ಕಳಿಗೆ-ಬಂಧು ಬಳಗಕ್ಕೆ ‘ಗಿಫ್ಟ್’ ಕೊಡುತ್ತಾ ಬರುವಂಥ ಸದ್ಯದ ಅಂಟುಜಾಢ್ಯವನ್ನು ‘ಭಾಗ್ಯ’ವೆಂದು ಕರೆಯಲು ಸಾಧ್ಯವೇ ಇಲ್ಲ. ಹಾಗೆಯೇ ನಮ್ಮ ಮುಖ್ಯಮಂತ್ರಿಗಳು ಇದೀಗ ಜಾರಿಗೆ ತಂದಿರುವ ‘ಭಾಗ್ಯಲಕ್ಷ್ಮಿ’ ಎಂಬ ಯೋಜನೆ ನಿಜವಾಗಿಯೂ ‘ಸ್ತ್ರೀಶಕ್ತಿ’ಯನ್ನು ಸದೃಢಗೊಳಿಸುವ ಒಂದು ಉನ್ನತ ಪ್ರಯತ್ನವಾಗಿ ವಿಫಲವಾಗಿ ಒಂದು ರಾಜಕಾರಣದ ಲಾಭಕೋರತನದ ವೇಷವಾಗಿ ಮಾತ್ರ ನನಗೆ ಕಾಣುತ್ತಿದೆ. ಇದನ್ನು ಸ್ವತಃ ಮುಖ್ಯಮಂತ್ರಿಗಳ ಆವೇಶದ ಪ್ರಂಖಾನುಪುಂಖ ಮಾತುಗಳ ಭಾಷಣವನ್ನು ಗಮನಿಸಿ ಇತ್ತೀಚೆಗೆ ನಮ್ಮ ಸರ್ಕಾರ ತುಳಿಯುತ್ತಿರುವ ಉಲ್ಭಣಿಸಿರುವ ಸ್ವಾರ್ಥ ರಾಜಕಾರಣದ ಸ್ಥಿತಿ ಗತಿಗಳನ್ನು ಗಮನಿಸಿಯೇ ಜನ ಸಾಮಾನ್ಯರಾದ ನಮ್ಮ ತಾಳ್ಮೆಯ ಸತ್ವ ಪರೀಕ್ಷೆಯಾಗುತ್ತ ಅವಮಾನವಾಗುತ್ತಿರುವುದನ್ನು ಗಮನಿಸಿಯೇ ಅನಿವಾರ್ಯವಾಗಿ ಬರೆಯಬೇಕಾಗಿದೆ.

‘ಭಾಗ್ಯಲಕ್ಷ್ಮಿ ಯೋಜನೆ’ ಯೆಂದು ಹೆಣ್ಣುಮಗು ಹುಟ್ಟಿದರೆ ಲಕ್ಷ ರೂಪಾಯಿ ಬಾಂಡ್ ಸಿಗುತ್ತದೆ, ಬಡವರಿಗೆ ಹೆಣ್ಣು ಮಗುವನ್ನು ವಿದ್ಯಾವಂತೆ ಮಾಡುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದೆಂಬ ಸಂದೇಶದ ಅನುಷ್ಠಾನ ಈಗ ಬರೀ ಸೀರೆ ವಿತರಿಸುವ ಆಮಿಷವಾಗಿ ಪರಿವರ್ತಿತವಾಗಿ ತೀವ್ರವಾಗುತ್ತಿರುವುದು ಶೋಚನೀಯ ಸಂಗತಿ. 180ರೂಗಳ ಥಳುಕಾಗಿ ಕಾಣುವ ಒಂದೊಂದು ಸೀರೆಯನ್ನು ‘ಭಾಗ್ಯಲಕ್ಷ್ಮಿ’ ಯೋಜನೆಯಡೆಯಲ್ಲಿ ಸ್ವತಃ ಮುಖ್ಯಮಂತ್ರಿಗಳೇ ಹೊರಟು ನಿಂತು ಸಮಾವೇಶ ನೆಡಸಿ ಕೆಲವು ಪ್ರದೇಶಗಳಲ್ಲಿ ಹೆಣ್ಣು ಮಕ್ಕಳನ್ನು ವೇದಿಕೆಯ ಮೇಲೆ ‘ತಾಯಿ’ ಎಂದು ಕೆರೆದು ಉಡುಗೊರೆಯಾಗಿ ಹಂಚುವ ಪರಿಪಾಠವನ್ನು ಬೆಳಸಿಕೊಳ್ಳತ್ತಿದ್ದಾರೆ. ಆದರೆ ಈ ‘ಉಡುಗೊರೆ’ ಕೊಡುವ ಹಿನ್ನಲೆಯಲ್ಲಿ ಮುಖ್ಯಮಂತ್ರಿಗಳ ಪ್ರಚಾರ ಸಭೆಯನ್ನು ಸೇರಿಸುವ ಹಿನ್ನಲೆಯಲ್ಲಿ ಅದೆಷ್ಟೋ ದುಂದು ವೆಚ್ಚಗಳು

ಹರಿದು ಹೋಗುತ್ತಿದೆ.

ಜೊತೆಗೆ ಸೀರೆ ಹಂಚ್ಚುವ ತಾಯಂದಿರಿಗೆ ಮುಖ್ಯ ಮಂತ್ರಿಗಳು ಕೇಳಿಕೊಳ್ಳುವ'ವರ'ದ ನಿರೀಕ್ಷೆಯ ಪಟ್ಟಿ ದೊಡ್ಡದಿದೆ! "ತಾಯಿ, ನನ್ನ ಹೆಸರನ್ನೂ ಹೇಳಿ ದೇವರಿಗೆ ಪೂಜೆ ಮಾಡಿ. ನನ್ನ ಸರ್ಕಾರವೇ ಉಳಿಯಲಿ ಎಂದು ದೇವರನ್ನು ಕೇಳಿಕೊಳ್ಳಿ ತಾಯಿ" ಎನ್ನುತ್ತಾರೆ. "ಇನ್ನು ನಿಮ್ಮ ಹೆಣ್ಣು ಮಕ್ಕಳು ಕೂಲಿ ಮಾಡುವುದು ಬೇಡ ಎಲ್ಲರೂ I.A.S. ಓದಲಿ, ಇಂಜಿನಿಯರ್ ಆಗಲಿ, ಡಾಕ್ಟರ್ ಆಗಲಿ" ಎನ್ನು ತ್ತಾರೆ. ಜೊತೆ ಜೊತೆಗೇ ಆವೇಶದಲ್ಲಿ ವಿರೋಧ ಪಕ್ಷದ ವರ ಹೆಸರುಗಳನ್ನೆಲ್ಲಾ ಪಟ್ಟಿ ಮಾಡುತ್ತಾ ನಿಂದಿಸಿ ಬೆವರೂ ರೆಸಿಕೊಳ್ಳುತ್ತಾ ಕಣ್ಣನ್ನೂ ಒರೆಸಿಕೊಳ್ಳುತ್ತಾ "ಈ ಕಾಣಿಕೆ ನಿಮ್ಮ ಅಣ್ಣ ಕೊಡುತ್ತಿರುವ ಅರಶಿನ-ಕುಂಕುಮ ಕಾಣಿಕೆ ಎಂದು ತಿಳಿದುಕೊಳ್ಳಿ" ಎನ್ನುತ್ತಾರೆ.

ಇಲ್ಲೇ ನನಗೆ ಜನನಾಯಕರೆನಿಸಿಕೊಳ್ಳಬೇಕಾಗಿದ್ದ ಆದರೆ ವಿಫಲರಾಗಿರುವ ಮುಖ್ಯಮಂತ್ರಿ ಯಡಿಯೂರಪ್ಪನವರ ಇಂಟಗ್ರಿಟಿಯನ್ನು ಪ್ರಶ್ನಿಸಬೇಕೆನ್ನಿಸುವುದು. ರಾಜಕೀಯ ಲಾಭಕ್ಕಾಗಿ ಹೆಣ್ಣನ್ನು 'ಭಾಗ್ಯಲಕ್ಷ್ಮಿ' ಎಂದು ಕರೆಯುತ್ತಾ ಎಲ್ಲೋ ಕೆಲವು ಮಂದಿಯನ್ನು ಆಯ್ದು 'ಸೀರೆ' ಹಂಚುವ ಉತ್ಸವದಿಂದ ಖಂಡಿತ ನಮ್ಮ ಹೆಣ್ಣುಮಕ್ಕಳ ಭಾಗ್ಯ ಯಾವರೀತಿಯಿಂದಲೂ ಹೆಚ್ಚುವುದಿಲ್ಲ. ಹೆಣ್ಣು ಹುಟ್ಟುವಾಗಲೇ ಭಾಗ್ಯಲಕ್ಷ್ಮಿಯಾಗಿಯೇ- ಹುಟ್ಟಿರುತ್ತಾಳೆ. ಅದನ್ನರಿಯುವ ಜ್ಞಾನದ-ಮಾನವೀಯ ಸಂಬಂಧದ ಸಾಮಾಜಿಕ ಎಳೆಗಳು ಮಾತ್ರ ಈಗ ಗಟ್ಟಿಗೊಳ್ಳಬೇಕಿದೆ. ಮೊದಲು ಹೆಣ್ಣು-ಗಂಡುಗಳಿಬ್ಬರೂ ಅವಿದ್ಯೆಯಿಂದ ವಿದ್ಯೆಗೆ ಮುಖ ಮಾಡಿ ತಮ್ಮ ತಮ್ಮ ಜೀವನ ವಿಧಾನ (Standard Flivjng)ವನ್ನು ಎತ್ತರಿಸಿಕೊಳ್ಳಬೇಕಿದೆ. ಶಿಕ್ಷಕ ವೃತ್ತಿ, ಕಾರ್ಮಿಕ ವೃತ್ತಿ, ಕೃಷಿ ಯಾವುದೇ ಇರಲಿ ತಮ್ಮ ಶಕ್ತಿಯನ್ನು ಸಂಪೂರ್ಣ ಆ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಗುಣ ಮಟ್ಟ ಹೆಚ್ಚಿಸುವಂತೆ ಕೆಲಸ ಮಾಡುವ ಅವಕಾಶಗಳು- ಸೂಕ್ತ ರಕ್ಷಣೆ ದೂರೆಯಬೇಕಾಗಿದೆ. ಇನ್ನೂ ರೈತರ ಆತ್ಮಹತ್ಯೆ ನಿಂತಿಲ್ಲ.

ಮೊನ್ನೆ ಮೊನ್ನೆ ಕೂಡ ಹತ್ತಿರದ ಊರಲ್ಲಿ ಒಬ್ಬ ಮಹಿಳೆ ಗಂಡ ಮತ್ತು ಅತ್ತೆಯ ವರದಕ್ಷಿಣೆ ತರಬೇಕೆನ್ನುವ ಆಮಿಷ ಕಿರುಕುಳ ತಡೆಯಲಾಗದೆ ಸೀಮೆಎಣ್ಣೆ ಸುರಿದು ಸುಟ್ಟುಕೊಂಡು ವಿದ್ರಾವಕವಾಗಿ ಸತ್ತಿದ್ದಾಳೆ. ಇಂಥ ಸಂಕಷ್ಟದ ಪರಿಸ್ಥಿತಿಯಲ್ಲಿ ಸಮಾಜ ನೋಯುತ್ತಿರುವಾಗ ಸಮಸ್ಯೆಗಳನ್ನು ಬುಡಮಟ್ಟದಿಂದ ಪರೀಕ್ಷಿಸಿ ಎಲ್ಲರಿಗೂ ಒಳಿತಾಗುವ ಪ್ರಗತಿಪರ ಸುಧಾರಣೆಗಳಿಂದ ಮಾತ್ರ ಜನತೆಯ 'ಭಾಗ್ಯ' ಬದಲಾಗುತ್ತದೆಯೇ ಹೊರತು "ಭಾಗ್ಯಲಕ್ಷ್ಮಿ" ಎಂದು ಎಲ್ಲೆಡೆ ತೋರಿಕೆಯ ಭಯದ ವಾತಾವರಣದ ಜಾಹೀರಾತುಗಳ ಬೊಬ್ಬೆ ಕೇಳುತ್ತಿದ್ದರೆ ಅಲ್ಲಿ ಸ್ವಾರ್ಥ ರಾಜಕಾರಣದ ಶೋಷಣೆಯ ವಾಸನೆ ಹರಡುತ್ತದೆಯೇ ವಿನಃ 'ಭಾಗ್ಯಲಕ್ಷ್ಮಿ' ನೆಲೆಸಲು ಸಾಧ್ಯವಿಲ್ಲ.

ಹೆಣ್ಣುಮಕ್ಕಳು ಜಾತಿ-ಧರ್ಮಗಳ ಸೋಂಕಿಲ್ಲದೆ ಧೈರ್ಯವಾಗಿ ಸ್ವತಂತ್ರವಾಗಿ ಸಂಚರಿಸುವಂತಾಗಲಿ. ಗರ್ಭಿಣಿ ಹೆಣ್ಣುಮಗಳು ಕುಳಿತಿರುವ ಬಸ್ಸು ಅವಳನ್ನು ಕುಲುಕಿ ಕುಲುಕಿ ಆಹುತಿ ತೆಗೆದುಕೊಳ್ಳದಂತೆ ಹಳ್ಳ ತುಂಬಿರುವ ರಸ್ತೆಗಳು ಮೊದಲು ಪೂರ್ಣ ಪ್ರಮಾಣದಲ್ಲಿ ಸರಿಯಾಗಲಿ... ಇಂಥ ಪ್ರಾಥಮಿಕ ಅಗತ್ಯಗಳಿಗೆ ಸಂಪೂರ್ಣ ಗಮನ ಹರಿಸುವ ಮಾನವೀಯ ಸ್ಪರ್ಶದ 'ಸಂಸ್ಕೃತಿ'ಯ ಅರ್ಥದಲ್ಲಿ ಮಾತ್ರ 'ಭಾಗ್ಯಲಕ್ಷ್ಮಿ' ಹೆಜ್ಜೆ ಮೇಲೊಂದು ಹೆಜ್ಜೆ ಇಟ್ಟು ಬರಬಹುದೆನಿಸುತ್ತದೆ. □

ಒಂದು ಕೊಳ್ಳದ ಮೋಡ-ಮಿಂಚುಗಳ ಸುತ್ತಮುತ್ತ

(15ನೇ ಪುಟದಿಂದ)

ಆಂದೋಳನ ಎತ್ತಿದ ಇತರ ಗಂಭೀರ ಪ್ರಶ್ನೆಗಳು ಮತ್ತು ವಿಷಯಗಳನ್ನು ಕೋರ್ಟು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಅಣೆಕಟ್ಟಿನ ನಿರ್ಮಾಣದ ಕಾರ್ಯವನ್ನು ತಡೆಯಲು ಸಾಧ್ಯವಾಗದಿದ್ದರೂ, ಅದರ ಎತ್ತರವನ್ನು ೧೨೨.೫ ಮೀಟರಿಗೆ ನಿಲ್ಲಿಸಿದ್ದು ಆಂದೋಲನದ ಫಲಶ್ರುತಿ.

ಇತ್ತೀಚೆಗೆ ಅಂದರೆ ಅಕ್ಟೋಬರ್ ೨೦೧೦ರ ಕೊನೆಯ ವಾರದಲ್ಲಿ ಮಧ್ಯಪ್ರದೇಶದ ಬರ್ವಾನಿಯಲ್ಲಿ ನರ್ಮದಾ ಬಚಾವ್ ಆಂದೋಳನದ ೨೫ನೇ ವಾರ್ಷಿಕೋತ್ಸವದ ಅಂಗವಾಗಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ರಾಷ್ಟ್ರಾದ್ಯಂತ ಅನೇಕ ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು, ವಿದ್ಯಾರ್ಥಿಗಳು ಯುವಜನರು ಮತ್ತು ಇತರರು ಇವುಗಳಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ನರ್ಮದಾ ಬಚಾವ್ ಆಂದೋಳನ ಕ್ರಮಿಸಿದ ಹಾದಿಯನ್ನು ವಸ್ತುನಿಷ್ಠವಾಗಿ ಪರಾಮರ್ಶಿಸಿದಾಗ ದೊರಕುವ ಕಾಣ್ಕೆಗಳು ಇತರ ಹೋರಾಟಗಳ ಮುಂದಿನ ಮಾರ್ಗಕ್ಕೆ ಕೈ ಮರವಾಗಬಲ್ಲದು. ಭಾರತದಲ್ಲಿ ಪ್ರಥಮ ಬಾರಿಗೆ ಎಸ್ ಎಸ್ ಪಿಯನ್ನು ಒಳಗೊಂಡಂತೆ ಇತರ ದೊಡ್ಡ ನೀರಾವರಿ ಯೋಜನೆಗಳ Cast-Beafitn [ವೆಚ್ಚ ಫಲ] ವಿಶ್ಲೇಷಣೆ ಜರುಗಬೇಕಾದ್ದು ಅವಶ್ಯಕ ಎಂಬ ವಿಚಾರಕ್ಕೆ ಆಂದೋಳನ ವಿಶೇಷ ಒತ್ತನ್ನು ನೀಡಿತು.

ಮುಳುಗಡೆಯಿಂದ ನಿರ್ವಸತಿ ಹೊಂದಿದ ಜನರಿಗೆ ಸೂಕ್ತ ಪುನರ್ವಸತಿ, ಅಣೆಕಟ್ಟಿನ ನಿರ್ಮಾಣದಿಂದ ಆಗುವ ಪರ್ಯಾವರಣ ನಾಶದ ಧೀರ್ಘಕಾಲಿಕ ದುಷ್ಪರಿಣಾಮಗಳು, ಜಲಸಮಾದಿಯಿಂದ ಸಂಪೂರ್ಣವಾಗಿ ವಿನಾಶವಾಗುವ ನಾಗರೀಕತೆಯ ವೈಶಿಷ್ಟ್ಯಗಳು, ಮಾನವ ಹಕ್ಕುಗಳ ಗಮನ ಮುಂತಾದ ಗಹನ ವಿಷಯಗಳನ್ನು ಪ್ರಧಾನ ಭೂಮಿಕೆಗೆ ತಂದದ್ದು ಈ ಆಂದೋಳನದ ಅನನ್ಯ ಕೊಡುಗೆಗಳು, ಜೊತೆಗೆ ಈ ಪ್ರದೇಶಗಳಲ್ಲಿದ್ದ ಸಂಬಂಧಗಳ ಸಾಂಪ್ರದಾಯಿಕ ನಮೂನೆಗಳಲ್ಲಿ ಪರಿವರ್ತನೆ ತಂದದ್ದು ಒಂದು ಹೈಲೈಟ್. ಇದರಿಂದ ಚಾಲ್ತಿಯಲ್ಲಿದ್ದ ಏಕ ಆಯಾಮದ ಮತ್ತು ಪಿತೃ ಪ್ರಧಾನ ಗಂಡು-ಹೆಣ್ಣು ಸಂಬಂಧಗಳಲ್ಲಿ ಗಮನಾರ್ಹ ಬದಲಾವಣೆ ತಲೆದೋರಿತು. ಮಹಿಳೆಯರು ನಾಲ್ಕು ಗೋಡೆಗಳಿಂದ ಹೊರಬಂದು ರ್‍ಯಾಲಿಗಳು, ಪ್ರತಿಭಟನಾ ಪ್ರದರ್ಶನಗಳು ಮತ್ತು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು ತೊಡಗಿದರು. ಈ ಸಂಘಟನೆಯ ಹಲವು ಸಭೆಗಳು ಜರುಗಿದ್ದು ದೇವಾಲಯಗಳಲ್ಲಿ, ಇದರಿಂದ ಜಾತಿ ಆಧಾರಿತ ನಿರ್ಬಂಧಗಳು ಸ್ವಲ್ಪ ನಿಸ್ಸಾರಗೊಂಡು ದೇಗುಲ-ಪ್ರವೇಶದ ಹಾದಿ ಸುಗಮವಾಯಿತು. ಹಾಗೆಯೇ ಆದಿವಾಸಿಗಳ ಮತ್ತು ಆದಿವಾಸಿಗಳೇತರರ ನಡುವಿನ ಸಂಬಂಧಗಳು ಮತ್ತು ಅನುಸಂಧಾನಗಳಲ್ಲಿ ಇತ್ಯಾತ್ಮಕ ಬದಲಾವಣೆ ಕಂಡು ಬಂದಿತು.

ಆಂದೋಳನದಿಂದ ಇಷ್ಟೆಲ್ಲಾ ಧನಾತ್ಮಕ ಪರಿಣಾಮಗಳಾದರೂ, ಜನರ ನಡುವೆ ರಾಜಕೀಯ ಪರ್ಯಾಯವನ್ನು ಹುಟ್ಟುಹಾಕುವುದರಲ್ಲಿ ಮತ್ತು ಅವರ ರಾಜಕೀಯ ಪ್ರಜ್ಞೆಯನ್ನು ವಿಸ್ತರಿಸುವುದರಲ್ಲಿ ಅದು ಪರಿಣಾಮಕಾರಿಯಾಗಿಲ್ಲ ಎಂಬುದು ಕೆಲವರ ಅಭಿಮತ. ಅಲ್ಲದೆ, ಅದು ಚುನಾವಣಾ ರಾಜಕೀಯದಿಂದ ಹೊರಗುಳಿದದ್ದು ಒಂದು ಪರ್ಯಾಯ ಹಸಿರು ರಾಜಕೀಯದ ಉಗಮಕ್ಕೆ ತಡೆಹಾಕಿದಂತಾಯ್ತು ಎಂಬ ವಿಷಯದತ್ತ ಅವರು ಗಮನ ಸೆಳೆಯುತ್ತಾರೆ.

ಆದರೆ ಈ ವಾದಗಳನ್ನು ಮೇಧಾ ಪಾಟ್ಕರ್ ಒಪ್ಪುವುದಿಲ್ಲ. "ನಮ್ಮ ಆಂದೋಳನಕ್ಕೆ ರಾಜಕೀಯ ಸ್ವರೂಪ ಇದ್ದೇ ಇದೆ ಚುನಾವಣಾ ರಾಜಕಾರಣದಿಂದ ದೂರವುಳಿದು ಅದನ್ನು ಜಾತಿ ಧರ್ಮಾಧಾರಿತ ವಿಭಜನೆಗಳಿಂದ ಬಹುಮುಖ್ಯವಾದ ಅಭಿವೃದ್ಧಿ ವಿಭಜನೆಗಳತ್ತ ತಿರುಗಿಸಿದ್ದು ಒಂದು ಸಾಸಧನೆಯೆ ಸರಿ. ಈ ಪ್ರದೇಶಗಳ ಜನರ ರಾಜಕೀಯ ಜೀವನದಲ್ಲಿ ಹಸಿರು ಪರ್ಯಾಯವೆಂಬುದು ಹಾಸುಹೊಕ್ಕಾಗಿದೆ ಹಾಗೂ ಇದು ಶಕ್ತಿಶಾಲಿಯಾಗಿ ರೂಪುಗೊಳ್ಳುತ್ತಿದೆ" ಎಂಬುದು ಅವರ ಸಮರ್ಥನೆ.

ಪ್ರಸ್ತುತ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಮತ್ತು ಕಾರ್ಪೊರೇಟ್‌ಕರಣದ ಶಕ್ತಿಗಳು ಅಭಿವೃದ್ಧಿ ಮಾದರಿಗಳ ಕುರಿತು ಪ್ರಭುತ್ವಕ್ಕೆ ತಾಕೀತು ಮಾಡುತ್ತಿವೆ. ಇಂಥಾ ಸಂದರ್ಭದಲ್ಲಿ ನರ್ಮದಾ ಬಚಾವ್ ಆಂದೋಳನ ಈ ಅಭಿವೃದ್ಧಿ ನಮೂನೆಗಳ ಬಗೆಗೆ ಪ್ರಶ್ನೆಗಳನ್ನು ಎತ್ತಿದ್ದು, ಕ್ರಿಯಾಶಾಲಿ ಹೋರಾಟಗಳನ್ನು ರೂಪಿಸಿದ್ದು ನಮ್ಮ ರಾಷ್ಟ್ರದ ಚಳವಳಿಯ ಚರಿತ್ರೆಗೆ ಹೊಸ ತಿರುವನ್ನು ನೀಡಿದೆ. ಆದರೆ ಮುಖ್ಯವಾಹಿನಿಯಲ್ಲಿರುವ ರಾಜಕೀಯ ಪಕ್ಷಗಳು ಈ ಆಂದೋಳನಕ್ಕೆ ಸ್ಪಂದಿಸಿದ ರೀತಿ ತರವೇ? ಎಂಬುದು ಹಲವು ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರ ಪ್ರಶ್ನೆಯಾಗಿದೆ. □

ನೀವು-ನಾವು

ಉಳ್ಳವರು ನೀವು
ಶಿವಾಲಯವ ಕಟ್ಟಿ
ಗರ್ಭಗುಡಿಯಲಿ
ಆರತಿ ಅಬಿಷೇಕ ಮಾಡಿ
ಪುಣ್ಯ ಗಳಿಸುತ್ತಿದ್ದೀರಿ:

ಇಲ್ಲದವರು ನಾವು
ನಿಮ್ಮ ಶಿವಾಲಯದ
ಹೊರಗೆ ಕುಂತು
ಟೋಕನ್ನುಗಳ ಹಿಡಿದು
ನಿಮ್ಮ ಮೆಟ್ಟುಗಳ
ಕಾಯುತ್ತ ಕೂತಿದ್ದೇವೆ.

○ ಕು.ಸ. ಮಧುಸೂದನ್

ಕುಂಠಿತಗೊಂಡರೂ ಜೀವಂತವಿರುವ ಸೆಕ್ಯುಲರಿಸಂ



ಕಾಲಮಾನ-೧೨

ಡಾ. ಮುಜಾಫರ್ ಅಸ್ಸಾದಿ

ಇತ್ತೀಚಿನ ಅಯೋಧ್ಯ ತೀರ್ಪು ಸೆಕ್ಯಲರಿಸಂ ಕುರಿತು ಹೊಸ ಚರ್ಚೆಯನ್ನು ಆರಂಭಿಸಿದೆ ಎಂದರೆ ತಪ್ಪಾಗಲಾರದು: ಅಯೋಧ್ಯ ತೀರ್ಪು ಎಷ್ಟರ ಮಟ್ಟಿಗೆ ನಮ್ಮ ಸೆಕ್ಯುಲರಿಸಂನ್ನು ಪ್ರತಿನಿಧಿಸುತ್ತದೆ? ಭಾರತದ ಸೆಕ್ಯುಲರಿಸಂ ಎಷ್ಟರ ಮಟ್ಟಿಗೆ ಗಟ್ಟಿಯಾಗಿದೆ? ಅಥವಾ ಸೆಕ್ಯುಲರಿಸಂನ ಅವಕಾಶಗಳು ಸಂಕುಚಿತವಾಗುತ್ತಿದೆಯೇ? ನಮ್ಮದು ಪರಿಪೂರ್ಣವಾದ ಸೆಕ್ಯುಲರ್ ದೇಶವೇ? ಇತ್ಯಾದಿ ಪ್ರಶ್ನೆಗಳು ನಮ್ಮ ಎದುರಾಗುವುದು ಸರ್ವಸಾಮಾನ್ಯ

ಭಾರತದ ಸೆಕ್ಯುಲರಿಸಂನ ಚರ್ಚೆಯ ಸಂದರ್ಭದಲ್ಲಿ ಒಂದೆರಡು ಮಿಥ್ಯೆಯ ನಿರ್ಮಿತಿಯಾಗಿರುವುದನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ. ಒಂದನೇ ಮಿಥ್ಯೆ ಪ್ರಕಾರ ಜಾತ್ಯತೀತತೆ ಅಥವಾ ಸೆಕ್ಯುಲರಿಸಂ ಎಂಬುದು ಒಂದು ಆಧುನಿಕತೆಯ ಕೊಡುಗೆ, ಅದರಲ್ಲೂ ಪಾಶ್ಚಾತ್ಯ ಉದಾರವಾದಿಯ ಕೊಡುಗೆ. ಮಧ್ಯಕಾಲಿನ ಚರ್ಚ್ ಮತ್ತು ಪ್ರಭುತ್ವದ ಸಂಘರ್ಷಗಳ ಸಂದರ್ಭದಲ್ಲಿ ಸೆಕ್ಯುಲರಿಸಂ ಸಂವಾದಗಳ ಮೂಲಗಳನ್ನು ನೋಡಬಹುದು. ವಿಚಿತ್ರವೆಂದರೆ ಮಾರ್ಕ್ಸ್‌ವಾದದಲ್ಲಿ ಸೆಕ್ಯುಲರಿಸಂನ ಶಬ್ದ ಸಿಗಲಾರದು. ಮಾರ್ಕ್ಸ್‌ವಾದದಲ್ಲಿ ಅತೀ ಹೆಚ್ಚು ಒತ್ತು ಇರುವುದು ಧರ್ಮಕ್ಕೆ ಅಥವಾ "ರಿಲಿಜಿಯನ್"ಗೆ. ಇಲ್ಲಿ ಧರ್ಮವೆಂದರೆ ಕ್ರಿಶ್ಚಿಯನ್ ಅಥವಾ ಪ್ರೊಟೆಸ್ಟಂಟ್ ಧರ್ಮಕ್ಕೆ, ಅದರಲ್ಲೂ ಆ ಧರ್ಮ ಮಾಡಿದ ಚಾರಿತ್ರಿಕ ಹಾನಿಯ ಮೇಲೆ. ಇನ್ನೊಂದು ವಿಚಿತ್ರವೆಂದರೆ ನಮ್ಮಲ್ಲಿನ ಹೆಚ್ಚಿನ ಚಿಂತಕರು ಮಾರ್ಕ್ಸ್ ಧರ್ಮವನ್ನು "ಜನರ ಅಫೀಮ್"ಎಂದು ಕರೆದಿದ್ದಾನೆ ಎಂದು ಸಾರಾಸಗಟಾಗಿ ವಾದಿಸುತ್ತಾರೆಯೇ ಹೊರತು, ಅವನ ಇನ್ನಿತರ ಹೇಳಿಕೆಗಳಿಗೆ ಒತ್ತು ಕೊಡುವುದಿಲ್ಲ.

ಮಾರ್ಕ್ಸ್ ಪ್ರಕಾರ "ಧರ್ಮವೆಂಬುದು ಆತ್ಮವಿಲ್ಲದವರ ಆತ್ಮ" "ಉಸಿರಿಲ್ಲದವರ ಉಸಿರು". ಅವನು ಸೆಕ್ಯುಲರಿಸಂ ಅಥವಾ ಜಾತ್ಯತೀತತೆಯನ್ನು ವಿಶ್ಲೇಷಿಸದಿದ್ದರೂ ಅವನಿಗೆ ಸೆಕ್ಯುಲರಿಸಂ ಪೂರ್ವನಿರ್ಧಾರಿತ ಸಿದ್ಧಾಂತವಾಗಿತ್ತು. ಇದನ್ನೇ ಇನ್ನೊಬ್ಬ ಚಿಂತಕ ಬರ್ಕ್ "ಸೈದ್ಧಾಂತಿಕ ಸೆಕ್ಯುಲರಿಸಂ" ಎಂದು ಕರೆಯುತ್ತಾನೆ. ಫ್ರೆಂಚ್ ಕ್ರಾಂತಿ, ಜರ್ಮನ್ ಕ್ರಾಂತಿ ಹಾಗೂ ಅಮೇರಿಕನ್ ಕ್ರಾಂತಿ ಬರ್ಕ್‌ಗೆ "ಸೈದ್ಧಾಂತಿಕ ಸೆಕ್ಯುಲರಿಸಂ"ಗೆ ಉದಾಹರಣೆಗಳು. ಇದರರ್ಥ ಎಲ್ಲಾ ಸೈದ್ಧಾಂತಿಕ ಹೋರಾಟಗಳು, ಕ್ರಾಂತಿಗಳು "ಸೆಕ್ಯುಲರ್"ಗಳಾಗಲು ಸಾಧ್ಯವಿಲ್ಲ. ಜರ್ಮನಿಯಲ್ಲಿ ಬೆಳೆದ ಫಾಸಿಸಂ, ಭಾರತದಲ್ಲಿ ಬೆಳೆದ ನವ-ಫ್ಯಾಸಿಸಂಗಳನ್ನು "ಸೆಕ್ಯುಲರ್" ದೃಷ್ಟಿಕೋನದಲ್ಲಿ ನೋಡಲು ಸಾಧ್ಯವಿಲ್ಲ.

ಅದೇ ರೀತಿ ಅಯೋಧ್ಯದ ರಾಮ ಜನ್ಮಭೂಮಿಗಾಗಿ ನಡೆಸಿದ ಹಿಂದುತ್ವ ಚಳುವಳಿಯನ್ನು "ಸೆಕ್ಯುಲರ್" ಎಂದು ಹೇಳಲು ಸಾಧ್ಯವಿಲ್ಲ. ಅಯೋಧ್ಯ ತೀರ್ಪನ್ನು ನೀಡಿದ ಕೋರ್ಟ್ ಸೆಕ್ಯುಲರಿಸಂನ "ರಾಜಕೀಯ ಮುಖವನ್ನು" ಅಥವಾ "ರಾಜಕೀಯ ಯೋಜನೆ"ಯನ್ನು ಪ್ರತಿನಿಧಿಸಿದರೂ, ಅದು ಅಂತಿಮವಾಗಿ ಸೆಕ್ಯುಲರಿಸಂ ಅನ್ನು ಗಟ್ಟಿಗೊಳಿಸುವ ಬದಲಿಗೆ ಸೆಕ್ಯುಲರಿಸಂ ಅವಕಾಶಗಳನ್ನು, ಸ್ಥಳಗಳನ್ನು ಕುಂಠಿತಗೊಳಿಸುವುದು ನಿರ್ವಿವಾದ.

ಸೆಕ್ಯುಲರಿಸಂ ಅನ್ನು ವಿಶ್ಲೇಷಿಸುವಾಗ ಅದನ್ನು ಬರೇ ರಾಜಕೀಯ ಯೋಜನೆ ಅಥವಾ ಪ್ರೋಜೆಕ್ಟ್ ಆಗಿ ನೋಡುತ್ತೇವೆಯೇ ಹೊರತು ಅದನ್ನು ಸಾಮಾಜಿಕ ಯೋಜನೆಯಾಗಿಯಲ್ಲ. ಇದನ್ನು ಎರಡನೇ ಮಿಥ್ಯೆ ಎನ್ನಬಹುದು. ವಾಸ್ತವವಾಗಿ ಅದು ಒಂದು ಸಾಮಾಜಿಕ ಹಾಗೂ ರಾಜಕೀಯ ಯೋಜನೆ ಕೂಡ ಹೌದು. ರಾಜಕೀಯ ಯೋಜನೆಯಾಗಿ ವಿಶ್ಲೇಷಿಸುವಾಗ ಅದನ್ನು ರಾಜ್ಯದ ತಾತ್ವಿಕತೆಯ ಭಾಗವಾಗಿ ಹಾಗೂ ರಾಜಕೀಯದ ಭಾಗವಾಗಿ ನೋಡುತ್ತೇವೆ. ವಾಸ್ತವವಾಗಿ ಸೆಕ್ಯುಲರಿಸಂ ಒಂದು ರಾಜಕೀಯ ಹಾಗೂ ಸಾಮಾಜಿಕ ತತ್ವ, ಇವೆರಡು ಜೊತೆ ಜೊತೆಯಾಗಿ ಅಥವಾ ಒಟ್ಟೊಟ್ಟಿಗೆ ಹೋಗಬೇಕಾಗಿಲ್ಲ.

ಭಾರತದಲ್ಲಿ ಇವೆರಡು ಕ್ರಮಿಸಿದ ದಾರಿಗಳು ಬೇರೆ ಬೇರೆ. ಸಾಮಾಜಿಕವಾಗಿ ಸೆಕ್ಯುಲರಿಸಂ ನಾಗರೀಕ ಸಮಾಜದ ವಿವಿಧ ರೂಪಕವಾಗಿ ಕ್ರಮಿಸಲು ಯತ್ನಿಸಿದರೂ, ದುರಂತವೆಂದರೆ ಅದಕ್ಕೆ ಅದೇ ನಾಗರೀಕ ಸಮಾಜದ ವಿವಿಧ ಕೋಮುವಾದಿ ಸಂಘಟನೆಗಳಿಂದ ವಿರೋಧಗಳು ಬಂದವು. ಹಾಗೂ ಸೆಕ್ಯುಲರಿಸಂನ ಅವಕಾಶಗಳನ್ನು ಅಪಹರಣ ಅಥವಾ ಹೈಜಾಕ್ ಮಾಡಿದವು. ಕೋಮುವಾದಿ ನಾಗರಿಕ ಸಮಾಜಕ್ಕೆ ಸೆಕ್ಯುಲರ್ ಸ್ಥಳಗಳು ಅಥವಾ ಸ್ಥಳಗಳು ಕುಂಠಿತ ಆಥವಾ ಸಂಕುಚಿತವಾದಷ್ಟು ಸಂತೋಷ- ಯಾಕೆಂದರೆ ಇದು ಕೊಮುವಾದ ಸಿದ್ಧಾಂತಗಳು ವಿಸ್ತರಿಸಲು ಹಾಗೂ ಆಳವಾಗಿ ಬೇರೂರಲು ಅನುವು ಮಾಡಿಕೊಡುತ್ತದೆ.

ದುರಂತವೆಂದರೆ ಇದು ನಿರಂತರವಾದ ಕೋಮು ಘರ್ಷಣೆಗಳಿಗೆ, ಕೋಮುವಾದ-ಸೆಕ್ಯುಲರಿಸಂ ಮುಖಾಮುಖಿಯಾಗಲು ದಾರಿ ಮಾಡಿಕೊಡುತ್ತದೆ. ಅಲ್ಲದೇ ಸ್ಪರ್ಧಾತ್ಮಕ ಕೋಮುವಾದಕ್ಕೂ ಅವಕಾಶ ಮಾಡಿಕೊಟ್ಟಿದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಕರಾವಳಿಯಲ್ಲಿ ಹುಟ್ಟಿ ಬೆಳೆದ ಹಿಂದೂತ್ವ, ಹಾಗೂ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ಇವುಗಳಿಗೆ ಉತ್ತಮ ಉದಾಹರಣೆ.

ಭಾರತದಲ್ಲಿ ಸೆಕ್ಯುಲರಿಸಂನ ನೆಲೆಗಟ್ಟುಗಳನ್ನು ಆಧುನಿಕತೆಯಲ್ಲಿ ನೋಡುವ ಪರಿಪಾಠ ಹೊಸತೇನಲ್ಲ. ಅದರ ಸಾಮಾಜಿಕ ತಳಹದಿಗಳು ವಸಾಹತುಶಾಹಿ ಆಧುನಿಕತೆ ಪೂರ್ವದಲ್ಲಿ, ಅದರಲ್ಲೂ ಸಮನ್ವಯ ಸಂಸ್ಕೃತಿಯಲ್ಲಿ ಆಳವಾಗಿತ್ತು ಎಂದರೂ ತಪ್ಪಾಗಲಾರದು.. ಸೂಫಿ ಪಂಥ, ನಾಥ ಪಂಥಗಳಲ್ಲಿ, ಭಕ್ತಿ ಪಂಥಗಳಲ್ಲಿ ಮತ್ತದರ ಪರಂಪರೆ ಅಥವಾ "ಸಿಲ್ ಸಿಲಾ"ಗಳಲ್ಲಿ ನೋಡಬಹುದು .ಈ ಪರಂಪರೆ ನಮ್ಮಲ್ಲಿ ಅಮೂರ್ತವಾದ ಹಾಗೂ ಅಸ್ಪಷ್ಟವಾದ ಸಮುದಾಯಗಳನ್ನು ನಿರ್ಮಿಸಿದ್ದು ನಿರ್ವಿವಾದ. ಇವುಗಳನ್ನು "ಫಜ್ಜಿ ಕಮ್ಯುನಿಟಿ" ಅಥವಾ ಸಮುದಾಯಗಳೆಂದು ಕರೆಯಬಹುದು.

ಯಾಕೆಂದರೆ ಈ ಸಮನ್ವಯ ಸಂಸ್ಕೃತಿಗಳಿಂದ ನಿರ್ಮಾಣಗೊಂಡ ಸಮುದಾಯಗಳನ್ನು "ಹಿಂದೂ", ಅಥವಾ "ಮುಸ್ಲಿಂ"ಗಳೆಂದು ನಿಚ್ಚಳವಾಗಿ ಗುರುತಿಸಲು ಸಾಧ್ಯವಿಲ್ಲ. ಆ ಸಮನ್ವಯ ಸಂಸ್ಕೃತಿಯನ್ನು ಪ್ರತಿನಿಧಿಸುವ ದರ್ಗಾಗಳು, ಗುಡಿಗಳು, ಸಮಾಧಿಗಳು ಸೆಕ್ಯುಲರಿಸಂನ ಪ್ರತೀಕಗಳಾಗಿದ್ದವು, ಈ ಸಮನ್ವಯ ಸಂಸ್ಕೃತಿಯಿಂದ ನಿರ್ಮಿತಿಗೊಂಡ ಸಮುದಾಯಗಳು "ಹಿಂದೂ"ಗಳೂ ಹೌದು ಮುಸ್ಲಿಮರೂ ಹೌದು - ಅವುಗಳು

ಸಮನ್ವಯ ಸಂಸ್ಕೃತಿಗಳಿಂದ ನಿರ್ಮಾಣಗೊಂಡ ಸಮುದಾಯಗಳನ್ನು "ಹಿಂದೂ", ಅಥವಾ "ಮುಸ್ಲಿಂ"ಗಳೆಂದು ನಿಚ್ಚಳವಾಗಿ ಗುರುತಿಸಲು ಸಾಧ್ಯವಿಲ್ಲ. ಆ ಸಮನ್ವಯ ಸಂಸ್ಕೃತಿಯನ್ನು ಪ್ರತಿನಿಧಿಸುವ ದರ್ಗಾಗಳು, ಗುಡಿಗಳು, ಸಮಾಧಿಗಳು ಸೆಕ್ಯುಲರಿಸಂನ ಪ್ರತೀಕಗಳಾಗಿದ್ದವು, ಈ ಸಮನ್ವಯ ಸಂಸ್ಕೃತಿಯಿಂದ ನಿರ್ಮಿತಿಗೊಂಡ ಸಮುದಾಯಗಳು "ಹಿಂದೂ"ಗಳೂ ಹೌದು ಮುಸ್ಲಿಮರೂ ಹೌದು- ಅವುಗಳು ಮುಸ್ಲಿಮರ ಮೊಹರಂ ಅನ್ನು ಆಚರಿಸುತ್ತವೆ, ಹಿಂದೂಗಳ ದೀಪಾವಳಿಯನ್ನೂ ಕೂಡ ಆಚರಿಸುತ್ತವೆ, ಮನೆ ದೇವರು "ಅಲ್ಲಾನೂ ಹೌದು, ಕೃಷ್ಣನೂ ಹೌದು" .ಈ ರೀತಿಯ ಸಮುದಾಯಗಳನ್ನು ಒಂದು ನಿರ್ಧಿಷ್ಟ "ಧರ್ಮ" ಅಥವಾ "ರಿಲಿಜಿಯನ್" ಚೌಕಟ್ಟಿನಲ್ಲಿ ತರಲು ಸಾಧ್ಯವಿಲ್ಲ ಹಾಗೂ ಸಾಧ್ಯನೂ ಇಲ್ಲ.

ಮುಸ್ಲಿಮರ ಮೊಹರಂ ಅನ್ನು ಆಚರಿಸುತ್ತವೆ, ಹಿಂದೂಗಳ ದೀಪಾವಳಿಯನ್ನೂ ಕ್ಕೂಡ ಆಚರಿಸುತ್ತವೆ, ಮನೆ ದೇವರು "ಅಲ್ಲಾನೂ ಹೌದು, ಕೃಷ್ಣನೂ ಹೌದು" .ಈ ರೀತಿಯ ಸಮುದಾಯಗಳನ್ನು ಒಂದು ನಿರ್ಧಿಷ್ಟ "ಧರ್ಮ" ಅಥವಾ "ರಿಲಿಜಿಯನ್" ಚೌಕಟ್ಟಿನಲ್ಲಿ ತರಲು ಸಾಧ್ಯವಿಲ್ಲ ಹಾಗೂ ಸಾಧ್ಯನೂ ಇಲ್ಲ. ಭಾರತದ ತುಂಬೆಲ್ಲಾ ಹರಡಿದ್ದ ಈ ಸಂಸ್ಕೃತಿಗಳು ಸೆಕ್ಯುಲರಿಸಂನ ಸಾಮಾಜಿಕ ಬುನಾದಿಗಳಾದವು ಹಾಗೂ ತಳಹದಿಗಳಾದವು.

ವಿಚಿತ್ರವೆಂದರೆ ಈ ಸಂಸ್ಕೃತಿ ಪಾಶ್ಚಾತ್ಯ ಆಧುನಿಕತೆಯ ಪೂರ್ವದಲ್ಲಿಯೇ ಇತ್ತು. ಎರಡನೇ ವಿಚಿತ್ರವೆಂದರೆ ಈ ಪರಂಪರೆ ಕೆಲವೊಮ್ಮೆ ರಾಜಕೀಯ ನೆಲೆಗಟ್ಟುಗಳು ಕೂಡ ಆದವು. ಇದಕ್ಕೆ ಉತ್ತಮ ಉದಾಹರಣೆ ಗ್ವಾಲಿಯರ್ ಸಂಸ್ಥಾನ. ಇವತ್ತೀಗೂ ಆ ಸಂಸ್ಥಾನದ ಗುರುಗಳು "ಸೂಫಿಗಳು". ಇದರರ್ಥ ಸೆಕ್ಯುಲರಿಸಂನ ರಾಜಕೀಯ ನೆಲೆಗಟ್ಟುಗಳು ಬಹಳ ಗಟ್ಟಿಯಾಗಿದ್ದವು ಎಂಬರ್ಥವಲ್ಲ. ಅದು ಯಾವತ್ತೂ ಅನಿಶ್ಚಿತವಾಗಿತ್ತು. ಇತಿಹಾಸದ ನಿರ್ಮಾಣದ ಸಂದರ್ಭದಲ್ಲಿ ಕೆಲವೊಮ್ಮೆ ಅದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಇದಕ್ಕೆ ಮೊಗಲ್ ದೊರೆ ಔರಂಗ ಜೇಬನೇ ಸಾಕ್ಷಿ. ಅವನು ಹಿಂದೂಗಳ ವಿರೋಧಿ ಎಂದೆಲ್ಲಾ ವಾದಿಸುತ್ತೇವೆ.

ಅದೇ ಸಂದರ್ಭದಲ್ಲಿ ಅವನು ವೃಂದಾವನದಲ್ಲಿರುವ ರಾಮ-ಬಲರಾಮ ದೇವಸ್ಥಾನದ ಬಲರಾಮ ವಿಗ್ರಹದ ಕಿರೀಟಕ್ಕೆ ನೀಡಿದ ವಜ್ರದ ಕಾಣಿಕೆಯನ್ನು ಹೇಗೆ ಅರ್ಥೈಸಬಹುದು? ಮರಾಠ ಸೇನೆ ಶೃಂಗೇರಿಯನ್ನು ಲೂಟಿ ಮಾಡಿದಾಗ, ಶಂಕರಾಚಾರ್ಯರು ದೇಶ ಪರ್ಯಟನೆ ಮಾಡುತ್ತಿದ್ದ ಸಂದರ್ಭದಲ್ಲಿ ಅಡ್ಡ ಪಲ್ಲಕ್ಕಿಯ ಹಾಗೂ ಎಲ್ಲಾ ಬಿರುದು ಬಾವಲಿಗಳೊಂದಿಗೆ ಸನ್ಮಾನಿಸಬೇಕೆಂದು ಹಾಗೂ ಕರೆತರಬೇಕೆಂದು ಆಜ್ಞಾಪಿಸಿದ ಟಿಪ್ಪು ಸುಲ್ತಾನನನ್ನು ಹೇಗೆ ಅರ್ಥೈಸಬಹುದು?

ಈ ರೀತಿಯ ಅನಿಶ್ಚಿತ, ಗೊಂದಲ ವಸಾಹತು ಪೂರ್ವಕ್ಕೆ ಸೀಮಿತಗೊಳ್ಳಲಿಲ್ಲ. ಈ ರೀತಿಯ ಗೊಂದಲ ಮುಂದೆ ವಸಾಹತು ಹಾಗೂ ವಸಾಹತೋತ್ತರ ಕಾಲಾವಧಿಯಲ್ಲಿ ಸಾಗಿದ್ದನ್ನು ನಾವು ನೋಡಬಹುದು. ವಸಾಹತುಶಾಹಿ ತನ್ನ ಆಳ್ವಿಕೆಯನ್ನು ಸೆಕ್ಯುಲರ್ ರಾಜಕೀಯ ಯೋಜನೆಯಾಗಿ ನೋಡಿಕೊಂಡರೂ ಅಥವಾ ಹೇಳಿಕೊಂಡರೂ ಅದರ ರಾಜಕೀಯ ಯೋಜನೆ ಅಂತಿಮ ವಿಶ್ಲೇಷಣೆಯಲ್ಲಿ ಸೆಕ್ಯುಲರ್ ಆಗಿರಲಿಲ್ಲ.- ಅದರ ಸೆಕ್ಯುಲರ್ ಯೋಜನೆಗಳು ಪಾರ್ಲಿಮೆಂಟರಿ ವ್ಯವಸ್ಥೆ, ಕೃಷಿಯಲ್ಲಿ ಅಳವಡಿಸಿದ ಸಾಮಾಜಿಕ ಸಂಬಂಧಗಳು, ಶಿಕ್ಷಣ, ಇತ್ಯಾದಿಗಳಲ್ಲಿ ನೋಡಬಹುದು. ಅದೇ ಸಂದರ್ಭದಲ್ಲಿ ಅದರ ಸಕ್ಯುಲರ್ ವಿರೋಧಿ ಯೋಜನೆ ಅಷ್ಟೇ ಗಟ್ಟಿಯಾಗಿತ್ತು. ಅದು ಇತಿಹಾಸವನ್ನು ವಿಭಜಿಸಿದ ಪರಿಯನ್ನು ಗಮನಿಸಿ.

ವಸಾಹತುಶಾಹಿಯ ಇತಿಹಾಸಕಾರರು ಭಾರತದ ಇತಿಹಾಸವನ್ನು ಪ್ರಪ್ರಥಮ ಬಾರಿಗೆ ಮೂರು ಹಂತವನ್ನಾಗಿ ವಿಭಾಗಿಸಿದರು. ಇಲ್ಲಿ ಸೂಕ್ಷ್ಮವಾಗಿ ಧರ್ಮಾಧಾರಿತ ಇತಿಹಾಸವಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರಾಚೀನ ಇತಿಹಾಸವನ್ನು ಹಿಂದೂ ಇತಿಹಾಸವೆಂದು ವಿಭಜಿಸಿದರೆ ಅಥವಾ ಚಿತ್ರಿಸಿದರೆ, ಮಧ್ಯಕಾಲದ ಇತಿಹಾಸವನ್ನು ಮುಸ್ಲಿಂ ಆಳ್ವಿಕೆ ಕಾಲವೆಂದು ಚಿತ್ರಿಸಿದರು. ಆದರೆ ಕೊನೆಯ ಭಾಗವನ್ನು ಬ್ರಿಟಿಷ್ ಆಳ್ವಿಕೆ ಎಂದು ಚಿತ್ರಿಸಿದರು ಇದು ಮೇಲ್ನೋಟಕ್ಕೆ ಜೆ.ಎಸ್. ಮಿಲ್‌ನ ರಾಜಕಾರಣವೆಂದರೂ, ಅಂತಿಮ ವಿಶ್ಲೇಷಣೆಯಲ್ಲಿ ಅದು ವಸಾಹತುಶಾಹಿಯ ರಾಜಕಾರಣವಾಗಿತ್ತು.

ದುರಂತವೆಂದರೆ, ಇದೇ ರೀತಿಯ ರಾಜಕಾರಣವನ್ನು ಮುಂದೆ ನಮ್ಮ ಇತಿಹಾಸಕಾರರು ಉಪಯೋಗಿಸುತ್ತಾ ಬಂದರು. ಇದು ಸೆಕ್ಯುಲರಿಸಂ ಅನ್ನು ಒಂದು ಸಾಮಾಜಿಕ ಯೋಜನೆಯಾಗಿ ತಳವೂರದಂತೆ ತಡೆಯೊಡ್ಡಿತು. ಇವತ್ತಿಗೂ ಅದರ ಛಾಯೆಯನ್ನು ಕೋಮುವಾದದ ಸಂಕಥನದ ಅಥವಾ, ಕೋಮುವಾದದ ಸಂಘರ್ಷದ ಸಂದರ್ಭದಲ್ಲಿ ಕಂಡು ಬರುವುದು ವಾಸ್ತವ. ಅದು ಅಯೋಧ್ಯೆಯ ತೀರ್ಪಿನಲ್ಲೂ ಅಡಕವಾಗಿತ್ತು.

ಸೆಕ್ಯುಲರಿಸಂನ ರಾಜಕೀಯ ಗೊಂದಲಗಳು ಇನ್ನಷ್ಟು ಕಂಡುಬರುವುದು ಭಾರತದ ವಿಭಜನೆಯ ಸಂದರ್ಭದಲ್ಲಿ ಅದರಲ್ಲೂ ಸಂವಿಧಾನ ರಚನಾ ಸಮಿತಿಯ ಸಭೆಯಲ್ಲಿ. 1948ರ ಸಭೆಯ ನಡವಳಿಕೆಯನ್ನು ಗಮನಿಸಿದರೆ ಇದು ಸ್ಪಷ್ಟವಾಗಿ ಕಂಡುಬರುತ್ತದೆ.

ಮೋದಲನೇದಾಗಿ ಸಂವಿಧಾನ ರಚನಾ ಸಮಿತಿಯ ಸದಸ್ಯರು ಮಾತನಾಡುವಾಗಲೆಲ್ಲಾ "ಸೆಕ್ಯುಲರಿಸಂ" ಅನ್ನು "ಧರ್ಮಕ್ಕೆ" ಮುಖಾಮುಖಿಯಾಗಿ ಪ್ರಯೋಗಿಸಿದ್ದು ವಾಸ್ತವ. ಇಲ್ಲಿ ಧರ್ಮವೆಂದರೆ "ರಿಲಿಜಿಯನ್: ಅಥವಾ ಧರ್ಮವೆಂದರೆ ಸನಾತನ ವೈದಿಕ ಧರ್ಮವೇ ಅಥವಾ ಪ್ರಾಚೀನ ಸಂಪ್ರದಾಯವೇ ಎಂಬ ಗೊಂದಲ ಸ್ಪಷ್ಟವಾಗಿ ಕಂಡು ಬರುತ್ತದೆ. ಕೆಲವರಿಗೆ ಅದು ಸನಾತನ ಧರ್ಮ. ಇನ್ನು ಕೆಲವರಿಗೆ ಅದು "ರಿಲಿಜಿಯನ್" ಹಾಗೂ ಸಾಂಪ್ರದಾಯ ಅಥವಾ ವೈದಿಕ ಸಂಸ್ಕೃತಿ.

ಇನ್ನೂ ಕೆಲವರಿಗೆ ಸೆಕ್ಯುಲರಿಸಂ ಕುರಿತು ಭಯವೂ ಇತ್ತು. ಸೆಕ್ಯುಲರ್ ರಾಜ್ಯ ನೀಡುವ ಧಾರ್ಮಿಕ ಹಕ್ಕು ಬಹುಸಂಖ್ಯಾತ ಸಮುದಾಯದ ಸಂಸ್ಕೃತಿಯನ್ನೇ ನಾಶ ಮಾಡಬಹುದೆಂಬ ಭಯ ಅಡಕವಾಗಿತ್ತು. ಸಂವಿಂಧಾನ ರಚನಾ ಸಮಿತಿ ಸದಸ್ಯರಾದ ಲೋಕನಾಥ ಮಿಶ್ರರ ಪ್ರಕಾರ It can only mean paving the way for the complete annihilation of Hindu culture, the Hindu way of life". and manners.

ಅದೇ ಸಂದರ್ಭದಲ್ಲಿ ಭಾರತ ಸೆಕ್ಯುಲರ್ ರಾಜ್ಯವಾಗಬೇಕೆ ಎಂಬುದು ಕೂಡ ಚರ್ಚೆಗೊಳಗಾಯಿತು. ಭಾರತದ ಸೆಕ್ಯುಲರ್ ರಾಜ್ಯದ ಸ್ವರೂಪಗಳೇನಿರಬೇಕು? ರಾಜ್ಯ ಸಂಪೂರ್ಣವಾಗಿ ಧರ್ಮ ನಿರಪೇಕ್ಷತೆಯನ್ನು ಎತ್ತಿಹಿಡಿಯಬೇಕೆ? ಅಥವಾ ಸರ್ವ ಧರ್ಮ ಸಮನ್ವಯತೆಯನ್ನು ಪಾಲಿಸಿದರೆ ಮಾತ್ರ ಸೆಕ್ಯುಲರ್ ರಾಜ್ಯದ ಸ್ಥಾಪನೆಯಾಗಬಲ್ಲುದೆ? ಇತ್ಯಾದಿಗಳು ಕೂಡ ಚರ್ಚೆಗೊಳಗಾದವು. ಸಂವಿಧಾನ ರಚನಾ ಸಮಿತಿಯ ಸದಸ್ಯರಲ್ಲಿ ಪ್ರೊ. ಕ.ಟಿ. ಶಾಹರೊಬ್ಬರೇ ಸ್ಕೆಕ್ಯುಲರ್ ರಾಜ್ಯದ ಸ್ವರೂಪಗಳನ್ನು ವಿವರಿಸಲು ಯತ್ನಿಸಿದ್ದರು ಎಂಬುದು ಸತ್ಯ. ದುರಂತವೆಂದರೆ ಅವರ ಯತ್ನ ಸಫಲವಾಗಲೇ ಇಲ್ಲ. ಅವರು ತಂದ ತಿದ್ದುಪಡಿ 366ರನ್ನು ಉಲ್ಲೇಖಿಸುವುದಾದರೆ,"

"The State in India being secular shall have no concern with any religion, creed or profession of faith; and shall observe an attitude of absolute neutrality in all matters relating to the religion of any class of its citizens or other persons in the Union."

ಈ ತಿದ್ದುಪಡಿಯನ್ನು ಅಳವಡಿಸುತ್ತಿದ್ದರೆ ಬಹುಷ: ರಾಜ್ಯ ಅಥವಾ ಪ್ರಭುತ್ವ ಹಾಗೂ ಧರ್ಮದ ನಡುವೆ ಸಂಪೂರ್ಣವಾದ ಅಂತರ ಬರುತ್ತಿತ್ತು, ಎರಡನೇದಾಗಿ ಇದು ರಾಜ್ಯವನ್ನು ಧರ್ಮದ ಹಿಡಿತದಿಂದ ಬಿಡುಗಡೆಗೊಳಿಸುತ್ತಿತ್ತು ಮಾತ್ರವಲ್ಲದೇ ಸೆಕ್ಯುಲರಿಸಂನ ರಾಜಕೀಯ ಗೊಂದಲಗಳನ್ನು ನಿವಾರಿಸುತಿತ್ತು. ಆದರೆ ಈ ರೀತಿಯ ಗೊಂದಲಗಳು ಹಾಗೇನೆ ಉಳಿದು ಬಿಟ್ಟವು.

ಇವತ್ತಿನ ಸಂದರ್ಭದಲ್ಲಿ ಸೆಕ್ಯುಲರಿಸಂಗೆ ಅತೀ ದೊಡ್ಡ ಸವಾಲು ಬಂದಿರುವುದು ರಾಜ್ಯದ ಎಡಬಿಡಂಗಿ ಧೋರಣೆಗಳಿಂದ ಹಾಗೂ ಕೋಮುವಾದಿ ನಾಗರಿಕ ಸಮಾಜದಿಂದ. ನೈಜವಾಗಿ ನೋಡುವುದಾದರೆ ಸೆಕ್ಯುಲರಿಸಂ ಒಂದು ರಾಜಕೀಯ ಯೋಜನೆಯಾಗಿ ಬಹಳ ವರುಷಗಳೇ ಕಳೆದಿಲ್ಲ-ಬರೇ ಮೂವತ್ತು ವರುಷಗಳು ಕಳೆದಿವೆ. ಅದು ಇನ್ನು ಕೂಡ ಪರಿಪಕ್ವವಾಗಿ ಬೆಳೆಯಬೇಕಾಗಿದೆ. ಈ ಬಿಕ್ಕಟ್ಟಿನಿಂದಾಗಿ ಪ್ರಭುತ್ವ ಅಥವಾ ಸರಕಾರ ಸಕ್ಯುಲರಿಸಂ ಕುರಿತು ನಿರ್ಧಿಷ್ಟ ನಿರ್ಧಾರಗಳನ್ನು, ಧೋರಣೆಗಳನ್ನು ತೆಗೆದುಕೊಳ್ಳಲು ಅಸಾಧ್ಯವಾಗಿರುವುದು ಕೂಡ ಅಷ್ಟೇ ಸತ್ಯ. ಪ್ರಭುತ್ವದ ಬಹು ಧೋರಣೆ - ಬಹುರೂಪಿ ಸ್ವರೂಪಗಳು ಸಕ್ಯುಲರಿಸಂ ಒಂದು ಗಟ್ಟಿಯಾದ ರಾಜಕೀಯ ಯೋಜನೆ ಹಾಗೂ ತತ್ವವಾಗಲು ಅವಕಾಶ ಮಾಡಿಕೊಡಲಿಲ್ಲ ವೆಂಬುದು ಅಷ್ಟೇ ಸ್ಪಷ್ಟ. ಸರಕಾರ ಕೆಲವೊಮ್ಮೆ "ಮೃದು" ಇನ್ನು ಕೆಲವೊಮ್ಮೆ "ಬಲಾಢ್ಯ", ಮತ್ತು ಕೆಲವೊಮ್ಮೆ , "ಬಡಕಲು" ಇತ್ಯಾದಿ ಧೋರಣೆಗಳನ್ನು ತಾಳುವುದನ್ನು ನಾವು ನೋಡಬಹುದು. ಇದು ರಾಜಕೀಯ ಎಡಬಿಡಂಗಿತನಕ್ಕೆ ಕಾರಣವೆಂದು ಹೇಳಬಹುದು. ಅದು ಆಗಾಗ ವ್ಯಕ್ತಗೊಳ್ಳುತ್ತದೆ: ಸರಕಾರಿ ಆಸ್ತಿಯಲ್ಲಿ ಯಾರು ಬೇಕಾದರೂ ಮಸೀದಿ, ದೇವಸ್ಥಾನ, ಚರ್ಚ್‌ಗಳನ್ನು ಕಟ್ಟಬಹುದು, ಸರಕಾರಿ ಕಚೇರಿಗಳಲ್ಲಿ ದೇವರ ಫೋಟೋದೊಂದಿಗೆ ಹಬ್ಬವನ್ನು ಆಚರಿಸಬಹುದು, ಸರಕಾರ ಮಠ ಮಂದಿರಗಳಿಗೆ ಹಣ ದಾನ ಮಾಡಬಹುದು ಅಥವಾ ಅದಕ್ಕಾಗಿ ಸಚಿವಾಲಯವನ್ನೇ ರಚಿಸಬಹುದು.

ಎರಡನೇ ಚರ್ಚೆ ಸಂವಿಧಾನದ ಪ್ರಸ್ತಾವನೆಯಲ್ಲಿ ಜಾತ್ಯಾತೀತ ಅಥವಾ ಸೆಕ್ಯುಲರ್ ಶಬ್ದವನ್ನು ಅಳವಡಿಸ ಬೇಕೇ? ಅಥವಾ ಬೇಡವೇ? ವಾಸ್ತವವಾಗಿ ಪ್ರಸ್ತಾವನೆಯಲ್ಲಿ ಜಾತ್ಯತೀತತೆಯನ್ನು ಅಥವಾ ಸೆಕ್ಯುಲರ್ ಅನ್ನು ಅಳವಡಿಸುವುದರ ಕುರಿತು ಸಾಕಷ್ಟು ಚರ್ಚೆ ಹಾಗೂ ಗದ್ದಲಗಳು ನಡೆದವು. ಅದರ ಪರಾಕಾಷ್ಠೆಯನ್ನು ಅಂದಿನ ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿದ್ದ ಎಚ್.ವಿ ಕಾಮತ್ ಅವರು ತಂದ ತಿದ್ದುಪಡಿಯಲ್ಲಿ ನೊಡಬಹುದು. ಅವರ ಪ್ರಕಾರ ಪ್ರಸ್ತಾವನೆ "ದೇವರ ಹೆಸರಿನಲ್ಲಿ" ಆರಂಭಗೊಳ್ಳಬೇಕು. ಇದಕ್ಕೆ ವಿರೋಧಗಳು ಬರಲು ಕಾರಣಗಳಿದ್ದವು: ಸದಸ್ಯರ ಪ್ರಕಾರ, ಅದರಲ್ಲೂ ರಾಜೇಂದ್ರ ಪ್ರಸಾದ್ ಪ್ರಕಾರ, ಧರ್ಮವೆಂಬುದು ವೈಯಕ್ತಿಕ ವಿಚಾರ, ಅಲ್ಲದೇ ಧರ್ಮದ ಉಲ್ಲೇಖ ಸಂವಿಧಾನದ ಮೂಲ ಆಶಯಗಳ ವಿರುದ್ಧವಾಗಿ ಹೋಗುತ್ತದೆ.

ಇಲ್ಲಿ ಮತ್ತೊಂದು ಹೆದರಿಕೆಯೂ ಅಡಕವಾಗಿತ್ತು– ಅಂತಿಮವಾಗಿ ಇದು ಬಹುಸಂಖ್ಯಾತ ಸಮುದಾಯದ ಇಚ್ಛೆಯನ್ನು ಉಳಿದವರ ಮೇಲೆ ಹೇರುವ ಗಂಭೀರ ಸಾಧ್ಯತೆಗಳನ್ನು ಇನ್ನಿತರ ಸದಸ್ಯರು ಮನಗಾಣಿದ್ದರು. ಈ ಚರ್ಚೆ ಫಲಶ್ರುತಿಯೆಂದರೆ ಎಚ್.ವಿ ಕಾಮತರ ತಿದ್ದುಪಡಿಯನ್ನು ಅಂದಿನ ಸಂವಿಧಾನ ರಚನಾ ಸಮಿತಿ ತಿರಸ್ಕರಿಸಿತ್ತು. ಇನ್ನೊಂದು ವಿಚಿತ್ರವೆಂದರೆ ರಾಜೇಂದ್ರ ಪ್ರಸಾದ ಜಾತ್ಯತೀತ ಅಥವಾ ಸೆಕ್ಯುಲರ್ ಶಬ್ದವನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸುವ ವಿಚಾರವನ್ನು ಸಂವಿಧಾನ ರಚನಾ ಸಮಿತಿ ತೆಗೆದುಕೊಳ್ಳಲೇ ಇಲ್ಲ. ಅದನ್ನು ಮುಂದೆ 1976ರಲ್ಲಿ ತಂದ 42ರ ತಿದ್ದುಪಡಿಯಲ್ಲಿ ಸೇರಿಸಲಾಯಿತು.

ವಾಸ್ತವವಾಗಿ ರಾಜ್ಯ ಧರ್ಮದಿಂದ ದೂರ ಸರಿಯಬಾರದೆಂಬ ವಾದವನ್ನು ಮುಂದಿಡುವ ಬಹಳಷ್ಟು ಸದಸ್ಯರು ಇದ್ದರು. ಈ ವಾದವನ್ನು ಮುಂದಿಡಲು ಕಾರಣಗಳಿದ್ದವು: ಒಂದನೇದಾಗಿ ಸೆಕ್ಯುಲರ್ ಎಂದು ಹೇಳುವ ದೇಶಗಳು ಕೂಡ 'ಧರ್ಮ'ವನ್ನು ರಾಜಕೀಯದ ಚೌಕಟ್ಟಿನಿಂದ ದೂರ ಇಟ್ಟಿಲ್ಲ. ಅಮೆರಿಕಾ ಹಾಗೂ ಬ್ರಿಟನ್ ಇದಕ್ಕೆ ಅಪವಾದವಲ್ಲ. ಎರಡನೇದಾಗಿ ಭಾರತದಲ್ಲಿ ಧರ್ಮ ಮತ್ತು ರಾಜಕೀಯ ಒಂದೇ ನಾಣ್ಯದ ಎರಡು ಮುಖಗಳಾಗಿರುವುದು. ಇದು ಗಾಂಧಿಯ ರಾಜಕಾರಣವನ್ನು ನೆನಪಿಸುತ್ತದೆ.

ಅವರಿಗೂ ಧರ್ಮ ಅಥವಾ ರಿಲಿಜಿಯನ್ ಹಾಗೂ ರಾಜಕಾರಣ ಬೇರೆ ಬೇರೆ ಅಲ್ಲ. ಅವೆರಡು ಜೊತೆ ಜೊತೆಯಾಗಿ ಹೋಗಲೇಬೇಕು. ಧರ್ಮರಹಿತ ರಾಜಕಾರಣ ಅವರ ಪ್ರಕಾರ ಜೀವವಿಲ್ಲದ ಆತ್ಮ. ಇದರ ಫಲಶ್ರುತಿಯಂತೆ ಗಾಂಧಿ ರಿಲಿಜಿಯನ್ ಸಂಕೇತಗಳನ್ನು ಸೆಕ್ಯುಲರ್ ರಾಷ್ಟ್ರೀಯ ಹೋರಾಟದಲ್ಲಿ ಪ್ರಯೋಗಿಸಲು ಸಾಧ್ಯವಾಯಿತು. "ರಾಮ್ ಧುನ್" ರಾಮ "ರಾಜ್ಯ" ಇತ್ಯಾದಿ ಪದಗಳ ಪ್ರಯೋಗ ರಾಷ್ಟ್ರೀಯ ಹೋರಾಟಕ್ಕೆ ಹೊಸ ಆಯಾಮವನ್ನು ನೀಡಿತ್ತು ಎನ್ನಬಹುದು.: ಇದ ರರ್ಥ ಗಾಂಧಿ ಸೆಕ್ಯುಲರ್ ಆಗಿಲ್ಲವೆಂದಲ್ಲ.

1940ರ ದಶಕದಲ್ಲಿ ಸನಾತನ ಹಿಂದೂ ಹಾಗೂ ಗಾಂಧಿಯವರ ನಡುವಿನ ಗಂಭೀರವಾದ ಚರ್ಚೆಗಳನ್ನು ಗಮನಿಸಿದರೆ ಅಥವಾ ಗಾಂಧಿ– ಜಿನ್ನಾ ಚರ್ಚೆಗಳನ್ನು ಗಮನಿಸಿದರೆ ಗಾಂಧಿ ಶ್ರೇಷ್ಠ ಮಟ್ಟದ ಸೆಕ್ಯುಲರ್ ಆಗಿದ್ದರು ಎನ್ನಬಹುದು, ಆದರೆ ಅವರ ರಾಜಕಾರಣವನ್ನು "ಹಿಂದೂ" ರಾಜಕಾರಣವಾಗಿ ಜಿನ್ನಾ ಹಾಗೂ ಇನ್ನಿತರರು ವಿಶ್ಲೇಷಿಸಿದ್ದು ದುರಂತವೆನ್ನಬಹುದು. ಇದು ಅಂತಿಮ ವಿಶ್ಲೇಷಣೆಯಲ್ಲಿ ವಸಾಹತು ವಿರೋಧಿ ಹೋರಾಟ, ರಾಷ್ಟ್ರೀಯ ಚಳವಳಿ, ಕೋಮುವಾದ ತತ್ವಗಳನ್ನು ಒಂದೇ ವೇದಿಕೆಗೆ, ಒಂದೇ ಚೌಕಟ್ಟಿಗೆ ತಂದುಬಿಟ್ಟಿತ್ತು

ಈ ರೀತಿಯ ರಾಜಕಾರಣ ಸೆಕ್ಯುಲರಿಸಂಗೆ ಹೊಸ ಹೊಸ ಸಮಸ್ಯೆಗಳನ್ನು, ಬಿಕ್ಕಟ್ಟನ್ನು ಸೃಷ್ಟಿಸಿತ್ತು ಎಂದರೂ ತಪ್ಪಾಗಲಾರದು. ಇದರ ಫಲಶ್ರುತಿಯೇ ಕೋಮು ಗಲಭೆಗಳು, ಕೋಮುವಾದ ಇತ್ಯಾದಿಗಳ ಬೆಳವಣಿಗೆ. ಇವತ್ತಿನ ಸಂದರ್ಭದಲ್ಲಿ ಸೆಕ್ಯುಲರಿಸಂಗೆ ಅತೀ ದೊಡ್ಡ ಸವಾಲು ಬಂದಿರುವುದು ರಾಜ್ಯದ ಎಡಬಿಡಂಗಿ ಧೋರಣೆಗಳಿಂದ ಹಾಗೂ ಕೋಮುವಾದಿ ನಾಗರಿಕ ಸಮಾಜದಿಂದ. ನೈಜವಾಗಿ ನೋಡುವುದಾದರೆ ಸೆಕ್ಯುಲರಿಸಂ ಒಂದು ರಾಜಕೀಯ ಯೋಜನೆಯಾಗಿ ಬಹಳ ವರುಷಗಳೇ ಕಳೆದಿಲ್ಲ– ಬರೇ ಮೂವತ್ತು ವರುಷಗಳು ಕಳೆದಿವೆ. ಅದು ಇನ್ನು ಕೂಡ ಪರಿಪಕ್ವವಾಗಿ ಬೆಳೆಯಬೇಕಾಗಿದೆ.

ಈ ಬಿಕ್ಕಟ್ಟಿನಿಂದಾಗಿ ಪ್ರಭುತ್ವ ಅಥವಾ ಸರಕಾರ ಸೆಕ್ಯುಲರಿಸಂ ಕುರಿತು ನಿರ್ದಿಷ್ಟ ನಿರ್ಧಾರಗಳನ್ನು, ಧೋರಣೆಗಳನ್ನು ತೆಗೆದುಕೊಳ್ಳಲು ಅಸಾಧ್ಯವಾಗಿರುವುದು ಕೂಡ ಅಷ್ಟೇ ಸತ್ಯ. ಪ್ರಭುತ್ವದ ಬಹು ಧೋರಣೆ ಹಾಗೂ ಬಹುರೂಪಿ ಸ್ವರೂಪಗಳು ಸೆಕ್ಯುಲರಿಸಂ ಒಂದು ಗಟ್ಟಿಯಾದ ರಾಜಕೀಯ ಯೋಜನೆ ಹಾಗೂ ತತ್ವವಾಗಲು ಅವಕಾಶ ಮಾಡಿಕೊಡಲಿಲ್ಲವೆಂಬುದು ಅಷ್ಟೇ ಸ್ಪಷ್ಟ. ಸರಕಾರ ಕೆಲವೊಮ್ಮೆ "ಮೃದು" ಇನ್ನು ಕೆಲವೊಮ್ಮೆ "ಬಲಾಢ್ಯ", ಮತ್ತು ಕೆಲವೊಮ್ಮೆ, "ಬಡಕಲು" ಇತ್ಯಾದಿ ಧೋರಣೆಗಳನ್ನು ತಾಳುವುದನ್ನು ನಾವು ನೋಡಬಹುದು. ಇದು ರಾಜಕೀಯ ಎಡಬಿಡಂಗಿತನಕ್ಕೆ ಕಾರಣವೆಂದು ಹೇಳಬಹುದು.

ಅದು ಆಗಾಗ ವ್ಯಕ್ತಗೊಳ್ಳುತ್ತದೆ: ಸರಕಾರಿ ಆಸ್ತಿಯಲ್ಲಿ ಯಾರು ಬೇಕಾದರೂ ಮಸೀದಿ, ದೇವಸ್ಥಾನ, ಚರ್ಚ್‌ಗಳನ್ನು ಕಟ್ಟಬಹುದು, ಸರಕಾರಿ ಕಚೇರಿಗಳಲ್ಲಿ ದೇವರ ಫೋಟೊದೊಂದಿಗೆ ಹಬ್ಬವನ್ನು ಆಚರಿಸಬಹುದು, ಸರಕಾರ ಮತ ಮಂದಿರಗಳಿಗೆ ಹಣ ದಾನ ಮಾಡಬಹುದು ಅಥವಾ ಅದಕ್ಕಾಗಿ ಸಚಿವಾಲಯವನ್ನೇ ರಚಿಸಬಹುದು. ಈ ರೀತಿಯ ರಾಜಕಾರಣ ಸೆಕ್ಯುಲರಿಸಂ ಯೋಜನೆಯನ್ನು ಕೋಮುವಾದಿ ನಾಗರಿಕ ಸಮಾಜ ಅಪಹರಿಸಲು ಅವಕಾಶ ಮಾಡಿಕೊಡುವುದನ್ನು ನಾವು ಅಯೋಧ್ಯ ಸಂದರ್ಭದಲ್ಲಿ ನೋಡಬಹುದು.. ಒಂದು ಕಾಲದಲ್ಲಿ ಗಟ್ಟಿಯಾಗಿದ್ದ ಸೆಕ್ಯುಲರಿಸಂನ ಸಾಮಾಜಿಕ ತಳಹದಿಗಳು ಶಿಥಿಲವಾಗಿವೆ. ಸಾಮಾಜಿಕ ಸ್ತರಗಳಲ್ಲಿ ಸೆಕ್ಯುಲರಿಸಂನ ಅವಕಾಶಗಳು ಕುಂಠಿತವಾಗಿವೆ.

ವಸಾಹತು ಪೂರ್ವದಲ್ಲಿದ್ದ ಸಮನ್ವಯ ಸಂಸ್ಕೃತಿ ಇವತ್ತಿಲ್ಲ, ನಶಿಸಿ ಹೋಗಿದೆ. ಸಮುದಾಯಗಳ ನಡುವೆ ಸ್ಪಷ್ಟವಾದ ಅಂತರ ಬೆಳೆದಿದೆ, ಸಮುದಾಯಗಳ ನಡುವೆ ಸಂವಾದ ಅಸಾಧ್ಯವಾಗುತ್ತಿದೆ. ಆದಕಾರಣ ಸೆಕ್ಯುಲರಿಸಂನ ಅವಕಾಶಗಳು ಕ್ಷೀಣವಾಗಿವೆ, ಈ ಸಂದರ್ಭದಲ್ಲಿ ಸೆಕ್ಯುಲರಿಸಂ ಸತ್ತು ಹೋಗಿದೆ ಎಂದರೆ ಅಂಥೊಂದು ಮಿಥ್ಯೆಯಾಗುತ್ತದೆ. ಅದು ಕ್ಷೀಣಗೊಂಡರೂ, ಜೀವಂತವಾಗಿರುತ್ತದೆ. ವಿಚಿತ್ರವೆಂದರೆ ಸೆಕ್ಯುಲರಿಸಂ ರಾಜಕೀಯ– ಸಾಮಾಜಿಕ ಯೋಜನೆಗಳ ವೈಫಲ್ಯದ ನಡುವೆಯೂ ಹಾಗೂ ತಳಹದಿಗಳ ಸ್ಪಷ್ಟದ ನಡುವೆಯು ಬದುಕಿರುತ್ತದೆ. ಅದು ಕೊಮುವಾದ ಸಂಕಥನಕ್ಕೆ, ಬಲಪಂಥೀಯ ತತ್ವಗಳಿಗೆ, ಹಿಂದೂತ್ವಕ್ಕೆ, ಇಸ್ಲಾಮಿಕ್ ಹಾಗೂ ಕ್ರಿಶ್ಚಿಯನ್ ಮೂಲಭೂತವಾದಕ್ಕೆ ಮುಖಾಮುಖಿಯಾಗತ್ತಾ ಹೋಗುತ್ತದೆ. ಇದು ಭಾರತದ ವಿಸ್ಮಯಕ್ಕೆ ಸಾಕ್ಷಿ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು.. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಹೊಸ ಪುಸ್ತಕ

ಬುದ್ಧ ಬೆಲೆ: ರೂ. ೩೦೦/-
ಲೇ: ಸಿ.ಎಚ್. ರಾಜಶೇಖರ್

ಜಗತ್ತಿನ ಸರ್ವಶ್ರೇಷ್ಠ ಕಥೆಗಳೆಂದು ಪರಿಗಣಿಸಲಾದ ಬುದ್ಧನ ಬದುಕು ಮತ್ತು ಬೋಧನೆಗಳನ್ನು ಒಳಗೊಂಡ ಪಾಳಿ ಭಾಷೆಯ ಅಮರ ಜಾತಕ ಕಥೆಗಳನ್ನು ಲೇಖಕರು ಕನ್ನಡೀಕರಿಸಿದ್ದಾರೆ. ಇಲ್ಲಿನ ಪ್ರತಿ ಕಥೆಯೂ ನಮ್ಮ ಸಂಕುಚಿತ ಮನೋಭಾವಗಳ ಬಗ್ಗೆ ಮನದಟ್ಟುಮಾಡಿ ಬದುಕಿನ ಉನ್ನತಿ, ಯಶಸ್ಸು, ಪರಿಪೂರ್ಣತೆ ಪ್ರತಿಪಾದಿಸುವ ಹಾಗೂ ಸಂಕೋಲೆಗಳಿಂದ ವಿಮುಕ್ತಿ ಪಡೆಯುವ ಮನೋಸ್ಥೈರ್ಯವನ್ನು ಹೆಚ್ಚಿಸುತ್ತವೆ. ಮಾನಸಿಕ ಪರಿಶುದ್ಧತೆ, ಪರಿವರ್ತನೆಯತ್ತ ನಮ್ಮನ್ನು ಪ್ರೇರೇಪಿಸುವ ಈ ಕೃತಿ ದಮ್ಮ ಸಂದೇಶದ ೭೫ ಜಾತಕ ಕಥೆಗಳ ಕಣಜ.

ಪ್ರ: ಸೌಮ್ಯಶ್ರೀ ಪುಸ್ತಕ ಪ್ರಕಾಶನ
ಬೆಂಗಳೂರು-೫೬೦೦೮೧



ಪ್ರೊ.ಬಿ. ಕೃಷ್ಣಪ್ಪನವರ
ಬರಹಗಳು ಮತ್ತು ಭಾಷಣಗಳು -೨
ಸಂ: ಇಂದಿರಾ ಕೃಷ್ಣಪ್ಪ
ಬೆಲೆ: ರೂ. ೮೦/-

ಕರ್ನಾಟಕದ ದಲಿತ ಚಳವಳಿಯ ಚೈತನ್ಯ ಪುರುಷ ಪ್ರೊ.ಬಿ. ಕೃಷ್ಣಪ್ಪನವರ ಚಿಂತನೆ, ವಾಸ್ತವತೆ, ತಾಯಿ ಹೃದಯದಂತ ವ್ಯಕ್ತಿತ್ವ ಇಲ್ಲಿ ಅನಾವರಣಗೊಂಡಿದೆ. ಚಳವಳಿಗಳ ಆಂತರಿಕ ವೈರುಧ್ಯಗಳ ಬಗ್ಗೆ, ರೈತ ಮತ್ತು ದಲಿತ ಚಳವಳಿಗಳನ್ನು ಒಗ್ಗೂಡಿ ನಡೆಸುವ ಸಾಧ್ಯತೆಗಳ ಬಗ್ಗೆ ಮುಕ್ತ ವಿಚಾರಧಾರೆ ಹಾಗೂ ಪಂಪಯುಗ ಮತ್ತು ಬಸವಯುಗದ ಬಗ್ಗೆ ಇವರ ದೃಷ್ಟಿಕೋನ ಮನನೀಯ. ಕರಪತ್ರ, ಟಿಪ್ಪಣಿ, ವರದಿ, ಪ್ರಬಂಧಗಳು - ಹೀಗೆ ಹಲವು ಸ್ತರದ ಬರಹಗಳಲ್ಲಿ ಒಂದು ಕಾಲಘಟ್ಟದ ವಿದ್ಯಮಾನಗಳು ಇತಿಹಾಸದ ದಾಖಲೆಯಾಗಿ ಗಮನ ಸೆಳೆಯುತ್ತವೆ.



ಮೀಸಲಾತಿ ಬೆಲೆ: ರೂ. ೮೫/-
ಲೇ: ಬಿ.ಕೃಷ್ಣಪ್ಪ & ರಾಮದೇವ ರಾಕೆ

ಅನೇಕ ಗಣ್ಯರು ಮಾಡಿದ ಭಾಷಣಗಳು ಮತ್ತು ಸಂಪಾದಿತ ಬರಹಗಳ ಸಂಗ್ರಹದ ಈ ಕೃತಿಯಲ್ಲಿ ಮೀಸಲಾತಿಯ ಬಗ್ಗೆ ವೈಜ್ಞಾನಿಕವಾದ ಮತ್ತು ಪ್ರಜಾತಾಂತ್ರಿಕವಾದ ನಿಲುವನ್ನು ಪಚುರ ಪಡಿಸುವ ಅಗತ್ಯದ ಬಗ್ಗೆ ಪ್ರತಿಪಾದನೆಯಿದೆ. ಇಲ್ಲಿನ ಲೇಖನಗಳು ದಲಿತರ ಸ್ಥಿತಿಗತಿಯನ್ನು ಮತ್ತು ಮಿಸಲಾತಿಯ ಅಗತ್ಯವನ್ನು ಹಲವು ಕೋನಗಳಿಂದ ವಿಶ್ಲೇಷಣೆ ಮಾಡುತ್ತವೆ. ಅಲ್ಲದೆ ಮಿಸಲಾತಿ ದೊರಕಿಸಿಕೊಡುವ ಸಾಮಾಜಿಕ ಸಮಾನತೆಯನ್ನು ಮೇಲ್ವರ್ಗದವರು ವಿರೋಧಿಸಲು ಕಾರಣವೇನೆಂಬುದನ್ನು ಬೊಟ್ಟುಮಾಡಿ ತೋರಿಸುತ್ತವೆ. ದಲಿತರು ಹಸಿವಿನಿಂದ ಮತ್ತು ಅಪಮಾನದಿಂದ ವಿಮೋಚನೆ ಪಡೆಯಬೇಕಾದ ಜರೂರತ್ತಿನ ಬಗ್ಗೆ ತಿಳುವಳಿಕೆ ನೀಡುತ್ತವೆ.

ಎರಡೂ ಪುಸ್ತಕಗಳ ಪ್ರಕಾಶಕರು:
ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್
ಯಲಹಂಕ, ಬೆಂಗಳೂರು-೬೪

ಕನ್ನಡ ಸಾಹಿತ್ಯ: ತತ್ವ ಮತ್ತು ವಿಮರ್ಶೆ ಕೆಲವು ನೆಲೆಗಳು.
ಲೇ: ಡಾ.ಕಾ.ವೆಂ. ಶ್ರೀನಿವಾಸಮೂರ್ತಿ
ಬೆಲೆ: ರೂ. ೭೫/-

ಪ್ರಾಚೀನ ಕನ್ನಡ ಸಾಹಿತ್ಯದಿಂದಿಡಿದು ಸಮಕಾಲೀನ ಸಾಹಿತ್ಯದವರೆಗಿನ ಇಲ್ಲಿನ ಲೇಖನಗಳಲ್ಲಿನ ಹರವು ಬಹುಮುಖಿಯಾದದ್ದು. ಅಧ್ಯಯನಶೀಲತೆ, ಸಾಂಸ್ಕೃತಿಕ ಆಯಾಮದ ಅಡಿಯಲ್ಲಿ ರಾಜಕೀಯ, ಆರ್ಥಿಕ ವಿಷಯಗಳನ್ನೂ ಪ್ರತಿಪಾದಿಸುವಲ್ಲಿ ಬಹುಶಿಸ್ತೀಯ ಮಾದರಿ ಎದ್ದುಕಾಣುತ್ತದೆ. ಸಮಾಜೋ ಆರ್ಥಿಕ ವಿಷಯಗಳು ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ, ಜಾತಿಯತೆಯ ಮೇಲೆ ಬೀರಿದ ಪರಿಣಾಮ, ಕುಲ ಕಸುಬುಗಳು ಛಿದ್ರವಾಗುವ ವಸಾಹತು ಕಾಲದ ವಾಸ್ತವವನ್ನು ಪರಿಣಾಮಕಾರಿಯಾಗಿ ಕಟ್ಟಿ ಕೊಡಲಾಗಿದೆ.

ಪ್ರಕಾಶಕರು: ದಿವ್ಯಚಂದ್ರ ಪ್ರಕಾಶನ
ಬೆಂಗಳೂರು-೫೬೦೦೭೯

ಕಾವಳದ ಸಂಜೆಯಲ್ಲಿ
ಲೇ: ಚಂದ್ರಶೇಖರ ತಾಳ್ಯ
ಬೆಲೆ: ರೂ. ೭೫/-

ಈ ಕೃತಿಯಲ್ಲಿನ ಕವಿತೆಗಳಲ್ಲಿ ಭೂತ, ವರ್ತಮಾನ, ಇತಿಹಾಸ, ಪುರಾಣ,ಖಾಸಗಿ ಮತ್ತು ಸಾರ್ವತ್ರಿಕ ವಿಷಯಗಳು ಲೇಖಕರ ಅನುಭವದ್ರವ್ಯದಿಂದ ಅಭಿವ್ಯಕ್ತಿಗೊಂಡು ಗಾಢ ಪರಿಣಾಮವನ್ನು ಬೀರುತ್ತವೆ. ಅವರ ವಿಸ್ತೃತವಾದ ಓದಿನಿಂದ ಕಾವ್ಯಭಾಷೆ ಹುರಿಗೊಂಡಿದೆ. ಬಂಡಾಯ ಗುಣಧರ್ಮದ ಕವಿತೆಗಳು ಪರಿಣಾಮಕಾರಿಯಾಗಿ ಓದುಗರನ್ನು ಸೆಳೆಯಬಲ್ಲವು. ಇದು ಒಟ್ಟಾರೆ ಸಮಗ್ರತೆಯ ಮತ್ತು ಸಕಾರಾತ್ಮಕ ಧೋರಣೆಯ ನೆಲೆಯಲ್ಲಿ ಹಲವು ಸ್ತರದ ನೋಟಗಳನ್ನು ನೀಡುವ ಗುಣವಿಶೇಷಗಳನ್ನು ಹೊಂದಿರುವ ಮಹತ್ವದ ಕೃತಿ.

ಪ್ರ: ಆನಂದಕಂದ ಗ್ರಂಥಮಾಲೆ
ಮಲ್ಲಾಡಿಹಳ್ಳಿ



ಆಧುನಿಕ ಕವಿತೆಗಳ ಸಂಗ್ರಹ
ಸಂ: ವಿಜಯಶ್ರೀ ಸಬರದ
ಬೆಲೆ: ರೂ. ೬೦/-

ನವೋದಯದಿಂದ ಬಂಡಾಯದವರೆಗೆ ಬೆಳವಣಿಗೆಯಿರುವ ಈ ಸಂಕಲನದಲ್ಲಿ ಒಂಬತ್ತು ಕವಿಗಳ ಮೂವತ್ತೈದು ಕವಿತೆಗಳಿವೆ. ಕುವೆಂಪು, ಬೇಂದ್ರೆ, ಜಿ.ಎಸ್.ಎಸ್, ಕಂಬಾರ, ಚಂಪಾ ಮುಂತಾದ ಪ್ರತಿಯೊಬ್ಬ ಪ್ರಾತಿನಿಧಿಕ ಕವಿಯ ವಸ್ತು, ಮನೋಧರ್ಮ, ಶೈಲಿ ವಿಭಿನ್ನವಾಗಿದ್ದು, ಸೃಜನಶೀಲತೆಯ ಜೊತೆಗೆ ವಿವಿಧ ಮುಖಗಳ ವಿಸ್ತಾರವನ್ನು ಕಾವ್ಯ ಸಕ್ತರು ಸವಿಯಬಹುದು. ಕಾವ್ಯ ಪರಿಚಯ ಪ್ರತ್ಯೇಕ ಅನುಬಂಧದಲ್ಲಿ ಸೊಗಸಾಗಿ ಮೂಡಿಬಂದಿದ್ದು ಕಾವ್ಯಗಳನ್ನು ಅರ್ಥೈಸಲು ಸಹಕಾರಿಯಾಗಿದೆ.

ಪ್ರಕಾಶಕರು: ಪಲ್ಲವಿ ಪ್ರಕಾಶನ
ಗುಲಬರ್ಗಾ-೫೮೫೧೦೬

ನೆನಪುಗಳ ಮೂಲಕ ಮಾಜಿ ಮುಖ್ಯಮಂತ್ರಿಯೊಬ್ಬರನ್ನು ಗ್ರಹಿಸುತ್ತಾ

ಡಿಸೆಂಬರ್ 10ರಂದು ಮಾಜಿ ಮುಖ್ಯಮಂತ್ರಿ ದಿವಂಗತ ಎಸ್ ನಿಜಲಿಂಗಪ್ಪನವರ 108ನೇ ಹುಟ್ಟುಹಬ್ಬ ಇತ್ತು. ಅದೇನೂ ದೊಡ್ಡ ಆಚರಣೆಯಾಗಿ ರಾಜ್ಯ ಮಟ್ಟದ ಸುದ್ದಿ ಆಗಲಿಲ್ಲ. ಈಗಿರುವ ಮುಖ್ಯ ಮಂತ್ರಿಗಳೂ ಸೇರಿದಂತೆ ಕರ್ನಾಟಕದಲ್ಲಿ ಈಚೆಗೆ ಆಗಿಹೋದ ಬೇರೆ ಬೇರೆ ಪಕ್ಷಗಳ ಮುಖ್ಯಮಂತ್ರಿಗಳನ್ನು ನೆನೆದುಕೊಂಡರೆ ನಿಜಲಿಂಗಪ್ಪನವರ ವ್ಯಕ್ತಿತ್ವ ಮತ್ತು ರಾಜಕಾರಣ ಒಂದು ಕಾಲದಲ್ಲಿ ನಮ್ಮ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಮೌಲ್ಯಯುತ ರಾಜಕಾರಣ ಎನ್ನಬಹುದಾದ ಕಾಲಘಟ್ಟಕ್ಕೆ ಸೇರಿತ್ತು ಎಂಬಂತೆ ಭಾಸವಾಗುತ್ತಿದೆ.

ಎಸ್ ನಿಜಲಿಂಗಪ್ಪ ಚಿತ್ರದುರ್ಗ ಜಿಲ್ಲೆಯವರು. ಮೂಲತಃ ಹರಪನಹಳ್ಳಿ ತಾಲ್ಲೂಕಿನ ಹಲವಾಗಿಲು ಗ್ರಾಮದವರಾದ ನಿಜಲಿಂಗಪ್ಪ ಅವರ ತಾಯಿಯ ಕಡೆ ಸಂಬಂಧದಿಂದಾಗಿ ಚಿತ್ರದುರ್ಗ ಜಿಲ್ಲೆಗೆ ಬಂದು ನೆಲೆಸಿ, ಕಡೆಗೆ ಅವರ ಹುಟ್ಟಿದೂರೇ ಅವರ ಹೆಸರಿನಿಂದ ಕಣ್ಮರೆಯಾಗಿ ಸಿದ್ದವನಹಳ್ಳಿ ನಿಜಲಿಂಗಪ್ಪ ಆಗಿ ಕರ್ನಾಟಕದ ಚರಿತ್ರೆಯಲ್ಲಿ ಉಳಿದುಕೊಂಡರು. ನಿಜಲಿಂಗಪ್ಪನವರು ಒಟ್ಟು ನಾಲ್ಕು ಸಲ ಮುಖ್ಯಮಂತ್ರಿಯಾಗಿ ಹದಿನಾರು ವರ್ಷಗಳ ಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು ಎಂಬ ಮಾಹಿತಿ ನೆನಪಿಗೆ ಬರುತ್ತಿದೆ. ಮೊನ್ನೆ ಯಡಿಯೂರಪ್ಪನವರ ಮುಖ್ಯಮಂತ್ರಿ ಸ್ಥಾನಕ್ಕೆ ಭಿನ್ನಮತೀಯರಿಂದ ಆಪತ್ತು ಬಂದದ್ದು, ನಂತರದಲ್ಲಿ ಅವರ ಸರ್ಕಾರದಲ್ಲಿರುವ ಪ್ರಮುಖ ಸಚಿವರೊಬ್ಬರ ಕುಟುಂಬವರ್ಗ ಹಾಗೂ ಸ್ವತಃ ಮುಖ್ಯಮಂತ್ರಿಯವರ ಕುಟುಂಬವರ್ಗ ಭೂ ಕಬಳಿಕೆಯ ಹಗರಣಗಳಲ್ಲಿ ಸಿಕ್ಕಿಬಿದ್ದದ್ದು, ಹೈಕಮಾಂಡ್ ಈ ಭ್ರಷ್ಟಾಚಾರದ ಆರೋಪಗಳಿಂದ ಮುಕ್ತವಾಗಲಿಕ್ಕಾಗಿ ಯಡಿಯೂರಪ್ಪನವರನ್ನು ಪದಚ್ಯುತಗೊಳಿಸಲು ಲೆಕ್ಕಹಾಕಿದ್ದು ಮತ್ತು ಆಗ ನಡೆದ ಒಟ್ಟಾರೆ ಪ್ರಹಸನ ನಮ್ಮ ನೆನಪಿನಲ್ಲಿ ಇದೆ.

ಯಡಿಯೂರಪ್ಪ ಲಿಂಗಾಯತ ಜಾತಿಗೆ ಸೇರಿದ ಮುಖ್ಯಮಂತ್ರಿ ಎಂಬ ಕಾರಣಕ್ಕೆ ಅವರನ್ನು ಬೆಂಬಲಿಸಲು ಲಿಂಗಾಯತ ಮಠಗಳ ಕೆಲ ಮಠಾಧೀಶರು ಬೀದಿಗಿಳಿದು ಪ್ರತಿಭಟಿಸಿದ್ದು ಕೂಡ ಈ ಸಂದರ್ಭದಲ್ಲಿ ನಡೆಯಿತು. ನಿಜಲಿಂಗಪ್ಪನವರೂ ಕೂಡ ಹೀಗೆಯೇ ತಮ್ಮ ಸ್ಥಾನಕ್ಕೆ ಎರವಾಗಬೇಕಾಗಿ ಬಂದಿದ್ದರೆ ಆಗ ಲಿಂಗಾಯತ ಮಠಗಳ ಸ್ವಾಮೀಜಿಗಳು ಹೀಗೆಯೇ ಪ್ರತಿಭಟನೆ ಮಾಡುತ್ತಿದ್ದರೇ ಎಂಬುದನ್ನು ಕಲ್ಪಿಸಿಕೊಂಡರೆ ಆಗದು ಸಾಧ್ಯವಿಲ್ಲದ ಮಾತಾಗಿತ್ತು ಎಂದು ಅನಿಸುತ್ತದೆ. ಮಠಗಳು ಈ ಪ್ರಮಾಣದಲ್ಲಿ ಆಗ ಬಹಿರಂಗ ರಾಜಕೀಯ ಮಾಡುತ್ತಿರಲಿಲ್ಲ.

ಅಲ್ಲದೆ ಆಗಿನ ರಾಜಕಾರಣಿಗಳು ಮಠಮಾನ್ಯಗಳಿಗೆ ರಾಜ್ಯದ ಬೊಕ್ಕಸದಿಂದ ನೇರವಾಗಿ ಕೋಟಿಗಟ್ಟಲೆ ಹಣವನ್ನು ಕಾಣಿಕೆಯಾಗಿ ನೀಡಿದ ನಿದರ್ಶನಗಳು ಇರಲಿಲ್ಲ. ಅದಕ್ಕಿಂತ ಮುಖ್ಯ ಕಾರಣ ನಿಜಲಿಂಗಪ್ಪ ಆಗ ತಮ್ಮನ್ನು ತಾವು ಲಿಂಗಾಯತರ ನಾಯಕ ಎಂಬಂತೆ ಬಿಂಬಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಪಕ್ಷದ ಧುರೀಣ ಎಂಬಂತೆ ಬಿಂಬಿತವಾಗಲು ಹೆಚ್ಚು ಬಯಸುತ್ತಿದ್ದರು.

ಗಾಂಧಿವಾದದ ಆದರ್ಶಗಳ ಪ್ರಭಾವ ಆಗ ಇನ್ನೂ ಜನಸಮೂಹಗಳ ನಡುವೆ ಒಂದುಮಟ್ಟಿಗೆ ಉಳಿದುಕೊಂಡಿತ್ತು. ನಾಯಕನಾದವನು ತನ್ನನ್ನು ಒಂದು ಜಾತಿ ಅಥವಾ ಪಂಗಡದ ಪ್ರತಿನಿಧಿ ಎಂದು ಬಿಂಬಿಸಿಕೊಂಡು ತನ್ನ ಸ್ಥಾನ ಉಳಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ತಾನು ಶುದ್ಧ ಚಾರಿತ್ರ್ಯವಂತ, ಸರ್ವ ಜನಾದರಣೀಯ, ಆದರ್ಶವಾದಿ, ಕಟ್ಟುನಿಟ್ಟಿನ ಆಡಳಿತಗಾರ ಎಂಬಂತಹ ಪ್ರಭಾವಳಿಯ ಮೂಲಕ ಒಂದು ಸ್ಥಾನಕ್ಕೆ ತನ್ನ ಅರ್ಹತೆಯನ್ನು ಸಾಬೀತುಗೊಳಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದ. ರಾಜ್ಯದ ಮುಖ್ಯಮಂತ್ರಿಯಾಗಿ ಐಷಾರಾಮಿ ಕಾರನ್ನು ಹೊಂದಿದ್ದರೆ ಅದನ್ನು ಜನವಿರೋಧಿತನವೆಂದು ಜನರು ಸ್ಪಷ್ಟವಾಗಿ ಆಡಿಕೊಳ್ಳುತ್ತಿದ್ದರು.

ನೆಹರು ತಮ್ಮ ಕೋಟಿನ ಗುಂಡಿಗೆ ಗುಲಾಬಿ ಸಿಕ್ಕಿಸಿಕೊಂಡು ಬರುವ ಅಭ್ಯಾಸವನ್ನೂ ಬಡಜನರ ಬಗ್ಗೆ ಕಾಳಜಿ ಇಲ್ಲದ ಸೌಂದರ್ಯ ಪ್ರಜ್ಞೆ ಎಂಬಂತೆ ಲೋಹಿಯಾ ಟೀಕಿಸುತ್ತಿದ್ದುದನ್ನು ನೆನೆದರೆ, ರಾಜಕಾರಣಿಗಳ ಸಾರ್ವಜನಿಕ ಬದುಕಿನ ರೀತಿರಿವಾಜುಗಳ ಬಗ್ಗೆ ಜನಸಾಮಾನ್ಯರಲ್ಲಿ ಏನು ಕಲ್ಪನೆ ಹಾಗೂ ನಿರೀಕ್ಷೆ ಇತ್ತು ಎಂಬುದು ಹೊಳೆಯುತ್ತದೆ. ಬೃಹತ್ ಬಂಗಲೆಗಳಲ್ಲಿ ವಾಸಿಸುವುದು, ಮುಖ್ಯಮಂತ್ರಿಯಾದ ಮೇಲೆ ವಿವರಣೆಗೆ ಸಿಕ್ಕದಂತಹ ಸಂಪತ್ತು ಗಳಿಸುವುದು ಕೂಡ ಸಾಮಾನ್ಯ ವಿಚಾರವೆಂಬಂತೆ ಪರಿಗಣಿತವಾಗುತ್ತಿರಲಿಲ್ಲ. ಹಾಗಾಗಿ ಮಂತ್ರಿಮಾನ್ಯರು ಸರಳವಾಗಿ, ಮೌಲ್ಯಯುತವಾಗಿ ಬದುಕಲು ಪ್ರಯತ್ನಿಸುತ್ತಿದ್ದರು ಅಥವಾ ಹಾಗೆ ಕಾಣಿಸಿಕೊಳ್ಳಲಿಕ್ಕಾದರೂ ಶತಾಯಗತಾಯ ಪ್ರಯತ್ನಿಸುತ್ತಿದ್ದರು.

ನಿಜಲಿಂಗಪ್ಪನವರು ಮುಖ್ಯಮಂತ್ರಿತ್ವದ ಅವಧಿ ನನಗೆ ತಿಳಿವಳಿಕೆ ಬರುವ ಹೊತ್ತಿಗೆ ಮುಗಿದುಹೋಗಿತ್ತು. ನಾನು ರಾಜಕಾರಣವನ್ನು ಗಮನಿಸುವಂತಾದಾಗ, ಸರಿಯಾಗಿ ಹೇಳಬೇಕೆಂದರೆ ಈಗ ರಾಜ್ಯದ ಮುಖ್ಯಮಂತ್ರಿಗಳು ಯಾರೆಂದು ಕೇಳಿದರೆ ಹೇಳುವ ವಯಸ್ಸು ತಲುಪಿದ ಮೇಲೆ ದೇವರಾಜ ಅರಸು, ಗುಂಡೂರಾವ್, ಬಂಗಾರಪ್ಪ ಮುಂತಾದವರು ಮುಖ್ಯಮಂತ್ರಿಗಳಾಗಿದ್ದರು. ನಾನು ಸಂತ ಜೋಸೆಫರ ಕಾನ್ವೆಂಟ್ ಶಾಲೆಯಲ್ಲಿ 6-7ನೇ ತರಗತಿ ಓದುವ ಹೊತ್ತಿಗಾಗಲೇ ನಿಜಲಿಂಗಪ್ಪನವರು ಮಾಜಿ ಮುಖ್ಯಮಂತ್ರಿಯಾಗಿದ್ದರು.

ಆಗ ಇಂದಿರಾ ಕಾಂಗ್ರೆಸ್‌ನ ಭರಾಟೆಯ ಕಾಲ. ಅದಕ್ಕೆ ಸಮಬಲವಾಗಿ ಸ್ಪರ್ಧೆಯೊಡ್ಡುವ ಮತ್ತೊಂದು ಪಕ್ಷ ಕರ್ನಾಟಕದಲ್ಲಿ ಇದ್ದಂತೆ ಕಾಣುತ್ತಿರಲಿಲ್ಲ. ನಿಜಲಿಂಗಪ್ಪನವರು ಇಂದಿರಾಗಾಂಧಿಯವರ ಜೊತೆ ಮನಸ್ತಾಪ ಮಾಡಿಕೊಂಡು ಒಂದು ರೀತಿಯಲ್ಲಿ ಪ್ರಭಾವರಹಿತ ರಾಜಕಾರಣಿಯಾಗಿ ಚಿತ್ರದುರ್ಗದಲ್ಲಿ ಕಾಲ ಹಾಕುತ್ತಿದ್ದರು. ಹದಿನಾರು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ, ರಾಷ್ಟ್ರನಾಯಕರ ಸಾಲಲ್ಲಿ ನಿಂತು ಇಂದಿರಾಗಾಂಧಿಯವರ ವ್ಯಕ್ತಿತ್ವ ಕೇಂದ್ರಿತ ರಾಜಕೀಯಕ್ಕೆ ಸವಾಲೊಡ್ಡಿದ ವ್ಯಕ್ತಿತ್ವದವರಾಗಿದ್ದರೂ ಆಗಿನ ಸಂದರ್ಭದಲ್ಲಿ ಪ್ರಭಾವಹೀನರಾಗಿದ್ದರು.

ಇಂದಿರಾ ಕಾಂಗ್ರೆಸ್‌ಗೆ ಸವಾಲೊಡ್ಡಲು ನಿಜಲಿಂಗಪ್ಪ ಮತ್ತು ಅವರ ಸಂಗಡಿಗ ನಾಯಕರು ಕಟ್ಟಿಕೊಂಡಿದ್ದ ಸಂಸ್ಥಾ ಕಾಂಗ್ರೆಸ್ ಬಡವರ ಪರವಾದ ಪಕ್ಷವಾಗಿರದೆ ಬಲಿಷ್ಠ

ಯಡಿಯೂರಪ್ಪ ಲಿಂಗಾಯತ ಜಾತಿಗೆ ಸೇರಿದ ಮುಖ್ಯಮಂತ್ರಿ ಎಂಬ ಕಾರಣಕ್ಕೆ ಅವರನ್ನು ಬೆಂಬಲಿಸಲು ಲಿಂಗಾಯತ ಮಠಗಳ ಕೆಲ ಮಠಾಧೀಶರು ಬೀದಿಗಿಳಿದು ಪ್ರತಿಭಟಿಸಿದ್ದು ಕೂಡ ಈ ಸಂದರ್ಭದಲ್ಲಿ ನಡೆಯಿತು. ನಿಜಲಿಂಗಪ್ಪನವರೂ ಕೂಡ ಹೀಗೆಯೇ ತಮ್ಮ ಸ್ಥಾನಕ್ಕೆ ಎರವಾಗಬೇಕಾಗಿ ಬಂದಿದ್ದರೆ ಆಗ ಲಿಂಗಾಯತ ಮಠಗಳ ಸ್ವಾಮೀಜಿಗಳು ಹೀಗೆಯೇ ಪ್ರತಿಭಟನೆ ಮಾಡುತ್ತಿದ್ದರೇ ಎಂಬುದನ್ನು ಕಲ್ಪಿಸಿಕೊಂಡರೆ ಆಗದು ಸಾಧ್ಯವಿಲ್ಲದ ಮಾತಾಗಿತ್ತು ಎಂದು ಅನಿಸುತ್ತದೆ. ಮಠಗಳು ಈ ಪ್ರಮಾಣದಲ್ಲಿ ಆಗ ಬಹಿರಂಗ ರಾಜಕೀಯ ಮಾಡುತ್ತಿರಲಿಲ್ಲ. ಅಲ್ಲದೆ ಆಗಿನ ರಾಜಕಾರಣಿಗಳು ಮಠಮಾನ್ಯಗಳಿಗೆ ರಾಜ್ಯದ ಬೊಕ್ಕಸದಿಂದ ನೇರವಾಗಿ ಕೋಟಿಗಟ್ಟಲೆ ಹಣವನ್ನು ಕಾಣಿಕೆಯಾಗಿ ನೀಡಿದ ನಿದರ್ಶನಗಳು ಇರಲಿಲ್ಲ.



ಭೂ ಮಾಲೀಕ ಜಾತಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವಂತಹ ಹಿತಾಸಕ್ತಿಗಳನ್ನು ಹೊಂದಿತ್ತು ಎಂಬುದು ಸಂಸ್ಥಾ ಕಾಂಗ್ರೆಸ್ ಮೇಲೆ ಇದ್ದ ಬಹಳ ದೊಡ್ಡ ಟೀಕೆಯಾಗಿತ್ತು. ಇಂದಿರಾಗಾಂಧಿ ಗರೀಬೀ ಹಠಾವೋ ಮತ್ತು ಇಪ್ಪತ್ತು ಅಂಶಗಳ ಕಾರ್ಯಕ್ರಮಗಳ ಮುಖಾಂತರ ಬಡ ಜನರ ಆಶಾಕಿರಣವೆಂಬಂತೆ ಹೊಳೆಯತೊಡಗಿದ್ದರು. ಅದರಲ್ಲಿ ಸತ್ಯಾಂಶ ಮತ್ತು ಮಿಥ್ಯಾಂಶ ಎರಡೂ ಬೆರಕೆಯಾಗಿದ್ದಿರಬಹುದು. ಆದರೆ ಬಡ ಜನರ ಪರವಾಗಿ ನಿಶ್ಚಿತ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಪ್ರಣಾಳಿಕೆಯೇ ಆಕೆಯನ್ನು ಭಾರತದ ಧೀಮಂತ ನಾಯಕಿಯನ್ನಾಗಿ ಪ್ರತಿಫಲಿಸಿತ್ತು ಎಂಬುದಿಲ್ಲಿ ಗಮನಾರ್ಹ.

ಕಾಂಗ್ರೆಸ್‌ನಲ್ಲಿ ಇಂದಿರಾಗಾಂಧಿ ವ್ಯಕ್ತಿಕೇಂದ್ರಿತ ರಾಜಕಾರಣ ನಡೆಸುತ್ತಾ ಪಕ್ಷಕ್ಕಿಂತ ವ್ಯಕ್ತಿಯೇ ಹೆಚ್ಚು ಎಂಬ ವರ್ಚಸ್ಸನ್ನು ಗಳಿಸಿಕೊಳ್ಳುತ್ತಿದ್ದಾರೆ, ಇದು ಕಾಂಗ್ರೆಸ್‌ನ ಮೂಲ ಧ್ಯೇಯಕ್ಕೆ ವಿರುದ್ಧವಾದದ್ದು ಎಂಬುದು ಸಂಸ್ಥಾ ಕಾಂಗ್ರೆಸ್ಸಿಗರ ಮುಖ್ಯ ಆರೋಪವಾಗಿತ್ತು. ಹಾಗೆ ನೋಡಿದರೆ ಸಂಸ್ಥಾ ಕಾಂಗ್ರೆಸ್‌ನಲ್ಲಿ ಯಾವುದೇ ಒಬ್ಬ ನಾಯಕನ ಸುತ್ತ ಅದರ ರಾಜಕಾರಣ ಕೇಂದ್ರಿತವಾದಂತಿರಲಿಲ್ಲ ಎಂಬುದು ನಿಜ. ಆ ಮಟ್ಟಿಗೆ ಅದು ಪ್ರಜಾತಾಂತ್ರಿಕ ಮೌಲ್ಯಗಳಿಗೆ ಅನುಸಾರವಾಗಿದ್ದ ಪಕ್ಷ ರಚನೆಯಾಗಿತ್ತು ಎಂದು ಹೇಳಬಹುದೇನೋ. ಆದರೆ ಆ ಪಕ್ಷದ ನಾಯಕತ್ವದಲ್ಲಿದ್ದ ಬಹುಪಾಲು ಮುಖಂಡರು ತಮ್ಮ ತಮ್ಮ ರಾಜ್ಯಗಳಲ್ಲಿ ಬಲಿಷ್ಠವಾಗಿದ್ದ ಭೂ ಮಾಲೀಕ ಜಾತಿಗಳ ಹಿನ್ನೆಲೆಯಿಂದ ಬಂದವರಾಗಿದ್ದರು. ಅಲ್ಲದೆ, ಇಂದಿರಾ ಕಾಂಗ್ರೆಸ್‌ನ ಹಾಗೆ ನಿರ್ದಿಷ್ಟವಾಗಿ ದೇಶದ ಬಡ ಜನತೆಯ ಪರವಾಗಿ ಘೋಷಿಸಿಕೊಂಡ ಕಾರ್ಯ ಪ್ರಣಾಳಿಕೆ ಅದಕ್ಕೆ ಇರಲಿಲ್ಲ. ಇದರಿಂದಾಗಿ ಸಂಸ್ಥಾ ಕಾಂಗ್ರೆಸ್ ತಿರಸ್ಕೃತಗೊಂಡಿತು, ಇಂದಿರಾ ಕಾಂಗ್ರೆಸ್ ವಿಜೃಂಭಿಸಿತು ಹಾಗೂ ನಿಜಲಿಂಗಪ್ಪನವರಂತಹ ಹಿರಿಯ ರಾಜಕಾರಣಿಗಳು ಪ್ರಭಾವ ಹೀನರಾದರು.

ಕಾಂಗ್ರೆಸ್‌ನಲ್ಲಿ ಇಂದಿರಾಗಾಂಧಿ ವ್ಯಕ್ತಿಕೇಂದ್ರಿತ ರಾಜಕಾರಣ ನಡೆಸುತ್ತಾ ಪಕ್ಷಕ್ಕಿಂತ ವ್ಯಕ್ತಿಯೇ ಹೆಚ್ಚು ಎಂಬ ವರ್ಚಸ್ಸನ್ನು ಗಳಿಸಿಕೊಳ್ಳುತ್ತಿದ್ದಾರೆ, ಇದು ಕಾಂಗ್ರೆಸ್‌ನ ಮೂಲ ಧ್ಯೇಯಕ್ಕೆ ವಿರುದ್ಧವಾದದ್ದು ಎಂಬುದು ಸಂಸ್ಥಾ ಕಾಂಗ್ರೆಸ್ಸಿಗರ ಮುಖ್ಯ ಆರೋಪವಾಗಿತ್ತು. ಹಾಗೆ ನೋಡಿದರೆ ಸಂಸ್ಥಾ ಕಾಂಗ್ರೆಸ್‌ನಲ್ಲಿ ಯಾವುದೇ ಒಬ್ಬ ನಾಯಕನ ಸುತ್ತ ಅದರ ರಾಜಕಾರಣ ಕೇಂದ್ರಿತವಾದಂತಿರಲಿಲ್ಲ ಎಂಬುದು ನಿಜ. ಆ ಮಟ್ಟಿಗೆ ಅದು ಪ್ರಜಾತಾಂತ್ರಿಕ ಮೌಲ್ಯಗಳಿಗೆ ಅನುಸಾರವಾಗಿದ್ದ ಪಕ್ಷ ರಚನೆಯಾಗಿತ್ತು ಎಂದು ಹೇಳಬಹುದೇನೋ. ಆದರೆ ಆ ಪಕ್ಷದ ನಾಯಕತ್ವದಲ್ಲಿದ್ದ ಬಹುಪಾಲು ಮುಖಂಡರು ತಮ್ಮ ತಮ್ಮ ರಾಜ್ಯಗಳಲ್ಲಿ ಬಲಿಷ್ಠವಾಗಿದ್ದ ಭೂಮಾಲೀಕ ಜಾತಿಗಳ ಹಿನ್ನೆಲೆಯಿಂದ ಬಂದವರಾಗಿದ್ದರು. ಅಲ್ಲದೆ, ಇಂದಿರಾ ಕಾಂಗ್ರೆಸ್‌ನ ಹಾಗೆ ನಿರ್ದಿಷ್ಟವಾಗಿ ದೇಶದ ಬಡ ಜನತೆಯ ಪರವಾಗಿ ಘೋಷಿಸಿಕೊಂಡ ಕಾರ್ಯಪ್ರಣಾಳಿಕೆ ಅದಕ್ಕೆ ಇರಲಿಲ್ಲ. ಇದರಿಂದಾಗಿ ಸಂಸ್ಥಾ ಕಾಂಗ್ರೆಸ್ ತಿರಸ್ಕೃತಗೊಂಡಿತು, ಇಂದಿರಾ ಕಾಂಗ್ರೆಸ್ ವಿಜೃಂಭಿಸಿತು ಹಾಗೂ ನಿಜಲಿಂಗಪ್ಪನವರಂತಹ ಹಿರಿಯ ರಾಜಕಾರಣಿಗಳು ಪ್ರಭಾವ ಹೀನರಾದರು.

ಇಂದಿರಾ ಕಾಂಗ್ರೆಸ್ ಮತ್ತು ಸಂಸ್ಥಾ ಕಾಂಗ್ರೆಸ್ ನಡುವಿದ್ದ ಪ್ರಣಾಳಿಕೆಯ ವ್ಯತ್ಯಾಸಗಳಿಂದಾಗಿಯೇ ಈ ಬಗೆಯ ರಾಜಕೀಯ ಬೆಳವಣಿಗೆಗಳಿಗೆ ಕಾರಣ ಎಂದು ಹೇಳಲು ಸಾಧ್ಯವಿಲ್ಲ. ಅದಕ್ಕೆ ಬೇರೆ ಯಾವ ಯಾವ ಅಂಶಗಳು ಕಾರಣವಾದವು ಎಂಬುದನ್ನು ಮತ್ತಷ್ಟು ಭಿನ್ನವಾಗಿಯೇ ವಿಶ್ಲೇಷಿಸಬೇಕಾಗಬಹುದು. ಅದೇನೇ ಇರಲಿ ಎರಡೂ ಪಕ್ಷಗಳಲ್ಲಿದ್ದ ಧುರೀಣರು ತಮ್ಮನ್ನು ಸರಳ ಸಚ್ಚಾರಿತ್ರ್ಯವಂತರು ಹಾಗೂ ಜಾತ್ಯಾತೀತ ನೆಲೆಯ ಕಾಳಜಿಪರರು ಎಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದರಲ್ಲಿ ವ್ಯತ್ಯಾಸವಿರಲಿಲ್ಲ. ಹಾಗೆ ತೋರಿಸಿಕೊಳ್ಳುತ್ತಿದ್ದುದು ಮಾತ್ರವಲ್ಲದೆ, ಬಹುಮಟ್ಟಿಗೆ ಅವರು ಈಗಿನವರಿಗೆ ಹೋಲಿಸಿದರೆ ಪ್ರಾಮಾಣಿಕರೇ ಆಗಿದ್ದರು ಎಂದು ಕೂಡ ಈಗ ಅನ್ನಿಸುತ್ತಿದೆ. ನಾನು ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸಕ್ಕಾಗಿ ಸಂತ ಜೋಸೆಫರ ಕಾನ್ವೆಂಟ್‌ಗೆ ಹೋಗುವಾಗ ನಿಜಲಿಂಗಪ್ಪನವರ ಮನೆಯ ಮುಂದೆ ಹಾದು ಹೋಗುತ್ತಿದ್ದೆ.

ಹಳೆಯ ಕುರ್ಚಿಯೊಂದರಲ್ಲಿ ಮನೆಯ ಮುಂದಿನ ಪರಾಂಡದಲ್ಲಿ ದಿನಪತ್ರಿಕೆಯನ್ನೋ, ಪುಸ್ತಕವನ್ನೋ ಓದುತ್ತಾ ಅವರು ಕುಳಿತಿರುತ್ತಿದ್ದರು. ದಪ್ಪ ಖಾದಿ ಬಟ್ಟೆಯ ಬನೀನು-ಪಂಚೆ ಅಥವಾ ಅಂಗಿ-ಪಂಚೆ ಅವರು ಬಳಸುತ್ತಿದ್ದ ಉಡುಪು. ವಯಸ್ಸಿನ ಕಾರಣಕ್ಕೆ ಸಾಕಷ್ಟು ದಪ್ಪ ಗ್ಲಾಸಿನ ಚಶ್ಮ ಅವರ ಮೂಗಿನ ಮೇಲಿರುತ್ತಿತ್ತು. ರಾಷ್ಟ್ರ ನಾಯಕ ಎಸ್ ನಿಜಲಿಂಗಪ್ಪನವರು ಇವರೇ ಎಂಬ ಕುತೂಹಲ ನನ್ನನ್ನು ಅವರ ಗೇಟಿನ ಬಳಿ ಕೆಲವು ಸಲ ನಿಲ್ಲಿಸುತ್ತಿತ್ತು. ಹಾಗೆಂದ ಮಾತ್ರಕ್ಕೆ ಅವರು ನನ್ನ ಮೆಚ್ಚಿನ ರಾಜಕೀಯ ನಾಯಕನೆಂಬ ಅಭಿಪ್ರಾಯ ಆ ವಯಸ್ಸಿನಲ್ಲಿ ಇತ್ತೆಂದು ಹೇಳುವುದು ಕಷ್ಟ.

ಬಾಲ್ಯದಲ್ಲಿ ಬೆಳೆಯುವಾಗ ನಿಜಲಿಂಗಪ್ಪನವರು ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ವಹಿಸಿದ ಪಾತ್ರದ ಬಗ್ಗೆ ಹಲವಾರು ಕಥೆಗಳನ್ನು ಕೇಳಿಕೊಂಡು ನಾನು ಬೆಳೆದವನಾಗಿದ್ದೆ. ಎಸ್ ನಿಜಲಿಂಗಪ್ಪನವರ ಸ್ವತಂತ್ರ ಹೋರಾಟದ ಸಂಗಡಿಗರೂ ಒಂದು ಅರ್ಥದಲ್ಲಿ ಪ್ರೇರಕರೂ ಆಗಿದ್ದ ಸ.ವಾಸುದೇವರಾವ್ ಅವರ ಜೊತೆ ಚಿಕ್ಕಂದಿನಲ್ಲೇ ನಿಕಟವಾಗಿದ್ದ ಅವಕಾಶವು ನನಗೆ ಸಿಕ್ಕಿತ್ತಾದ್ದರಿಂದ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಿಜಲಿಂಗಪ್ಪನವರ ಬಗ್ಗೆ ಹಲವು ಬಗೆಯ ವಿಷಯಗಳು ಚರ್ಚಿತವಾಗುವುದು ಆ ವಾತಾವರಣದಲ್ಲಿ ಇದ್ದೇ ಇತ್ತು. ಪ್ರಸಿದ್ಧ ನ್ಯಾಯವಾದಿಗಳಾಗಿದ್ದ ನಿಜಲಿಂಗಪ್ಪ ಒಂದು ಕಾಲದಲ್ಲಿ ಇಸ್ಪೀಟ್ ಪ್ರಿಯರು. ಆಗಿನ ಕಾಲದ ಸ್ಥಿತಿವಂತ ಕುಟುಂಬದ ವ್ಯಕ್ತಿಗಳಂತೆ ನಿಜಲಿಂಗಪ್ಪ ಕೂಡ ಬಿಂದಾಸ್ ಸ್ವಭಾವದವರಾಗಿದ್ದು, ಸ್ವಾತಂತ್ರ್ಯ ಹೋರಾಟದ ಬಗ್ಗೆ ಮೊದಮೊದಲಿಗೆ ಅಷ್ಟೇನೂ ಆಸಕ್ತಿ ಹೊಂದಿದವರಾಗಿರಲಿಲ್ಲ.

ಕ್ರಮೇಣ ಅದರಲ್ಲಿ ತೊಡಗಿಸಿಕೊಂಡು ತಮ್ಮ ಬುದ್ಧಿಮತ್ತೆ ಹಾಗೂ ನಾಯಕತ್ವ ಗುಣಗಳಿಂದಾಗಿ ರಾಜ್ಯದ ಕಾಂಗ್ರೆಸ್ ಮುಖಂಡರಾಗಿ ರೂಪುಗೊಂಡಿದ್ದರು. ಗಾಂಧೀಜಿಯವರ ಕರೆಯ ಮೇರೆಗೆ ಕಾನೂನು ಭಂಗ ಚಳವಳಿ ನಡೆಯುತ್ತಿದ್ದ ಸಂದರ್ಭದ ಘಟನೆಯೊಂದರ ಬಗ್ಗೆ ಅವರ ಸಮಕಾಲೀನರು ಒಂದು ಕಥೆ ಹೇಳುತ್ತಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲೂ ಕಾನೂನು ಭಂಗ ಚಳುವಳಿಯ ಅಂಗವಾಗಿ ಈಚಲು ಮರಗಳನ್ನು ಕಡಿದು ಹಾಕುವ ಕಾರ್ಯಕ್ರಮವನ್ನು ಕಾಂಗ್ರೆಸ್ ಹಮ್ಮಿಕೊಂಡಿತ್ತಂತೆ. ಆ ಪ್ರತಿಭಟನೆಯ ನೇತೃತ್ವವನ್ನು ನಿಜಲಿಂಗಪ್ಪನವರು ವಹಿಸಲಿದ್ದಾರೆ ಎಂದು ಕರಪತ್ರಗಳನ್ನು ಮುದ್ರಿಸಲಾಗಿತ್ತಂತೆ. ಈ ಬಗ್ಗೆ ಅವರಿಗೆ ಮಾಹಿತಿಯೂ ನೀಡಲಾಗಿತ್ತಂತೆ. ಅವರಿನ್ನೂ ಪಕ್ಷಕ್ಕೆ ಸೇರಿದ ಹೊಸತರಲ್ಲಿ ನಡೆದದ್ದು ಇದು. ಸತ್ಯಾಗ್ರಹಿಗಳೆಲ್ಲ ಈಚಲು ವನದಲ್ಲಿ ಸೇರಿ ಮುಖಂಡರಿಗಾಗಿ ಕಾಯುತ್ತಿದ್ದಾರೆ, ನಿಜಲಿಂಗಪ್ಪನವರ ಪತ್ತೆಯಿಲ್ಲ. ಮನೆಯಲ್ಲೂ ಇಲ್ಲ, ಕಛೇರಿಯಲ್ಲೂ ಇಲ್ಲ. ಅವರನ್ನು ಎಲ್ಲಿ ಹುಡುಕುವುದು? ಅವರ ಹವ್ಯಾಸಗಳ ಬಗ್ಗೆ ಮಾಹಿತಿ ಇದ್ದ ಸಂಗಡಿಗರೊಬ್ಬರು ಕಡೆಗೆ ತಮ್ಮ ಗೆಳೆಯರ ಜೊತೆಯಲ್ಲಿ ಇಸ್ಪೀಟ್ ಆಟದಲ್ಲಿ ತಲ್ಲೀನರಾಗಿ ಮೈಮರೆತಿದ್ದ ಸ್ಥಳದಿಂದ ಕರೆದುಕೊಂಡು ಬಂದರಂತೆ. ಇವೆಲ್ಲ ಕಥೆಗಳು.

ಇಂದಿರಾ ಕಾಂಗ್ರೆಸ್‌ನ ಪ್ರಭಾವದ ತೀವ್ರತೆಯಿಂದಾಗಿ ನಿಜಲಿಂಗಪ್ಪನವರ ನಾಯಕತ್ವ ಕಳಾಹೀನವಾಗಿ ಕಾಣುತ್ತಿತ್ತೋ ಅಥವಾ ದಲಿತರು ಹಿಂದುಳಿದವರ ಪರನಿಂತ ಇಂದಿರಾಗಾಂಧಿಯವರನ್ನು ವಿರೋಧಿಸಿದ ನಿಜಲಿಂಗಪ್ಪ ಮೇಲ್ಜಾತಿಗಳ ಪರ ಎಂಬಂತ ಅಭಿಪ್ರಾಯ ಜನಸಾಮಾನ್ಯ ವರ್ಗಗಳಲ್ಲಿ ಹರಡಿದ ಕಾರಣ ಅವರು ಪ್ರಭಾವಹೀನರಾಗಿ ಕಾಣಿಸತೊಡಗಿದ್ದರೋ ಖಚಿತವಾಗಿ ಹೇಳುವುದು ಕಷ್ಟ. ಈಗಿನ ಸನ್ನಿವೇಶದಲ್ಲಿ ನಿಂತು ಯೋಚಿಸಿದರೆ, ನಿಷ್ಠುರ ಸ್ವಭಾವದವರಾದ ಅವರಿಗೆ ಜನ

ಸಮೂಹಗಳನ್ನು ಓಲೈಸುವ ಅಡ್ಡ ದಾರಿಗಳು ಗೊತ್ತಿಲ್ಲದೆ ಅಥವಾ ಆ ಬಗ್ಗೆ ಸಮ್ಮತಿಯಿಲ್ಲದೆ ಸಕ್ರಿಯ ರಾಜಕಾರಣದ ವ್ಯಾಪ್ತಿಯಿಂದ ಹೊರಗುಳಿಯುವ ತೀರ್ಮಾನ ಕೈಗೊಂಡಿದ್ದಿರಬಹುದೇ ಎಂದೂ ಅನಿಸುತ್ತದೆ. ಅವರ ನಂತರದ ತಲೆಮಾರಿನ ರಾಜಕಾರಣಿಗಳು ಜನಸಮೂಹಗಳನ್ನು ಮರುಳು ಮಾಡುವುದಕ್ಕಾಗಿ ಹೆಂಡ, ಹಣ ಹಂಚುವುದನ್ನು ಅವರು ಕಣ್ಣಾರೆ ಕಂಡರು. ಆ ವಿಷಯದಲ್ಲಿ ಅವರಿಗೆ ಖಚಿತ ನಿಲುವಿದ್ದು ಆ ರೀತಿಯಲ್ಲಿ ಚುನಾವಣೆ ಗೆಲ್ಲುವುದನ್ನು ಅವರು ಖಚಿತವಾಗಿ ವಿರೋಧಿಸಿದರು.

ಇಂದಿರಾ ಅಲೆಯ ಎದುರು ರಾಜಕಾರಣ ಮಾಡುವುದು ಕಷ್ಟ ಎಂಬಂತಾದರೂ, ಅಧಿಕಾರ ಸ್ಥಾನಗಳು ಇಲ್ಲದಂತಾಗಿ ಹೋದರೂ ಇಂದಿರಾಗಾಂಧಿಯವರ ಜೊತೆ ರಾಜಿಯಾಗದೆ ನಿಜಲಿಂಗಪ್ಪ ಒಂದು ರೀತಿಯಲ್ಲಿ ನಿವೃತ್ತ ರಾಜಕಾರಣಿಯಂತೆ ಕಾಲ ಕಳೆಯಲು ನಿರ್ಧಾರ ಕೈಗೊಂಡರೆಂಬುದೇ ಈಗ ಆಶ್ಚರ್ಯಕರವಾಗಿ ಕಾಣುತ್ತಿದೆ. ಯಾಕೆಂದರೆ ಅಧಿಕಾರದಲ್ಲಿರುವುದಕ್ಕಾಗಿ ಯಾರ ಜೊತೆಗಾದರೂ ರಾತ್ರಿ ಕಳೆದು ಹಗಲಾಗುವುದರಲ್ಲಿ ರಾಜಿ ಮಾಡಿಕೊಳ್ಳುವ ಇಂದಿನ ರಾಜಕಾರಣಿಗಳಿಗೆ ಹೋಲಿಸಿದರೆ ಅದು ನೈತಿಕ ರಾಜಕಾರಣವೆಂದು ಕಂಡುಬಂದರೆ ಆಶ್ಚರ್ಯವಿಲ್ಲ. ಪರ ಅಥವಾ ವಿರೋಧ, ಜಗಳ ಅಥವಾ ರಾಜಿ ಎಲ್ಲವೂ ಕೂಡ ಸಾಕಷ್ಟು ಸ್ಥಿರವಾಗಿರುತ್ತಿದ್ದ ಕಾಲವದು. ಪದೇ ಪದೇ ಪಕ್ಷ ನಿಷ್ಠೆ ಬದಲಿಸುವವರನ್ನು ಜನರೂ ಕೂಡ ಬಫೂನ್‌ಗಳಂತೆ ಪರಿಗಣಿಸುತ್ತಿದ್ದುದು ಮಾತ್ರವಲ್ಲ ಪಕ್ಷ ಬಿಟ್ಟು ಬೇರೆ ಪಕ್ಷಕ್ಕೆ ಹೋದ ರಾಜಕಾರಣಿಗೆ ಈಗಿನಷ್ಟು ಸುಲಭವಾಗಿ ಬೆಂಬಲ ಒದಗುತ್ತಿರಲಿಲ್ಲವೆಂಬುದು ಆಗಿನ ರಾಜಕಾರಣದ ಗುಣಮಟ್ಟವಾಗಿತ್ತು ಎಂದು ನನಗೀಗ ಅನಿಸುತ್ತಿದೆ.

ನಿಜಲಿಂಗಪ್ಪನವರ ಮನೆ ಮುಂದೆ ನಾನು ಬಾಲ್ಯದಲ್ಲಿ ಹಾದು ಹೋಗುತ್ತಿದ್ದಂತೆಯೇ ಈಗಲೂ ಕೂಡ ಹೋಗುವ ಸಂದರ್ಭ ಬಂದಾಗ ಆ ಮನೆಯನ್ನು ಗಮನಿಸುತ್ತೇನೆ. ಅದೊಂದು ಸಾಮಾನ್ಯ ವಿನ್ಯಾಸದ ಮೇಲು ಮಧ್ಯಮ ವರ್ಗದವರ ಮನೆಯಂತಿದೆ. ಅದು ಆಗಲೂ ಹಾಗೆಯೇ ಇತ್ತು. ಅದನ್ನು ಭವ್ಯ ಬಂಗಲೆ ಎಂದು ಕರೆಯಲು ಸಾಧ್ಯವೇ ಇಲ್ಲ. ಒಂದೂವರೆ ದಶಕದ ಕಾಲ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರ ಮನೆ ಅವರು ಅಧಿಕಾರರಹಿತರಾಗುವ ಕಾಲದವರೆಗೂ ಅದೇ ಸ್ವರೂಪವನ್ನು ಉಳಿಸಿಕೊಂಡಿತ್ತು.

ಅಂದಿನ ದಿನಗಳಲ್ಲಿ ನಿಜಲಿಂಗಪ್ಪನವರನ್ನೂ ಮೀರಿಸಿದ ಆದರ್ಶವಾದಿ ರಾಜಕಾರಣಿಗಳಿದ್ದರು. ಚಿತ್ರದುರ್ಗದಲ್ಲಿ ಹೊ. ಚಿ. ಬೋರಯ್ಯ ಎಂಬ ಹಿರಿಯ ರಾಜಕಾರಣಿ ಸಾರಿಗೆ ಖಾತೆ ಸಚಿವರಾಗಿದ್ದರು. ಸಚಿವ ಸ್ಥಾನ ಹೋದ ಮೇಲೆ ಅವರು ಕಾಲುನಡಿಗೆಯಲ್ಲಿ ಚಿತ್ರದುರ್ಗದ ಬೀದಿಗಳಲ್ಲಿ ಓಡಾಡುತ್ತಿದ್ದುದನ್ನು ನಾನು ನೋಡಿದ್ದೆ. ನಿಜವಾದ ಗಾಂಧಿವಾದಿಯಾದವರು ಸರ್ಕಾರ ದಲ್ಲಿ ಸಚಿವ ಸ್ಥಾನ ಪಡೆಯಲಿಕ್ಕೆ ಹಾತೊರೆಯುವುದು ಕೂಡ ತತ್ವಭ್ರಷ್ಟತೆ ಎಂಬಂತಹ ಭಾವನೆಗಳಿದ್ದ ಕಾಲಘಟ್ಟ ಅದು.

ನಿಜಲಿಂಗಪ್ಪನವರು ತೀರಾ ಸಾಧಾರಣ ಎನ್ನಲಿಕ್ಕಾಗದ ಕುಟುಂಬದ ಹಿನ್ನೆಲೆಯಿಂದ ಬಂದವರು. ಅವರು ಮುಖ್ಯಮಂತ್ರಿ ಅಧಿಕಾರ ಪೂರೈಸಿದ ಮೇಲೂ ಅವರು ಚಿತ್ರದುರ್ಗದ ಭಾರೀ ಶ್ರೀಮಂತರೆಂದು ಹೇಳಲಿಕ್ಕಾಗದ ಪರಿಸ್ಥಿತಿಯಲ್ಲೇ ಉಳಿದುಕೊಂಡಿದ್ದರು. ಅವರ ವಾಸದ ಮನೆಗೆ ಹೋಲಿಸಿದರೆ ಅದಕ್ಕೆ ಹಲವು ಪಟ್ಟು ಭರ್ಜರಿಯಾದ, ಬೆಲೆ ಬಾಳುವ ಬಂಗಲೆಗಳು ಆ ಕಾಲದಲ್ಲೇ ಚಿತ್ರದುರ್ಗದಲ್ಲಿದ್ದವು. ಅಧಿಕಾರ ಸ್ಥಾನಗಳಲ್ಲಿರುವವರು ತಮ್ಮ ಅಧಿಕಾರ ಬಲದಿಂದ ತಮ್ಮ ಸುತ್ತಲಿನ ಎಲ್ಲ ಹಳೆಯ ಶ್ರೀಮಂತರಿಗಿಂತ ದೊಡ್ಡ ಶ್ರೀಮಂತರಾಗುವ ಪ್ರವೃತ್ತಿ ಆಗಿನ್ನೂ ಕಾಣಿಸಿಕೊಂಡಿರಲಿಲ್ಲ.

ಇದ್ದಕ್ಕಿದ್ದಂತೆ ರಾಜಕಾರಣಿ ಶ್ರೀಮಂತನಾದರೆ ತನ್ನ ಕ್ಷೇತ್ರದ ಚಿರಪರಿಚಿತ ಮತದಾರರಿಗೆ ವಿವರಣೆ ನೀಡಬೇಕಾದ ಪರಿಸ್ಥಿತಿ ಇತ್ತು. ಈಗಿನಂತೆ ಅನಾಮಿಕ ಮತದಾರರು ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ನಾಯಕರು ಇರಲಿಲ್ಲ. ಚುನಾವಣೆಯ ಖರ್ಚುಗಳಿಗಾಗಿ ನಿಜಲಿಂಗಪ್ಪನವರು ಕೆಲವು ಸಲ ಸಾಲ ಪಡೆಯುತ್ತಿದ್ದರು ಎಂಬ ಮಾಹಿತಿಯನ್ನೂ ಕೂಡ ನಾನು ಕೇಳಿಸಿಕೊಂಡಿದ್ದೆ.

ನಿಜಲಿಂಗಪ್ಪನವರನ್ನು ಲಿಂಗಾಯತರ ಎಲ್ಲ ಪಂಗಡಗಳೂ ನಾಯಕರೆಂದು ಒಪ್ಪಿಕೊಳ್ಳುತ್ತಿರಲಿಲ್ಲ ಎಂಬುದು ಸಾಕಷ್ಟು ಬಹಿರಂಗಗೊಂಡಿರುವ ಸಂಗತಿ. ಅವರು ಒಳಗಿಂದೊಳಗೆ ಬಣಜಿಗ ಲಿಂಗಾಯತ ಪಂಗಡದ ಪರವಾಗಿದ್ದರು ಎಂಬ ಆಪಾದನೆಗಳೂ ಗಾಳಿಯಲ್ಲಿ ಹರಿದಾಡುತ್ತಿದ್ದವು. ಅದಕ್ಕೆ ಸಾಕ್ಷಿಯೆಂಬಂತೆ ಅವರು ಸಾದ ಲಿಂಗಾಯತರು ನಿರ್ಣಾಯಕ ಮತದಾರರಾಗಿರುವ ಹೊಸದುರ್ಗ ಕ್ಷೇತ್ರದಿಂದ ಸ್ಪರ್ಧಿಸಿ ಸೋತುಹೋಗಿದ್ದನ್ನು ಹೇಳುವವರಿದ್ದಾರೆ. ಆದರೆ ಇವ್ಯಾವುದೂ ರಾಜಕಾರಣದ ಬಹಿರಂಗವಾಗಿ ವರಸೆಗಳೆಂಬಂತೆ ಬಳಕೆಯಾಗುತ್ತಿದ್ದುದು ಕಡಿಮೆ.

ಕ್ಷೇತ್ರವೊಂದರಲ್ಲಿರುವ ಸಂಖ್ಯಾಬಾಹುಳ್ಯವುಳ್ಳ ಮತದಾರರ ಜಾತಿ ಹಾಗೂ ಸ್ಪರ್ಧಿಸಿದ ಅಭ್ಯರ್ಥಿಯ ಜಾತಿ ಒಂದೇ ಆಗಿರಬೇಕೆಂಬುದು ಆಗಿನ್ನೂ ಒಂದು ಅಘೋಷಿತ ನಿಯಮವಾಗಿರಲಿಲ್ಲ. ಇಂದಿರಾ ಕಾಂಗ್ರೆಸ್‌ನ ಸೀಟು ಸಿಗುವುದೆಂದರೆ ಹೆಚ್ಚು ಕಡಿಮೆ ಆ ಅಭ್ಯರ್ಥಿ ಯಾವ ಜಾತಿಯವನಾಗಿದ್ದರೂ ಗೆಲುವಿನ ಸಮೀಪದಲ್ಲಿರುತ್ತಿದ್ದ. ಹಾಗಿದ್ದಾಗಲೂ ಲಿಂಗಾಯತರ ಉಪ ಪಂಗಡಗಳ ನಡುವಿದ್ದ ಜಿದ್ದು ಅಥವಾ ಪಾರಂಪರಿಕ ಸ್ಪರ್ಧೆ ನಿಜಲಿಂಗಪ್ಪನವರನ್ನು ಸೋಲಿಸಿತ್ತು ಎಂಬುದನ್ನು ನೋಡಿದರೆ ಅದಕ್ಕೆ ಬೇರೆ ಇನ್ನೇನೇನು ಆಯಾಮಗಳಿದ್ದವೋ ನನಗೆ ಅಷ್ಟು ಸ್ಪಷ್ಟವಾಗಿ ನೆನಪಿಲ್ಲ.

ನನ್ನ ಹದಿ ವಯಸ್ಸಿನ ಆ ಕಾಲದಲ್ಲಿ ನಿಜಲಿಂಗಪ್ಪನವರ ಬಗ್ಗೆ ಜಿಲ್ಲೆಯಲ್ಲಿ ಕೇಳಿ ಬಂದ ಇನ್ನೂ ಕೆಲವು ಸಣ್ಣಪುಟ್ಟ ಆಪಾದನೆಗಳಿದ್ದವು. ಅದರಲ್ಲಿ ಕೆಲವು ರಾಜ್ಯಮಟ್ಟಕ್ಕೆ ಸೇರಿದವುಗಳಾಗಿದ್ದರೆ, ಮತ್ತೆ ಕೆಲವು ಜಿಲ್ಲೆಯ ರಾಜಕಾರಣಕ್ಕೆ ಸಂಬಂಧಪಟ್ಟವುಗಳಾಗಿದ್ದವು. ಕರ್ನಾಟಕದ ಏಕೀಕರಣ ಸಂದರ್ಭದಲ್ಲಿ ಆಂಧ್ರದ ಗಡಿಭಾಗಗಳಲ್ಲಿದ್ದ ಕೆಲವು ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಹಾಕಲಿಲ್ಲ. ಕಾರಣವೇನೆಂದರೆ ಆ ಪ್ರಾಂತ್ಯಗಳಲ್ಲಿ ಲಿಂಗಾಯತ ಸಮುದಾಯಕ್ಕೆ ಸೇರಿದ ಜನಸಂಖ್ಯೆ ಇರಲಿಲ್ಲ. ಆ ಭಾಗಗಳು ಕರ್ನಾಟಕಕ್ಕೆ ಸೇರಿದ್ದರೆ ಲಿಂಗಾಯತ ಸಮುದಾಯವು ಕರ್ನಾಟಕದಲ್ಲಿ ಏಕೈಕ ಸಂಖ್ಯಾಬಾಹುಳ್ಯದ ಜಾತಿಯಾಗಿ ಉಳಿದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಎಂಬುದೇ ಅವರ ನಿರುತ್ಸಾಹಕ್ಕೆ ಕಾರಣವಾಗಿತ್ತು ಎಂಬಂತಹ ಟೀಕೆಗಳು ಅವರಿವರ ಬಾಯಲ್ಲಿ ಹರಿದಾಡುತ್ತಿದ್ದವು.

ಅದೇ ರೀತಿಯಲ್ಲಿ ಚಿತ್ರದುರ್ಗದಲ್ಲಿ ವರ್ಚಸ್ವಿಯಾಗಿದ್ದ, ದಕ್ಷ ರಾಜಕಾರಣಿಯೂ ಆಗಿದ್ದ ಕುಂಚಿಟಿಗ ಒಕ್ಕಲಿಗರ ನಾಯಕರೊಬ್ಬರು ಬೆಳೆಯದಂತೆ ತಡೆಯಲಿಕ್ಕಾಗಿಯೇ ಹಿರಿಯರನ್ನು ಹಾಗೂ ಸಾದಾ ಲಿಂಗಾಯತರ ನಾಯಕತ್ವ ಪ್ರಬಲಗೊಳ್ಳದಂತೆ ತಡೆಯಲಿಕ್ಕಾಗಿಯೇ ಬರಮ ಸಾಗರ ಕ್ಷೇತ್ರವನ್ನು ಮೀಸಲು ಕ್ಷೇತ್ರಗಳನ್ನಾಗಿಸುವುದಕ್ಕೆ ಒಳಗಿಂದೊಳಗೇ ತಂತ್ರ ಮಾಡಿದ್ದರು ಎಂಬ ಮಾತುಗಳಿದ್ದವು. ಹಾಗೆಯೇ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೊಂಡರೆ ತಮ್ಮನ್ನು ಸೋಲಿನ ಅಪಮಾನಕ್ಕೆ ಈಡುಮಾಡಿದ್ದ ಸಾದ ಲಿಂಗಾಯತ ಸಮುದಾಯಕ್ಕೆ ಹೆಚ್ಚು ಉಪಯುಕ್ತವಾಗುತ್ತದೆ ಎಂಬ ಕಾರಣಕ್ಕಾಗಿಯೇ ಅವರ ಅಧಿಕಾರಾವಧಿಯಲ್ಲಿ ಆ ಯೋಜನೆಯನ್ನು ಜಾರಿಗೊಳಿಸಲಿಲ್ಲ ಎಂಬಂತಹ ಮಾತುಗಳೂ ಗಾಳಿಯಲ್ಲಿವೆ.

ಈ ಅಂಶಗಳನ್ನು ನಿರ್ದಿಷ್ಟವಾಗಿ ಹೌದು ಅಥವಾ ಅಲ್ಲ ಎಂದು ವಿಶ್ಲೇಷಿಸಲು ನನ್ನ ಬಳಿ ಆಗಿನ ಸ್ಥಳೀಯ ರಾಜಕಾರಣ ವಿದ್ಯಮಾನದ ಬಗ್ಗೆ ತಕ್ಕಷ್ಟು ಮಾಹಿತಿಯಿಲ್ಲ. ಹೀಗಿದ್ದರೂ ರಾಜಕೀಯ ವಲಯಗಳ ನಡುವೆ ಮುಚ್ಚುಮರೆಯಲ್ಲಿ ಇಂತಹ ಕೆಲವು ಅಭಿಪ್ರಾಯಗಳು ಪ್ರಚಲಿತವಾಗಿದ್ದವು ಎಂಬುದನ್ನು ಮಾತ್ರ ನಾನು ಖಚಿತವಾಗಿ ಹೇಳಬಲ್ಲೆ. ಅವರು ಲಿಂಗಾಯತ ಸಮುದಾಯದಿಂದ ಬಂದವ

ಇಂದಿರಾ ಅಲೆಯ ಎದುರು ರಾಜಕಾರಣ ಮಾಡುವುದು ಕಷ್ಟ ಎಂಬಂತಾದರೂ, ಅಧಿಕಾರ ಸ್ಥಾನಗಳು ಇಲ್ಲ ದಂತಾಗಿ ಹೋದರೂ ಇಂದಿರಾಗಾಂಧಿಯವರ ಜೊತೆ ರಾಜಿಯಾಗದೆ ನಿಜಲಿಂಗಪ್ಪ ಒಂದು ರೀತಿಯಲ್ಲಿ ನಿವೃತ್ತ ರಾಜಕಾರಣಿಯಂತೆ ಕಾಲ ಕಳೆಯಲು ನಿರ್ಧಾರ ಕೈಗೊಂಡರೆಂಬುದೇ ಈಗ ಆಶ್ಚರ್ಯಕರವಾಗಿ ಕಾಣುತ್ತಿದೆ. ಯಾಕೆಂದರೆ ಅಧಿಕಾರದಲ್ಲಿರುವುದಕ್ಕಾಗಿ ಯಾರ ಜೊತೆಗಾದರೂ ರಾತ್ರಿ ಕಳೆದು ಹಗಲಾಗುವುದರಲ್ಲಿ ರಾಜಿ ಮಾಡಿಕೊಳ್ಳುವ ಇಂದಿನ ರಾಜಕಾರಣಿಗಳಿಗೆ ಹೋಲಿಸಿದರೆ ಅದು ನೈತಿಕ ರಾಜಕಾರಣವೆಂದು ಕಂಡು ಬಂದರೆ ಆಶ್ಚರ್ಯವಿಲ್ಲ.

ಪರ ಅಥವಾ ವಿರೋಧ, ಜಗಳ ಅಥವಾ ರಾಜಿ ಎಲ್ಲವೂ ಕೂಡ ಸಾಕಷ್ಟು ಸ್ಥಿರವಾಗಿರುತ್ತಿದ್ದ ಕಾಲವದು. ಪದೇ ಪದೇ ಪಕ್ಷ ನಿಷ್ಠೆ ಬದಲಿಸುವವರನ್ನು ಜನರೂ ಕೂಡ ಬಫೂನ್‌ಗಳಂತೆ ಪರಿಗಣಿಸುತ್ತಿದ್ದುದು ಮಾತ್ರವಲ್ಲ ಪಕ್ಷ ಬಿಟ್ಟು ಬೇರೆ ಪಕ್ಷಕ್ಕೆ ಹೋದ ರಾಜಕಾರಣಿಗೆ ಈಗಿನಷ್ಟು ಸುಲಭವಾಗಿ ಬೆಂಬಲ ಒದಗುತ್ತಿರಲಿಲ್ಲವೆಂಬುದು ಆಗಿನ ರಾಜಕಾರಣದ ಗುಣಮಟ್ಟವಾಗಿತ್ತು.

ರಾಗಿದ್ದರೂ, ಬೇರೆ ಪಂಗಡಗಳ, ಕೆಲವರು ಆಪಾದಿಸು ವಂತೆ ಲಿಂಗಾಯತ ರಾಜಕಾರಣ ಬಲಗೊಳಿಸುವ ನಿಸೆಯಲ್ಲಿ ಅವರು ಪರೋಕ್ಷವಾಗಿ ಕೆಲವು ತಂತ್ರಗಳನ್ನು ಮಾಡಿದ್ದರು ಎಂಬುದನ್ನು ಕೇಳಿಸಿಕೊಂಡರೂ, ತಮ್ಮ ಸಾರ್ವಜನಿಕ ಜೀವನದಲ್ಲಿ ಅಂತಹ ಆಪಾದನೆಗಳು ಸಾಬೀತುಗೊಳ್ಳುವ ರೀತಿಯಲ್ಲಿ ಅವರು ನಡೆದುಕೊಂಡದ್ದು, ಕಾಣಿಸಿಕೊಂಡದ್ದು ಬಹಳ ಕಡಿಮೆ ಎಂದು ನನ್ನ ನೆನಪು ಹೇಳುತ್ತಿದೆ.

ಅವರನ್ನು ಜೀವನದ ಕಡೆಯ ಕಾಲದವರೆಗೂ ಪ್ರಭಾವಿಸಿದ್ದ ಗಾಂಧೀವಾದಿ ಆದರ್ಶಗಳು ಹಾಗೂ ಅವರ ಸಮಕಾಲೀನರಾಗಿದ್ದ ಹಲವಾರು ಕಟ್ಟಾ ಗಾಂಧೀವಾದಿ ಗೆಳೆಯರ ಜೀವನ ಮುಂತಾದವುಗಳೆಲ್ಲಾ ಅವರನ್ನು ಒಂದು ಬಗೆಯಲ್ಲಿ ನಿಯಂತ್ರಣಕ್ಕೊಳಪಡಿಸಿದ್ದಿರಬಹುದೇ ಎಂದು ನಾನು ಊಹಿಸುತ್ತಿದ್ದೇನೆ.

ಸಾರ್ವಜನಿಕ ಹಣ ದುರುಪಯೋಗ ಹಾಗೂ ಭ್ರಷ್ಟಾಚಾರದ ಆಪಾದನೆಗಳು ಅವರ ಮೇಲಿದ್ದವು ಎಂದು ಹೇಳಲಿಕ್ಕೆ ನನ್ನ ಬಳಿ ಯಾವುದೇ ನೆನಪುಗಳಿಲ್ಲ. ನಾವು ಹುಡುಗರಾಗಿದ್ದಾಗ ಚಿತ್ರದುರ್ಗದಲ್ಲಿ ಜಯಪದ್ಮ ಎಂಬ ಹೆಸರಿನ ಬಸ್ಸುಗಳ ಕಂಪನಿಯೊಂದಿತ್ತು. ಆ ಕಾಲದಲ್ಲಿ ಅದು ಸಾಕಷ್ಟು ಸಂಖ್ಯೆಯ ವಾಹನಗಳ ಮಾಲೀಕತ್ವ ಹೊಂದಿದ್ದ ಖಾಸಗಿ ಸಾರಿಗೆ ಸಂಸ್ಥೆಯಾಗಿತ್ತು. ಅದರಲ್ಲಿನ ಬಹುತೇಕ ಬಸ್ಸುಗಳು ನಿಜಲಿಂಗಪ್ಪನವರಿಗೆ ಸೇರಿದವುಗಳೆಂದು, ಅವರ ಬೇನಾಮಿ ಮಾಲೀಕತ್ವದ ವಾಹನಗಳಿಗೆ ಅಧಿಕೃತ ಮಾಲೀಕರಾಗಿ ಅವರ ಹತ್ತಿರದ ಬಂಧುವೊಬ್ಬರನ್ನು ಇರಿಸಿದ್ದರೆಂದು, ಆ ಬಂಧು ಇವರಿಗೆ ವ್ಯವಹಾರದಲ್ಲಿ ಮೋಸ ಮಾಡಿ ಇವರ ಬೇನಾಮಿ ಗಂಟು ಮುಳುಗಿಸಿದರೆಂದು ಗಾಳಿ ಸುದ್ದಿಗಳು ಹರಿದಾಡುತ್ತಿದ್ದವು.

ಇವುಗಳಲ್ಲಿ ಏನಾದರೂ ಸತ್ಯಾಂಶವಿತ್ತೇ ಅಥವಾ ನಿಜಲಿಂಗಪ್ಪನವರ ರಾಜಕೀಯ ವಿರೋಧಿಗಳು ಇಂತಹ ಸುದ್ದಿಗಳ ಹರಡುವಿಕೆಗೆ ಕಾರಣರಾಗಿದ್ದರೇ ಎಂಬುದನ್ನು ನಿರ್ಣಯಿಸುವಷ್ಟು ಪ್ರಬುದ್ಧತೆ ಆಗ ನನಗಿರಲಿಲ್ಲ. ನಮ್ಮ ತಾರುಣ್ಯದ ಹೊತ್ತಿಗೆ ಅವರು ಸಕ್ರಿಯ ರಾಜಕಾರಣದಿಂದ ನಿರ್ಗಮಿಸಿದ್ದರಿಂದ ಅವರ ಬಗ್ಗೆ ಪ್ರಚಲಿತವಾಗಿದ್ದ ಈ ಆಪಾದನೆಗಳ ಸತ್ಯಾಸತ್ಯತೆಗಳನ್ನು ತಿಳಿಯಲೇಬೇಕೆಂಬ ಅನಿವಾರ್ಯತೆಯೂ ಉಂಟಾಗಲಿಲ್ಲ.

ದಂತ ಕಥೆಗಳಂತೆ, ಪ್ರತೀತಿಗಳಂತೆ, ಗಾಳಿಸುದ್ದಿಯಂತೆ ಹರಿದಾಡುತ್ತಿದ್ದ ಈ ಬಗೆಯ ಟೀಕಾ ಪ್ರಧಾನ ಮಾಹಿತಿಗಳ ನೆನಪುಗಳ ಮುಖಾಂತರವೇ ನಾನೀಗ ನಿಜಲಿಂಗಪ್ಪನವರನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಹಾಗಿರುವ ಗಾಳಿ ಸುದ್ದಿಗಳು ಕೆಲವಂಶಗಳಲ್ಲಿ ನಿಜವಿರಬಹುದು, ಕೆಲವಂಶಗಳಲ್ಲಿ ಸುಳ್ಳಿರಬಹುದು. ಒಂದು ಕಾಲಘಟ್ಟದ ಅತ್ಯಂತ ಪ್ರಭಾವಿ ನಾಯಕರಾಗಿದ್ದ ನಿಜಲಿಂಗಪ್ಪನವರ ಕುಟುಂಬದ ಸದಸ್ಯರಾರೂ ರಾಜಕಾರಣದಲ್ಲಿ ಈಗ ಮುಂದುವರಿದಿಲ್ಲ. ಅದರ ಬದಲಾಗಿ ಅವರ ಶಿಷ್ಯರಾಗಿದ್ದ, ಅತ್ಯಂತ ಸಾಮಾನ್ಯ ಹಿನ್ನೆಲೆಯಿಂದ ಬಂದಿದ್ದ, ಅವರ ಜಾತಿಗೆ ಸೇರಿರದ ಹಲವಾರು ಜನ ಈಗಿನ ರಾಜಕಾರಣದಲ್ಲಿ ಪ್ರಭಾವಿ ನಾಯಕರಾಗಿ ಮುಂದುವರಿದಿದ್ದಾರೆ.

ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರ ಮನೆಗೆ ಪುರಸಭೆ ವತಿಯಿಂದ ನೀರು ಸರಬರಾಜು ಸರಿಯಾಗಿ ಆಗುತ್ತಿಲ್ಲವೆಂಬಂತಹ ದೂರುಗಳನ್ನು ಅವರ ಕಡೆಯ ಕಾಲದಲ್ಲಿ ಪತ್ರಿಕೆಗಳಲ್ಲಿ ನಾನು ಓದಿದ್ದೇನೆ. ಕಳೆದು ಹೋದ ರಾಜಕೀಯ ಪರ್ವದ ಒಬ್ಬ ನಾಯಕನಾಗಿ ಚಿತ್ರದುರ್ಗದಲ್ಲಿ

ನಿಜಲಿಂಗಪ್ಪನವರನ್ನು ಲಿಂಗಾಯತರ ಎಲ್ಲ ಪಂಗಡಗಳೂ ನಾಯಕರೆಂದು ಒಪ್ಪಿಕೊಳ್ಳುತ್ತಿರಲಿಲ್ಲ ಎಂಬುದು ಸಾಕಷ್ಟು ಬಹಿರಂಗಗೊಂಡಿರುವ ಸಂಗತಿ. ಅವರು ಒಳಗಿಂದೊಳಗೆ ಬಣಜಿಗ ಲಿಂಗಾಯತ ಪಂಗಡದ ಪರವಾಗಿದ್ದರು ಎಂಬ ಆಪಾದನೆಗಳೂ ಗಾಳಿಯಲ್ಲಿ ಹರಿದಾಡುತ್ತಿದ್ದವು. ಅದಕ್ಕೆ ಸಾಕ್ಷಿಯೆಂಬಂತೆ ಅವರು ಸಾದ ಲಿಂಗಾಯತರು ನಿರ್ಣಾಯಕ ಮತದಾರರಾಗಿರುವ ಹೊಸದುರ್ಗ ಕ್ಷೇತ್ರದಿಂದ ಸ್ಪರ್ಧಿಸಿ ಸೋತು ಹೋಗಿದ್ದನ್ನು ಹೇಳುವವರಿದ್ದಾರೆ. ಆದರೆ ಇವ್ಯಾವುದೂ ರಾಜಕಾರಣದ ಬಹಿರಂಗವಾಗಿ ವರಸೆಗಳೆಂಬಂತೆ ಬಳಕೆಯಾಗುತ್ತಿದ್ದುದು ಕಡಿಮೆ.

ಅವರು ಕಾಲ ಕಳೆದು ನಿರ್ಗಮಿಸಿದರು. ಅವರ ಅಭಿಮಾನಿ ಸಂಘಗಳು, ಅನುಯಾಯಿ ತಂಡಗಳು, ಪ್ರತ್ಯಕ್ಷ-ಪರೋಕ್ಷ ಫಲಾನುಭವಿ ಪಡೆ ಮುಂತಾದವುಗಳ ಯಾವ ಕುರುಹೂ ಈಗ ಅಲ್ಲಿಲ್ಲ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಅತ್ತ ಸಂಪೂರ್ಣ ಗಾಂಧಿವಾದಿ ಆದರ್ಶಗಳ ಮಾದರಿಗೆ ಪೂರ್ಣವಾಗಿ ಅಂಟಿಕೊಂಡಿರದ ಅದೇ ಸಂದರ್ಭದಲ್ಲಿ ಸಾರ್ವಜನಿಕ ಜೀವನದಲ್ಲಿ ನೀತಿರಹಿತ, ಮೌಲ್ಯರಹಿತ ವಿಧಾನಗಳ ಮುಖಾಂತರ ರಾಜಿಕೋರ ರಾಜಕಾರಣವನ್ನು ನಡೆಸದ ರಾಜಕಾರಣಿಯೊಬ್ಬರ ಚಿತ್ರ ನನ್ನ ಕಣ್ಮುಂದೆ ಮೂಡುತ್ತಿದೆ. ಅವರನ್ನು ಕರ್ನಾಟಕ ಕಂಡ ಆದರ್ಶ ಮುಖ್ಯಮಂತ್ರಿ ಎಂದು ಹೇಳುವವರ ಸಂಖ್ಯೆ ಹೆಚ್ಚಿಲ್ಲದಿರಬಹುದು. ಆದರೆ ನಂತರದಲ್ಲಿ ಆಗಿಹೋದ ಮುಖ್ಯಮಂತ್ರಿಗಳು, ರಾಜಕೀಯ ಅಧಿಕಾರಸ್ಥರು ತಲುಪುತ್ತಲೇ ಹೋದ ನೀತಿರಾಹಿತ್ಯ, ಮೌಲ್ಯರಾಹಿತ್ಯ, ಹಣ, ಜಾತಿಕೇಂದ್ರಿತ ನಿರ್ಲಜ್ಜ ರಾಜಕಾರಣದ ಮಾದರಿಗಳಿಗೆ ಹೋಲಿಸಿದರೆ ನಿಜಲಿಂಗಪ್ಪನವರ ಸಾರ್ವಜನಿಕ ಬದುಕಿನ ಕಾಲವನ್ನು ನಾವು ಏನೆಂದು ಕರೆಯಬಹುದು.

ಸಾವಿರಾರು ಕೋಟಿಗಳ ಅಕ್ರಮ ಹಣ, ನೂರಾರು ಎಕರೆಗಳ ಅಕ್ರಮ ಒಡೆತನ, ಯಾವುದೇ ಎಗ್ಗಿಲ್ಲದೆ ನಡೆಸುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಹಾಗೂ ಅವಕಾಶವಾದಿ ರಾಜಕಾರಣಕ್ಕೆ ಕುಮ್ಮಕ್ಕು ಮುಂತಾದ ಪರಿಗಳನ್ನು ನೋಡಿದರೆ, ಅಧಿಕಾರಸ್ಥರ ಇಂತಹ ಯಾವುದೇ ಅಕ್ರಮಗಳ ಬಗ್ಗೆ ತಲೆಕೆಡಿಸಿಕೊಳ್ಳದ ಜನ ಅಧಿಕಾರದಲ್ಲಿರುವವರ ಪರಾಕ್ ಕೂಗುತ್ತಾ ಓಡಾಡುತ್ತಿರುವುದನ್ನು ನೋಡಿದರೆ, ನಾವು ಪ್ರಜಾಪ್ರಭುತ್ವದ ಯುಗದಲ್ಲಿ ಬಂದು ತಲುಪಿರುವ ಅಧೋಗತಿಯನ್ನು ಅಳೆಯಲಿಕ್ಕೆ ಎಸ್ ನಿಜಲಿಂಗಪ್ಪನವರು ಒಂದು ಅಳತೆಪಟ್ಟಿಯಂತೆ ಇದ್ದಾರೆ ಎನ್ನಿಸುವುದಿಲ್ಲವೇ? ಅಥವಾ ನಾವು ಪ್ರಜಾಪ್ರಭುತ್ವದಲ್ಲಿ ನಾಯಕರಾದವರು ಇರಬೇಕಾದ ವಿಧಾನ ಯಾವುದು ಎಂಬ ಬಗ್ಗೆ ಇಟ್ಟುಕೊಂಡಿರುವ ಬಹಳಷ್ಟು ಕಲ್ಪನೆಗಳು ಇನ್ನೇನಿದ್ದರೂ ಆ ಕಾಲಘಟ್ಟಕ್ಕೆ ಸೇರಿದ ದಂತಕಥೆಗಳು ಮಾತ್ರ ಎಂಬಂತಹ ಹಳಹಳಿಕೆ ಹುಟ್ಟಿಕೊಳ್ಳುತ್ತಿದೆಯೇ? □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೦೮೦ ೨೯೪೫೩೭/೯೪೪೮೮೦೪೪೦೬

> ೧೯೩೬ರಲ್ಲಿ ಅಂಬೇಡ್ಕರ್ ಮೊಟ್ಟಮೊದಲಿಗೆ ಆರಂಭಿಸಿದ 'ಸ್ವತಂತ್ರ ಲೇಬರ್ ಪಕ್ಷ' ಬ್ರಿಟಿಷ್ ರಾಜಕಾರಣದಿಂದ ಪ್ರಭಾವಿತವಾಗಿದೆ. ಅಂಬೇಡ್ಕರ್ ಅವರ ಮೇಲೆ ಬ್ರಿಟನ್‌ನ ಪ್ರಭಾವ ಕಡಿಮೆಯಾಗಲು ಎರಡು ಕಾರಣಗಳಿವೆ: ಬ್ರಿಟಿಷರು ಭಾರತವನ್ನು ವಸಾಹತು ರಾಷ್ಟ್ರವನ್ನಾಗಿ ಮಾಡಿಕೊಂಡದ್ದು, ಮತ್ತು ಬ್ರಿಟನ್‌ನ ಪ್ರಗತಿಶೀಲರು ಭಾರತದ ಸ್ವಾತಂತ್ರ್ಯಕ್ಕೆ ಅಂಬೇಡ್ಕರ್ ಪ್ರತಿಪಾದಿಸಿದ ಶಾಸನ ಸಭೆಯ ಹಾದಿಯನ್ನು ಕಡೆಗಣಿಸಿ, ಗಾಂಧಿ ಅವರ ಅಹಿಂಸಾ ತತ್ವಕ್ಕೆ ಮನ್ನಣೆ ನೀಡಿದ್ದು. ಹೀಗಾಗಿ, ಅಮೆರಿಕಾದ ವಾಸ್ತವವಾದ ಮತ್ತು ವರ್ಗಹೀನತೆ ಅಂಬೇಡ್ಕರ್ ಅವರಿಗೆ ಸಹಜವಾಗಿ ಹಿಡಿಸಿತು.

ಅಮೆರಿಕಾದಲ್ಲಿ ಶಿಕ್ಷಣ ಪಡೆದ ಕೆಲವೇ ಮಂದಿ ಭಾರತೀಯ ನಾಯಕರಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಮೊದಲಿಗರು. ಅಂಬೇಡ್ಕರ್ ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಕಳೆದ ಸಮಯ ಅವರ ಜೀವನದ ಮೇಲೆ ಯಾವ ರೀತಿಯ ಪ್ರಭಾವ ಬೀರಿದೆ ಎಂದು ನನಗೆ ಗೊತ್ತಿಲ್ಲ. ಆದರೆ ಅವರ ವ್ಯಕ್ತಿತ್ವ ರೂಪುಗೊಳ್ಳುವ ಹಂತದಲ್ಲಿ ಖಂಡಿತ ಈ ಪ್ರಭಾವವನ್ನು ಗುರುತಿಸಬಹುದು. ಅಂಬೇಡ್ಕರ್ ತಮ್ಮ ವೃತ್ತಿ ಜೀವನದಲ್ಲಿ ರೂಢಿಸಿಕೊಂಡ ಆಶಾಭಾವ ಮತ್ತು ತಾರ್ಕಿಕ ಪ್ರಜ್ಞೆಯ ಹಿಂದೆ ಅಮೆರಿಕಾದ ಪ್ರಭಾವ ಇದೆ.

1913ರಿಂದ 1916ರವರೆಗೆ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿದ್ದಾಗ ತಮ್ಮ ಸಾಮರ್ಥ್ಯದ ಬಗ್ಗೆ ತಮಗೆ ಅರಿವು ಮೂಡಿತು ಎಂದು ಅಂಬೇಡ್ಕರ್ ಅವರೇ ಹೇಳಿದ್ದಾರೆ. ಅಂಬೇಡ್ಕರ್ ಅವರು ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಕೊಲಂಬಿಯಾದಲ್ಲಿ ಅತ್ಯುತ್ತಮ ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತಿದ್ದರು. ಕೊಲಂಬಿಯಾದಲ್ಲಿ ಅಂಬೇಡ್ಕರ್ ಕೈಗೊಂಡ ಕೆಲವು ಶೈಕ್ಷಣಿಕ ಕಾರ್ಯಗಳನ್ನು ಗಮನಿಸಿದರೆ ಅವರ ಅಧ್ಯಯನ ಶೀಲತೆಯ ಪರಿಚಯವಾಗುತ್ತದೆ. 'ರೈಲು ರಸ್ತೆಗಳ ಆರ್ಥಿಕತೆ' ಮತ್ತಿತರ ವಿಚಾರಗಳನ್ನು ತರಗತಿಯ ಶ್ರೇಣಿಗಳ ಅವಶ್ಯಕತೆಗಳನ್ನು ಮೀರಿ ಅಭ್ಯಸಿಸುತ್ತಿದ್ದರು. "ನನ್ನ ಜೀವನದಲ್ಲಿ ನನಗೆ ದೊರಕಿದ ಅತ್ಯುತ್ತಮ ಸ್ನೇಹಿತರಲ್ಲಿ ಕೆಲವರು ಕೊಲಂಬಿಯಾ ವಿಶ್ವವಿದ್ಯಾನಿಲಯದ ನನ್ನ ಸಹಪಾಠಿಗಳು ಮತ್ತು ಜಾನ್ ಡ್ಯೂವಿ, ಜೇಮ್ಸ್ ಶಾಟ್‌ವೆಲ್, ಎಡ್ವಿನ್ ಸೆಲಿಗ್‌ಮನ್ ಮತ್ತು ಜೇಮ್ಸ್ ಹಾರ್ವೆ ರಾಬಿನ್‌ಸನ್ ಅವರಂತಹ ಪ್ರಾಧ್ಯಾಪಕರು" ಎಂದು ಅಂಬೇಡ್ಕರ್ 1930, ಡಿಸೆಂಬರ್ 19ರ 'ಕೊಲಂಬಿಯಾ ಅಲ್ಯುಮ್ನಿ ನ್ಯೂಸ್' ಪತ್ರಿಕೆಯಲ್ಲಿ ಬರೆದಿದ್ದಾರೆ.

ಕೊಲಂಬಿಯಾ ವಿಶ್ವವಿದ್ಯಾನಿಲಯ ಬಿಟ್ಟ ನಂತರ ಅರ್ಥ ಶಾಸ್ತ್ರದ ಪ್ರಾಧ್ಯಾಪಕ ಎಡ್ವಿನ್ ಸೆಲಿಗ್‌ಮನ್ ಅವರೊಡನೆ ಹೆಚ್ಚು ಸಂಪರ್ಕದಲ್ಲಿದ್ದರೂ, ಅಂಬೇಡ್ಕರ್ ಅವರ ವ್ಯಕ್ತಿತ್ವದ ಮೇಲೆ ಜಾನ್ ಡ್ಯೂವಿ ಹೆಚ್ಚು ಪ್ರಭಾವ ಬೀರಿದ ಹಾಗೆ ಕಾಣುತ್ತದೆ. ಡ್ಯೂವಿ ಅವರ ಪ್ರಾಗ್ಮಾಟಿಕ್ ಸಿದ್ಧಾಂತ, ತತ್ವಗಳು, ಸಮಾನತೆ, ಉನ್ನತ ಮಟ್ಟದ ಬದಲಾವಣೆಯ ಸಾಧ್ಯತೆಯನ್ನು ತೋರಿಸಿದ ಅಮೆರಿಕಾದ ಪ್ರಜಾತಂತ್ರ ವ್ಯವಸ್ಥೆ, ಪ್ರತಿಯೊಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುವ ಮನೋಭಾವ ಅಂಬೇಡ್ಕರ್ ಅವರಿಗೆ ಹಿಡಿಸಿದವು.

1936ರಲ್ಲಿ ಅಂಬೇಡ್ಕರ್ ಮೊಟ್ಟಮೊದಲಿಗೆ ಆರಂಭಿಸಿದ 'ಸ್ವತಂತ್ರ ಲೇಬರ್ ಪಕ್ಷ' ಬ್ರಿಟಿಷ್ ರಾಜಕಾರಣದಿಂದ ಪ್ರಭಾವಿತವಾಗಿದೆ. ಅಂಬೇಡ್ಕರ್ ಅವರ ಮೇಲೆ ಬ್ರಿಟನ್‌ನ ಪ್ರಭಾವ ಕಡಿಮೆಯಾಗಲು ಎರಡು ಕಾರಣಗಳಿವೆ: ಬ್ರಿಟಿಷರು ಭಾರತವನ್ನು ವಸಾಹತು ರಾಷ್ಟ್ರವನ್ನಾಗಿ ಮಾಡಿಕೊಂಡದ್ದು, ಮತ್ತು ಬ್ರಿಟನ್‌ನ ಪ್ರಗತಿಶೀಲರು ಭಾರತದ ಸ್ವಾತಂತ್ರ್ಯಕ್ಕೆ ಅಂಬೇಡ್ಕರ್ ಪ್ರತಿಪಾದಿಸಿದ ಶಾಸನ ಸಭೆಯ ಹಾದಿಯನ್ನು ಕಡೆಗಣಿಸಿ, ಗಾಂಧಿ ಅವರ ಅಹಿಂಸಾ ತತ್ವಕ್ಕೆ ಮನ್ನಣೆ ನೀಡಿದ್ದು. ಹೀಗಾಗಿ, ಅಮೆರಿಕಾದ ವಾಸ್ತವವಾದ ಮತ್ತು ವರ್ಗಹೀನತೆ ಅಂಬೇಡ್ಕರ್ ಅವರಿಗೆ ಸಹಜವಾಗಿ ಹಿಡಿಸಿತು.

1916ರಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಹೊರಬಂದ ನಂತರ ಅಂಬೇಡ್ಕರ್ ಅಮೆರಿಕಾದ ಸಂಪರ್ಕವನ್ನು ಸಂಪೂರ್ಣವಾಗಿ ಬಿಡದೇ ಹೋದರೂ, ಸಂಪರ್ಕ ಕಡಿಮೆಗೊಳಿಸಿದ್ದಂತೂ ನಿಜ. ಅಂಬೇಡ್ಕರ್ ತಮ್ಮ ನೆಚ್ಚಿನ ಅರ್ಥಶಾಸ್ತ್ರ ಪ್ರಾಧ್ಯಾಪಕ ಎಡ್ವಿನ್ ಸೆಲಿಗ್‌ಮನ್ ಅವರೊಂದಿಗೆ ಯಾವಾಗಲೂ ಪತ್ರ ಸಂಪರ್ಕದಲ್ಲಿರುತ್ತಿದ್ದರು. ಬಾಂಬೆ ನಗರದ ಸಿಡೆನ್‌ಹ್ಯಾಮ್ ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದಾಗ ತಮ್ಮ ಕೆಲವು ಶಿಷ್ಯರನ್ನು ಶಿಫಾರಸ್ಸು ಮಾಡಿ ಸೆಲಿಗ್‌ಮನ್ ಅವರ ಬಳಿ ಕಳುಹಿಸಿದ್ದುಂಟು. 1930ರಲ್ಲಿ ಕೊಲಂಬಿಯಾ ವಿವಿಯ ಅಲ್ಯೂಮ್ನಿ ಪತ್ರಿಕೆಗೆ ಅಂಬೇಡ್ಕರ್ ಬರೆದ ಪತ್ರ ಭಾವಪೂರ್ಣವಾಗಿದೆ: "ನನ್ನ ಜೀವನದಲ್ಲಿ ನನಗೆ ದೊರಕಿದ ಅತ್ಯುತ್ತಮ ಸ್ನೇಹಿತರಲ್ಲಿ ಕೆಲವರು ಕೊಲಂಬಿಯಾ ವಿಶ್ವವಿದ್ಯಾನಿಲಯದ ನನ್ನ ಸಹಪಾಠಿಗಳು ಮತ್ತು ಜಾನ್ ಡ್ಯೂವಿ, ಜೇಮ್ಸ್ ಶಾಟ್‌ವೆಲ್, ಎಡ್ವಿನ್ ಸೆಲಿಗ್‌ಮನ್ ಮತ್ತು ಜೇಮ್ಸ್ ಹಾರ್ವೆ ರಾಬಿನ್‌ಸನ್ ಅವರಂತಹ ಪ್ರಾಧ್ಯಾಪಕರು." 1952ರಲ್ಲಿ ಅಂಬೇಡ್ಕರ್ ಗೌರವ ಡಾಕ್ಟರ್ ಆಫ್ ಲಾ ಪದವಿ ಪಡೆಯಲು ಕೊಲಂಬಿಯಾಗೆ ಹೋಗಿದ್ದರು. ತಾವು ಅಭ್ಯಸಿಸಿದ ವಿ.ವಿ ತಮ್ಮನ್ನು ಗುರುತಿಸಿದ್ದು ಅಂಬೇಡ್ಕರ್ ಅವರಿಗೆ ಸಹಜವಾಗಿ ಹೆಮ್ಮೆಯ ವಿಚಾರವಾಗಿತ್ತು. ಅಮೆರಿಕಾದ ಸಂಪರ್ಕದಿಂದ ಭಾರತ ದೂರವಾಗುವ ಸಾಧ್ಯತೆ ಇದೆ ಎಂಬ ಕಾರಣದಿಂದ 1950ರ ಆರಂಭದಲ್ಲಿ ಅಂಬೇಡ್ಕರ್, ಭಾರತದ ಅಲಿಪ್ತ ನೀತಿಯ ಬಗ್ಗೆ ಸಾರ್ವಜನಿಕವಾಗಿ ಟೀಕಿಸುತ್ತಿದ್ದರು.

ಅಂಬೇಡ್ಕರ್ ಅವರ ಹಿನ್ನೆಲೆಯಲ್ಲಿ ಭಾರತ-ಅಮೆರಿಕಾದ ಸಾಂಸ್ಕೃತಿಕ ಸಂಬಂಧವನ್ನು ವೈಯುಕ್ತಿಕವಾಗಿ ನೋಡುವ ಪ್ರಯತ್ನ ನಡೆಸಿರುವ ಈ ಲೇಖನವನ್ನು ಎರಡು ಕಥೆಗಳನ್ನು ಹೇಳಿ ಮುಗಿಸುತ್ತೇನೆ. ಕಾಲೇಜು ಬಿಟ್ಟು 30 ವರ್ಷಗಳು ಕಳೆದ ಬಳಿಕ ಅಂಬೇಡ್ಕರ್ ತಮ್ಮ ಗುರು ಜಾನ್ ಡ್ಯೂವಿ ಅವರ ತರಗತಿಯೊಳಗಿನ ಭಾವ ಭಂಗಿಗಳನ್ನು ಖುಷಿಯಿಂದ ನಕಲು ಮಾಡಿ ತೋರಿಸುತ್ತಿದ್ದುದನ್ನು ಸವಿತಾ ಅಂಬೇಡ್ಕರ್ ನೆನಪಿಸಿಕೊಳ್ಳುತ್ತಾರೆ. ಅಂಬೇಡ್ಕರ್ ಅವರ ಜೀವನದಲ್ಲಿ ಮತ್ತೊಬ್ಬ ವ್ಯಕ್ತಿ ಗಾಢವಾದ ಪ್ರಭಾವ ಬೀರಿದ್ದನ್ನು ಊಹಿಸಿಕೊಳ್ಳಲಾಗದ ಸಂದರ್ಭದಲ್ಲಿ ಅಂಬೇಡ್ಕರ್ ಅವರು, ಜಾನ್ ಡ್ಯೂವಿ ಅವರನ್ನು ಓರ್ವ ತತ್ವಜ್ಞಾನಿಯಾಗಷ್ಟೇ ಅಲ್ಲದೆ, ವ್ಯಕ್ತಿಯಾಗಿ ಇಷ್ಟಪಡುತ್ತಿದ್ದರು ಎಂಬುದಕ್ಕೆ ಸೂಚ್ಯವಾದ ಈ ನಿದರ್ಶನವನ್ನು ಸವಿತಾ ನಮಗೆ ನೀಡುತ್ತಾರೆ.

1918ರಲ್ಲಿ ಅಂಬೇಡ್ಕರ್ ಅವರು ಸಿಡೆನ್‌ಹ್ಯಾಮ್ ಕಾಲೇಜಿಗೆ ಉಪನ್ಯಾಸಕ ಹುದ್ದೆಗೆ ಅರ್ಜಿ ಸಲ್ಲಿಸಲು ಪೂರಕವಾಗಿ ಲಂಡನ್ ವಿಶ್ವವಿದ್ಯಾನಿಲಯದ ರಾಜಕೀಯ ಆರ್ಥಿಕತೆ ವಿಷಯದ ಪ್ರಾಧ್ಯಾಪಕ ಎಡ್ವರ್ಡ್ ಕ್ಯಾನನ್ ಅವರು ಬರೆದ ಶಿಫಾರಸ್ಸು ಪತ್ರ ಬಹಳ ಸ್ವಾರಸ್ಯಕರವಾಗಿದೆ: "ಅಂಬೇಡ್ಕರ್ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲ. ಅವರು ಸಂಶೋಧನೆಗಾಗಿ ಇಲ್ಲಿ ಬಂದಿದ್ದಾರೆ ಮತ್ತು ಈ ಬಗ್ಗೆ ಅತ್ಯದ್ಭುತವಾದ ಸಾಮರ್ಥ್ಯ ಹೊಂದಿದ್ದಾರೆ ಎಂಬುದು ಗೊತ್ತು... ಅಂಬೇಡ್ಕರ್ ಪಕ್ಕಾ ಭಾರತೀಯರೇ ಎಂದು ನನಗೆ ಅನುಮಾನ; ಅವರಲ್ಲಿ ಸ್ಕಾಟ್-ಅಮೆರಿಕನ್ ಗುಣಲಕ್ಷಣ ಕಾಣುವುದೇ ಹೆಚ್ಚು." ಹೌದು, ಅಂಬೇಡ್ಕರ್ ಪಕ್ಕಾ ಭಾರತೀಯರೇ. ಅವರ ಜಾತಿಯ ಇತಿಹಾಸ ತಿಳಿದವರು ಇವರನ್ನು ಇನ್ಯಾವ ರಾಷ್ಟ್ರೀಯತೆಯಿಂದಲೂ ಗುರುತಿಸಲು ಸಾಧ್ಯವಿಲ್ಲ. ಆದರೆ ಅವರ ವ್ಯಕ್ತಿತ್ವವನ್ನು 'ಸ್ಕಾಟ್-ಅಮೆರಿಕನ್' ಎಂದದ್ದು ನನಗೆ ನಿಜವಾಗಿ ಖುಷಿ ಕೊಟ್ಟಿದೆ.

* * * * * * * *



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಅಂಬೇಡ್ಕರ್ ಮತ್ತು ಅಮೆರಿಕಾ

ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದಾಗ ಡಾ. ಬಿ. ಆರ್. ಅಂಬೇಡ್ಕರ್ ಬಗ್ಗೆ ಮುಕ್ತ ಕಂಠದಿಂದ ಪ್ರಶಂಸಿದ ಹಾಗೆ ಭಾರತದಲ್ಲಿ ಎಂದಾದರೂ ಕಮ್ಯೂನಿಸ್ಟ್

ದಲಿತರು ಎಡಪಕ್ಷಗಳನ್ನು ಯಾಕೆ ನಂಬುವುದಿಲ್ಲ?

ಭಾರತದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ದಲಿತೇತರ ಕಮ್ಯೂನಿಸ್ಟರು ದಲಿತರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ತ್ಯಾಗ, ಬಲಿದಾನಗಳನ್ನು ಮಾಡಿರುವುದು ನಿಜ. ಆದರೆ ದಲಿತರಿಗಾಗಿ ಎಡಪಂಥೀಯರು ಎಂದಾದರು ಪ್ರಾಣ ತ್ಯಾಗ ಮಾಡಿದ ನಿದರ್ಶನವಿದೆಯಾ? ಜಾತಿ ಭಾರತದ ಬಹುದೊಡ್ಡ ಸಮಸ್ಯೆ ಎಂಬ ಸತ್ಯವನ್ನು ಗುರುತಿಸಲು ಎಡಪಂಥೀಯರು ಇನ್ನೂ ತಯಾರಿಲ್ಲ. ಭಾರತವನ್ನು ಅರ್ಥೈಸಿಕೊಳ್ಳುವಲ್ಲಿ ಎಡಪಂಥೀಯರು ಮೂಲಭೂತವಾಗಿ ಸೋತಿರುವುದರಿಂದ ದಲಿತ ಮತ್ತು ಎಡಪಂಥೀಯ ಬೌದ್ಧಿಕತೆಯಲ್ಲಿ ಬಹು ದೊಡ್ಡ ಅಂತರ ಸೃಷ್ಟಿಯಾಗಿದೆ.

ನಾಯಕರು ಅಂಬೇಡ್ಕರ್ ಅವರನ್ನು ಗುರುತಿಸಿದ್ದಾರೆಯೇ? 1961ರಲ್ಲಿ ಒಬಾಮಾ ಜನಿಸಿದಾಗ ಅದಾಗಲೇ ಭಾರತದಲ್ಲಿ ಕಮ್ಯೂನಿಸ್ಟ್ ಚಳವಳಿ ಆರಂಭವಾಗಿ ಸುಮಾರು 40 ವರ್ಷಗಳು ಕಳೆದಿದ್ದವು.

ದಲಿತರು ಎಡಪಂಥೀಯರನ್ನು ಯಾಕೆ ನಂಬುವುದಿಲ್ಲ ಎಂಬುದನ್ನು ವಿವರಿಸಲು ನಾನು ಈ ರೂಪಕವನ್ನು ಬಳಸುತ್ತಿದ್ದೇನೆ. ದೇಶದಲ್ಲಿ ಕಮ್ಯೂನಿಸ್ಟ್ ಕ್ರಾಂತಿಯಾಗದಂತೆ ದಲಿತರು ಮೋಸ ಮಾಡಿದ್ದಾರೆ ಎಂಬುದು ಎಡಪಂಥೀಯ ಬುದ್ಧಿಜೀವಿಗಳ ವಾದ. ಎಡಪಂಥೀಯ ಬುದ್ಧಿಜೀವಿಗಳು ಪಾರಂಪರಿಕವಾಗಿ ದಲಿತ ಬುದ್ಧಿಜೀವಿಗಳನ್ನು ಹೀಯಾಳಿಸುತ್ತಾ ಬಂದಿದ್ದಾರೆ.

ಭಾರತದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ದಲಿತೇತರ ಕಮ್ಯೂನಿಸ್ಟರು ದಲಿತರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ತ್ಯಾಗ, ಬಲಿದಾನಗಳನ್ನು ಮಾಡಿರುವುದು ನಿಜ. ಆದರೆ ದಲಿತರಿಗಾಗಿ ಎಡಪಂಥೀಯರು ಎಂದಾದರೂ ಪ್ರಾಣ ತ್ಯಾಗ ಮಾಡಿದ ನಿದರ್ಶನವಿದೆಯಾ? ಜಾತಿ ಭಾರತದ ಬಹುದೊಡ್ಡ ಸಮಸ್ಯೆ ಎಂಬ ಸತ್ಯವನ್ನು ಗುರುತಿಸಲು ಎಡಪಂಥೀಯರು ಇನ್ನೂ ತಯಾರಿಲ್ಲ.

ಭಾರತವನ್ನು ಅರ್ಥೈಸಿಕೊಳ್ಳುವಲ್ಲಿ ಎಡಪಂಥೀಯರು ಮೂಲಭೂತವಾಗಿ ಸೋತಿರುವುದರಿಂದ ದಲಿತ ಮತ್ತು ಎಡಪಂಥೀಯ ಬೌದ್ಧಿಕತೆಯಲ್ಲಿ ಬಹು ದೊಡ್ಡ ಅಂತರ ಸೃಷ್ಟಿಯಾಗಿದೆ. ಜಾತಿ ಮತ್ತು ವರ್ಗಾಧಾರಿತ ಸಮಾಜದ ನಡುವೆ ಆಯ್ಕೆಯನ್ನು ನೀಡಿದರೆ ದಲಿತರು ವರ್ಗಾಧಾರಿತ ಸಮಾಜವನ್ನು ಒಪ್ಪುವುದರಲ್ಲಿ ಸಂಶಯವಿಲ್ಲ. ಯಾಕೆಂದರೆ ವರ್ಗಾಧಾರಿತ ಸಮಾಜ ಓರ್ವ ವ್ಯಕ್ತಿಯ ಜನ್ಮದ ಹಿನ್ನೆಲೆಗೆ ಮನ್ನಣೆ ನೀಡುವುದಿಲ್ಲ. ಈ ವ್ಯವಸ್ಥೆಯಲ್ಲಿ ಬೆಳವಣಿಗೆ ಹೊಂದಲು ಎಲ್ಲರಿಗೂ ಸಮಾನವಾದ ಅವಕಾಶವಿರುತ್ತದೆ. ಆದರೆ ಜಾತಿಯಾಧಾರಿತ ಸಮಾಜದಲ್ಲಿ ನಿಮ್ಮ ಸ್ಥಾನಮಾನ ಗರ್ಭದಲ್ಲಿಯೇ ನಿರ್ಧಾರವಾಗುತ್ತದೆ. ಜಾತಿಯಾಧಾರಿತ ಸಮಾಜದಲ್ಲಿ ತಮ್ಮ ಸ್ಥಾನಮಾನ ಏನೆಂಬುದು ದಲಿತರಿಗೆ ಚೆನ್ನಾಗಿಯೇ ಗೊತ್ತು.

ಆದ್ದರಿಂದ ಶತಮಾನಗಳಿಂದ ದಲಿತರು ಜಾತಿಯನ್ನು ವಿರೋಧಿಸುತ್ತಿದ್ದಾರೆ. 1920ರಲ್ಲಿ ಆರಂಭವಾದ ಎಡಪಂಥೀಯ ಚಳವಳಿ ಭಾರತದಲ್ಲಿ ಇನ್ನೂ ವರ್ಗಗಳು ಸರಿಯಾಗಿ ರಚನೆಯಾಗದ ಸಂದರ್ಭದಲ್ಲಿ ವರ್ಗಾಧಾರಿತ ಸಮಾಜದ ವಿರುದ್ಧ ಹೋರಾಡಲು ನಿರ್ಧರಿಸಿದ್ದು ಸೋಜಿಗ. ಜಾತಿವ್ಯವಸ್ಥೆಯ ವಿರುದ್ಧ ದಲಿತರು ನಡೆಸುತ್ತಿದ್ದ ಹೋರಾಟದಲ್ಲಿ ಕೈಜೋಡಿಸುವ ಬದಲು ಎಡಪಂಥೀಯರು, ಜಾತಿ ವಿರುದ್ಧ ಹೋರಾಡುತ್ತಿದ್ದವರನ್ನು ಹೀಯಾಳಿಸಲಾರಂಭಿಸಿದರು.

ಎಡಪಂಥೀಯರು ಇವತ್ತಿಗೂ ಕೂಡ ಜಾತಿಯನ್ನು ನಿರಾಕರಿಸುತ್ತಿದ್ದಾರೆ. ಇತ್ತೀಚೆಗೆ ಭಾರತ ಸೇರಿದಂತೆ ಎಲ್ಲ ಸಮಾಜಗಳು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಅವಕಾಶ ಕಲ್ಪಿಸಿರುವ ಜಾಗತೀಕರಣವನ್ನು ವಿರೋಧಿಸಲಾರಂಭಿಸಿದ್ದಾರೆ. ಭಾರತದ ಭೀಕರ ಜಾತಿವ್ಯವಸ್ಥೆಯ ಬಗ್ಗೆ ಅಧ್ಯಯನ ಕೈಗೊಳ್ಳಲು ಜಗತ್ತಿನಾದ್ಯಂತ ವಿವಿಧ ವಿಶ್ವವಿದ್ಯಾನಿಲಯಗಳು ಅವಕಾಶ ಕಲ್ಪಿಸುತ್ತಿವೆ. ಇದು ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ ಇರಿಸು ಮುರಿಸು ಉಂಟುಮಾಡಿದೆ. ವಿದೇಶಗಳಲ್ಲಿ ಜಾತಿಯ ವಿಚಾರ ಬಂದಾಗ ಕೆಲವರಿಗಂತೂ ತುಂಬಾ ನಾಚಿಕೆಯಾಗುತ್ತಿದೆ. ಆದರೆ ಎಡರಂಗ, ಸಂಘಪರಿವಾರದವರ ಹಾಗೆ ಜಾಗತೀಕರಣವನ್ನು ವಿರೋಧಿಸುತ್ತಿರುವುದು ವಿಪರ್ಯಾಸ.

ಜಾಗತೀಕರಣದ ನಂತರ ಬಹುರಾಷ್ಟ್ರೀಯ ಸಂಸ್ಥೆಗಳು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯನ್ನು ಭಾರತಕ್ಕೆ ಪರಿಚಯಿಸಿದವು. ಭಾರತೀಯ ಉದ್ಯಮಗಳು ಈಗಲೂ ಕೂಡ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಅಸಮಧಾನ ಹೊಂದಿದ್ದಾರೆ. ಸರ್ಕಾರ ಮತ್ತು ಖಾಸಗಿ ವಲಯದಲ್ಲಿನ ಉನ್ನತ ಹುದ್ದೆಗಳಲ್ಲಿ, ಉದ್ಯಮಗಳಲ್ಲಿ ಸಮುದಾಯಕ್ಕೆ ಹೆಚ್ಚಿನ ಅವಕಾಶ ದೊರಕಿಸಿಕೊಡುವ ನಿಟ್ಟಿನಲ್ಲಿ ದಲಿತರು ಹೋರಾಡುತ್ತಿದ್ದರೆ, ಎಡಪಂಥೀಯರು ಉದ್ಯಮಗಳ ಸ್ಥಾಪನೆಯನ್ನೇ ವಿರೋಧಿಸುತ್ತಿದ್ದಾರೆ!

ಜಾತಿವ್ಯವಸ್ಥೆಯ ಬುಡವನ್ನು ಅಲುಗಾಡಿಸುವ ಮಾರುಕಟ್ಟೆ ಅರ್ಥ ವ್ಯವಸ್ಥೆಯನ್ನು ಜಾಗತೀಕರಣ ಒಳಗೊಂಡಿದೆ. ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ ಭೋಗದ ವಸ್ತುಗಳು ಸಾಮಾಜಿಕ ಅಸ್ತಿತ್ವದ ಸಂಕೇತಗಳಾಗಿರುತ್ತವೆ. ನಿಮ್ಮ ಬಳಿ ರೆಫ್ರಿಜರೇಟರ್, ಟಿವಿ, ವಾಷಿಂಗ್ ಮಷಿನ್, ಬೈಕ್ ಮತ್ತು ಕಾರು, ಸೆಲ್‌ಫೋನ್ ಮತ್ತಿತರ ವಸ್ತುಗಳಿಲ್ಲದಿದ್ದರೆ ಸಮಾಜದಲ್ಲಿ ನಿಮ್ಮ ಸ್ಥಾನಮಾನ ಚೆನ್ನಾಗಿಲ್ಲ ಎಂದರ್ಥ. ಈ ಭೋಗದ ವಸ್ತುಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ದ್ವಿಜರು ಕೂಡ ಈಗ ಕೆಳಮಟ್ಟದ ಉದ್ಯೋಗಗಳನ್ನು ಮಾಡಲಾರಂಭಿಸಿದ್ದಾರೆ. ಈ ವಸ್ತುಗಳಿಲ್ಲದ ಬ್ರಾಹ್ಮಣರು ಸಮಾಜದಲ್ಲಿ ಒಂದು ರೀತಿಯ ಮುಜುಗರ ಅನುಭವಿಸುತ್ತಾರೆ.

1881ರಲ್ಲಿ ಬ್ರಿಟಿಷ್ ಸರ್ಕಾರ ಜನಗಣತಿಯನ್ನು ಆರಂಭಿಸಿದಾಗ ವಿವಿಧ ಜಾತಿಗಳು ತಮ್ಮ ಜಾತಿಗಳನ್ನು 'ಮೇಲು' ಎಂದು ಪರಿಗಣಿಸಲು ಸರ್ಕಾರವನ್ನು ಕೋರುತ್ತಿದ್ದರು. ಆದರೆ ಒಂದು ಶತಮಾನದ ಬಳಿಕ, 1990ರ ನಂತರ ಬಹಳಷ್ಟು ಜಾತಿಗಳು ತಮ್ಮ ಜಾತಿಗಳನ್ನು 'ಕೀಳು' ಎಂದು ಪರಿಗಣಿಸಲು ಸರ್ಕಾರಕ್ಕೆ ದುಂಬಾಲು ಬಿದ್ದಿದ್ದಾರೆ. 'ಅಸ್ಪೃಶ್ಯ' ಎಂದು ತಮ್ಮನ್ನು ಪರಿಗಣಿಸುವಂತೆ ಕೋರಿ ನೂರಾರು ಜಾತಿಗಳು ಸಲ್ಲಿಸಿರುವ ಅರ್ಜಿಗಳು ಭಾರತ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಬಳಿ ಇವೆ.

ಯಾಕೆ ಈ ರೀತಿಯ ಬದಲಾವಣೆಗಳಾಗುತ್ತಿವೆ? ಭಾರತದ ಇತಿಹಾಸದಲ್ಲಿ ಎಂದಾದರೂ ಕೆಳಜಾತಿಯವರು ಎನ್ನಿಸಿಕೊಳ್ಳುವುದು ಮುಖ್ಯವಾಗಿತ್ತೇ ಗಮನಿಸಿ. 'ನಿರುದ್ಯೋಗ ಮತ್ತು ಮಂಡಲ್' ಈ ಬದಲಾವಣೆಗೆ ಕಾರಣವೆಂದು ವಾದಿಸಬಹುದು. ಹಾಗಾದರೆ 1990ರ ಮುಂಚೆ ನಿರುದ್ಯೋಗದ ಸಮಸ್ಯೆ ಇರಲಿಲ್ಲವೇ? ಮೀಸಲಾತಿ ಇರಲಿಲ್ಲವೇ?

ನಿಜ, ಸರ್ಕಾರಿ ಉದ್ಯೋಗ ಉತ್ತಮ ವೇತನ ಮತ್ತು ಸುರಕ್ಷತೆಯನ್ನು ಒದಗಿಸುತ್ತದೆ. ಆದರೆ ಜಮೀನ್ದಾರರ ಕುಟುಂಬದವರು ಕೂಡ ಉತ್ತರ ಪ್ರದೇಶದ ಸರ್ಕಾರದಲ್ಲಿ ಕಸಗುಡಿಸುವ ಕೆಲಸಕ್ಕೆ ಅರ್ಜಿ ಹಾಕುವುದು ಏಕೆ? ಬಿಹಾರ, ಒರಿಸ್ಸಾ, ಮತ್ತು ಉತ್ತರಖಂಡ್‌ನ ಬ್ರಾಹ್ಮಣರು ನಗರದ ಷಾಪಿಂಗ್ ಮಾಲ್‌ಗಳಲ್ಲಿ ಶೌಚಾಲಯ ಶುಚಿಗೊಳಿಸುವ ಕೆಲಸ ಮಾಡುತ್ತಿರುವುದೇಕೆ? ಯಾವಾಗಲೂ ಸಲಾಮುಗಳನ್ನು ಸ್ವೀಕರಿಸಿ ಅಭ್ಯಾಸವಿರುವ ಗಂಗಾ ನದಿ ಪಾತ್ರದ ರಜಪೂತರು, ದಿನಕ್ಕೆ ಹಲವಾರು ಸಲಾಮುಗಳನ್ನು ಹೊಡೆಯಬೇಕಾಗುವ ಸೆಕ್ಯೂರಿಟಿ ಗಾರ್ಡ್‌ಗಳ ಕೆಲಸಕ್ಕೆ ಯಾಕೆ ಸೇರಿಕೊಳ್ಳುತ್ತಿದ್ದಾರೆ?

ಇದೆಲ್ಲದರ ಹಿಂದಿನ ಕಾರಣ ಒಂದೇ; ಭಾರತದ ಜಾತಿವ್ಯವಸ್ಥೆಯ ಬುಡಕ್ಕೆ ಕೊಡಲಿಪೆಟ್ಟು ನೀಡಿರುವ ಮಾರುಕಟ್ಟೆ ಅರ್ಥವ್ಯವಸ್ಥೆ. ಇಲ್ಲಿ ಭೋಗವಸ್ತುಗಳ ಒಡೆತನಕ್ಕೆ ಹಣವೇ ಕೀಲಿಕೈ. ಈ ಹಣದ ಹಿಂದೆಯೇ ಎಲ್ಲರ ಓಟ.

ಜನ್ಮಾಧಾರಿತ ಸಾಮಾಜಿಕ ಸ್ಥಾನಮಾನ ಬದಲಾಗಿ ಮಾರುಕಟ್ಟೆ ಆಧಾರಿತ ಸಾಮಾಜಿಕ ಸ್ಥಾನಮಾನ ಅಸ್ತಿತ್ವಕ್ಕೆ ಬರುತ್ತಿರುವುದರಿಂದ ಹಣದ ಥೈಲಿಯ ಹಿಂದೆ ಎಲ್ಲ ಜಾತಿಗಳೂ ಓಡುತ್ತಿವೆ. ಭಾರತೀಯ ಸಮಾಜದಲ್ಲಿ ಕ್ರಾಂತಿ

ಕಾರಿ ಬದಲಾವಣೆಗೆ ಕಾರಣವಾಗಿರುವ ಇಂತಹ ಮಾರುಕಟ್ಟೆ ಅರ್ಥವ್ಯವಸ್ಥೆಯ ಬಗ್ಗೆ ಎಡಪಂಥೀಯರ ಅಭಿಪ್ರಾಯ ಕೇಳಿ ನೋಡಿ ನಿಮಗೆ ಗೊತ್ತಾಗುತ್ತದೆ ದಲಿತರು ಎಡಪಂಥೀಯರಿಗೆ ಯಾಕೆ 'ಮೋಸ' ಮಾಡಿದರು ಅಂತ.

* * * * * * * *

ಇತ್ತೀಚೆಗೆ ಬಿಹಾರದ ಚುನಾವಣೆಯಲ್ಲಿ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಜಯಭೇರಿ ಬಾರಿಸಿರುವುದನ್ನು ಬಹಳಷ್ಟು ವಿಶ್ಲೇಷಕರು ಬಿಹಾರದ ಜಾತಿ ರಾಜಕೀಯದ ಅಂತ್ಯ ಎಂದು ಬಿಂಬಿಸುತ್ತಿದ್ದಾರೆ. ಚುನಾವಣೆಯ ವೇಳೆ ನಿತೀಶ್ ಕುಮಾರ್ ಜಾತಿಯ ಬಗ್ಗೆ ಲಾಲೂ–ಪಾಸ್ವಾನ್ ಅವರಷ್ಟು ಮಾತನಾಡಲಿಲ್ಲ. ಇಬ್ಬರ ಪಕ್ಷಗಳೂ ಚುನಾವಣೆಯಲ್ಲಿ ಧೂಳೀಪಟವಾಗಿವೆ. ಜಾತಿ ರಾಜಕೀಯದಿಂದ ರೋಸಿ ಹೋಗಿರುವ ಬಹಳಷ್ಟು ಮಂದಿಗೆ ಈ ಬೆಳವಣಿಗೆ ಸಂತಸ ತಂದಿರುವುದರಿಂದ 'ಜಾತಿ ರಾಜಕಾರಣ'ದ ಅಂತ್ಯ ಎಂಬ ವಾದ ಕೇಳಿಬರುತ್ತಿದೆ. ಆದರೆ ಜಾತಿಯಾಧಾರಿತ ರಾಜಕಾರಣ ಮಾಡುವ ಲಾಲೂ ಮತ್ತು ಪಾಸ್ವಾನ್ ಅವರಿಗೆ ಇದು ಕೇವಲ ತಾತ್ಕಾಲಿಕ ಹೊಡೆತ ಅಷ್ಟೇ.

ಬಿಹಾರದಲ್ಲಿ ನಿತೀಶ್ ಕುಮಾರ್ ಅವರ ಕಳೆದ ಐದು ವರ್ಷದ ಆಡಳಿತದಲ್ಲಿ ಮೂರು ಪ್ರಮುಖ ಅಂಶಗಳನ್ನು ಗುರುತಿಸಲಾಗುತ್ತದೆ: ಅ) ಕಾನೂನು ಮತ್ತು ಸುವ್ಯವಸ್ಥೆಯಲ್ಲಾದ ಮಹತ್ತರ ಬದಲಾವಣೆ; ಆ) ರಸ್ತೆಗಳು; ಇ) ಮಹಾ ದಲಿತ–ಪಸ್ಮಂದ ಸಮುದಾಯಗಳ ಸೆಳೆದುಕೊಳ್ಳುವಿಕೆ.

ಈ ಮೇಲಿನ ಮೂರು ಅಂಶಗಳಲ್ಲಿ ಕೊನೆಯದು ಸಂಪೂರ್ಣವಾಗಿ ಜಾತಿಯನ್ನಾಧರಿಸಿದೆ. ನಿತೀಶ್ ಪರವಾಗಿ ಚುನಾವಣೆಯಲ್ಲಿ ಕೆಲಸ ಮಾಡಿದ ಬಹುಮುಖ್ಯ ಅಂಶ ಕೂಡ ಇದೇ. ಇತ್ತೀಚೆಗೆ ರಾಂ ವಿಲಾಸ್ ಪಾಸ್ವಾನ್ ಅವರನ್ನು 'ದುಶದ್' ಎಂಬ ದಲಿತ ಉಪ ಪಂಗಡದ ನಾಯಕ ಎಂದು ಗುರುತಿಸಲಾಗುತ್ತಿದೆ. ನಿತೀಶ್ ಅವರ 'ಮಹಾ ದಲಿತ' ಸಂಘಟನೆಯಲ್ಲಿ 'ದುಶದ್' ಸಮುದಾಯ ಇಲ್ಲ. ಅಂದರೆ, ಪಾಸ್ವಾನ್ ಅವರು 'ದುಶದ್' ಸಮುದಾಯವನ್ನು ಬಿಟ್ಟು ಇತರ ದಲಿತ ಸಮುದಾಯಗಳನ್ನು ಪ್ರತಿನಿಧಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ನಿತೀಶ್ ದಲಿತರಿಗೆ ನೀಡಿದ್ದಾರೆ. ಇದು ನಿತೀಶ್ ಅವರ ಜಾತಿ ರಾಜಕಾರಣವಲ್ಲದೆ ಇನ್ನೇನು?

ಚುನಾವಣೆಯಲ್ಲಿ ಗೆಲುವು ಸಾಧಿಸಲು ನಿತೀಶ್, ಲಾಲೂ ಅವರ 'ಮುಸ್ಲಿಂ–ಯಾದವ್' ಫಾರ್ಮುಲಾವನ್ನು ಬುಡಮೇಲು ಮಾಡಿದರು. 'ಪಸ್ಮಂದ' ಎಂಬ ಹಿಂದುಳಿದ/ ಕೆಳಜಾತಿಯ ಮುಸ್ಲಿಂ ಸಮುದಾಯವನ್ನು ದಲಿತರ ಜೊತೆ ಒಗ್ಗೂಡಿಸಿ ನಿತೀಶ್ ಮುಸ್ಲಿಮರನ್ನು ಭಾವನಾತ್ಮಕವಾಗಿ ಒಡೆಯುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾದರು. ಇದರಿಂದಾಗಿ ಮುಸ್ಲಿಮರ ಮತಗಳು ಮೇಲ್ಜಾತಿ ಮತ್ತು ಕೆಳಜಾತಿಯ ಮುಸ್ಲಿಮರ ನಡುವೆ ಹಂಚಿಹೋಗಿವೆ, ಮುಸ್ಲಿಮರ ಬಹುಸಂಖ್ಯಾತ ವರ್ಗ ನಿತೀಶ್ ಅವರ ಎನ್‌ಡಿಎ ಕಡೆ ಇದೆ ಎಂಬ ಭಾವನೆ ಸಾರ್ವಜನಿಕರಲ್ಲಿ ಮೂಡಿತು. ಯಾವುದೇ ಚುನಾವಣಾ ಸಮರದಲ್ಲಿ ಮತ ಹಾಕುವ ನಿರ್ಧಾರ ಕೈಗೊಳ್ಳದವರು ಗೆಲ್ಲುವ ಕುದುರೆಗೆ ಮತ ಹಾಕುವುದು ಸಾಮಾನ್ಯ. ಚುನಾವಣೆ ನಡೆಯುವುದಕ್ಕೆ ಮುಂಚೆಯೇ ನಿತೀಶ್ ಅವರ ನೇತೃತ್ವದ ಎನ್‌ಡಿಎ ಗೆಲುವು ಸಾಧಿಸಲಿದೆ ಎಂಬ ಮೂಡ್ ಎಲ್ಲೆಡೆ ಇತ್ತು. ನಿತೀಶ್ ಅವರು ಹೂಡಿದ ಈ ಪಸ್ಮಂದ ದಾಳ, ಜಾತಿ ರಾಜಕಾರಣದ ನಿಚ್ಚಳವಾದ ನಿದರ್ಶನ.

ಆದರೆ, ನಿತೀಶ್ ಅವರ ಗೆಲುವು ಹೊಸ ರೀತಿಯ ಜಾತಿ ರಾಜಕಾರಣದ ಫಲಿತಾಂಶವೇ? ಅಭಿವೃದ್ಧಿ ಇವರ ಗೆಲುವಿನಲ್ಲಿ ಯಾವುದೇ ಪಾತ್ರ ವಹಿಸಲಿಲ್ಲವೇ?

ದಶಕಗಳ ಹಿಂದೆ, ಬಸ್ಸು ಮತ್ತು ರೈಲು ಸಾರ್ವಜನಿಕ ಸಾರಿಗೆಯ ಪ್ರಮುಖ ಸಾಧನಗಳಾಗಿದ್ದವು. ಆಗ ಖಾಸಗಿ ವಾಹನಗಳನ್ನು ಬಳಸುತ್ತಿದ್ದವರ ಸಂಖ್ಯೆ ಕಡಿಮೆ ಇತ್ತು. ಯಾವುದಾದರೂ ಹಳ್ಳಿಯಲ್ಲಿ ಮೋಟರ್ ಸೈಕಲ್ ಸದ್ದು ಕೇಳಿಸಿದರೆ ಪೊಲೀಸರ ವಾಹನ ಬಂತು ಎಂದೇ ಅರ್ಥೈಸಿಕೊಳ್ಳಲಾಗುತ್ತಿತ್ತು. ಆದರೆ ಈಗ ಬಿಹಾರದ ದೂರದ ಹಳ್ಳಿಗಳಲ್ಲಿ ಕೂಡ ಹಾಲು ಮಾರುವವರು ತಮ್ಮ ಹೊಸ ಮೋಟರ್ ಸೈಕಲ್‌ಗಳಲ್ಲಿ ಹತ್ತಿರದ ಪಟ್ಟಣಗಳಿಗೆ ತಿರುಗಾಡುವುದು ಸಾಮಾನ್ಯ ದೃಶ್ಯ. ಈಗ ಪ್ರತಿ ಹಳ್ಳಿಯೊಂದರಲ್ಲಿ ಸುಮಾರು 10ರಿಂದ 12 ಮೋಟರ್ ಸೈಕಲ್‌ಗಳಿವೆ. ಬೈಸಿಕಲ್‌ಗಳಂತೂ ಈಗ ಎಲ್ಲೆಡೆ ಮನೆ ಮಾತಾಗಿದೆ.

ಒಂದೂವರೆ ದಶಕದ ಹಿಂದೆ, ದಲಿತರ ಮನೆಗಳಲ್ಲಿ ಮದುವೆ ಮತ್ತಿತರ ಸಮಾರಂಭಗಳಲ್ಲಿ ಮೋಟಾರು ವಾಹನಗಳನ್ನು ಬಳಸಲಾಗುತ್ತಿರಲಿಲ್ಲ. ಕೆಲವೊಮ್ಮೆ ಮದುವೆಯ ದಿಬ್ಬಣ ಮಾತ್ರ ಟ್ರ್ಯಾಕ್ಟರ್‌ಗಳಲ್ಲಿ ಹೋಗುತ್ತಿದ್ದ ಉದಾಹರಣೆ ಉಂಟು. ಆಗ ವರ ಸೈಕಲ್ ರಿಕ್ಷಾಗಳಲ್ಲಿ ಪ್ರಯಾಣ ಮಾಡಿದರೆ, ವಧು ನಡೆದುಕೊಂಡೇ ತನ್ನ ಗಂಡನ ಮನೆ ಸೇರುತ್ತಿದ್ದಳು. ಆದರೆ, ಈಗ ವರ ಒಂದು ವೇಳೆ ಜೀಪು ಅಥವಾ ಕಾರಿನಲ್ಲಿ ಬರದಿದ್ದರೆ ಬಹುಶಃ ಕಲ್ಲು ಹೊಡೆಸಿಕೊಳ್ಳುವ ಸಾಧ್ಯತೆ ಇದೆ. ಹಳ್ಳಿಗಳಲ್ಲಿ ಜನ ಮದುವೆಯ ದಿನಾಂಕವನ್ನು ಟ್ಯಾಕ್ಸಿಯ ಲಭ್ಯತೆಯನ್ನು ಆಧರಿಸಿ ನಿರ್ಧರಿಸುತ್ತಿರುವುದನ್ನು ನಾನು ಇತ್ತೀಚೆಗೆ ಗಮನಿಸುತ್ತಿದ್ದೇನೆ.

ದಶಕಗಳ ಹಿಂದೆ, ಬಸ್ಸು ಮತ್ತು ರೈಲು ಸಾರ್ವಜನಿಕ ಸಾರಿಗೆಯ ಪ್ರಮುಖ ಸಾಧನಗಳಾಗಿದ್ದವು. ಖಾಸಗಿ ವಾಹನಗಳನ್ನು ಬಳಸುತ್ತಿದ್ದವರ ಸಂಖ್ಯೆ ಕಡಿಮೆ ಇತ್ತು. ಯಾವುದಾದರೂ ಹಳ್ಳಿಯಲ್ಲಿ ಮೋಟರ್ ಸೈಕಲ್ ಸದ್ದು ಕೇಳಿಸಿದರೆ ಪೊಲೀಸರ ವಾಹನ ಬಂತು ಎಂದೇ ಅರ್ಥೈಸಿಕೊಳ್ಳಲಾಗುತ್ತಿತ್ತು. ಆದರೆ ಈಗ ಬಿಹಾರದ ದೂರದ ಹಳ್ಳಿಗಳಲ್ಲಿ ಕೂಡ ಹಾಲು ಮಾರುವವರು ತಮ್ಮ ಹೊಸ ಮೋಟರ್ ಸೈಕಲ್‌ಗಳಲ್ಲಿ ಹತ್ತಿರದ ಪಟ್ಟಣಗಳಿಗೆ ತಿರುಗಾಡುವುದು ಸಾಮಾನ್ಯ ದೃಶ್ಯ.

ಕಳೆದ ವರ್ಷ ನಾನು ಮಹಾರಾಷ್ಟ್ರದ ಯವತ್ಮಾಳ್ ಜಿಲ್ಲೆಗೆ ಭೇಟಿ ನೀಡಿದ್ದೆ. ಅಲ್ಲಿ ಕೋಲಂ ಎಂಬ ಆದಿವಾಸಿ ಬುಡಕಟ್ಟು ಸಮುದಾಯ ಹೆಚ್ಚಾಗಿರುವ ಪ್ರದೇಶಕ್ಕೆ ಹೋಗಿದ್ದೆ. ಕೋಲಂ ಸಮುದಾಯದ ಮದುವೆಗಳಲ್ಲಿ ಬಳಸುವ ವಾಹನ ಯಾವುದೆಂದು ಕೇಳಿದಾಗ, ಮದುವೆಗೆ 'ಟಾಟಾ 407 ಇರಲೇ ಬೇಕು' ಎಂದು ಅಲ್ಲಿನ ಕಾರ್ಯಕರ್ತನೊಬ್ಬ ನನಗೆ ಹೇಳಿದ.

ವೈಯಕ್ತಿಕ ಸಂಚಾರಕ್ಕೆ ಖಾಸಗಿ ವಾಹನಗಳನ್ನು ಬಳಕೆ ಮಾಡುತ್ತಿರುವುದು ಗ್ರಾಮೀಣ ಭಾರತದಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಅತಿದೊಡ್ಡ ಬದಲಾವಣೆಗಳಲ್ಲಿ ಒಂದು. ಈ ಹೊಸ ವಿದ್ಯಮಾನಕ್ಕೆ ಜಾತಿ, ವರ್ಗ, ಸಮುದಾಯದ ಹಂಗಿಲ್ಲ. ಹೀಗಾಗಿ ಉತ್ತಮ ರಸ್ತೆ, ಸಂಪರ್ಕದ ಬೇಡಿಕೆ ಈಗ ಮೇಲ್ಜಾತಿ ಅಥವಾ ಎಲೀಟ್‌ಗಳ ಅಜೆಂಡಾ ಆಗಿ ಉಳಿದಿಲ್ಲ. ಈಗ ಎಲ್ಲರಿಗೂ ರಸ್ತೆಗಳು ಮುಖ್ಯ. ಇಲ್ಲಿ ಬಿಹಾರದ 2005ರ ಚುನಾವಣೆಯ ಉದಾಹರಣೆಯೊಂದನ್ನು ಪ್ರಸ್ತಾಪಿಸಬೇಕಿದೆ. ಆಗ ಚುನಾವಣೆಯ ಸಭೆಯೊಂದರಲ್ಲಿ ಆರ್‌ಜೆಡಿ ಅಭ್ಯರ್ಥಿಯೊಬ್ಬರು ಭಾಷಣ ಮಾಡುವಾಗ, 'ನಿಮ್ಮ ಹಳ್ಳಿಯಲ್ಲಿ ರಸ್ತೆ ನಿರ್ಮಿಸುವವರೆಗೆ ನಾನು ಮದುವೆಯಾಗುವುದಿಲ್ಲ' ಎಂಬ ಭರವಸೆ ನೀಡಿದ್ದ. ಹೀಗಾಗಿ ಆತ ಚುನಾವಣೆಯಲ್ಲಿ ಗೆಲುವು ಸಾಧಿಸಿದ. ಚುನಾವಣೆಯಲ್ಲಿ ಗೆದ್ದ ಕೆಲವೇ ತಿಂಗಳಲ್ಲಿ, ರಸ್ತೆ ನಿರ್ಮಿಸುವ ಮೊದಲೇ ಆತ ಮದುವೆಯಾಗಿದ್ದು ಬೇರೆ ಮಾತು. ಆದರೆ ಈ ಚುನಾವಣೆಯಲ್ಲಿ ಆತ ಸೋಲನ್ನಪ್ಪಿದ್ದಾನೆ.

ರಸ್ತೆಗಳು ಯಾವದೇ ಸರ್ಕಾರದ ಅತ್ಯುತ್ತಮ ಜಾಹೀರಾತು ಫಲಕಗಳು. ಬಿಹಾರದ ತುಂಬ ರಸ್ತೆಗಳು ನಿರ್ಮಾಣವಾಗುತ್ತಿರುವುದನ್ನು ಕಂಡ ಜನ, ನಿತೀಶ್ ಅವರನ್ನು ಅಭಿವೃದ್ಧಿಯ ಜೊತೆಗೆ ಗುರುತಿಸಲಾರಂಭಿಸಿದರು. ಉತ್ತಮ ರಸ್ತೆ ಸಂಪರ್ಕ ಕೇವಲ ಸುಗಮ ಸಾರಿಗೆ ವ್ಯವಸ್ಥೆಗೆ ಮಾತ್ರ ಪೂರಕವಲ್ಲ. ಉತ್ತಮ ರಸ್ತೆಗಳು ಜನರ ಜೀವನಶೈಲಿಯ ಮೇಲೆ ಅಗಾಧವಾದ ಪ್ರಭಾವ ಬೀರುತ್ತದೆ ಎನ್ನುವುದು ಸರ್ವವಿಧಿತ.

ಜಾತಿಯಾಧಾರಿತ ಭಾರತೀಯ ಸಮಾಜ ವರ್ಗಾಧಾರಿತ ಸಮಾಜವಾಗಿ ಬದಲಾಗುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಭಾರತದ ಇತರ ರಾಜ್ಯಗಳಲ್ಲಿ ನಡೆಯುತ್ತಿರುವ ಬದಲಾವಣೆಗಳು, ಬಿಹಾರ ರಾಜ್ಯದ ಜನರಿಗೆ ತಲುಪದೆ ಇರಲು ಸಾಧ್ಯವಿಲ್ಲ. ನಿತೀಶ್ ಅವರ ಮನಸ್ಸಿನಲ್ಲಿ ಈ ಅಂಶ ಇತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ನಿತೀಶ್ ಅಭಿವೃದ್ಧಿಯ ಬಗ್ಗೆ ಮಾತನಾಡಿದಾಗಲೆಲ್ಲ ಈ ಹೊಸ ಬದಲಾವಣೆಯ ಪ್ರತಿನಿಧಿಯಂತೆ ಮತದಾರರಿಗೆ ಕಂಡದ್ದು ಸುಳ್ಳಲ್ಲ. ಬಿಹಾರದ ಚುನಾವಣೆಯಲ್ಲಿ ಜಾತಿ ಕೆಲಸ ಮಾಡಿಯೇ ಇಲ್ಲ ಎನ್ನಲಾಗುವುದಿಲ್ಲ. ಆದರೆ ಜಾತಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿರುವುದಂತೂ ನಿಜ. □

ಬಿಹಾರ: ಜಾತಿ ರಾಜಕಾರಣದ ಅಂತ್ಯ?

ಧನ್ಯ ನೆಲವೂ... ಧರ್ಮೇತಿಹಾಸವೂ

○ ಕೆ. ಶ್ರೀನಿವಾಸ ಮೂರ್ತಿ



ದಟ್ಟಿ ಚಲ್ಲಣ
ಕುಂಕುಮ ರಣವೀಳ್ಯ
ನರನಾಡಿ ಹುರಿಮಾಡಿ
ನೆತ್ತರ ಬಿಸಿಮಾಡಿ
ಭಲಿರೇ ಬಾಪುರೇ....

ವರುಷಕೊಂದೇ ಯುದ್ಧ!
ನೆರೆಕರೆಯ ಮರಿರಾಜ್ಯ
ಕೋಟೆ ಕೊತ್ತಲ
ಕತ್ತಲ ಕರಗಿ ದೋಚಿದ
ನಗನಾಣ್ಯ ಗುಡಿಗೋಪುರಕೆ
........ವೇದಿಕೆಗೆ.

ಕಲ್ಲುಕುಟಿಗರ ಬೆವರು ಬಸಿದು
ನೆಪವೆಲ್ಲ ನೇಪಥ್ಯಕ್ಕೆ ಸರಿದು
ಮತ್ತದೇ ತಿರುಗಿ....
ತಿರುತಿರುಗಿ ಮರುಕಳಿಸಿ
ಸೇಡಿನ ಸಿಡಿಗೆ
ಮತ್ತಿನ ಉರಿಗೆ
ನಮಿಸಿ ಮೇಲೆದ್ದರೂ
ಬೆಂಕಿ......ಬೆಂಕೀ.....

ಅರಬ ಆಂಗ್ರೇಜಿ
ತುಪ್ಪ ಸುರಿದು ನಂದಿಸಿದ
ಉಳಿಕೆ ಬಿಳಿ ಭೂದಿ–ವಿಭೂತಿ!
ಮೂರು ನಾಮಕ್ಕೆ?
ಕೆಟ್ಟ ಮೇಲೆ ಬುದ್ಧಿಯಂತೆ
ಮತ್ತೆ
ಮತ್ತದೇ ಬುದ್ಧಿ ಕೆಟ್ಟರೆ?



ಬುದ್ಧಾಯಣ

೬೪

ಪ್ರಾಣಿಯನ್ನು ಹಿಂಸಿಸುವವನು ಶ್ರೇಷ್ಠನೆನಿಸಿಕೊಳ್ಳಲಾರ. ಎಲ್ಲ ಪ್ರಾಣಿಗಳಲ್ಲಿ ಅಹಿಂಸೆಯನ್ನು ಉಳ್ಳವನು ಶ್ರೇಷ್ಠ ಎನ್ನಿಸಿಕೊಳ್ಳುತ್ತಾನೆ. ನಾವು ಇಲ್ಲಿ ಪಡೆಯುವುದಷ್ಟೇ ಕಲಿಯುವುದಲ್ಲ. ಕೊಡುವುದನ್ನು ಕಲಿಯಬೇಕು. ಹಿಂಸೆ ಅಜ್ಞಾನದ ಸಂಕೇತ. ಅಹಿಂಸೆ ಜ್ಞಾನದ ಸಂಕೇತ. ಜ್ಞಾನದಿಂದ ನಿನ್ನ ಶೀಲವು ವೃದ್ಧಿಸುತ್ತದೆ. ಶೀಲದಿಂದ ನಿನ್ನ ಸದಾಚಾರವು ವೃದ್ಧಿಸುತ್ತದೆ. ಸದಾಚಾರದಿಂದ ನೀನು ಸನ್ಮಾರ್ಗದತ್ತ ಸಾಗುವೆ. ಸನ್ಮಾರ್ಗದಿಂದ ಪ್ರೇಮ ಮತ್ತು ಮೈತ್ರಿಯು ವೃದ್ಧಿಸುತ್ತದೆ. ಈ ಎಲ್ಲದರ ಫಲವನ್ನು ನೀನು ಲೋಕಕ್ಕೆ ದಾನ ಮಾಡು. ದಾನದಿಂದಲೇ ಧರ್ಮದ ಪಾಲನೆ ಎಂಬುದನ್ನು ಮರೆಯಬೇಡ.

ಸಿ. ಹೆಚ್. ರಾಜಶೇಖರ್

ಸೂರ್ಯ ರಶ್ಮಿ ಬೀಳದೆ ಹೂವೇಕೆ ಅರಳುವುದಿಲ್ಲ?

ಒಂದು ಮುಂಜಾನೆ ಗೌತಮ ಬುದ್ಧರು ಅಂದಿನ ಭಿಕ್ಷಾಟನೆಯನ್ನು ಮುಗಿಸಿಕೊಂಡು ತನ್ನ ಶಿಷ್ಯರೊಂದಿಗೆ ಜೇತವನ ವಿಹಾರಕ್ಕೆ ಹಿಂದಿರುಗುತ್ತಿದ್ದರು. ಅವರು ಆ ಗ್ರಾಮದ ಕೆರೆಯ ಏರಿಯ ಮೇಲೆ ನೆಡೆದು ಬರುತ್ತಿರುವಾಗ ಒಬ್ಬ ಬೆಸ್ತರ ಹುಡುಗ ಗಾಳ ಹಾಕಿ ಮೀನನ್ನು ಹಿಡಿಯುತ್ತಿದ್ದ. ಅದನ್ನು ಕಂಡ ಬುದ್ಧರು ತಮ್ಮ ನೆಡಿಗೆಯನ್ನು ನಿಧಾನ ಮಾಡಿದರು. ಬೆಸ್ತರ ಹುಡುಗ ಸಮೀಪಿಸುತ್ತಿದ್ದಂತೆ ಆತನ ಬಳಿ ಸಾಗಿದರು. ಇದನ್ನು ಕಂಡ ಆ ಬೆಸ್ತರ ಹುಡುಗ ತನ್ನ ಕೈಲಿದ್ದ ಕೋಲು ಮತ್ತು ಗಾಳವನ್ನು ಬಿಸಾಕಿ ಗೌರವದಿಂದ ಎದ್ದು ನಿಂತು ಬುದ್ಧರಿಗೆ ವಂದಿಸಿದ. ಪ್ರತಿ ವಂದಿಸಿದ ಬುದ್ಧರು ನಸುನಗುತ್ತಾ ತಾವು ನಿಂತಲ್ಲಿಂದ ಹಿಂದಕ್ಕೆ ತಮ್ಮ ಶಿಷ್ಯರತ್ತ ದೃಷ್ಟಿ ಹರಿಸಿ ಅವರಲ್ಲಿ ಒಬ್ಬನನ್ನು ಕುರಿತು;

"ಸಹೋದರ, ನಿನ್ನ ಹೆಸರೇನು?" ಎನ್ನಲು ಆತ;

"ಗುರುದೇವಾ, ನನ್ನ ಹೆಸರು ಸಾರಿಪುತ್ತ!" ಎಂದ. ಮತ್ತೊಬ್ಬನನ್ನು ಕುರಿತು;

"ಸಹೋದರ, ನಿನ್ನ ಹೆಸರೇನು?" ಎನ್ನಲು ಆತ;

"ಗುರುದೇವಾ, ನನ್ನ ಹೆಸರು ಮೊಗ್ಗಲಾನ!" ಎಂದನು. ಆಗ ಬುದ್ಧನು ಬೆಸ್ತರ ಹುಡುಗನತ್ತ ತಿರುಗಿ;

"ಸಹೋದರ, ನಿನ್ನ ಹೆಸರೇನು?" ಎನ್ನಲು ಆತ ವಿನಯದಿಂದ;

"ಒಡೆಯ, ನನ್ನ ಹೆಸರು ಅರಿಯ!" ಎಂದ ಹೆಮ್ಮೆಯಿಂದ. ಆಗ ಬುದ್ಧರು;

"ಸಹೋದರ, ನಿನ್ನ ಹೆಸರಿನ ಅರ್ಥವೇನು?"

"ನಾನರಿಯೆ ಒಡೆಯ! "

"ಮಗು, ಅರಿಯ ಎಂದರೆ ಅರಿತವನು, ಶ್ರೇಷ್ಠವಾದವನು ಎಂದು ಅರ್ಥ. ಆದರೆ ಒಬ್ಬ ಶ್ರೇಷ್ಠನು ಮಾಡಬೇಕಾದ ಕೆಲಸವನ್ನು ಬಿಟ್ಟು ನೀನು ಏಕೆ ಪ್ರಾಣಿ ಹಿಂಸೆಯನ್ನು ಮಾಡುತ್ತಿರುವೆ?"

"ಒಡೆಯ, ಇದು ನನ್ನ ಕುಲ ಕಸುಬು. ಅನ್ನದ ಮಾರ್ಗ!"

"ಮಗು, ಕುಲ ಮತ್ತು ಅನ್ನವೇ ಇಲ್ಲಿ ಅಂತಿಮವಲ್ಲ. ಅದು ಕೇವಲ ಅನ್ನದ ಮಾರ್ಗವಷ್ಟೇ ಅಲ್ಲ. ಅಜ್ಞಾನದ ಮಾರ್ಗವೂ ಹೌದು. ಪ್ರಾಣಿಯನ್ನು ಹಿಂಸಿಸುವವನು ಶ್ರೇಷ್ಠನೆನಿಸಿಕೊಳ್ಳಲಾರ. ಎಲ್ಲ ಪ್ರಾಣಿಗಳಲ್ಲಿ ಅಹಿಂಸೆಯನ್ನು ಉಳ್ಳವನು ಶ್ರೇಷ್ಠ ಎನ್ನಿಸಿಕೊಳ್ಳುತ್ತಾನೆ. ನಾವು ಇಲ್ಲಿ ಪಡೆಯುವುದಷ್ಟೇ ಕಲಿಯುವುದಲ್ಲ. ಕೊಡುವುದನ್ನು ಕಲಿಯಬೇಕು. ಹಿಂಸೆ ಅಜ್ಞಾನದ ಸಂಕೇತ. ಅಹಿಂಸೆ ಜ್ಞಾನದ ಸಂಕೇತ. ಜ್ಞಾನದಿಂದ ನಿನ್ನ ಶೀಲವು ವೃದ್ಧಿಸುತ್ತದೆ. ಶೀಲದಿಂದ ನಿನ್ನ ಸದಾಚಾರವು ವೃದ್ಧಿಸುತ್ತದೆ. ಸದಾಚಾರದಿಂದ ನೀನು ಸನ್ಮಾರ್ಗದತ್ತ ಸಾಗುವೆ. ಸನ್ಮಾರ್ಗದಿಂದ ಪ್ರೇಮ ಮತ್ತು ಮೈತ್ರಿಯು ವೃದ್ಧಿಸುತ್ತದೆ. ಈ ಎಲ್ಲದರ ಫಲವನ್ನು ನೀನು ಲೋಕಕ್ಕೆ ದಾನ ಮಾಡು. ದಾನದಿಂದಲೇ ಧರ್ಮದ ಪಾಲನೆ ಎಂಬುದನ್ನು ಮರೆಯಬೇಡ. ಆಗ ನಿನ್ನ ತಂದೆ ತಾಯಿಗಳು ತಿಳಿದೋ ಅಥವಾ ತಿಳಿಯದೆಯೋ ಇಟ್ಟ ನಿನ್ನ ಹೆಸರು ಸಾರ್ಥಕವಾಗುತ್ತದೆ! "ಎನ್ನಲು ಅರಿಯನಿಗೆ ತನ್ನ ತಪ್ಪಿನ ಅರಿವಾಯಿತು . ಆಗ ಅವನು ಬುದ್ಧನನ್ನು ಉದ್ದೇಶಿಸಿ;

"ಹೌದು ತಂದೆ, ಸೂರ್ಯನ ರಶ್ಮಿ ಬೀಳುವ ತನಕ ಹೂವೇಕೆ ಅರಳುವುದಿಲ್ಲ ಎಂಬ ಸತ್ಯವನ್ನು ನಾನು ಇಂದು ನಿಮ್ಮಿಂದ ಅರಿತೆ!!" ಎಂದ ಅವನು ಬುದ್ಧನನ್ನು ಹಿಂಬಾಲಿಸಿದ. □



ಭವ್ಯಕ್ಕೆ ಹೂವ ಚೆಲ್ಲಿ ದಿವ್ಯನಾದನಾ ಸುಮನ!!

ಮಗಧದ ರಾಜಗೃಹದಲ್ಲಿ ಸುಮನ ಎಂಬ ಹೂವಾಡಿಗನಿದ್ದ. ಆತ ಪ್ರತಿದಿನ ಬೆಳಿಗ್ಗೆ ಅರಮನೆಗೆ ಎಂಟು ಬುಟ್ಟಿ ಹೂವನ್ನು ತಪ್ಪದೆ ತಂದು ಕೊಡುತ್ತಿದ್ದ. ಅದಕ್ಕೆ ಪ್ರತಿಯಾಗಿ ರಾಜ ಬಿಂಬಸಾರನು ಎಂಟು ಗಟ್ಟಿ ಬೆಳ್ಳಿಯ ನಾಣ್ಯವನ್ನು ಅವನಿಗೆ ನೀಡುತ್ತಿದ್ದ. ಒಂದು ಮುಂಜಾನೆ ಬುದ್ಧರು ತಮ್ಮ ಭಿಕ್ಷುಗಳ ಜೊತೆಯಲ್ಲಿ ಭಿಕ್ಷಾಟನೆಗಾಗಿ ರಾಜಗೃಹವನ್ನು ಪ್ರವೇಶಿಸಿದರು. ಅದೇ ಸಮಯಕ್ಕೆ ಸರಿಯಾಗಿ ಸುಮನನು ತನ್ನ ಅಳುಗಳೊಂದಿಗೆ ಎಂಟು ಬುಟ್ಟಿ ಹೂವನ್ನು ಹೊತ್ತು ತರುತ್ತಿದ್ದನು. ಆತ ಬುದ್ಧನನ್ನು ಎಂದಿಗೂ ನೇರವಾಗಿ ಸಂಧಿಸಿರಲಿಲ್ಲ. ಆತನ ಪ್ರವಚನವನ್ನು ಕೇಳಿರಲಿಲ್ಲ. ಆತನ ಬಿಕ್ಷುಗಳಿಂದ ಅವನ ಬೋಧನೆಯನ್ನು ಕೇಳಿ ತಿಳಿದು ಅತ್ಯಂತ ಪ್ರಭಾವಿತನಾಗಿದ್ದ. ಬುದ್ಧನನ್ನು ಕಣ್ಣಾರೆ ಕಂಡು ಆತನನ್ನು ಒಮ್ಮೆ ಆರಾಧಿಸಬೇಕೆಂಬುದು ಆತನ ಏಕೈಕ ಕನಸಾಗಿತ್ತು.

ಅಂತಹ ಸಂದರ್ಭದಲ್ಲಿ ಬುದ್ಧರು ಆತನಿಗೆ ಎದುರಾದರು. ಆತ ತನ್ನ ಕಣ್ಣುಗಳನ್ನು ತಾನೆ ನಂಬದಾದ. ನಿಂತಲ್ಲೇ ಕ್ಷಣ ಕಾಲ ನಿಂತು ಬುದ್ಧರ ಭವ್ಯ ರೂಪವನ್ನು ನೋಡತೊಡಗಿದ. ಪೂರ್ವದಲ್ಲಿ ಉದಯಿಸಬೇಕಾದ ಸೂರ್ಯನು ತನ್ನ ಕಣ್ಣ ಎದುರಿನಲ್ಲಿಯೇ ಉದಯಿಸುತ್ತಿದ್ದಾನೆ ಎನ್ನಿಸಿತು. ಮೂಕವಿಸ್ಮಿತನಾದ ಅವನ ಕಣ್ಣುಗಳಲ್ಲಿ ಆನಂದಬಾಷ್ಪ ಮೂಡಿತು. ಆರಾಧಿಸಲು ಯೋಗ್ಯರಾದ ಬುದ್ಧರನ್ನು ಆರಾಧಿಸಬೇಕು ಅನ್ನಿಸಿತು. ಒಡನೆಯೇ ತನ್ನ ತಲೆಯ ಮೇಲಿದ್ದ ಹೂವಿನ ಬುಟ್ಟಿಯನ್ನು ತೆಗೆದು ಬುದ್ಧರ ಪಾದದ ಮೇಲೆ ಸುರಿದ. ಇತರೆ ತನ್ನ ಏಳು ಆಳುಗಳು ಹೊತ್ತು ಸಾಗಿಸುತ್ತಿದ್ದ ಬುಟ್ಟಿಯನ್ನು ಇಳಿಸಿಕೊಂಡು ಅವುಗಳನ್ನು ಕೂಡ ಬುದ್ಧರ ಪಾದಗಳಿಗೆ ಅರ್ಪಿಸಿ ತಲೆಬಾಗಿ ವಂದಿಸಿದ. ಮುಗುಳ್ ನಕ್ಕ ಬುದ್ಧ;

"ನಿನಗೆ ಮಂಗಳವಾಗಲೀ!" ಎಂದು ಹಾರೈಸಿ ಮುಂದೆ ಸಾಗಿದ.

ಹೂವಾಡಿಗನಾದ ಸುಮನನಿಗೆ ತನ್ನ ಬದುಕು ಸಾರ್ಥವಾಯಿತು ಎಂಬ ಭಾವನೆ ಮೂಡಿತು. ಈ ಸಂತೋಷವನ್ನು ತನ್ನ ಹೆಂಡತಿಗೆ ಹೇಳಬೇಕೆಂದು ಆತ ಮನೆಗೆ ಬಂದ. ವಿಷಯವನ್ನು ತಿಳಿಸಿದ. ಸಂತೋಷಗೊಳ್ಳಬೇಕಾದ ವಿಷಯಕ್ಕೆ ಹೆಂಡತಿಯು ಅತೀವ ಭಯವನ್ನು ವ್ಯಕ್ತಪಡಿಸುತ್ತಾ;

"ಸ್ವಾಮೀ, ಇದೆಂತಹ ಅನಾಹುತದ ಕೆಲಸವನ್ನು ಮಾಡಿದಿರಿ. ರಾಜನು ಮೊದಲೇ ಕೋಪಿಷ್ಠ. ಅರಮನೆಗೆ ತಲುಪಿಸಬೇಕಾದ ಹೂವನ್ನು ನಿಗಧಿಯಾದ ಸಮಯಕ್ಕೆ ತಲುಪದೇ ಹೋದ ವಿಷಯವನ್ನು ಕೇಳಿ ಇಷ್ಟರಲ್ಲಾಗಲೇ ಆತ ತಳಮಳ ಗೊಂಡಿರುತ್ತಾನೆ. ಕೋಪದಲ್ಲಿ ಅವನು ನಿಮಗೆ ಮರಣದಂಡನೆಯನ್ನು ಕೊಡಬಹುದು ಅಥವಾ ಗಡೀಪಾರನ್ನೂ ಮಾಡಬಹುದು. ನಾನು ಈಗಲೇ ಹೋಗಿ ಅವನಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ" ಎಂದು ಬಡಬಡಿಸಿದ ಆಕೆ ಅರಮನೆಗೆ ಬಂದಳು. ರಾಜನಾದ ಬಿಂಬಸಾರನನ್ನು ಸಂಧಿಸಿ ಆತನಿಗೆ ತಲೆಬಾಗಿ ವಂದಿಸಿ ನಡೆದ ವಿಷಯವನ್ನು ತಿಳಿಸಿದಳು.

"ದೇವಾ, ನನ್ನ ಗಂಡ ಮಾಡಿದ ತಪ್ಪಿಗೆ ನಾನು ತಮ್ಮಲ್ಲಿ ಕ್ಷಮೆ ಕೋರಲು ಬಂದಿದ್ದೇನೆ. ಆತನಿಗೆ



"ಬುದ್ಧ, ಆರಾಧನೆಗೆ ಹೇಗೆ ಯೋಗ್ಯನಾದವನು?" "ಆತ ನಮ್ಮಗಳ ಅಜ್ಞಾನಕ್ಕೆ ಜ್ಞಾನವನ್ನು ನೀಡಿದಾತ ನಮ್ಮಗಳ ದುಃಖಕ್ಕೆ ಶಾಂತಿಯನ್ನು ನೀಡಿದಾತ. ಅಸಮಾನತೆ ಮತ್ತು ಅನ್ಯಾಯಕ್ಕೆ ಬದಲಾಗಿ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಾತ. ಮನುಜರೆಲ್ಲ ಒಂದೇ ಎಂದು ಸಾರಿದಾತ. ಸಕಲ ಜೀವರಾಶಿಗಳಿಗೂ ಸುಖವನ್ನು ಬಯಸಿದಾತ. ಶೀಲವೇ ಲೋಕಕ್ಕೆ ಮೊದಲೆಂದವ" ತನ್ನ ಸಾಮಾನ್ಯ ಪ್ರಜೆಯೊಬ್ಬನ ಅಸಾಮಾನ ತಿಳುವಳಿಕೆಗೆ ಮಾರು ಹೋದ ರಾಜನು ಪ್ರಸನ್ನನಾದನು.

ಯಾವುದೇ ಗುರುತರವಾದ ಶಿಕ್ಷೆಯನ್ನು ಕೊಡದಿರೆಂದು ಬೇಡುವೆ. ಶಿಕ್ಷೆಯನ್ನು ಕೊಡುವುದೇ ಆದರೆ ಆ ಶಿಕ್ಷೆಯನ್ನು ನನಗೆ ಕೊಡಿರೆಂದು ವಿನಂತಿಸುವೆ. ಏಕೆಂದರೆ, ನನ್ನ ಗಂಡ ಮುಗ್ಧ ಮತ್ತು ಜ್ಞಾನಹೀನ. ಆದ ತಪ್ಪನ್ನು ಸರಿಪಡಿಸುವ ಸಲುವಾಗಿ ನಾನು ಈಗಲೇ ಹೋಗಿ ಹೂವನ್ನು ತಂದು ಅರಮನೆಗೆ ಸಲ್ಲಿಸುತ್ತೇನೆ!" ಎಂದು ಅಂಗಲಾಚಿದಳು. ಈಕೆಯ ಯಾವುದೇ ಕೋರಿಕೆಗೆ ಕಿವಿಗೊಡದ ರಾಜನು ತನ್ನ ಸೇನಾಧಿಪತಿಯನ್ನು ಕರೆದು;

"ಈಗಿಂದೀಗಲೇ ಹೋಗಿ ಈಕೆಯ ಪತಿಯನ್ನು ಕರೆ ತನ್ನಿ!" ಎಂದು ಆಜ್ಞೆ ಮಾಡಿದ. ಅವರು ಹಾಗೆಯೇ ಮಾಡಿದರು. ರಾಜ ಹೂವಾಡಿಗ ಸುಮನನ ಕುರಿತು;

"ಎಲೈ ಹೂವಾಡಿಗನೇ, ಅರಮನೆಗೆ ಅರ್ಪಿಸಬೇಕಾದ ಹೂವನ್ನು ಬುದ್ಧನ ಪಾದಕ್ಕೆ ಅರ್ಪಿಸಿದ್ದು ನಿಜವೆ?"

"ಹೌದು ಪ್ರಭು!"

"ನೀನು ಹಾಗೇಕೆ ಮಾಡಿದೆ?"

"ದೇವಾ, ಆರಾಧನೆಗೆ ಯೋಗ್ಯರಾದವರನ್ನು ಆರಾಧಿಸಬೇಕು ಅನ್ನಿಸಿತು ಹಾಗಾಗಿ ಹೀಗೆ ಮಾಡಿದೆ!"

"ಬುದ್ಧ, ಆರಾಧನೆಗೆ ಹೇಗೆ ಯೋಗ್ಯನಾದವನು?"

"ಆತ ನಮ್ಮಗಳ ಅಜ್ಞಾನಕ್ಕೆ ಜ್ಞಾನವನ್ನು ನೀಡಿದಾತ ನಮ್ಮಗಳ ದುಃಖಕ್ಕೆ ಶಾಂತಿಯನ್ನು ನೀಡಿದಾತ. ಅಸಮಾನತೆ ಮತ್ತು ಅನ್ಯಾಯಕ್ಕೆ ಬದಲಾಗಿ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಾತ. ಮನುಜರೆಲ್ಲ ಒಂದೇ ಎಂದು ಸಾರಿದಾತ. ಸಕಲ ಜೀವರಾಶಿಗಳಿಗೂ ಸುಖವನ್ನು ಬಯಸಿದಾತ. ಶೀಲವೇ ಲೋಕಕ್ಕೆ ಮೊದಲೆಂದವ" ತನ್ನ ಸಾಮಾನ್ಯ ಪ್ರಜೆಯೊಬ್ಬನ ಅಸಾಮಾನ ತಿಳುವಳಿಕೆಗೆ ಮಾರು ಹೋದ ರಾಜನು ಪ್ರಸನ್ನನಾದನು. ಕುಳಿತ ಸಿಂಹಾಸನದಿಂದ ಮೇಲೆದ್ದು ಸುಮನನ ಬಳಿ ಬಂದು ಆನಂದಪರವಶದಿಂದ ಆತನನ್ನು ತಬ್ಬಿಕೊಂಡು;

"ಹೌದು ನೀನು ಆರಾಧನೆಗೆ ಯೋಗ್ಯರಾದವರನ್ನು ಆರಾಧಿಸಿದೆ. ಸನ್ಮಾರ್ಗದಲ್ಲಿ ನಡೆದು ಸಕಲರಿಗೂ ಮಾದರಿಯಾದ ನಿನ್ನನ್ನು ನಾನು ಆರಾಧಿಸುವೆ!!" ಎಂದ ರಾಜನು ಆತನನ್ನು ಆರಾಧಿಸಿ ಸತ್ಕರಿಸಿದ. ಆತನಿಗೂ ಆತನ ಹೆಂಡತಿ ಮಕ್ಕಳಿಗೂ ಸಕಲ ರೀತಿಯ ಸಂಪತ್ತನ್ನು ನೀಡಿದ್ದೇ ಅಲ್ಲದೆ ಆತನಿಗೆ ಶ್ರೇಷ್ಠವಾದ ಎಂಟು ಗ್ರಾಮಗಳಿಗೆ ಮಾಂಡಲಿಕನನ್ನಾಗಿ ನೇಮಿಸಿದನು. ಇದರಿಂದ ಅಪಾರ ಸಂತೋಷ ಮತ್ತು ಆಶ್ಚರ್ಯಗೊಂಡ ಸುಮನನ ಹೆಂಡತಿಯು ರಾಜನ ದೊಡ್ಡತನಕ್ಕೆ ತಲೆಬಾಗಿ ವಂದಿಸುತ್ತಾ; "ಹೌದು ತಂದೆ ನೀನು ನಿಜಕ್ಕೂ ನ್ಯಾಯದ ಪಕ್ಷಪಾತಿಯೇ ಸರಿ. ಸತ್ಯದ ಸರದಾರನೇ ಸರಿ...!" ಎಂದು ಕೃತಜ್ಞತೆಯನ್ನು ಅರ್ಪಿಸಿದಳು. □

'SAMVADA' Kannada Monthly, January 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

'ಸ್ಫೂರ್ತಿಧಾಮ' ಕೊಡಮಾಡುವ 'ಬೋಧಿ ವೃಕ್ಷ' ಮತ್ತು 'ಬೋಧಿ ವರ್ಧನ' ಪ್ರಶಸ್ತಿಗಳು

'ಸ್ಫೂರ್ತಿಧಾಮ'ವನ್ನು ನಿರ್ವಹಿಸುತ್ತಿರುವ 'ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್' ಏಪ್ರಿಲ್ ೧೪, ೨೦೧೧ ರಂದು ನಡೆಯಲಿರುವ 'ಅಂಬೇಡ್ಕರ್ ಹಬ್ಬ'ದಲ್ಲಿ ನೀಡಲಾಗುವ ಒಂದು ಲಕ್ಷ ರೂ. ಮೌಲ್ಯದ ಒಂದು 'ಬೋಧಿ ವೃಕ್ಷ' ಮತ್ತು ತಲಾ ೨೦ ಸಾವಿರ ರೂ. ಮೌಲ್ಯದ ಐದು 'ಬೋಧಿ ವರ್ಧನ' ಪ್ರಶಸ್ತಿಗಳಿಗಾಗಿ ಅರ್ಹ ವ್ಯಕ್ತಿಗಳ ಆಯ್ಕೆಗೆ ಸೂಕ್ತ ಪ್ರಸ್ತಾವನೆ (Proposal)ಗಳನ್ನು ಆಹ್ವಾನಿಸುತ್ತಿದೆ.

ಈ ಪ್ರಶಸ್ತಿಗಳು ಹಲವು ಕಾರಣಗಳಿಗಾಗಿ ವಿಭಿನ್ನವಾದವೂ ಹೌದು, ವಿಶಿಷ್ಟವಾದವೂ ಹೌದು. ನಮ್ಮಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟದ ಸರ್ಕಾರಿ, ಅರೆಸರ್ಕಾರಿ, ಪ್ರತಿಷ್ಠಿತ ಅಕಾಡೆಮಿಗಳು, ಸಂಘ-ಸಂಸ್ಥೆಗಳು ಕೊಡುವ ಅನೇಕ ಪ್ರಶಸ್ತಿಗಳಿವೆ. ಆದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ಅಥವ ಶೈಕ್ಷಣಿಕ ಬಂಡವಾಳವಿಲ್ಲದೆ ತಳಸ್ತರದವರ ಬದುಕನ್ನು ಗುಣಾತ್ಮಕವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿ ಕೊಂಡಿರುವವರನ್ನು ಗೌರವಿಸುವ ಪ್ರಶಸ್ತಿಗಳು ನಮ್ಮಲಿಲ್ಲ. **"A great man is different from an eminent one, in that he is ready to be a servant of the soceity"** ಎಂದು ಅಂಬೇಡ್ಕರ್ ಹೇಳಿದ ಈ ಮಾತುಗಳು ತಳಸ್ತರದವರ ಚಲನೆಗೆ ತಳಪಾಯವಾಗಬೇಕಾದ ಸೇವೆಯ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ.

೨೦೦೯ರ 'ಅಂಬೇಡ್ಕರ್ ಹಬ್ಬ'ದಲ್ಲಿ ಬೆಂಗಳೂರಿನ 'ಮಹಾಬೋಧಿ ಸೊಸೈಟಿ' ಸ್ಥಾಪಕರಾದ ಬೌದ್ಧ ಬಿಕ್ಕು ಆಚರಿಯ ಬುದ್ಧರಖ್ಖಿತ ಹಾಗೂ ೨೦೧೦ರಲ್ಲಿ ಖ್ಯಾತ ಅಂಕಣಕಾರ ಚಂದ್ರಭಾನ್ ಪ್ರಸಾದ್ ಅವರು 'ಬೋಧಿವೃಕ್ಷ' ಪ್ರಶಸ್ತಿಯನ್ನು ಪಡೆದುಕೊಂಡರು. ಕಾಗೋಡು ಹೋರಾಟದ ರೂವಾರಿ ಸಾಗರದ ಗಣಪತಿಯಪ್ಪ, ಜಲ ತಜ್ಞ ಕೋಲಾರದ ಕೆ. ನಾರಾಯಣ ಸ್ವಾಮಿ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ತಳಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಿದ ಕನಕಪುರದ ಶ್ರೀ ಶ್ರೀನಿವಾಸಯ್ಯನವರು ಹಾಗೂ ಸ್ವತಃ ದೇವದಾಸಿಯಾಗಿದ್ದರೂ, ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಿದ ಬಿಜಾಪುರದ ಶ್ರೀಮತಿ ಮಹಾದೇವಮ್ಮ ಅವರು 'ಬೋಧಿವರ್ಧನ' ಪ್ರಶಸ್ತಿಯನ್ನು ಪಡೆದುಕೊಂಡ ಕೆಲವರು.

ಬುದ್ಧ, ಮೋಕ್ಷವನ್ನು ಹುಡುಕುತ್ತಾ ಸಮುದಾಯದ ಪ್ರೀತಿಯ ಬಂಧನದಲ್ಲಿ ಅದನ್ನು ಕಂಡುಕೊಂಡ. ನಮ್ಮ ಕಾಲಘಟ್ಟವೂ ಒಂದು ಆಧ್ಯಾತ್ಮಿಕ ಪಯಣಕ್ಕೆ ಹಾತೊರೆಯುತ್ತಿದೆ. ಈ ಆಧ್ಯಾತ್ಮಿಕ ಪಯಣ ಆರಂಭವಾಗುವುದೇ ಈ ನೆಲದ ಬದುಕಿನೊಟ್ಟಿಗಿನ ಸಾವಯವ ಸಂಬಂಧದೊಂದಿಗೆ.

ಈ ಸಾವಯವ ಸಂಬಂಧವನ್ನು ಸ್ಥಾಪಿಸಿಕೊಂಡವರನ್ನು ಸನ್ಮಾನಿಸುವ ಮೂಲಕ 'ಸ್ಫೂರ್ತಿಧಾಮ' ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬಯಸುತ್ತದೆ. ಇಂಥವರು ನಿಮಗೆ ತಿಳಿದಿದ್ದರೆ, ದಯವಿಟ್ಟು ನಮಗೆ ಅವರ ಬಗ್ಗೆ ಪೂರ್ಣಮಾಹಿತಿಯನ್ನು ನೀಡಿ. ಅಥವಾ ನೀವೇ ಅಂಥವರಾಗಿದ್ದರೆ, ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

ಬೋಧಿವೃಕ್ಷ

ವಿಳಾಸ: 'ಸ್ಫೂರ್ತಿಧಾಮ', ಅಂಜನಾನಗರ,
ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ,
ಬೆಂಗಳೂರು-೫೬೦ ೦೯೧
ದೂರವಾಣಿ: ೦೮೦-೨೩೪೮೮೦೨೭೮

ಬೋಧಿವರ್ಧನ